ಶ್ರೀಯೈ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



ಪರದೇವತಾ ಪಾರಮಾರ್ಥ್ಯಾಧಿಕಾರಃ

ಆತ್ಮೈಕ್ಯಂ ದೇವತೈಕ್ಯಂ ತ್ರಿಕಸಮುಧಿಗತಾ (ಕತಾ) ತುಲ್ಯತೈಕ್ಯಂ ತ್ರಯಾಣಾ। ಮನ್ಯ ತ್ರೈಶ್ವರ್ಯ ಮಿತ್ಯಾ ದ್ಯನಿಪುಣ ಫಣಿತೀ ರಾದ್ರಿಯನ್ತೇ ನಸನ್ತಃ ॥

ಅವತಾರಿಕೆ–ಹಿಂದಿನ ಅಧಿಕಾರದಲ್ಲಿ ತತ್ವಗಳು ಚಿತ್, ಅಚಿತ್, ಈಶ್ವರರೆಂಬದಾಗಿ ಮೂರೆಂದೂ, ಈ ಮೂರು ತತ್ವಗಳೂ ಯಾವಾಗಲೂ ಒಟ್ಟಿಗೆ ಇರುತ್ತವೆಂದೂ, ಅವುಗಳ ಸ್ವರೂಪಸ್ಥಿತಿ ಪ್ರವೃತ್ತಿಗಳಲ್ಲಿ ಪರಸ್ಪರ ಭೇದಗಳುಂಟೆಂದೂ ಸಹ ವಿಶದವಾಗಿ ಉಪದೇಶಿಸಲ್ಪಟ್ಟವು. ಹಿಂದೆ ಹೇಳಿದ ಈಶ್ವರ ತತ್ವವು ಯಾವುದು ಎಂದುಈಗ ನಿರ್ಧರಿಸಲ್ಪಡುತ್ತದೆ. ಪರದೇವತೆಯ ಪಾರಮಾರ್ಥ್ಯವು ಎಂದರೆ ಯಾಥಾತ್ಮ್ಯವು ಈ ಅಧಿಕಾರದಲ್ಲಿ ನಿರ್ಧರಿಸಲ್ಪಡುವದರಿಂದ ಇದಕ್ಕೆ ಪರದೇವತಾ ಪಾರಮಾರ್ಥ್ಯಾಧಿಕಾರವೆಂದು ಹೆಸರು. ಈ ಅಧಿಕಾರಾಭಿಪ್ರಾಯವನ್ನು ಹಿಂದಿನಧಿಕಾರದ ಕೊನೇ ಶ್ಲೋಕದ ನಾಲ್ಕನೇ ಪಾದದಲ್ಲಿ ಸೂಕ್ಷ್ಮವಾಗಿ ಸೂಚಿಸಿದರು. ಈಗ ಈ ಶ್ಲೋಕದ ಮೂಲಕ ಅದನ್ನೇ ಉಪಪಾದಿಸಿ, **ಪೂರ್ವಾರ್ಧ**ದಿಂದ ಇತರ ಅಪಸಿದ್ಧಾನ್ತಗಳನ್ನು ನಿರಾಕರಿಸಿ, ಉತ್ತರಾರ್ಧದಿಂದ ಪರತತ್ವವು ಲಕ್ಷ್ಮೀನಾರಾಯಣನೆಂದು ಸ್ಥಾಪಿಸುತ್ತಾರೆ: ಶಾಸ್ತ್ರಗಳಲ್ಲಿ ಅನೇಕಶಬ್ದಗಳಾದ ಶಿವ, ಶಮ್ಭು, ಹಿರಣ್ಯಗರ್ಭ ಅಚ್ಯುತ, ಪರಂಜ್ಯೋತಿಸ್ಸು, ಪರಮಾತ್ಮಾ, ಮೊದಲಾದವುಗಳಿಂದ ಬೋಧಿತನಾದವನು ಶ್ರೀಮನ್ನಾರಾಯಣನೇ ಎಂದು ಹೇಳುವ ಪುರುಷಸೂಕ್ತ, ನಾರಾಯಣಾನುವಾಕ, ಸುಬಾಲೋಪನಿಷತ್ತು ಮೊದಲಾದವುಗಳಲ್ಲಿ ಉಪಪಾದಿತವಾದ ಅರ್ಥವನ್ನು ಇಲ್ಲಿ ಉಪಪಾದನೆಮಾಡುತ್ತಾರೆ:—

ಅರ್ಥ — ಸನ್ತಃ–ಸತ್ಪುರುಷರಾದ ಮಹನೀಯರಾದ ಜ್ಞಾನಿಗಳು, **ನಾದ್ರಿಯ**

ತ್ರಯ್ಯಾನ್ತೈ ರೇಕಕಣ್ಠೈ ಸ್ತದನುಗುಣ ಮನುವ್ಯಾಸ ಮುಖ್ಯೋಕ್ತಿ ಭಿಶ್ಚ।ಶ್ರೀಮಾ ನ್ನಾರಾಯಣೋ ನಃ ಪತಿ ರಖಿಲ ತನುರ್ಮುಕ್ತಿ ದೋ ಮುಕ್ತಭೋಗ್ಯಃ ॥೧೬॥

ನ್ತೈ-ಅಙ್ಗೀಕರಿಸುವದಿಲ್ಲವು. ಯಾವ ಯಾವ ಅಭಿಪ್ರಾಯಗಳನ್ನು ಅಙ್ಗೀಕರಿಸು ವದಿಲ್ಲವೆಂದರೆ ಹೇಳುತ್ತಾರೆ. ಅದು ಏತಕ್ಕಾಗಿ ಅಙ್ಗೀಕರಿಸುವದಿಲ್ಲವೆಂದರೆ **ಅನಿಪುಣಘಣಿತೀಃ**-ಅವುಗಳು ಶಾಸ್ತ್ರಪಾಂಡಿತ್ಯ ಚನ್ನಾಗಿ ಇಲ್ಲದ, ಸಾರಾಸಾರ ವಿವೇಕ ರೂಪವಾದ ನಿಪುಣತೆಯಿಲ್ಲದ ಅಭಿಪ್ರಾಯಗಳು. ಆದುದರಿಂದ, ಅವುಗಳ ನ್ನು ಅಙ್ಗೀಕರಿಸುವದಿಲ್ಲವು. ಆ **ಅನಿಪುಣಘಣಿತೀಗಳು** ಯಾವುವೆಂದರೆ:—

ಆತ್ಮೈಕ್ಯಂ – ಎಲ್ಲಾ ಆತ್ಮವು ಒಂದೇ ಅಥವಾ ಎಲ್ಲವೂ ಪರಮಾತ್ಮನಲ್ಲಿ ಐಕ್ಯವು ಎಂಬ ಭಾವವನ್ನು, ಅಙ್ಗೀಕರಿಸುವದಿಲ್ಲವು. ಇದರಿಂದ ಸಮಸ್ತ ಚಿದಚಿತ್ತೂ ಪರಮಾತ್ಮದ್ರವ್ಯವೇ ಎಂಬ ಯಾದವ ಪ್ರಕಾಶಮತವೂ, ಜೀವಾತ್ಮನೂ ಪರಮಾತ್ಮನೂಒಂದೇ ಎಂಬ ಶಾಂಕರ ಮತವೂ, ಜೀವಾತ್ಮರುಗಳೆಲ್ಲಾ ಭಿನ್ನರಾದ ರೂಒಂದೇಎಂಬ ಭಾಸ್ಕರಸಿದ್ಧಾನ್ತವೂ,ಸರಿಯಲ್ಲವೆಂದು ಹೇಳಲ್ಪಟ್ಟಿತು. **ದೇವತೈಕ್ಯಂ**-ಬ್ರಹ್ಮ,ರುದ್ರ,ಇಂದ್ರ,ಅಗ್ನಿಮೊದಲಾದ ದೇವತೆಗಳೆಲ್ಲಾ ಒಂದೇಎಂಬ ಭಾವ ವನ್ನೂ ಅಂಗೀಕರಿಸುವದಿಲ್ಲವು. ಇವೆಲ್ಲಾ ಪರಮಾತ್ಮಸ್ವರೂಪವೇ, ಭೇದವಾಗಿ ತೋರುತ್ತವೆಎಂಬುವದು ಪೂರ್ವಪಕ್ಷಿಗಳಭಿಪ್ರಾಯವು, ಇದೂ ಮಾಯಾವಾದದಲ್ಲೇ ಅಂತರ್ಗತವು. **ತ್ರಿಕಸಮುಧಿಗತಾ** –ಬ್ರಹ್ಮ ವಿಷ್ಣು ಶಿವರೆಂಬ ತ್ರಿಮೂರ್ತಿಗಳನ್ನು ಹೊಂದಿದ, **ತುಲ್ಯತಾ** – ಸಮಭಾವವನ್ನೂ, ಅಙ್ಗೀಕರಿಸುವದಿಲ್ಲವು. **ತ್ರಿಕಸ ಮುಧಿಕತಾ** – ಎಂದು ಪಾಠಾಂತರ ಉಂಟು. ಆಗ ಮೂರಕ್ಕಿಂತ ಹೆಚ್ಚಾದುದು ಪರಮೇಶ್ವರನೊಬ್ಬನುಂಟು ಎಂಬ ಪಾಶುಪತ ಅಭಿಪ್ರಾಯವು ಹೇಳಲ್ಪಟ್ಟಿತೆಂದೂ ಹೇಳಬಹುದು. ಇದು **ಅನ್ಯತ್ರೈಶ್ವರ್ಯಂ** ಎಂಬಲ್ಲಿ ತೋರಿಬರುವದರಿಂದ, ಪುನ ರುಕ್ತಿಯಾಗುವದರಿಂದ ಮೊದಲಿನ ಪಾಠವೇ ಸರಿ ಎಂಬುವದು ಸಾರಪ್ರಕಾಶಿಕಾ ವ್ಯಾಖ್ಯಾನಕರ್ತೃವಿನಭಿಪ್ರಾಯವು, **ತ್ರಯಾಣಾಂ** – ಆ ಬ್ರಹ್ಮ ವಿಷ್ಣು ಶಿವರು ಗಳ, **ಐಕ್ಯಂ** – ಸ್ವರೂಪೈಕ್ಯವನ್ನೂ ಅಙ್ಗೀಕರಿಸುವದಿಲ್ಲವು. **ಅನ್ಯತ್ರೈಶ್ವರ್ಯಂ** – ಈ ತ್ರಿಮೂರ್ತಿಗಳಿಗಿಂತಲೂ ಬೇರೇಯಾದವನಾಗಿ ಇನ್ನೊಬ್ಬನಾದ ಪರ ಮೇಶ್ವರನಲ್ಲಿ ಈಶ್ವರಭಾವವನ್ನೂ ಅಙ್ಗೀಕರಿಸುವದಿಲ್ಲವು. **ಇತ್ಯಾದಿ** – ಇವೇ ಮೊದಲಾದ ಮೇಲೆ ಹೇಳಿದ ಅನಿಪುಣಘಣಿತೀಗಳನ್ನೆಲ್ಲಾ ಸತ್ಪುರುಷರು ಅಙ್ಗೀಕ ರಿಸುವದಿಲ್ಲವು ಎಂಬ ಭಾವವು. ಹಾಗಾದರೆ ಇನ್ಯಾರನ್ನು ಪರದೇವತೆಯೆಂದು ಸರ್ವ ಪ್ರಮಾಣಗಳೂ ಬೋಧಿಸುವದರಿಂದ ಮಹಾಜ್ಞಾನಿಗಳು ಅಙ್ಗೀಕರಿಸುತ್ತಾರೆಂದರೆ ಹೇಳುತ್ತಾರೆ :—

ಏಕಕಂಠೈಃ – ಎಲ್ಲವೂ ಪರಸ್ಪರ ವಿರೋಧವಿಲ್ಲದೆ ಸರ್ವ ಸಮಂಜಸವಾಗಿ ಏಕೀಭವಿಸಿದ, **ತ್ರಯ್ಯಂತೈಃ** – ವೇದಾಂತಗಳಿಂದಲೂ, ಮತ್ತು **ತದನುಗುಣಮನುವ್ಯಾಸಮುಖ್ಯೋಕ್ತಿಭಿಶ್ಚ**, **ತದನುಗುಣ** – ಆ ವೇದಾಂತಗಳನ್ನನುಸರಿಸಿರುವ, **ಮನುವ್ಯಾಸಮುಖ್ಯೋಕ್ತಿಭಿಶ್ಚ** – ಆ ವೇದಗಳಲ್ಲೇ ಕೊಂಡಾಡಿರುವ ಮನು, ವ್ಯಾಸರು, **ಮುಖ್ಯ** – ಮೊದಲಾದವರ, ಮೊದಲಾದವರೆಂಬುವದರಿಂದ, ವ್ಯಾಸಪಿತಾವಾದ ಪರಾಶರರೂ, ವ್ಯಾಸಪುತ್ರರಾದ ಶುಕರೂ, ವಾಲ್ಮೀಕಿ ಮಹರ್ಷಿಗಳೂ ಹೇಳಲ್ಪಟ್ಟರು; ಇಂಥಾವರುಗಳ ಉಕ್ತಿಗಳಿಂದಲೂ, ಎಂದರೆ ಮನುಸ್ಮೃತಿ, ಶ್ರೀಮನ್ಮಹಾಭಾರತ, ವ್ಯಾಸಸೂತ್ರ, ಶ್ರೀಭಗವದ್ಗೀತೆ, ಶ್ರೀವಿಷ್ಣುಪುರಾಣ, ಶ್ರೀಮದ್ಭಾಗವತ, ಶ್ರೀಮದ್ರಾಮಾಯಣ ಗ್ರಂಥಗಳಿಂದಲೂ ; ಇದರಿಂದ ಇವುಗಳೇ ನಮಗೆ ಮುಖ್ಯಪ್ರಮಾಣಗಳೆಂದು ಹೇಳಿದಂತಾಯಿತು. ಹೀಗೆ ಉಪನಿಷತ್ತುಗಳು, ಪುರುಷಸೂಕ್ತವು, ನಾರಾಯಣಾನುವಾಕ, ಮನುಸ್ಮೃತಿ, ಭಾರತ, ಭಾಗವತ, ರಾಮಾಯಣ, ವಿಷ್ಣುಪುರಾಣ, ವಿಷ್ಣುಸಹಸ್ರನಾಮ ಎಂಬೀ ಪ್ರಮಾಣಗಳಿಂದ, **ನಃ** – ನಮ್ಮಗಳಿಗೆ, **ಪತಿಃ**–ಸ್ವಾಮಿಯಾದ ಸರ್ವೇಶ್ವರನು, **ಅಖಿಲತನುಃ** – ಸಮಸ್ತ ಚಿದಚಿತ್ತುಗಳನ್ನೂ ಶರೀರವಾಗಿಯುಳ್ಳವನಾಗಿ, **ಮುಕ್ತಿದಃ** – ಮುಕ್ತಿಯನ್ನು ಕೊಡುವ ಉಪಾಯಭೂತನಾಗಿ, **ಮುಕ್ತಭೋಗ್ಯಃ** – ಮುಕ್ತರುಗಳಿಗೆ ಭೋಗ್ಯನಾಗಿ ಎಂದರೆ ಪ್ರಾಪ್ಯನಾಗಿರುವವನು, **ಶ್ರೀಮಾನ್ನಾರಾಯಣಃ** – ಲಕ್ಷ್ಮ್ಯಾಯುಕ್ತನಾದ ನಾರಾಯಣನೇ ಸರಿ; ಶ್ರಿಯಃಪತಿಯೇ ನಮಗೆ ಸ್ವಾಮಿಯು, ನನುಗೆ ಉಪಾಯಭೂತನು, ಉಪೇಯನು ಎಂಬ ಭಾವವು. ದಂಪತಿಗಳಿಬ್ಬರೂ ಪ್ರಾಪಕರೂ ಪ್ರಾಪ್ಯರೂ ಎಂಬಭಿಪ್ರಾಯವು.

ತಾತ್ಪರ್ಯ:—ಈ ಶ್ಲೋಕವು ಅನೇಕಾಭಿಪ್ರಾಯಗಳನ್ನೊಳಗೊಂಡಿರುತ್ತದೆ. ಅವೆಲ್ಲವನ್ನೂ ವಿಶದೀಕರಿಸಿದರೆ ಗ್ರಂಥವಿಸ್ತರವಾಗುವದರಿಂದಲೂ, ಈ ಅಭಿಪ್ರಾಯಗಳನ್ನೇ ಸ್ವಾಮಿಯವರೇ ಅಧಿಕಾರದಲ್ಲಿ ವಿಸ್ತರಿಸಿರುವದರಿಂದಲೂ,ಇಲ್ಲಿಸಂಗ್ರಹವಾಗಿ ತಾತ್ಪರ್ಯವನ್ನು ಸೂಚಿಸುವೆವು ವಿಶೇಷಾಭಿಪ್ರಾಯಗಳನ್ನು ಸಂಗ್ರಹಿಸಬೇಕೆಂಬ ಅಪೇಕ್ಷೆಯುಳ್ಳವರು ಸಾರಪ್ರಕಾಶಿಕಾ ವ್ಯಾಖ್ಯಾನವನ್ನು ಅವಲೋಕಿಸಬಹುದು.

ಇತರ ಸಿದ್ಧಾಂತಿಗಳು ಹೇಳುವ ಅಭಿಪ್ರಾಯಗಳನ್ನು, **ಸಂತಃ ನಾದ್ರಿಯಂತೇ**–ಮಹನೀಯರು ಒಪ್ಪಲಾರರು ಎಂದು ಪ್ರಥಮತಃ ಹೇಳುತ್ತಾರೆ. **ಸಂತಃ** ಎಂದು ಹೇಳಿದುದರಿಂದ ಅವರುಗಳಿಗೆ ಏನು ಲಕ್ಷಣವೆಂದರೆ ಪ್ರಮಾಣಶರಣರಾಗಿಯೂ ಇದ್ದುಕೊಂಡು, ಶಂಖಚಕ್ರಾದಿ ಸಂಸ್ಕಾರಗಳನ್ನೂ, ದ್ವಾದಶೋರ್ಧ್ವಪುಂಡ್ರಗಳನ್ನೂ, ಮಂತ್ರೋಪದೇಶ ಮೊದಲಾದ ಪಞ್ಚಸಂಸ್ಕಾರಗಳನ್ನೂ, ಗುರುಮೂಲಕ ಹೊಂದಿದವರಾಗಿ,ಆಚಾರ್ಯನಿಷ್ಠೆಯನ್ನೂ ಸಹ ಹೊಂದಿದವರು. ಇಂಥಾ

ವರು ಸದ್ಗುರುಗಳ ಕೃಪೆಯಿಂದ ಮೇಲೆ ಹೇಳಿದ ಶಾಸ್ತ್ರಗಳಿಗೆಲ್ಲಾ ಪರಸ್ಪರ ವಿರುದ್ಧವಲ್ಲದ ಸರ್ವಸಮಞ್ಜಸಾರ್ಥಗಳನ್ನೂ ಹೇಳಿದವರು; ಅವರುಗಳು **ಯಾರೆಂದರೆ** ಶ್ರೀಮನ್ನಾಥಮುನಿ, ಶ್ರೀ ಯಾಮುನ ಮುನಿ, ಶ್ರೀರಾಮಾನುಜ ಮುನಿ, ಇವರುಗಳಿಂದ ಉಪದೇಶಹೊಂದಿದ ಶಿಷ್ಯಪ್ರಶಿಷ್ಯರಾದ ಭಾಗವತೋತ್ತಮರು. ಅಂಥಾವರು ಒಪ್ಪುವದಿಲ್ಲ. ಏಕೆ ಒಪ್ಪುವದಿಲ್ಲವೆಂದರೆ, ಶ್ರುತಿ ಸ್ಮೃತಿ ಪುರಾಣೇತಿಹಾಸಗಳಿಗೆ, **ಐಕಕಂಠ್ಯ**ಯುತವಾದಭಿಪ್ರಾಯವು **ಅ**ವರ ಸಿದ್ಧಾನ್ತಗಳಲ್ಲಿ ದೊರೆಯುವದಿಲ್ಲವು. ಶ್ರುತಿಗಳಲ್ಲೇ ಪರಸ್ಪರ ವಿರೋಧಭಾವವು ಇರುವ ಹಾಗೆ ಇವರ ಸಿದ್ಧಾನ್ತಗಳಿಂದ ತೋರಿಬರುತ್ತದೆ. ಮತ್ತು ಮನು ವ್ಯಾಸ ಪ್ರಭೃತಿಗಳ ಜ್ಞಾನವನ್ನು ಶ್ರುತಿಯೇ ಶ್ಲಾಘಿಸಿರುತ್ತದೆ. ಅಂತವರ ಅಭಿಪ್ರಾಯಕ್ಕೂ ವಿರೋಧವಾದವು. ಆದುದರಿಂದ ಅವುಗಳು ಗ್ರಾಹ್ಯವಲ್ಲವು. ಆ ಅಭಿಪ್ರಾಯಗಳು ಯಾವುವೆಂದರೆ:—

ಆತ್ಮೈಕ್ಯಂ – ಸಮಸ್ತ ಚಿದಚಿತ್ತೂ ಕೂಡ ಪರಮಾತ್ಮನೇ, ಎಂದರೆ ಪರಮಾತ್ಮದ್ರವ್ಯವೇ, ಎಂಬೀ ಯಾದವ ಪ್ರಕಾಶಾಭಿಪ್ರಾಯವೂ, ಜೀವಾತ್ಮ ಪರಮಾತ್ಮ ಸ್ವರೂಪೈಕ್ಯ ಹೇಳುವ ಶಾಂಕರಾಭಿಪ್ರಾಯವೂ, ಜೀವಾತ್ಮರು ಉಪಾಧಿಯಿಂದ ಭಿನ್ನರೆಂದೂ ಉಪಾಧಿನಿವೃತ್ತಿಯಾದನಂತರ ಪರಮಾತ್ಮನಲ್ಲಿ ಸ್ವರೂಪೈಕ್ಯವೆಂಬ ಭಾಸ್ಕರೀಯರ ಮತವೂ ಕೂಡ, ಶ್ರುತಿವಾಕ್ಯಗಳಿಗೆ ವಿರೋಧವಾದುವು. **"ಪುರುಷ ಏವೇದಗ್ಂಸರ್ವಂ** – ಇವೆಲ್ಲವೂ ಪರಮ ಪುರುಷನೇ" **"ಸರ್ವಂ ಖಲ್ವಿದಂ ಬ್ರಹ್ಮ** – ಇವೆಲ್ಲವೂ ಪರಬ್ರಹ್ಮವಲ್ಲವೇ," **"ನೇಹನಾನಾಸ್ತಿ ಕಿಞ್ಚನ** – ಇಲ್ಲಿ ನಾನಾವಾಗಿ ತೋರುವಂಥಾದ್ದು ಸ್ವಲ್ಪವೂ ಇಲ್ಲವು," ಎಂಬಿವೇ ಮೊದಲಾದ ವಾಕ್ಯಗಳು ಪರಮಾತ್ಮನೊಂದಿಗೆ ಸ್ವರೂಪೈಕ್ಯವನ್ನುಪದೇಶಿಸುವ ಹಾಗೆ ತೋರ್ಸುತ್ತವೆ. ಆದರೆ **"ಭೋಕ್ತಾ ಭೋಗ್ಯಂ ಪ್ರೇರಿತಾರಞ್ಚ ಮತ್ವಾ** – ಎಂದರೆ ಚೇತನ ಅಚೇತನ ಈಶ್ವರವೆಂಬ ತತ್ವಗಳನ್ನು ತಿಳಿದು,"ಎಂಬುವ ಶ್ರುತಿಯಿಂದಲೂ, **"ಜ್ಞಾಜ್ಞೌ ಅಜಾವೀಶನೀಶೌ"** ಎಂಬುವದರಿಂದಲೂ ಜೀವಾತ್ಮ ಪರಮಾತ್ಮ ಭೇದವು ಹೇಳಲ್ಪಟ್ಟಿರುತ್ತದೆ. ಇವೆರಡು ವಿಧ ಶ್ರುತಿಗಳೂ **ಸ**ಮಂಜಸವಾಗಲು, ಕೆಲವು ಘಟಕ ಶ್ರುತಿಗಳಾದ **"ಯಸ್ಯ ಪೃಥವೀ ಶರೀರಂ, ಯಸ್ಯಾಪಶ್ಶರೀರಂ" "ಏಷತ ಆತ್ಮಾನ್ತರ್ಯಾಮ್ಯಮೃತಃ"** ಎಂಬುವುಗಳಿಂದ ಆತನೇ ನಿನಗೂ ಆತ್ಮನು ಎಂದು ಹೇಳಿರುವದರಿಂದ ಪರಮಾತ್ಮನು ಚಿದಚಿತ್ತುಗಳಿಗಿಂತಲೂ ಬೇರೆಯಾಗಿದ್ದರೂ **ಎ**ಲ್ಲವನ್ನೂ ಶರೀರವಾಗಿ ಧರಿಸಿ, ಎಲ್ಲಕ್ಕೂ ಆತ್ಮಾವಾಗಿರುವದರಿಂದ, **"ಸರ್ವಂಖಲ್ವಿದಂ ಬ್ರಹ್ಮ"** ಇತ್ಯಾದಿ ವಾಕ್ಯಗಳು ಸರಿಹೋಗುತ್ತವೆ. ಮತ್ತು ಜೀವರುಗಳು ಅನೇಕರು ಎಂದು **ನಿತ್ಯೋನಿತ್ಯಾನಾಂ ಚೇತನ ಶ್ಚೇತನಾನಾಂ ಏಕೋ ಬಹೂನಾಂ ಯೋವಿದಧಾತಿಕಾಮಾನ್** ಎಂಬುವ ವಾಕ್ಯದಲ್ಲಿಹೇಳಿರುತ್ತದೆ ಇದರ ಅರ್ಥವೇನೆಂದರೆ:–**ನಿತ್ಯಾನಾಂ ಬಹೂನಾಂ ಚೇತನಾ**

ನಾಂ – ನಿತ್ಯರಾದ ಅನೇಕ ಜೀವಾತ್ಮರುಗಳಿಗೆ, **ನಿತ್ಯಃ ಏಕಃ ಚೇತನಃ** – ನಿತ್ಯನಾದ ಒಬ್ಬನಾದ ಚೇತನನಾದ ಪರಮಾತ್ಮನು ಸರ್ವಾಭೀಷ್ಟಗಳನ್ನೂ ಕೊಡುವನು ಎಂಬ ತಾತ್ಪರ್ಯವು. ಹಾಗೆಯೇ ಗೀತೆಯಲ್ಲೂ **"ದ್ವಾವಿಮೌ ಪುರುಷೋಲೋಕೇ"** – ಎಂಬುವದರಿಂದ ಜೀವಾತ್ಮರುಗಳು ಬದ್ಧರು ಮುಕ್ತರೆಂದು ಎರಡು ವಿಧವೆಂದು ಹೇಳಿ, **"ಉತ್ತಮಃ ಪುರುಷಸ್ತ್ವನ್ಯಃ"** ಎಂದು ಪರಮಾತ್ಮನು ಇವರುಗಳಿಗಿಂತಲೂ ಬೇರೆ-ಎಂದು ಹೇಳಿರುತ್ತದೆ. ಆದುದರಿಂದ ಶಾಂಕರ, ಯಾದವ ಪ್ರಕಾಶ, ಭಾಸ್ಕರಮತಗಳು ಶ್ರುತಿವಾಕ್ಯಗಳಿಗೆ ವಿರೋಧವಾದವು.

ದೇವತೈಕ್ಯಂ– **"ತದೇವಾಗ್ನಿ ಸ್ತದ್ವಾಯು ಸ್ತತ್ಸೂರ್ಯ ಸ್ತದು ಚಂದ್ರಮಾಃ"** ಎಂದು ಎಲ್ಲಾ ದೇವತೆಗಳೂ ಪರಮಾತ್ಮನೇ ಎಂದು ಹೇಳಿರುವದರಿಂದ ದೇವತೈಕ್ಯವೆಂದು ಊಹಿಸಬಹುದು. ಈ ಐಕ್ಯವೆಲ್ಲಾ ಶರೀರಾತ್ಮಭಾವದಿಂದ ಮಾತ್ರವೇ ವಿನಾ ಸ್ವರೂಪತಃ ಅಲ್ಲವು. **"ನಾರಾಯಣಾದ್ಬ್ರಹ್ಮಾ ಜಾಯತೇ, ರುದ್ರೋಜಾಯತೇ ಇಂದ್ರೋಜಾಯತೇ"**ಎಂದು ಹೀಗೆ ದೇವತೆಗಳೆಲ್ಲಾ ಬೇರೆಬೇರೆಯಾಗಿ ನಾರಾಯಣನಿಂದ ಉಂಟಾದ ವಿಷಯವು ಹೇಳಲ್ಪಡುವದರಿಂದಲೂ,ಮತ್ತು ಇನ್ನೂಕೆಲವು **"ಯಸ್ಯಾದಿತ್ಯಶ್ಶರೀರಂ"** ಇತ್ಯಾದಿ ಶ್ರುತಿಗಳಲ್ಲಿ, ಇಂದ್ರಾಗ್ನಿ ಆದಿತ್ಯ ಮೊದಲಾದವರನ್ನು ಪೃಥಕ್ಕಾಗಿ ಹೇಳಿ ಅವರುಗಳೆಲ್ಲಾ ಸರ್ವೇಶ್ವರನಿಗೆ ಶರೀರವೆಂದು ಹೇಳಿರುವದರಿಂದ ದೇವತೈಕ್ಯವು ಸಂಭವಿಸಲಾರದು.

ತ್ರಿಕಸಮಧಿಗತಾತುಲ್ಯತಾ ಮುಂತಾದವು –ಬ್ರಹ್ಮ, ವಿಷ್ಣು, ರುದ್ರರು ಸಮರೆಂಬ ಭಾವವೂ, ಅವರಲ್ಲೇ ಬ್ರಹ್ಮನಾಗಲಿ ರುದ್ರನಾಗಲಿ ಪರಬ್ರಹ್ಮನಾದ ವಿಷ್ಣುವಿಗೆ ಸಮಾನವೆಂಬ ಭಾವವೂ,ಪ್ರಮಾಣ ವಿರೋಧವಾದುವು. ಸ್ವಾಮಿಯ ಲೀಲಾ ವಿಭೂತಿಗೆ ಸೇರಿದ ಬ್ರಹ್ಮಾಂಡಗಳು ಅನೇಕವಾಗಿವೆ. ಪ್ರತಿಯೊಂದು ಅಂಡಕ್ಕೂ ಒಬ್ಬ ಬ್ರಹ್ಮನೂ,ಒಬ್ಬ ರುದ್ರನೂ ಉಂಟು. ಇವರುಸ್ವಾಮಿಸಙ್ಕಲ್ಪಾನುಸಾರವಾಗಿ ವ್ಯಷ್ಟಿ ಸೃಷ್ಟಿ ಲಯಗಳ ಕೆಲಸಗಳನ್ನೂ ನಡಿಸುತ್ತಾರೆ. ಸರ್ವೇಶ್ವರನಾದ ವಿಷ್ಣುವು ಮಾತ್ರ ತಾನೇ ಪ್ರತಿಯೊಂದು ಅಂಡದಲ್ಲೂ ನಿಂತು ಪಾಲನ ಕಾರ್ಯವನ್ನು ಮಾಡುತ್ತಾನೆ. **"ನಹಿಪಾಲನ ಸಾಮರ್ಥ್ಯಂಋತೇ ಸರ್ವೇಶ್ವರಂ ಹರಿಂ"** ಎಂದು ವಿಷ್ಣುಪುರಾಣದಲ್ಲಿ ಹೇಳಿರುತ್ತದೆ. ಆದುದರಿಂದ ಸಾಧುಪರಿತ್ರಾಣಕ್ಕಾಗಿ ಅವತಾರಗಳನ್ನೆತ್ತಿದವನು ಶ್ರೀಮಹಾವಿಷ್ಣುವು. ಬ್ರಹ್ಮರುದ್ರಾದಿಗಳು ಈ ಕೆಲಸವನ್ನು ಮಾಡಲಿಲ್ಲವು, ಆದರೂ ಇವರುಗಳ ಉಪಾಸನದಿಂದ ಐಹಿಕಸುಖಪ್ರಾಪ್ತಿಯುಂಟು. ಆಮುಷ್ಮಿಕ ಸುಖರೂಪವಾದ ಮೋಕ್ಷವನ್ನು ಕೊಡಲಾರರು. ಇದನ್ನೇ ಶ್ರುತಿಯು ತಿಳಿಸುತ್ತದೆ. **"ನಾನ್ಯಃ ಪನ್ಥಾವಿದ್ಯತೇ ಅಯನಾಯ"** ವ್ಯಾಸಮಹರ್ಷಿಯು ಹಾಗೆಯೇ ಹೇಳಿರುತ್ತಾರೆ.

"ಬ್ರಹ್ಮಾಣಂ ಶಿತಿಕಣ್ಠ ಇಂದ್ರಯಶ್ಚಾನ್ಯಾದೇವತಾಸ್ಮೃತಾಃ ।
ಪ್ರತಿಬುದ್ಧಾನಸೇವನ್ತೇ ಯಸ್ಮಾತ್ಪರಿಮಿತಂಫಲಂ" ॥

ಚತುರ್ಮುಖ ಬ್ರಹ್ಮ ರುದ್ರರು ದೇವತೆಗಳಲ್ಲಿಯೇ ಸೇರಿದವರೆಂದೂ ಅವರುಗಳಿಗೆ ಮೋಕ್ಷಪ್ರದತ್ವ ಶಕ್ತಿಯಿಲ್ಲದುದರಿಂದ ವಿವೇಕಿಗಳಾದ ಮೋಕ್ಷಾರ್ಥಿಗಳು ಅವರನ್ನು ಸೇವಿಸುವುದಿಲ್ಲವೆಂದೂ ಹೇಳಿರುತ್ತಾರೆ.

ಏತೌದ್ವೌ ವಿಬುಧ ಶ್ರೇಷ್ಠೌ ಪ್ರಸಾದಕ್ರೋಧಜೌ ಸ್ಮೃತೌ ।
ತದಾದರ್ಶಿತ ಪನ್ಥಾನೌ ಸೃಷ್ಟಿ ಸಂಹಾರ ಕಾರಕೌ ॥

ತದಾದರ್ಶಿತಪನ್ಥಾನೌ ಎಂಬುವದರಿಂದ ಪರಮಾತ್ಮನು ತೋರಿಸಿದ ಮಾರ್ಗವುಳ್ಳವರೆಂದು ಹೇಳಿರುವದರಿಂದ ಪರಮಾತ್ಮನಿಗೆ ಅಧೀನರೆಂದೂ ಇವರುಗಳು ವಿಬುಧರೆಂದೂ ಆದುದರಿಂದ ದೇವತೆಗಳಹಾಗೆ ಜೀವಕೋಟಿಗೆ ಸೇರಿದವರೆಂದೂ ವ್ಯಕ್ತಪಡುತ್ತದೆ. ಮೋಕ್ಷಧರ್ಮದಲ್ಲಿ,

ಕುತಸ್ಸೃಷ್ಟಮಿದಂ ಸರ್ವಂ ಜಗತ್ಸ್ಥಾವರ ಜಂಗಮಂ ।
ಪ್ರಳಯೇ ಚ ಕಮುಭ್ಯೇತಿ ತನ್ಮೇ ಬ್ರೂಹಿ ಪಿತಾಮಹ ॥

ಯಾರಿಂದ ಇವೆಲ್ಲವೂ ಸೃಷ್ಟಿಸಲ್ಪಟ್ಟವು, ಮತ್ತು ಇವೆಲ್ಲವೂ ಪ್ರಳಯದಲ್ಲಿ ಯಾರನ್ನು ಹೋಗಿ ಸೇರುತ್ತವೆಂಬ ಯುಧಿಷ್ಠಿರ ಪ್ರಶ್ನೆಗೆ ಶ್ರೀ ಭೀಷ್ಮರು ಹೇಳುತ್ತಾರೆ.

'ನಾರಾಯಣೋ ಜಗನ್ಮೂರ್ತಿ ರನ್ತರಾತ್ಮಾ ಸನಾತನಃ" ಎಂದು ಪ್ರಾರಂಭಿಸಿ, ಆತನೇ ಸೃಷ್ಟಿಕರ್ತ, ಕಡೆಗೆ ಎಲ್ಲವೂ ಸೂಕ್ಷ್ಮದೆಶೆಯಲ್ಲಿ ಆತನಲ್ಲೇ ಹೋಗಿಸೇರುತ್ತವೆಂದು ಹೇಳಿರುತ್ತಾರೆ.

ಹಾಗೆಯೇ ವಾಲ್ಮೀಕಿಮಹರ್ಷಿಯು ಬಾಲಕಾಂಡದಲ್ಲಿ ವಿಷ್ಣುವನ್ನು **"ದೇವ ದೇವೇಶ್ವರಃ ಪ್ರಭುಃ, ಶಂಖ ಚಕ್ರ ಧರೋಹರಿಃ"** ಎಂದು ಹೇಳಿ, **ರುದ್ರನನ್ನು ಸುರಶ್ರೇಷ್ಠನೆಂದೂ, ಸುರಾಣಾಂ ಅಗ್ರಜೋಸಿಯುತ್,** ದೇವತೆಗಳಿಗೆಲ್ಲಾ ದೊಡ್ಡವನೆಂದೂ (ರಾ. ಬಾಲ. 40-22, 24) ಹೇಳಿ ಜೀವಕೋಟಿಗೆ ಸೇರಿದವನಾಗಿ ಭಾವಿಸಿದ್ದಾರೆ. ಆದುದರಿಂದ ಬ್ರಹ್ಮರುದ್ರರು ವಿಷ್ಣುವಿಗೆ ಸಮರಾಗಲಾರರು. ಹಾಗೆಯೆ ಸುಂದರಕಾಂಡದಲ್ಲಿ,

ಬ್ರಹ್ಮಾ ಸ್ವಯಮ್ಭೂಶ್ಚತುರಾನನೋವಾ ರುದ್ರಸ್ತ್ರಿನೇತ್ರಸ್ತ್ರಿಪುರಾನ್ತಕೋವಾ । ಇನ್ದ್ರೋಮಹೇನ್ದ್ರಸುರನಾಯಕೋವಾ ತ್ರಾತುಂ ನಶಕ್ತಾಯುಧಿ ರಾಮವಧ್ಯಂ ॥

ಎಂದು ರಾಮನು ವಧ್ಯನೆಂದು ಭಾವಿಸಿದವನನ್ನು ರಕ್ಷಿಸಲು ಚತುರ್ಮುಖ ರುದ್ರೇಂದ್ರಾದಿಗಳು ಸಮರ್ಥರಲ್ಲವೆಂದು ಹೇಳಿರುತ್ತದೆ. ಶ್ರೀ ಸೀತಾ ರಾಮರು ಸಹ ಆರಾಧಿಸಿರುವದು **" ಸಹಪತ್ನ್ಯೈ ವಿಶಾಲಾಕ್ಷ್ಯೈ ನಾರಾಯಣ**

ಮುಪಾಗಮತ್" ಎಂದು ಹೇಳಿರುವದರಿಂದ ಶ್ರೀಮನ್ನಾರಾಯಣನೇ ಪರತತ್ವವೆಂಬುವದೇ ಮಹರ್ಷಿಯಾಭಿಪ್ರಾಯವು. ಶ್ರೀರಾಮನಿಗೆ ಯೌವರಾಜ್ಯಾಭಿಷೇಕವು ನಾಳೆ ನಡೆಯುತ್ತಿರಲಂದು ಕೇಳಿ "**ಪ್ರಾಣಾಯಾಮೇನ ಪುರುಷಂ ಧ್ಯಾಯಮಾನಾ ಜನಾರ್ದನಂ**" (ರಾ. ಅಯೋಧ್ಯಾ. 4–33) ಕೌಸಲ್ಯೆಯು ಪುರುಷಸೂಕ್ತದಲ್ಲಿ ಪ್ರತಿಪಾದ್ಯನಾಗಿ, ತಾನಲ್ಲದ ಇತರ ಆತ್ಮಾಗಳೆಲ್ಲಾ "**ಸ್ತ್ರೀ ಪ್ರಾಯಮಿತರತ್**" ಎಂಬ ವ್ಯಾಸೋಕ್ತಿಯ ಪ್ರಕಾರ, ಅತನೊಬ್ಬನೇ ಪುರುಷನೆಂದು ಹೇಳಿಸಿಕೊಳ್ಳುವ ಜನಾರ್ದನನನ್ನು ಉಪಾಸನೆಮಾಡಿದಳೆಂದು ಹೇಳಿರುತ್ತದೆ. ಶ್ರೀರಾಮನು ಯಾರೆಂಬ ಪ್ರಶಂಸೆಯಲ್ಲಿ, ಚತುರ್ಮುಖ ಬ್ರಹ್ಮನೇ ಶ್ರೀರಾಮನನ್ನು ಕುರಿತು ಹೇಳುತ್ತಾನೆ:—"**ಭವಾನ್ ನಾರಾಯಣೋ ದೇವಃ**" ನೀನು ಸಾಕ್ಷಾತ್ ನಾರಾಯಣನು ಎಂದೂ, "**ಸೀತಾಲಕ್ಷ್ಮೀರ್ಭವಾನ್ ವಿಷ್ಣುಃ**" ಸೀತೆಯು ಲಕ್ಷ್ಮಿಯು ನೀನು ವಿಷ್ಣುವು ಎಂದೂ "**ವಧಾರ್ಥಂ ರಾವಣಸ್ಯೇಹ ಪ್ರವಿಷ್ಟೋಽಮಾನುಷೀಂ ತನುಂ**" ರಾವಣವಧೆಗಾಗಿ ನೀನು ಮಾನುಷ ಶರೀರವನ್ನು ಹೊಂದಿರುವೆ ಎಂದೂ, "**ತ್ವಂತ್ರಯಾಣಾಂ ಹಿಲೋಕಾನಾಂ ಆದಿಕರ್ತಾಸ್ವಯಂಪ್ರಭುಃ**" ನೀನು ಎಲ್ಲಾ ಜಗತ್ತುಗಳ ಸೃಷ್ಟಿಕರ್ತಾವೆಂದೂ, "**ತ್ವಂ ಧಾರಯಸಿ ಭೂತಾನಾಂ**", "**ಜಗತ್ಸರ್ವಂ ಶರೀರಂ ತೇ**" ನೀನು ಎಲ್ಲಾ ಚಿದಚಿತ್ತುಗಳಿಗೂ ಧಾರಕನೂ ಎಂದೂ ಹೀಗೆಲ್ಲಾ ರಾಮಾಯಣ ಯುದ್ಧಕಾಂಡ 120ನೇ ಸರ್ಗದಲ್ಲಿ ಹೊಗಳಿರುವದರಿಂದ ವಿಷ್ಣ್ವವತಾರಿಯಾದ ಶ್ರೀರಾಮನು ಪರತತ್ವವಾದ ಶ್ರೀಮನ್ನಾರಾಯಣನೇ ಎಂದು ವಾಲ್ಮೀಕಿ ಮಹರ್ಷಿಯು ವ್ಯಕ್ತಪಡಿಸಿರುತ್ತಾರೆ.

ಶ್ರೀ ಪರಾಶರರು ಹರಿಶಬ್ದಕ್ಕೆ:—

ಬ್ರಹ್ಮಾಣಮಿನ್ದ್ರಂ ರುದ್ರಂಚ ಯಮಂ ವರುಣಮೇವಚ ।
ನಿಗೃಹ್ಯ ಹರತೇ ಯಸ್ಮಾತ್ತಸ್ಮಾದ್ಧರಿರಿತೀರ್ಯತೇ ॥

ಎಂಬುವದರಿಂದ ಚತುರ್ಮುಖಬ್ರಹ್ಮ, ಇಂದ್ರ, ರುದ್ರಾದಿಗಳನ್ನು ಪ್ರಳಯದಲ್ಲಿ ತನ್ನಲ್ಲೇ ಸೇರುವ ಹಾಗೆ ಮಾಡಿಕೊಳ್ಳುವನೆಂದು ಮೈತ್ರೇಯರಿಗೆ ಉಪದೇಶಿಸುತ್ತಾರೆ. "**ವಿಷ್ಣೋಸ್ಸಕಾಶಾದುದ್ಭೂತಂ**" ಎಂದು ಜಗತ್ಕಾರಣತ್ವವನ್ನು ವಿಷ್ಣುವಿಗೆ ಹೇಳಿರುತ್ತಾರೆ. ಮತ್ತು

ಕ ಇತಿ ಬ್ರಹ್ಮಣೋ ನಾಮ ಈಶೋಹಂ ಸರ್ವದೇಹಿನಾಂ ।
ಆವಾಂ ತವಾಂಗೇ ಸಂಭೂತೌ ತಸ್ಮಾತ್ಕೇಶವನಾಮವಾ'॥'

"**ಕ** ಎಂಬುವದು ಚತುರ್ಮುಖನ ಹೆಸರು, ಸಮಸ್ತ ಶರೀರಿಗಳಿಗೂ ಈಶನಾಗಿ ನಾನಿರುವದರಿಂದ ನನಗೆ **ಈಶ**ನೆಂಬ ಹೆಸರು; ಈ ನಾವಿಬ್ಬರೂ ನಿನ್ನ ದಿವ್ಯಮಙ್ಗಳ ವಿಗ್ರಹದಿಂದ ಉಂಟಾದವರಾದ ಪ್ರಯುಕ್ತ ನಿನ್ನನ್ನು ಕೇಶವನೆಂದು ಕರೆಯುವರು" ಎಂಬಿ

ವೇ ಮೊದಲಾದ ಪ್ರಮಾಣಗಳಿಂದಲೂ ಚತುರ್ಮುಖ ರುದ್ರರು ಪರತತ್ವವಲ್ಲವು, ಶ್ರೀಮನ್ನಾರಾಯಣನೇ ಪರತತ್ವವು.

ಮನುಪ್ರೋಕ್ತವಾದುದು (ಯಜು. 2-3.) **"ಯದ್ವೈ ಕಿಞ್ಚಿನ ಮನುರವದತ್ತದ್ಭೇಷಜಂ** – ಮನುವೇನಾದರೂ ಅಲ್ಪ ಸ್ವಲ್ಪ ಉಪದೇಶಿಸಿರುವದ್ದು ಸಂಸಾರವೆಂಬ ವ್ಯಾಧಿಗೆ ಪರಮೌಷಧವೆಂದು" ಶ್ರುತಿಯಲ್ಲಿಯೂ ಕೊಂಡಾಡಲ್ಪಟ್ಟಿರುತ್ತದೆ. ಅವರು ಜಗತ್ಸೃಷ್ಟಿಯನ್ನು ಬೋಧಿಸುವ ಸಂದರ್ಭದಲ್ಲಿ ಹೇಳಿರುತ್ತಾರೇನೆಂದರೆ:—

ಆಪೋ ನಾರಾ ಇತಿಪ್ರೋಕ್ತಾ ಆಪೋವೈ ನರಸೂನವಃ ।
ತಾಯದಸ್ಯಾಯನಂ ಪುಂಸ ಸ್ತೇನ ನಾರಾಯಣಸ್ಸ್ಮೃತಃ॥

ಆಪಃ – ಎಂದರೆ ಚಿತ್ತೊಂದಿಗೆ ಸೇರಿದ ಅಂಡಕ್ಕೆ ಕಾರಣಭೂತವಾದ ಅಚಿತ್ತತ್ವ ಸಮೂಹವು, **ನಾರಾಇತಿ** – ನಾಶವಿಲ್ಲದವುಗಳಾದುದರಿಂದ ನಾರವೆಂದು, **ಪ್ರೋಕ್ತಾಃ** – ಹೇಳಿಸಿಕೊಳ್ಳುತ್ತವೆ. **ಆಪೋವೈ** –ಆ ಆಪಗಳಾದರೋ, **ನರಸೂನವಃ** – ವಿಕಾರ ನಾಶಾದಿಗಳಿಲ್ಲದ ಪರಬ್ರಹ್ಮನಿಂದ ಉತ್ಪನ್ನವಾದುವು. ಆದುದರಿಂದಲೇ ಅವುಗಳು **ನಾರ**ಗಳು, **ಯತ್** – ಯಾವ ಕಾರಣದಿಂದ, **ತಾಃ** – ಆ ತತ್ವಗಳು, **ಅಸ್ಯ ಪುಂಸಃ** – ಈ ಪರಬ್ರಹ್ಮನಾದ ಪರಮಪುರುಷನಿಗೆ, **ಅಯನಂ** – ಆಶ್ರಯವೋ ಎಂದರೆ ಶರೀರವಾಗಿ, ಆತನು ಅಂತರಾತ್ಮಾವಾಗಿರಲು ಸಹಕಾರಿಯೋ, **ತೇನ**–ಆ ಕಾರಣದಿಂದ, **ನಾರಾಯಣಸ್ಸ್ಮೃತಃ** – ನಾರಾಯಣನೆಂದು ತಿಳಿಯಲ್ಪಟ್ಟನು, ಎಂದು ಹೇಳಿರುವದರಿಂದ, ಶ್ರೀಮನ್ನಾರಾಯಣನೇ ಜಗತ್ಕಾರಣನಾಗಿ, ನಿರ್ವಿಕಾರನಾಗಿ ಎಲ್ಲವನ್ನೂ ಶರೀರವಾಗಿ ಹೊಂದಿ ಎಲ್ಲಕ್ಕೂ ಅಂತರಾತ್ಮಾವಾಗಿದ್ದಾನೆಂದು ಬೋಧಿಸಿರುತ್ತಾರೆ.

ಹೀಗೆ ಮನು, ವ್ಯಾಸ, ಪರಾಶರ, ಶುಕ, ವಾಲ್ಮೀಕಿ ಮಹರ್ಷಿಗಳು ವೇದಪಜ್ತಿಗಳನ್ನು ಅನುಸರಿಸಿಯೇ ಹೇಳಿರುವದರಿಂದ, **"ತದನುಗುಣಮನುವ್ಯಾಸಮುಖ್ಯೋಕ್ತಿಭಿಶ್ಚ"** ಎಂದು ಹೇಳಿ ಶ್ರೀಮನ್ನಾರಾಯಣನೇ ಪರದೇವತೆಯೇ ವಿನಾ ಬ್ರಹ್ಮರುದ್ರಾದಿಗಳಲ್ಲವು ಎಂದು ಉಪದೇಶಿಸುತ್ತಾರೆ.

ಆದರೆ ಕೆಲವು ಕಡೆಗಳಲ್ಲಿ ಶ್ರುತಿಗಳಲ್ಲೇ, **"ಹಿರಣ್ಯಗರ್ಭಸ್ಸಮವರ್ತತಾಗ್ರೇ,"** **"ನಸನ್ನಚಾಸಚ್ಛಿವ ಯೇವ ಕೇವಲಃ"** ಸೃಷ್ಟಿಗೆ ಮೊದಲು ಹಿರಣ್ಯಗರ್ಭನೊಬ್ಬನೇ ಇದ್ದನು, ಸತ್ತೂ ಇರಲಿಲ್ಲವು ಅಸತ್ತೂ ಇರಲಿಲ್ಲವು ಶಿವಮಾತ್ರನೇ ಆಗ ಇದ್ದನು; ಇತ್ಯಾದಿ ವಾಕ್ಯಗಳಿಂದ ಚತುರ್ಮುಖ ಬ್ರಹ್ಮನೂ, ರುದ್ರನೂ ಸಹ ಜಗತ್ಕಾರಣರೆಂದು ತೋರಿಬರುತ್ತದಲ್ಲಾ ಎಂಬಾಕ್ಷೇಪ ತಂದರೆ, ಅದಕ್ಕೆ ಸಮಾಧಾನ ಹೇಗೆಂದರೆ:—

ಇನ್ನು ಕೆಲವು ಕಡೆಗಳಲ್ಲಿ "**ಏಕೋ ಹವೈ ನಾರಾಯಣ ಆಸೀತ್**" ಎಂದೂ, "**ನಾರಾಯಣಾದ್ಬ್ರಹ್ಮಾ ಜಾಯತೇ ನಾರಾಯಣಾದ್ರುದ್ರೋ ಜಾಯತೇ**" ಎಂಬಿವೇ ಪ್ರಮಾಣಗಳೂ ಇವೆ. ಇಂತಹ ಸಂದರ್ಭದಲ್ಲಿ ಈ ವಾಕ್ಯಗಳಿಗೂ ಮೇಲಿನ ವಾಕ್ಯಗಳಿಗೂ ಪರಸ್ಪರ ವಿರೋಧವಿಲ್ಲದೆ ಅರ್ಥಗಳನ್ನು ಬೋಧಿಸುವದು ಯುಕ್ತವು. ಈ ವಾಕ್ಯಗಳಿಗೆಲ್ಲಾ ಸಮಞ್ಜಸಾರ್ಥವು ಪುರುಷಸೂಕ್ತದಿಂದ ವ್ಯಕ್ತಪಡುತ್ತದೆ. ಪುರುಷಸೂಕ್ತಕ್ಕೆ ಹೆಚ್ಚು ಮಾಹಾತ್ಮ್ಯವು ಅನೇಕ ಕಡೆ ಹೇಳಲ್ಪಟ್ಟಿರುತ್ತದೆ. "**ಏಷ ವೈಷ್ಣವೀ ನಾಮ ಸಂಹಿತಾ, ಏತಾಂ ಪ್ರಯುಞ್ಜ್ಞಾನ ವಿಷ್ಣುಂ ಪ್ರೀಣಾತಿ**" ಎಂದು ಛಾಂದೋಗ್ಯದಲ್ಲೂ, "**ಏತತ್ಪುರುಷಸೂಕ್ತಂ ಹಿ ಸರ್ವವೇದೇಷು ಪಠ್ಯತೇ। ಅತಶ್ಶ್ರುತಿಭ್ಯಸ್ಸರ್ವಾಭ್ಯೋ ಬಲವತ್ತ್ವಮು ದೀರತಂ**" ಎಂದು ಎಲ್ಲಾ ಶ್ರುತಿಗಳಿಗಿಂತಲೂ ಬಲವತ್ತರವಾದುದೆಂದು ಮೋಕ್ಷಧರ್ಮದಲ್ಲೂ,

ವೇದೇಷು ಪೌರುಷಂ ಸೂಕ್ತಂ ಧರ್ಮಶಾಸ್ತ್ರೇಷು ಮಾನವಂ।
ಭಾರತೇ ಭಗವದ್ಗೀತಾ ಪುರಾಣೇಷುಚ ವೈಷ್ಣವಂ॥
ಶ್ರುತಿಷು ಪ್ರಬಲಾ ಮನ್ತ್ರಾಸ್ತೇಷ್ವಪ್ಯಧ್ಯಾತ್ಮವಾದಿನಃ।
ತತ್ರಾಪಿ ಪೌರುಷಂ ಸೂಕ್ತಂ ನ ತಸ್ಮಾದ್ವಿದ್ಯತೇ ಪರಂ॥

ವೇದಗಳಲ್ಲಿ ಪುರುಷಸೂಕ್ತವೂ, ಧರ್ಮಶಾಸ್ತ್ರಗಳಲ್ಲಿ ಮನುಧರ್ಮಶಾಸ್ತ್ರವೂ, ಭಾರತದಲ್ಲಿ ಭಗವದ್ಗೀತೆಯೂ, ಪುರಾಣಗಳಲ್ಲಿ ವಿಷ್ಣುಪುರಾಣವೂ ಶ್ರೇಷ್ಠವೆಂದೂ, ಪುರುಷಸೂಕ್ತಕ್ಕಿಂತಲೂ ಶ್ರೇಷ್ಠವಾದುದಿಲ್ಲವೆಂದೂ ಪಾದ್ಮಪುರಾಣದಲ್ಲಿ ಹೇಳಿರುತ್ತದೆ. ಇಂತಹ ಪುರುಷಸೂಕ್ತದಲ್ಲಿ ಪರತತ್ವನಿರ್ಣಯವು ಬಹು ಸ್ಪಾರಸ್ಯವಾಗಿ ಉಪದೇಶಿಸಲ್ಪಟ್ಟಿರುತ್ತದೆ. "**ಓಂ ಸಹಸ್ರಶೀರ್ಷಂ ದೇವಂ**" ಎಂದು ಪ್ರಾರಂಭಿಸಿ, "**ಸಬ್ರಹ್ಮಾ ಸಶಿವಸ್ಸೇನ್ದ್ರಃಪರಮಸ್ವರಾಟ್**" ಎಂದು ಪೂರೈಸಿ ಹೇಳುವದರಭಿಪ್ರಾಯವೇನೆಂದರೆ, ಶಿವ, ಶಮ್ಭು, ಪರಮಾತ್ಮಾ, ಪರಂಜ್ಯೋತಿಸ್ಸು ಮೊದಲಾದ ಶಬ್ದವಾಚ್ಯನಾದ ಪರಮಾತ್ಮನು ನಾರಾಯಣನೇ ಎಂದು ಹೇಳಿ,

ಯಚ್ಚ ಕಿಞ್ಚಿ ಜ್ಜಗತ್ತಸ್ಮಿ ನ್ದೃಶ್ಯತೇ ಶ್ರೂಯತೇಽಪಿ ವಾ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಸ್ಥಿತಃ॥"

ಎಂದು ಹೇಳಿ, **ಸಬ್ರಹ್ಮಾ ಸಶಿವಃ** ಬ್ರಹ್ಮಾತ್ಮಕನೂ ಶಿವಾತ್ಮಕನೂ, ಸಹ ನಾರಾಯಣನೇ ಎಂದುಪದೇಶಿಸುವದರಿಂದ ನಾರಾಯಣನೇ ಪರತತ್ವವೆಂದು ಸ್ಥಾಪಿಸಿರುತ್ತದೆ. ಈ ಅಭಿಪ್ರಾಯವನ್ನೇ ವ್ಯಾಸಮಹರ್ಷಿಯು ಲಿಙ್ಗಭೂಯಸ್ಥಾಧಿಕರಣದಲ್ಲಿ ಸಂಗ್ರಹಿಸಿರುವದನ್ನು ಶ್ರೀಭಾಷ್ಯಕಾರರವರು ಶ್ರೀಭಾಷ್ಯದಲ್ಲಿ ಬಹುಸ್ಪಾರಸ್ಯವಾಗಿ ಉಪಪಾದನೆಮಾಡಿರುತ್ತಾರೆ. ಆದರೆ ಹಿರಣ್ಯಗರ್ಭ, ಶಮ್ಭು, ಶಿವ ಶಬ್ದಗಳಿಂದ ಪರ

ಮಾತ್ಮನು ಜಗತ್ಕಾರಣನೆಂದು ಶ್ರುತಿಯಲ್ಲಿ ಹೇಳಲ್ಪಟ್ಟಿದ್ದರೆ, ಮಿಕ್ಕ ಅನೇಕ ಶ್ರುತಿಗಳಿಗೂ ಇತಿಹಾಸ ಪುರಾಣಗಳಿಗೂ ವಿರೋಧವಿಲ್ಲದ ಹಾಗೆ ಅರ್ಥಹೇಳಬೇಕಾದುದೇ ವಿಧಾಯಕವಾದುದರಿಂದ ಚತುರ್ಮುಖ ಬ್ರಹ್ಮ, ರುದ್ರರೆಂದು ಅರ್ಥಹೇಳಿ, ವ್ಯಾಸಮಹರ್ಷಿಯು ಶ್ರೀವಿಷ್ಣು ಸಹಸ್ರನಾಮದಲ್ಲಿ ಇದೇ ನಾಮಧೇಯಗಳನ್ನೇ ವಿಷ್ಣುವಿಗೂ ಉಪಯೋಗಿಸಿರುವದರಿಂದ, ಯೋಗರೀತಿಯಲ್ಲಿ ಈ ಪದಗಳಿಗೆ ಅರ್ಥ ಹೇಳತಕ್ಕದ್ದೆಂದು ಏರ್ಪಟ್ಟಿತು. ಹಿರಣ್ಯಗರ್ಭನೆಂದರೆ ಸುವರ್ಣದಂತೆ ಪ್ರಕಾಶವಾದ ಪರಮಪದದಲ್ಲಿ ವಾಸಮಾಡುವವನು; ಶಿವನೆಂದರೆ ಮಂಗಳಕರನು; ಶಮ್ಭುವೆಂದರೂ ಮಂಗಳವನ್ನುಂಟುಮಾಡುವವನು.

ಆದುದರಿಂದಲೇ ವ್ಯಾಸಮಹರ್ಷಿಯು ಎಲ್ಲಾ ಶಾಸ್ತ್ರಗಳನ್ನೂ ಪರಿಶೀಲಿಸಿ ಮಹಾವಿದ್ವತ್ಸಭೆಯಲ್ಲಿ ಕೈ ಎತ್ತಿ ಹೇಳಿದುದೇನೆಂದರೆ,

"ಆಲೋಢ್ಯ ಸರ್ವಶಾಸ್ತ್ರಾಣಿ ವಿಚಾರ್ಯಚ ಪುನಃಪುನಃ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ॥
ಸತ್ಯಂ ಸತ್ಯಂ ಪುನಸ್ಸತ್ಯಮುಧೃತ್ಯಭುಜಮುಚ್ಯತೇ।
ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ॥"

"ನಾರಾಯಣನೇ ಧ್ಯೇಯವಸ್ತು, ಬ್ರಹ್ಮರುದ್ರರಿಗೂ ಸ್ವಾಮಿಯಾಗಿರುವದರಿಂದ ಕೇಶವನೆಂದು ಹೇಳಿಸಿಕೊಳ್ಳುವ ಆ ನಾರಾಯಣನೇ ಪರತತ್ವವು. ವೇದಶಾಸ್ತ್ರವೇ ಶಾಸ್ತ್ರವು. ಇವುಗಳಿಗೆ ಶ್ರೇಷ್ಠವಾದವು ಇಲ್ಲವು" ಎಂದು ಮಹರ್ಷಿಯು ತತ್ವ ಸ್ಥಾಪನೆ ಮಾಡಿದರು.

ಆದುದರಿಂದಲೇ ತ್ರಿಮೂರ್ತಿಗಳು ಸಮವು ಎಂಬಿವೇ ಮೊದಲಾದ ಸಿದ್ಧಾನ್ತಗಳನ್ನು ಪಂಡಿತರು ಆದರಿಸಲಾರರು. ಹೀಗೆ **ತ್ರಯ್ಯನ್ತ**ಗಳೆಲ್ಲಾ, ಐಕಕಂಠ್ಯದಿಂದ **ಶ್ರೀಮನ್ನಾರಾಯಣನೇ** ಪರತತ್ವವೆಂದೂ, ಲಕ್ಷ್ಮೀನಾರಾಯಣನೇ ಉಪಾಯೋಪೇಯರೆಂದೂ **ಹೇಳಿರುತ್ತವೆ**. ಈ ಲಕ್ಷ್ಮೀನಾರಾಯಣರಿಗೆ **ಸರ್ವವೂ** ಶರೀರವಾಗಿ ಅವರು ಎಲ್ಲಾ ಚಿದಚಿತ್ತುಗಳಿಗೂ ಆತ್ಮರಾದುದರಿಂದ **ಅಖಿಲತನುಃ** ಎಂದು ಹೇಳಿರುತ್ತಾರೆ, ಇಲ್ಲಿ ಅದನ್ನು ಮುಖ್ಯವಾಗಿ ಏಕೆ ಹೇಳಿದರೆಂದರೆ ಸಾಮಾನಾಧಿಕರಣ್ಯದಿಂದ ಸರ್ವವೂ ಪರಬ್ರಹ್ಮವೆಂದು ಹೇಳಿರುವ ಸಂದರ್ಭದಲ್ಲಿ ಶಾಂಕರರ ಹಾಗೆ ಸ್ವರೂಪೈಕ್ಯವೆಂಬ ತಪ್ಪಾದ ಅಭಿಪ್ರಾಯವನ್ನು ಹೇಳದೆ ವಿಶಿಷ್ಟತೆಯಿಂದ ಐಕ್ಯವನ್ನು ಬೋಧಿಸುವದಕ್ಕಾಗಿ **ಅಖಿಲತನುಃ** ಎಂದು ಇಲ್ಲಿ ಪ್ರಯೋಗಿಸಿರುತ್ತಾರೆ. ಇದರಿಂದ ಬ್ರಹ್ಮರುದ್ರೇಂದ್ರಾದಿ ಸಕಲ ದೇವತೆಗಳೂ ಶ್ರೀಮನ್ನಾರಾಯಣನಿಗೆ ಶರೀರವೆಂದು ಸೂಚಿಸುವದಕ್ಕಾಗಿಯೂ **ಅಖಿಲತನು**ವೆಂದು ಹೇಳಿರುತ್ತಾರೆ. ಆದುದರಿಂದಲೇ **ಸಬ್ರಹ್ಮಾಸಶಿವಸ್ಸೇನ್ದ್ರಃ** ಇತ್ಯಾದಿ ಸಾಮಾನಾಧಿಕರಣ್ಯಹೇಳುವ ಸಂದರ್ಭಗಳಲ್ಲಿ ನಾರಾಯಣನೇ ಬ್ರಹ್ಮಶಿವೇನ್ದ್ರಾತ್ಮಕನು ಎಂದರೆ

ಪರದೇವತಾ ನಿರ್ಣಯ ಪ್ರಯೋಜನ ಕಥನಂ.

ಉಕ್ತವೈಧರ್ಮ್ಯಜ್ಞಾಲೇ ಪೊದುವಿಲೇ ಪ್ರಕೃತಿ ಪುರುಷೇಶ್ವರ ವಿವೇಕಂ ಪಣ್ಣಿನಾಲುಮ್ "ಒನ್ರುನ್ದೇವುಮ್" ಇತ್ಯಾದಿಗಳಿರ್ ಪಡಿಯೇ ಪರದೇವತಾ ವಿಶೇಷ ನಿಶ್ಚಯಮಿಲ್ಲಾದಪೋದು, "ಉನ್ನಿತ್ತುಮ ಪ್ಪಿರು ದೇಯ್ವ ತೊಳಾಳವನೈ ಯಲ್ಲಾಲ್" ಎನ್ಗಿರ ಪರಮೈಕಾ

ಬ್ರಹ್ಮ ಶಿವ ಇಂದ್ರ ಶರೀರಕನೆಂದು ತಿಳಿಯತಕ್ಕದ್ದೆಂದು ಬೋಧಿಸುವದಕ್ಕಾಗಿಯೂ **ಅಖಿಲತೆನುಃ** ಎಂದು ಪ್ರಯೋಗಿಸಿರುತ್ತಾರೆ. ಪರತತ್ವವು ಶ್ರೀಮಾನ್ ಆದ ನಾರಾಯಣನು ಎಂದು ಹೇಳುವದರಿಂದ, ಬರೀ ನಾರಾಯಣನೊಬ್ಬನೇ ತತ್ವವಲ್ಲ ವೆಂದು ತಿಳಿಸುತ್ತಾರೆ. ಲಕ್ಷ್ಮ್ಯಾಯೂ ಈಶ್ವರಿಯಾಗಿ ಐಕಮತ್ಯವುಳ್ಳವಳಾಗಿ, ಸರ್ವೇಶ್ವರನೊಂದಿಗೆ ಯಾವಾಗಲೂ ನಿತ್ಯಯೋಗವುಳ್ಳವಳಾದುದರಿಂದ **ಶ್ರೀಮನ್ನಾರಾಯಣನೇ** ಪರತತ್ವವೆಂಬುವದು ಸಿದ್ಧಾಂತವೆಂಬಭಿಪ್ರಾಯವು.

ಈ ಮೇಲಿನ ಶ್ಲೋಕಾಭಿಪ್ರಾಯವನ್ನು ಈ ಅಧಿಕಾರದಲ್ಲಿ ಉಪಪಾದಿಸುತ್ತಾರೆ:—ಈ ಪರದೇವತೆ ಪಾರಮಾರ್ಥ್ಯವನ್ನು ಏಕೆ ವ್ಯವಸ್ಥೆಮಾಡಬೇಕು? ಚಿತ್ತು ಅಚಿತ್ತುಗಳೊಂದಿಗೆ ಸೇರಿ ಒಬ್ಬ ಈಶ್ವರನಿದ್ದಾನೆಂದು ತಿಳಿದುಕೊಂಡರೆ ಸಾಲದೇ? ಇವೇ ಪರದೇವತೆ ಎಂಬ ನಿಷ್ಕರ್ಷೆಯು ಅಷ್ಟು ಆವಶ್ಯಕವೇ? ಎಂಬ ಶಙ್ಕಾವಿಗೆ ಮೊದಲು ಸಮಾಧಾನ ಹೇಳುತ್ತಾರೆ.

ಪರದೇವತಾ ನಿರ್ಣಯದಿಂದುಂಟಾಗುವ ಪ್ರಯೋಜನವು

ಉಕ್ತ ವೈಧರ್ಮ್ಯಜ್ಞಾಲೇ – ಮೇಲೆ ತತ್ವತ್ರಯಾಧಿಕಾರದಲ್ಲಿ ಹೇಳಲ್ಪಟ್ಟ ಪರಸ್ಪರ ಸ್ವರೂಪ ಸ್ಥಿತಿ ಪ್ರವೃತ್ತಿಗಳಲ್ಲಿರುವ ವ್ಯತ್ಯಾಸಗಳಿಂದ, **ಪೊದುವಿಲೇ** – ಸಾಮಾನ್ಯವಾಗಿ ಎಂದರೆ ಪರತತ್ವವು ವಿಷ್ಣುವೋ, ರುದ್ರನೋ, ಚತುರ್ಮುಖನೋ ಎಂಬ ಯಾವುದೊಂದು ನಿಷ್ಕರ್ಷೆಯಿಲ್ಲದೆ, **ಪ್ರಕೃತಿ ಪುರುಷ ಈಶ್ವರ ವಿವೇಕಂ ಪಣ್ಣಿನಾಲುಂ** – ತತ್ವಗಳು ಮೂರು ಎಂದು ಭಾವಿಸಿ, ಪ್ರಕೃತಿ, ಜೀವಾತ್ಮರು, ಈಶ್ವರನು ಎಂದು ಹೀಗೆ ವಿವೇಚನೆಮಾಡಿ ತಿಳಿದರೂ, **"ಒನ್ರುಂ ದೇವುಮ್"** ಎಂಬ ತಿರುವಾಯ್‌ಮೊಳಿ ೪.೧೦.೧. ನೇ ಪಾಶುರದಲ್ಲಿ **ಇತ್ಯಾದಿಗಳಿರ್ಪಡಿಯೇ** – ಇವೇ ಮೊದಲಾದವುಗಳಲ್ಲಿ, (ಇಲ್ಲಿ ಮೊದಲಾದವು ಎಂದು ಹೇಳಿದುದರಿಂದ "ರೆಣ್ಡುಂ ವೀಡುಂ" ಮೊದಲಾದ ಪಾಶುರಗಳು ಸೂಚಿಸಲ್ಪಟ್ಟವು.) ಉಪಪಾದಿತವಾಗಿರುವ ಹಾಗೆ, **ಪರದೇವತಾ ವಿಶೇಷ ನಿಶ್ಚಯಮಿಲ್ಲಾದ**

ನ್ತಿತ್ತಪ್ಪಜ್ಞಾಡಾಮ್ಯೈಯಾಲುಮ್, ಪರಮ್ಯೈಕಾನ್ತಿಕ್ಕಲ್ಲದು ವ್ಯವಧಾನ ರಹಿತಮಾಕಮೋಕ್ಷಜ್ಞಾಡೈಯಾಮ್ಯೈಯಾಲು ಮೀಶ್ವರ ನಿನ್ನ ದೇವತಾ ವಿಶೇಷ ಮೆನ್ರು ನಿಷ್ಕರ್ಷಿಕ್ಕವೇಣುಮ್.

ಪೋದು – ಪರದೇವತೆಯು ಯಾವುದು ಎಂಬ ನಿಷ್ಕರ್ಷೆ ಮಾಡದೇ ಹೋದರೆ, **"ಉನ್ನಿತ್ತು** – ಸೇವಿಸಲು ಯೋಗ್ಯನಾದ ಪರವಸ್ತು ಎಂದು ನೆನಸಿ ಎಂದರೆ ನಿಶ್ಚಯಿಸಿ, **ಅವನೈಯಲ್ಲಾಲ್** – ಆತನನ್ನಲ್ಲದೆ, **ಮುನ್ಪಿರುದೇಯವನ್** – ಇನ್ಯಾವ ದೇವತೆಯನ್ನೂ, **ತೊಳಾಲ್** – ಆರಾಧಿಸುವಳಲ್ಲವು. (ತಿರುವಾಯ್ ಮೊಳಿ, ೪.೬.೧೦.) **ಎನ್ಸಿರ ಪರಮ್ಯೈಕಾನ್ತಿತ್ವಮ್** – ಎಂಬುವ ಪರಮ್ಯೈಕಾನ್ತಿತ್ವವು, **ಕೂಡಾಮ್ಯೈಯಾಲುಂ** – ಉಂಟಾಗುವದಿಲ್ಲವಾದುದರಿಂದಲೂ, ಮತ್ತು **ಪರಮ್ಯೈಕಾನ್ತಿಕ್ಕಲ್ಲದು** – ಅಂತಹ ಪರಮ್ಯೈಕಾನ್ತಿಗಲ್ಲದೆ, **ವ್ಯವಧಾನರಹಿತಮಾನ** – ವಿಳಂಬವಿಲ್ಲದೆ, **ಮೋಕ್ಷಜ್ಞಾಡಯಾಮ್ಯೈಯಾಲುಮ್** – ಮೋಕ್ಷವುಂಟಾಗಲಾರದುದರಿಂದಲೂ, **ಈಶ್ವರ ಇನ್ನ ದೇವತಾ ವಿಶೇಷಂ** – ಈಶ್ವರನು ಇಂತಹ ದೇವತಾ ವಿಶೇಷವು, **ಎನ್ರು ನಿಷ್ಕರ್ಷಿಕ್ಕವೇಣುಂ** – ಎಂದು ಶಾಸ್ತ್ರಬಲದಿಂದಲೂ ಅದನ್ನನುಸರಿಸಿದ ಉಪಪಾದನೆಯಿಂದಲೂ, ನಿಷ್ಕರ್ಷಿಮಾಡತಕ್ಕದ್ದು.

(ಸುಮ್ಮನೆ, ತತ್ವತ್ರಯಗಳಾದ ಪ್ರಕೃತಿ, ಚೇತನರು, ಈಶ್ವರರು **ಎಂಬ** ಮೂರು ತತ್ವಗಳು, **"ಭೋಗ್ಯಂ ಭೋಕ್ತಾ ಪ್ರೇರಿತಾರಞ್ಚ ಮತ್ವಾ"** ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಉಂಟೆಂದೂ, ಅವುಗಳ ಸ್ವರೂಪಸ್ಥಿತಿಪ್ರವೃತ್ತಿಗಳಲ್ಲಿ **ಈಈ** ಭೇದಗಳುಂಟು ಎಂದೂ, ಹೀಗೆ ಇಂತಹ ಈಶ್ವರನೊಬ್ಬನಿದ್ದಾನೆ ಎಂದು ಇಷ್ಟು ಮಾತ್ರ ತಿಳಿದರೆ ಸಾಲದೇ? ಶಾಸ್ತ್ರಗಳಲ್ಲಿ ಆ ಪರದೇವತೆಯು **ಯಾರು** ಎಂದು ಹೇಳಿರುತ್ತದೆ? ಚತುರ್ಮುಖ ಬ್ರಹ್ಮನೇ? ರುದ್ರನೇ? ಇಲ್ಲನೇ ಸುಮ್ಮನೇ ನಾರಾಯಣನೇ? ಇಲ್ಲವೇ ಲಕ್ಷ್ಮೀಯುಕ್ತನಾರಾಯಣನೇ? ಇವರಲ್ಲಿ ಯಾರು ಎಂದು ನಿಷ್ಕರ್ಷಿಸಿ ತಿಳಿಯುವದು ಆವಶ್ಯಕವೇ? **ಎಂಬ** ವಿಷಯವು ಚರ್ಚಿಸಲ್ಪಡುತ್ತದೆ. ಇಲ್ಲಿ ಕಾಲಮುಂತಾದವುಗಳನ್ನು ಬಿಟ್ಟು ಪ್ರಕೃತಿ ಮಾತ್ರ ಹೇಳಿರುವದು, ಪ್ರಕೃತಿ ತಾನೇ ಎಲ್ಲಾ ಭ್ರಮೆಗೂ ಕಾರಣವಾದುದರಿಂದ ಪ್ರಕೃತಿ ಮಾತ್ರ ಹೇಳಲ್ಪಟ್ಟಿತು. ಶ್ರೀ ನಮ್ಮಾಳ್ವಾರವರು **"ಒನ್ರುಂ ದೇವುಂ"** ಎಂಬ ಪಾಶುರದಲ್ಲಿ ಉಪಪಾದಿಸಿರುವ ಹಾಗೆಯೇ ಅಥವಾ **ಉನ್ನಿತ್ತು ಮುನ್ಪಿರು ದೇಯ್ವನ್** ಎಂಬ ಪಾಶುರದಲ್ಲಿ ಹೇಳಿರುವ ಹಾಗೆ ನಿಷ್ಕರ್ಷಿಸತಕ್ಕದ್ದೇ ಎಂಬ ಸಂದೇಹದಲ್ಲಿ ಪರದೇವತೆಯು ಶಾಸ್ತ್ರಗಳಲ್ಲಿ ನಿರೂಪಿತವಾಗಿರುವದು ಇಂಥಾದ್ದೆಂದು

ತಿಳಿಯುವದು ತುಂಬಾ ಆವಶ್ಯಕವು. ಧ್ಯೇಯವಸ್ತು ಇಂಥಾದ್ದೆಂದು ತಿಳಿಯದೆ ಪರಮೈಕಾನ್ತಿತ್ವವು ಉಂಟಾಗಲಾರದು. ಏಕಾನ್ತಿತ್ವವೆಂದರೆ, ಒಬ್ಬ ಚೇತನನನ್ನು ಪರವಸ್ತುವೆಂದು ಭಾವಿಸಿ, ಅದೇ ನಮಗೆ ಉಪಾಯೋಪೇಯವೆಂಬದಾಗಿ ಭಾವಿಸುವದು. ಅದು ಸರ್ವಶ್ರೇಷ್ಠವಾದುದೆಂದು ಸತತ ಹಾಗೆ ಅನುಸನ್ಧಾನಮಾಡುವದು ಪರಮೈಕಾನ್ತಿತ್ವವು. ಪ್ರಪನ್ನನಾದ ಮೋಕ್ಷಾರ್ಥಿಗೆ ಈ ಪರಮೈಕಾನ್ತಿತ್ವವು ಅತ್ಯಾವಶ್ಯಕವು. ಪ್ರಥಮತಃ ಮೋಕ್ಷಪ್ರಾಪ್ತಿಗೇನೇ ಆವಶ್ಯಕವು. ಎರಡನೇದು ಪರದೇವತಾ ವಿಷಯದಲ್ಲಿ ಶಾಸ್ತ್ರಪಜ್ಞ್ತಗಳಿಗೆ ಸರಿಯಾದ ಅರ್ಥಹೇಳದೆ ಇರುವವರ ಮೂಲಕ ಅನೇಕ ವಿಪ್ರತಿಪತ್ತಿಗಳುಂಟು. ಈ ವಿಪ್ರತಿಪತ್ತಿಗಳಿಂದ ಮೋಕ್ಷಪ್ರಾಪ್ತಿಗೆ ವ್ಯವಧಾನವೆಂದರೆ ವಿಳಂಬ ಉಂಟಾಗುತ್ತದೆ. ದೇವತಾನ್ತರ ಸಂಬಂಧವೇ ಮೋಕ್ಷಾರ್ಥಿಗೆ ಕೂಡದು. ಮುಖ್ಯೋಪಾಯವನ್ನು ಬಿಟ್ಟು ಬೇರೇ ಉಪಾಯವನ್ನು ಸ್ವೀಕರಿಸಬಹುದು. ಅದರಿಂದ ಬೇರೆ ಫಲಾನುಭವ ಉಂಟಾಗಬಹುದು. ಹೀಗೆ ವಿಳಂಬವಾಗುತ್ತದೆ:—

ಸೂರ್ಯಸ್ಯೈವತು ಯೋ ಭಕ್ತ ಸ್ಸಪ್ತಜನ್ಮಾನ್ತರಂ ನರಃ।
ತಸ್ಯೈವತು ಪ್ರಸಾದೇನ ರುದ್ರಭಕ್ತಃ ಪ್ರಜಾಯತೇ॥

ಶಙ್ಕರಸ್ಯತು ಯೋ ಭಕ್ತ ಸ್ಸಪ್ತಜನ್ಮಾನ್ತರಂ ನರಃ।
ತಸ್ಯೈವತು ಪ್ರಸಾದೇನ ವಿಷ್ಣುಭಕ್ತಃ ಪ್ರಜಾಯತೇ॥

ವಾಸುದೇವಸ್ಯ ಯೋ ಭಕ್ತಸ್ಸಪ್ತಜನ್ಮಾನ್ತರಂ ನರಃ।
ತಸ್ಯೈವತು ಪ್ರಸಾದೇನ ವಾಸುದೇವೇ ಪ್ರಲೀಯತೇ॥

ಎಂಬೀ ಶ್ಲೋಕಗಳಲ್ಲಿ ಉಪಪಾದಿಸಿರುವ ಹಾಗೆ ಕಾಲ ವಿಳಂಬವು ಪ್ರಾಪ್ತವಾದೀತೆಂಬ ಭಾವವು.

ಮುಖ್ಯಾಭಿಪ್ರಾಯವೇನೆಂದರೆ. ಪ್ರಪನ್ನನಿಗೆ, ಅಪೇಕ್ಷಿಸಿದ ಕಾಲದಲ್ಲಿ ಮೋಕ್ಷ ಪ್ರಾಪ್ತಿಯುಂಟಾಗಬೆ ಭಗವನ್ನಿಗ್ರಹಕ್ಕೆ ಕಾರಣವಾಗಿ ಪರಿಣಮಿಸುವದು, ದೇವತಾನ್ತರ ಸಂಬಂಧವು, ಅಂತಹ ಅನ್ಯದೇವತಾ ಸಂಬಂಧಉಂಟಾಗದಿರುವದಕ್ಕಾಗಿ, ಪರದೇವತಾ ನಿಷ್ಕರ್ಷೆಯು ಅತ್ಯಾವಶ್ಯಕವು. ಆ ಪರದೇವತೆಯು ಶ್ರೀಮನ್ನಾರಾಯಣನು ಎಂದು ಈ ಅಧಿಕಾರದಲ್ಲಿ ಸ್ಥಾಪಿಸುತ್ತಾರೆ.
ಈಮೇಲೆ ಹೇಳಿದ ಪಾಸುರಗಳು ಯಾವುವೆಂದರೆ:—

(1) **ಒನ್ರುನ್ದೇವು ಮುಲಕ ಮುಯಿರು ಮುಟ್ರುಮ್ ಯಾದುಮಿಲ್ಲಾ।**
ವನ್ರು, ನಾನ್ಮಕನ್ರನ್ನೋಡು ತೇವರುಲ ಕೋಡುಯಿರ್ ಪಡ್ಡೈತ್ತಾ॥
ಕುನ್ರಮ್ಬೊನ್ಮಣಿ ಮಾಡ ನೀಡು ತಿರುಕ್ಕುರು ಕೂರತನು।
ಣಿನ್ರ ವಾದಿ ಪ್ಪಿರಾ ನಿರ್ಕ ಮುಟ್ರು ತ್ತೇಯಿ ವನಾಡುತಿರೇ॥

ಒನ್ರುಂ – "ತಮೋ ದೇವೇ ಏಕೀ ಭವತಿ" ಎನ್ನುವ ಹಾಗೆ ಆತನೊಂದಿಗೆ ಹೋಗಿ ಸೇರುವ, **ದೇವುಂ**– ದೇವತೆಗಳು, **ಉಲಕುಂ** – ಅವರ ಲೋಕವು, **ಉಯಿರ್** – ಚೇತನರು, **ಮುಂಱುಂಯಾದುಂ** – ಸಮುಷ್ಟಿ ಸೃಷ್ಟಿಗೆಸೇರಿದ ಮಹದಾದಿ ಸಕಲ ಪದಾರ್ಥಗಳು, ಇವುಗಳು ಯಾವುದೂ, **ಇಲ್ಲಾನನ್ರು** – ಇಲ್ಲದ ಕಾಲದಲ್ಲಿ ಎಂದರೆ ಪ್ರಳಯವಾದ ನಂತರ, **ನಾನ್ಮಕನನ್ರೋಡು** – ಚತುರ್ಮುಖಬ್ರಹ್ಮ ನೊದಲುಗೊಂಡು, **ದೇವರ್** – ದೇವತೆಗಳನ್ನೂ, **ಉಲಕ** – ಲೋಕಗಳನ್ನೂ, **ಉಯರ್** – ಚೇತನ ವರ್ಗವನ್ನೂ, **ಪಡೈತ್ತಾನ್** – ಸೃಷ್ಟಿಸಿದವನು **ಕುನ್ರಮ್ಪೋಲ್** – ಪರ್ವತಗಳ ಹಾಗೆ, **ಮಣಿಮಾಡಂ** – ಮಾಣಿಕ್ಯಮಯವಾದ ಪ್ರಾಸಾದಗಳುಳ್ಳದ್ದಾಗಿ, **ನೀಡುಂ** – ಉನ್ನತವಾದ, **ತಿರುಕ್ಕುರುಕ್ಕೂರತನುಳ್** ತಿರುನಗರಿಯಲ್ಲಿ, **ನಿನ್ರ** – ಬಿಜಮಾಡಿಸಿರುವ, **ಆದಿ ಪಿರಾನ್** – ಸ್ವಾಮಿಯು, **ನಿರ್ಕ** – ಇರುವಾಗಲೇ, **ಮುಂಱುತ್ತೀವಂ** – ರುದ್ರಾದಿ ಅನ್ಯ ದೇವತೆಯನ್ನು, **ನಾಡುತಿರೇ** – ಆಶ್ರಯಿಸುವದಕ್ಕಾಗಿ ಹುಡುಕುತ್ತೀರಾ ! ಇಂತಹ ಅಜ್ಞಾನ ಉಂಟೋ ಎಂಬ ಭಾವವು.

ಕರ್ಮಾಧೀನರಾಗಿರುವ ಮತ್ತು ಸೃಷ್ಟಿಲಯಾದಿಗಳಿಗೆ ಸೇರಿದ ಬ್ರಹ್ಮರುದ್ರಾದಿಗಳ ಆರಾಧಿಸುವದು ಎಂತಹ ಅಜ್ಞಾನವು, ಸಕಲ ಲೋಕ ಲಯಗಳಿಗೂ ಸಕಲ ಲೋಕ ಸೃಷ್ಟಿಗೂ ಕಾರಣನಾದ ಶ್ರೀಮನ್ನಾರಾಯಣನು ಬಹು ಸೌಲಭ್ಯದಿಂದ ಇಲ್ಲಿ ಅರ್ಚಾವತಾರಿಯಾಗಿ ನೆಲೆಸಿರುವನನ್ನು ಬಿಟ್ಟು ಇತರರನ್ನಾಶ್ರಯಿಸಬಹುದೇ ಎಂಬರ್ಥವು ಈ ಪಾಶುರದಲ್ಲಿ ನಾರಾಯಣ ಶಬ್ದದಿಂದ ತೋರುವರ್ಥವು ಉಪಪಾದಿತವಾಗಿ ಮುಂದಿನ ನಾಲ್ಕನೇ ಪಾಶುರವಾದ **"ಪೇಶಿನಿನ್ರ ಶಿವನುಕ್ಕುಮ್ ಪಿರಮಿನ್ರನಕ್ಕುಮ್ ಪಿರರುಕ್ಕು ನಾಯಕನವನೇ"** ಎಂಬುವದರಲ್ಲಿ ಇತರ ದೇವತೆಗಳನ್ನು ಕಂಠೋಕ್ತವಾಗಿ ನಿರಾಕರಿಸಿ, ಶ್ರೀಮನ್ನಾರಾಯಣನೇ ಪರತತ್ವವೆಂದು ಸ್ಥಾಪಿಸಿರುತ್ತಾರೆ ಇದರಿಂದ ಪುರುಷಸೂಕ್ತದಲ್ಲಿ ಹೇಳಿರುವಹಾಗೆ ಸರ್ವವೂ ಶ್ರೀಮನ್ನಾರಾಯಣನನ್ನೇ ಬೋಧಿಸುತ್ತದೆಂದು ಬಹು ಸ್ವಾರಸ್ಯವಾಗಿ ನಮ್ಮಾಳ್ವಾರವರು ತೋರಿಸಿರುತ್ತಾರೆ. ಆದುದರಿಂದ ಈ ಪಾಶುರವು ಪೂರ್ಣವಾಗಿ ಇಲ್ಲಿ ಹೇಳಲ್ಪಟ್ಟಿರುತ್ತದೆ.

(2) **"ಉನ್ನಿತ್ತು ಮತ್ತೊರು ದೇಯ್ವ ನ್ನೊಳ್ಳಾತನ್ನೈಯಲ್ಲ ।**
ನುಮ್ಮಿಚ್ಚೈ ಶೊಲ್ಲಿ ನುನೈವೀಳ್ ಕುಟ್ಟಿಕ್ಕಪ್ಪಡು ಮಿನ್ನೈವಮೀರ್।
ಮುನ್ನ ಪಡುಮಱೈ ವಾಣನ್ನೈವಣ್ಡು ವರಾಪತಿ ।
ಮುನ್ನ ನ್ನೈ, ಯೇತ್ತು ಮಿನೇತ್ತು ತಲುನೆಂಡ್ರಳು ತಾಡುಮೇ."॥

ಅವನ್ನೈಯಲ್ಲಾಲ್ – ಆ ಶ್ರೀಮನ್ನಾರಾಯಣನನ್ನು ಬಿಟ್ಟು. **ಮತ್ತೊ**

ಆತ್ಮೈಕ್ಯ ಪಕ್ಷ ನಿರಾಕರಣಂ.

ಅವ್ವಿಡತ್ತಿಲ್ ಚೇತನಾ ಚೇತನಜ್ಗಳುಡ್ಯೆಯ ವತ್ಯನ್ತ ಭೇದವುಂ ಪ್ರಮಾಣ ಸಿದ್ಧ ಮಾಕ್ಕೆಯಾಲೇ, ಎಲ್ಲಾವುಂ ಪರದೇವತ್ತೆಯಾ ಯಿರುಕ್ಕಿರ ಬ್ರಹ್ಮದ್ರವ್ಯ ಮೆಜ್ಗಿರ ಪಕ್ಷವುಂ ಘಟಿಯಾದು.

ರು – ಬೇರೆ ಯಾವದೊಂದು, **ದೇವಮುಮ್**–ದೇವತೆಯನ್ನೂ, **ಉನ್ನಿತ್ತುತೊಳಾಳ್** – ಸೇವಿಸಿ ಆರಾಧಿಸಬೇಡಿರಿ, **ಅನ್ನೈನುಮುಂ ಇಚ್ಚೈಪೊಲ್ಲಿ** – ಹೀಗಿರುವಾಗ, ನಿಮ್ಮಗಳ ಅಭೀಷ್ಟ ಹೇಳಿ, **ನುಮುಂ ತೋಳ್** – ಆರಾಧನೆಗೆ ಸಹಾಯವಾದ ನಿಮ್ಮ ತೋಳುಗಳು, **ಕುಲೈಕ್ಕಪಡುಮು**–ದೇವತಾನ್ತರವನ್ನು ವ್ಯಾಪಿಸಲು ಯತ್ನಿಸಬಹುದು. **ಮುನ್ನಪಡುಮ್** – (ಆದುದರಿಂದ ಅದನ್ನು ಬಿಟ್ಟು) ನಿತ್ಯವಾಗಿ ಮನಸ್ಸಿನಿಂದ ಗ್ರಹಿಸಬಹುದಾದ, **ಮುರೈವಾಣನೈ** – ವೇದಗಳಲ್ಲಿ ಪ್ರತಿಪಾದ್ಯನಾದ, **ಪಣ್ಡುವರಾಪತಿ ಮುನ್ನನೈ** – ಶ್ರೀಮದ್ದ್ವಾರಕೆಗೆ ಅಧಿಪತಿಯಾದ ಶ್ರೀ ಕೃಷ್ಣನನ್ನು, **ಏತ್ತುಮಿ** – ಸ್ತೋತ್ರಮಾಡಿರಿ, **ಏತ್ತತಲುಮ್** – ಸ್ತುತಿಸಿದುದಾದರೆ, **ತೊಳದು ಆಡುಮ್** – ಅದು ಅವನನ್ನು ಆರಾಧಿಸಿ ಸರ್ವ ಶ್ರೇಯಸ್ಸನ್ನು ಉಂಟಾಗುವ ಹಾಗೆ ಮಾಡುವದು.

ಆತ್ಮೈಕ್ಯ ಪಕ್ಷ ನಿರಾಕರಣವು

ಮುಂದೆ ಸಂಗ್ರಹ ಶ್ಲೋಕವನ್ನುಪಪಾದಿಸುವರಾಗಿ ಮೊದಲು **ಆತ್ಮೈಕ್ಯ**ಪಕ್ಷವನ್ನು ನಿರಾಕರಿಸುತ್ತಾರೆ.

ಅವ್ವಿಡತ್ತಿಲ್ – ಆ ಸಂದರ್ಭದಲ್ಲಿ ಎಂದರೆ, ಪರದೇವತಾ ವಿಶೇಷವನ್ನು ನಿಷ್ಕರ್ಷಿಸುವ ಸಂದರ್ಭದಲ್ಲಿ, ಚೇತನಾಚೇತನರುಗಳ, **ಅತ್ಯನ್ತಭೇದಂ** – ಪರಮಾತ್ಮನಿಗಿಂತ ಅತ್ಯಂತವಾಗಿ ಸ್ವರೂಪದಲ್ಲಿರುವ ಭೇದವು, **ಪ್ರಮಾಣಸಿದ್ಧ ಮಾಕ್ಕೆಯಾಲೇ** -- ಪ್ರಮಾಣಗಳಿಂದ ಸ್ಥಾಪಿತವಾಗಿರುವದರಿಂದ, **ಎಲ್ಲಾವುಮ್**– ಈ ಚಿದಚಿತ್ತೆಲ್ಲಾ, **ಪರದೇವತೆಯಾಯಿರುಕ್ಕಿರ** – ಪರದೇವತೆಯಾಗಿರುವ, **ಬ್ರಹ್ಮದ್ರವ್ಯಂ** – ಪರಬ್ರಹ್ಮದ್ರವ್ಯವೇ, **ಎಜ್ಗಿರಪಕ್ಷವುಂ ಘಟಿಯಾದು** – ಎನ್ನುವ ಮತವು ಕೂಡುವದಿಲ್ಲವು. ಚಿದಚಿತ್ತೆಲ್ಲಾ ಪರಬ್ರಹ್ಮದ್ರವ್ಯವೇ ಎಂಬ ಯಾದವ ಪ್ರಕಾಶಮತವು ಖಂಡಿಸಲ್ಪಟ್ಟಿತು. ಚೇತನಾಚೇತನಗಳು ಪರಬ್ರಹ್ಮಕ್ಕಿಂತ **ಅತ್ಯಂತವಾಗಿ** ಸ್ವರೂಪತಃ ಭೇದ ಉಳ್ಳದ್ದು ಎಂದು ಹೇಳಿದುದರಿಂದ **ಉ**ಪಾಧಿಯಿಂದ ಭೇದವಾದವು, ಉಪಾಧಿನಿವೃತ್ತಿಯಿಂದ ಅಭೇದವೆಂದು ಹೇಳುವ ಭಾಸ್ಕರಮತವೂ, ಮತ್ತು ಅವಿದ್ಯೆಯಿಂದ ಚೇತನನು ಪರಬ್ರಹ್ಮನಿಗಿಂತ ಭಿನ್ನವಾ

ದೇವತೈಕ್ಯಪಕ್ಷ ನಿರಾಕರಣಂ.

ಸ್ವಭಾವ ಸಿದ್ಧವಾನ ಜೀವೇಶ್ವರ ಭೇದಮುಮ್ ಅ (ಇ) ಪ್ಪಡಿಯೇ ದೇವಾದಿ ರೂಪರಾನ ಜೀವರ್ಗಳುಡೈಯ ಅನ್ಯೋನ್ಯ ಭೇದಮುಮ್ ಸುಖದುಃಖಾದಿ ವ್ಯವಸ್ಥೈಯಾಲೇ ಪ್ರಾಮಾಣಿಕ ವಾಕ್ಯೈಯಾಲೇ ಸರ್ವಾನ್ತರ್ಯಾಮಿ ಒರುವನೇ ಯಾಕಿಲುಮ್ ಬ್ರಹ್ಮ ರುದ್ರೇಂದ್ರಾದಿ ಸರ್ವ ದೇವತೈಗಳುಮ್ ಈಶ್ವರನೋಡುಮ್ ತನ್ನಿಲ್ ತ್ತಾನುಮ್ ಅಭಿನ್ನರೆನ್ಗಿರ ಪಕ್ಷಮುಮ್ ಕೂಡಾದು.

ದುದಾಗಿ ತೋರುತ್ತಾನೆಂದೂ, ಅವಿದ್ಯಾ ನಿವೃತ್ತಿಯಿಂದ ಪರಬ್ರಹ್ಮನಲ್ಲಿ ಐಕ್ಯವೆಂದೂ ಹೇಳುವ ಶಾಂಕರ ಸಿದ್ಧಾನ್ತವೂ ನಿರಾಕರಿಸಲ್ಪಟ್ಟವು. **ಪ್ರಮಾಣಸಿದ್ಧವಾಕ್ಯೈಯಾಲೇ** ಎಂಬಲ್ಲಿ ಪ್ರಮಾಣಗಳಾವುವೆಂದರೆ:— "**ಪೃಥಗಾತ್ಮಾನಂ ಪ್ರೇರಿತಾರಞ್ಚ ಮತ್ವಾ**" "**ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ**" "**ದ್ವಾಸುಪರ್ಣಾ ಸಯುಜಾಸಖಾಯಾ.....ತಯೋರನ್ಯಃ ಪಿಪ್ಪಲಂಸ್ವಾದ್ವತ್ತಿ ಅನಶ್ನನ್ ಅನ್ಯೋ ಅಭಿಚಾಕಸೀತಿ;**" "**ಜ್ಞಾಜ್ಞೌ ದ್ವಾವಜಾವೀಶನೀಶೌ**" ಇತ್ಯಾದಿಗಳು.

ದೇವತೆಗಳೆಲ್ಲಾ ಎಲ್ಲಾ ಒಂದೇ ಎಂಬ ಅಪಸಿದ್ಧಾನ್ತ ನಿರಾಕರಣವು.

ಸ್ವಭಾವಸಿದ್ಧವಾಗಿತೋರುವ ಜೀವಾತ್ಮರುಗಳಿಗೂ ಈಶ್ವರನಿಗೂ ಇರುವ ಭೇದವೂ, **ಅಪ್ಪಡಿಯೇ**-ಅದೇ ಪ್ರಕಾರವೇ, **ದೇವಾದಿರೂಪರಾನ**-ದೇವಮನುಷ್ಯಾದಿಗಳಾದ ಜೀವಾತ್ಮರುಗಳ, **ಅನ್ಯೋನ್ಯಭೇದಮುಂ** – ಪರಸ್ಪರಭೇದವು, ಅಂದರೆ ಒಬ್ಬ ಜೀವಾತ್ಮನಿಗೂ ಇನ್ನೊಬ್ಬ ಜೀವಾತ್ಮನಿಗೂ ಇರುವ ಭೇದವೂ, **ಸುಖದುಃಖ** – ಆದಿಪದದಿಂದ ಜ್ಞಾನತಾರತಮ್ಯ ಇವುಗಳ, **ವ್ಯವಸ್ಥೈಯಾಲೆ**-ಪರಸ್ಪರ ವ್ಯತ್ಯಾಸದಿಂದ ಪ್ರಮಾಣಸಿದ್ಧವಾಗಿ ಸತ್ಯವಾಗಿರುವದರಿಂದ, **ಸರ್ವಾನ್ತರ್ಯಾಮಿ ಒರುವನೇಯಾಗಿಲುಂ** – ಸಮಸ್ತಕ್ಕೂ ಅಂತರ್ಯಾಮಿಯಾಗಿ ಸರ್ವೇಶ್ವರನು ಒಬ್ಬನೆಯಾಗಿದ್ದರೂ **ಬ್ರಹ್ಮರುದ್ರರೇ** ಮೊದಲಾದ ಸಮಸ್ತ ದೇವತೆಗಳೂ ಈಶ್ವರನೊಂದಿಗೂ ಅಭಿನ್ನರಲ್ಲವು ಮತ್ತು, **ತನ್ನಿಲ್ ತಾನುಂ** – ಪರಸ್ಪರ ಒಬ್ಬರಿಗೊಬ್ಬರು, **ಅಭಿನ್ನರೆಜ್'ಗಿರಪಕ್ಷಂ** – ಅಭಿನ್ನರೆಂಬ ಸಿದ್ಧಾನ್ತವೂ, **ಕೂಡಾದು**-ಸರಿಹೋಗುವದಿಲ್ಲವು ಎಂದರೆ ಶಾಸ್ತ್ರಸಮ್ಮತವಲ್ಲವು. ಜೀವಾತ್ಮರುಗಳಿಗೂ ಈಶ್ವರನಿಗೂ ಭೇದವು ಸ್ವಭಾವತಃ ಉಂಟಾದುದು. ಭಾಸ್ಕರ ಮತದವರು ಹೇಳುವ ಉಪಾಧಿಮೂಲಕ ಉಂಟಾದುದಲ್ಲವೆಂಬ ಭಾವವು. ಆದರೆ ಜೀವ ಪರಮಾತ್ಮರಿಗೆ

ಭೇದವು ಜೀವನು ಬದ್ಧನಾಗಿರುವಾಗ ಉಂಟು. ಮುಕ್ತದೆಶೆಯಲ್ಲಿ "**ನಿರಂಜನಃಪರಮಂ ಸಾಮ್ಯಮುಪೈತಿ**" "**ಮಮಸಾಧರ್ಮ್ಯಮಾಗತಾಃ**" ಎಂದು ಹೇಳಿರುವದರಿಂದ ಆವಾಗ ಭೇದವಿಲ್ಲವು, ಸಾಮ್ಯ ಉಂಟೆಂದು ಹೇಳುವದರಿಂದ ಅಭೇದವು ತೋರುತ್ತದಲ್ಲಾ, ಆಗ ಭೇದವು ಸ್ವಭಾವಸಿದ್ಧವಾದುದು ಹೇಗೆ, ಉಪಾಧಿಯಿಂದ ತಾನೇ ಉಂಟಾದುದು ಎಂದು ಹೇಳತಕ್ಕದ್ದು, ಎಂಬೀ ಆಕ್ಷೇಪಕ್ಕೆ ಆ ಮುಕ್ತದೆಸೆಯಲ್ಲೂ ಜೀವ ಪರಮಾತ್ಮರಿಗೆ ಭೇದವು ತಪ್ಪಿದ್ದಲ್ಲವು. ಆ ವಿಷಯವು ಪರಿಪೂರ್ಣ ಬ್ರಹ್ಮಾನುಭವಾಧಿಕಾರದಲ್ಲಿ ಚನ್ನಾಗಿ ಉಪಪಾದನೆ ಮಾಡಲ್ಪಟ್ಟಿರುತ್ತದೆ, ಈಗ ಸದ್ಯದಲ್ಲಿ ಒಂದು ವ್ಯತ್ಯಾಸವನ್ನು ಚನ್ನಾಗಿ ಗ್ರಹಿಸಿದರೆ ಸಾಕಾಗಿರುತ್ತದೆ. ಜೀವಾತ್ಮನು ಆಗಲೂ ಎಂದರೆ ಮುಕ್ತದೆಶೆಯಲ್ಲೂ ಅಣುವು. ಸರ್ವೇಶ್ವರನು ವಿಭುವು. ಅಭೇದವು ಹೇಗೆ ಉಂಟಾದೀತು ? ಆದರೆ **ಪರಮುಂಸಾಮ್ಯಮುಪೈತಿ** ಎಂದು ಹೇಳಿದೆಯಲ್ಲಾ ಎಂದರೆ, ಆನಂದಾನುಭವದಲ್ಲಿ ಮಾತ್ರ ಸಾಮ್ಯವೆಂಬ ಭಾವವು. ಹಾಗೆಯೇ ದೇವ ಮನುಷ್ಯಾದಿ ಜೀವರುಗಳಿಗೆ ಪರಸ್ಪರ ಭೇದವೂ ಪ್ರಮಾಣಸಿದ್ಧವಾದವು ಹೇಗೆಂದರೆ, "**ಪೃಥಗಾತ್ಮಾನಂ ಪ್ರೇರಿತಾರಂಚ ಮತ್ವಾ** – ಜೀವಾತ್ಮನೂ, ಪ್ರೇರಿತಾವಾದ ಸರ್ವೇಶ್ವರನೂ ಬೇರೆಬೇರೆ ಎಂದು ತಿಳಿದು" ಎಂದೂ, "**ದ್ವಾಸುಪರ್ಣಾ** – ಎರಡು ಪಕ್ಷಿಗಳಾದ ಜೀವಾತ್ಮ ಪರಮಾತ್ಮರು," "**ಏಕೋ ಬಹೂನಾಂ** ಎಂಬಿವೇ ಮೊದಲಾದ ಪ್ರಮಾಣಗಳಿಂದ ಇವರುಗಳು ಭಿನ್ನರು. ದೇವತೆಗಳಿಗೆ ಪರಸ್ಪರಭೇದವು "**ಅಷ್ಟಾವಸವಃ ಏಕಾದಶರುದ್ರಾ ದ್ವಾದಶಾದಿತ್ಯಾಃ**" ಎಂಬ "**ಯಸ್ಯಾದಿತ್ಯಶ್ಶರೀರಂ, ಯಸ್ಯಾಗ್ನಿಶ್ಶರೀರಂ,**" "**ಭೀಷಾಸ್ಮಾದ್ವಾತಃಪವತೇ ಭೀಷೋದೇತಿ ಸೂರ್ಯಃ**" ಎಂಬಿವೇ ಮೊದಲಾದ ಪ್ರಮಾಣಗಳಿಂದವ್ಯಕ್ತವು. ಹೀಗೆ ಜೀವಾತ್ಮರಾದ ದೇವತೆಗಳಿಗೆ ಪರಸ್ಪರವಾಗಿಯೂ ಹಾಗೆಯೇ ಮನುಷ್ಯ, ತಿರ್ಯಙ್, ಸ್ಥಾವರಗಳಲ್ಲೂ ಪರಸ್ಪರ ಭೇದವನ್ನು ಹೇಗೆ ಗೊತ್ತುಮಾಡಬಹುದೆಂದರೆ, ಒಬ್ಬ ಚೇತನನ ಸುಖದುಃಖಾದಿಗಳು ಇತರ ಚೇತನರಿಗೆ ವೇದ್ಯವಾಗದಿರುವದರಿಂದ, ಬೇರೆ ಬೇರೆ ಎಂಬುವದು ಸತ್ಯವೆಂಬಭಿಪ್ರಾಯವು. ಎಲ್ಲಾ ಜೀವಾತ್ಮರುಗಳಿಗೂ ಅನ್ತರ್ಯಾಮಿಯಾಗಿ ಆತ್ಮಾವಾಗಿರುವವನು ಸರ್ವೇಶ್ವರನೇ. ಬ್ರಹ್ಮರುದ್ರೇಂದ್ರಾದಿ ಸರ್ವ ದೇವತೆಗಳೂ ಆತನಿಗೆ ಶರೀರವು. ಶರೀರವೆಲ್ಲಾ ಒಂದೇಯಾಗಿರಬೇಕೆಂಬ ನಿಯಮವಿಲ್ಲವು, ಒಬ್ಬನೇ ಆತ್ಮಾವಾಗಿ, ಭಿನ್ನಭಿನ್ನರಾದ ದೇವತೆಗಳೆಲ್ಲಾ ಶರೀರವಾಗಿರುವದರಿಂದಲೇ, ತತ್ತಚ್ಛರೀರಕ ಪರಮಾತ್ಮನೆಂದು ಸಾಮಾನಾಧಿಕರಣ್ಯಾದಿಂದ "**ತದೇವಾಗ್ನಿ ಸ್ತದ್ವಾಯುಸ್ತತ್ಸೂರ್ಯಸ್ತದು ಚಂದ್ರಮಾಃ**" ಎಂದು ಹೇಳಿರುತ್ತದೆ. ಇದರಿಂದ ದೇವತೆಗಳಿಗೆ ಈಶ್ವರನೊಂದಿಗೆ ಸ್ವರೂಪೈಕ್ಯವಾಗಲಿ, ಪರಸ್ಪರ ಸ್ವರೂಪೈಕ್ಯವಾಗಲಿ ಹೇಳಲ್ಪಡಲಿಲ್ಲವು.

ತ್ರಿಮೂರ್ತಿ ಸಮತಾದಿ ಪಕ್ಷ ನಿರಾಕರಣಂ

ಇದ್ದೇವತೈಗಳಿಲ್ ಪ್ರಧಾನರಾಗ ಚೊಲ್ಲುಗಿರಬ್ರಹ್ಮರುದ್ರೇಂದ್ರಾದಿಗಳುಕ್ಕು ಕಾರ್ಯತ್ವ ಕರ್ಮವಶ್ಯತ್ವಙ್ಗಳ್ ಪ್ರಾಮಾಣಿಕಙ್ಗಳಾಕೈಯಾಲುಮ್

ತ್ರಿಮೂರ್ತಿ ಸಮತಾದಿ ಪಕ್ಷ ನಿರಾಕರಣವು

ಮುಂದಿನ ಒಂದೇ ವಾಕ್ಯದಿಂದಲೇ, ತ್ರಿಮೂರ್ತಿಗಳೂ ಸಮವು, **ತ್ರಿಮೂರ್ತ್ಯೈಕ್ಯ**, ತ್ರಿಮೂರ್ತಿಗಳಿಗಿಂತಲೂ ಬೇರೇ ಒಬ್ಬನು ಪರವಸ್ತು, ಅವರಲ್ಲಿ ಒಬ್ಬನಾದ ಬ್ರಹ್ಮನಾಗಲಿ, **ರುದ್ರ**ನಾಗಲಿ **ಈಶ್ವರ**ನು **ಎಂಬ** ಪಕ್ಷಗಳನ್ನು ನಿರಾಕರಿಸುತ್ತಾರೆ. ಮುಂದಿನ ವಾಕ್ಯದಿಂದ ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣುವೇ ಸರ್ವೇಶ್ವರನ ಸ್ವೇಚ್ಛಾವತಾರವಾಗಿ, ಜಗತ್ಕಾರಣನಾದುದರಿಂದ, ಆತನ **ಸರ್ವೋತ್ಕೃಷ್ಟತೆ**ಯಿಂದಲೂ, ಕರ್ಮವಶ್ಯನಲ್ಲದುದರಿಂದಲೂ, **ಅವನಿ**ಗಿಂತ ನಿಕೃಷ್ಟರಾಗಿ, ಕರ್ಮವಶ್ಯರಾಗಿ ಆತನಿಂದ ಶರೀರವನ್ನು ಹೊಂದಿದವರಾದುದರಿಂದ ಬ್ರಹ್ಮರುದ್ರರು ಪರತತ್ವವಲ್ಲವೆಂದೂ, ಅವರು ಜೀವಕೋಟಿಗೆ ಸೇರಿದವರೆಂದೂ, ವಿಷ್ಣುವೇ ಪರತತ್ವವೆಂದೂ ಸಪ್ರಮಾಣವಾಗಿ ಸ್ಥಾಪಿಸುತ್ತಾರೆ. ಇದು ಸ್ತ್ರೀ ಮೊದಲಾದವರುಗಳಿಗಾಗಿ ಅನುಗ್ರಹಿಸಿದ ಗ್ರಂಥವಾದುದರಿಂದ ಶ್ರುತಿಪ್ರಮಾಣಬಿಟ್ಟು, ಸ್ಮೃತಿ, ಇತಿಹಾಸ, ಪುರಾಣ, ದಿವ್ಯಪ್ರಬಂಧ ಪ್ರಮಾಣಗಳೇ ಈ ಗ್ರಂಥದಲ್ಲಿ ಮುಖ್ಯವಾಗಿ ಉದಾಹರಿಸಲ್ಪಟ್ಟವೆ ಎಂದು ಗ್ರಹಿಸತಕ್ಕದ್ದು.

ಇದ್ದೇವತೈಗಳಿಲ್ – ಈ ದೇವತೆಗಳಲ್ಲಿ, **ಪ್ರಧಾನರಾಕ ಚೊಲ್ಲುಗಿರ** ಮುಖ್ಯರಾಗಿ ಹೇಳಿರುವ, **ಬ್ರಹ್ಮ ರುದ್ರ** ಇಂದ್ರ ಮೊದಲಾದವರುಗಳಿಗೆ, **ಕಾರ್ಯತ್ವ ಕರ್ಮವಶ್ಯತ್ವಙ್ಗಳ್** – ಬೇರೇ ಕಾರಣ ಮೂಲಕ ಉಂಟಾಗಿರುವದೂ. ಕರ್ಮಕ್ಕೆ ವಶವಾಗಿರುವದೂ, **ಪ್ರಾಮಾಣಿಕಙ್ಗಳಾಕೈಯಾಲುಂ** – ಶಾಸ್ತ್ರಮೂಲಕವಾಗಿ ಸತ್ಯವಾಗಿ ತೋರಿಬರುವದರಿಂದಲೂ, ಮೇಲಿನ ನಾಲ್ಕು ವಿಧ ಅಭಿಪ್ರಾಯಗಳೂ ಅಸಂಗತವಾದುವೆಂದು ಹೇಳುತ್ತಾರೆ. [ಇವರುಗಳು ಬೇರೇ ಕಾರಣಮೂಲಕ ಉಂಟಾದವರೆಂಬುವದಕ್ಕೆ ಮೂರು ಪ್ರಮಾಣಗಳನ್ನು ದಾಹರಿಸುತ್ತಾರೆ.]

1. **ಆಭೂತಸಂಪ್ಲವೇ** – ಪಂಚಭೂತಗಳ ಮೊದಲುಗೊಂಡು ಎಲ್ಲಕ್ಕೂ ಪ್ರಳಯವು, **ಪ್ರಾಪ್ತೇಸತಿ** – ಉಂಟಾಗಲಿಕ್ಕಾಗಿ, **ಮಹಾ** – ಮಹತ್ತತ್ವವು, **ಪ್ರಕೃತೌ** – ಮೂಲಪ್ರಕೃತಿಯಲ್ಲಿ, **ಪ್ರಲೀನೇ** – ಲೀನವಾಗಲಾಗಿ,ಆಗ, **ವಿಶ್ವಾ**

೧ "ಆಭೂತ ಸಂಪ್ಲವೇ ಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹಾ।
ಏಕಸ್ತಿಷ್ಠತಿ ವಿಶ್ವಾತ್ಮಾ ಸತು ನಾರಾಯಣ ಪ್ರಭುಃ॥

೨ "ಆದ್ಯೋ ನಾರಾಯಣೋದೇವಸ್ತಸ್ಮಾದ್ಬ್ರಹ್ಮಾ ತತೋಭವಃ।"

೩ "ಪರೋ ನಾರಾಯಣೋ ದೇವಸ್ತಸ್ಮಾಜ್ಜಾತಶ್ಚತುರ್ಮುಖಃ।
ತಸ್ಮಾದ್ರುದ್ರೋ ಭವೇದ್ದೇವಿ"

ಇತ್ಯಾದಿಗಳಿಲೇ,

೪ "ತತಸ್ತ್ವಮಪಿದುರ್ಧರ್ಷಸ್ತಸ್ಮಾದ್ಭಾವಾತ್ಸನಾತನಾತ್।

ತ್ಮಾ – ವಿಶ್ವಕ್ಕೂ ಆತ್ಮಾವಾಗಿದ್ದ, **ಏಕಃ** - ಆ ಒಬ್ಬನೇ ಎಂದರೆ ನಿಮಿತ್ತ, ಕಾರಣ, ಸಹಕಾರಿ, ಸಹಾಯಗಳೊಂದೂ ಬೇಕಿಲ್ಲದ ಪರಮಾತ್ಮನೊಬ್ಬನೇ, **ತಿಷ್ಠತಿ** – ಇರುತ್ತಾನೆ, **ಸತು** - ಹಾಗೆ ನಿಂತವನಾದರೋ ಯಾರೆಂದರೆ:– **ನಾರಾಯಣ ಪ್ರಭುಃ** – ಸರ್ವಶಕ್ತನಾದ ನಾರಾಯಣನು" ಎಂದೂ,

೨. "**ಆದ್ಯೋ ನಾರಾಯಣೋದೇವಃ**– ಎಲ್ಲರಿಗಿಂತಲೂ ಮೊದಲು ನಾರಾಯಣನೇವನು, ದೇವಶಬ್ದದಿಂದ ಕ್ರೀಡಾಪರನೆಂದೂ ಸೃಷ್ಟ್ಯನ್ಮುಖನೆಂದೂ ತೋರುತ್ತದೆ. **ತಸ್ಮಾತ್**–ಆನಾರಾಯಣನಿಂದ, **ಬ್ರಹ್ಮಾ**–ಚತುರ್ಮುಖ ಬ್ರಹ್ಮನೂ, ಬ್ರಹ್ಮ ಶಬ್ದವು ಹ್ರಸ್ವವಾಗಿದ್ದರೆ ಪರಬ್ರಹ್ಮನನ್ನು ಬೋಧಿಸುತ್ತದೆ, ಬ್ರಹ್ಮಾ ಎಂದು ದೀರ್ಘವಿದ್ದರೆ ಚತುರ್ಮುಖಬ್ರಹ್ಮನನ್ನು ಬೋಧಿಸುತ್ತದೆ; **ತತಃ** – ಆ ಚತುರ್ಮುಖನಿಂದ,**ಭವಃ**–ರುದ್ರನೂ, **ಅಭವತ್** – ಉಂಟಾದರು" ಎಂದೂ,

೩. "**ನಾರಾಯಣಃ**–ಶ್ರೀಮನ್ನಾರಾಯಣನು, **ಪರೋದೇವಃ** – ಜಗತ್ಸೃಷ್ಟಿ ಪಾಲನ ಲಯಾದಿ ಕ್ರೀಡಾರತನಾದ ಪರಮಾತ್ಮನು, **ತಸ್ಮಾಜ್ಜಾತಶ್ಚತುರ್ಮುಖಃ**"–ಆತನಿಂದ ಹುಟ್ಟಿದವನು ಚತುರ್ಮುಖನು,**ತಸ್ಮಾದ್ರುದ್ರೋಭವೇತ್**– ಆ ಚತುರ್ಮುಖನಿಂದ ರುದ್ರನುಂಟಾದನು." **ಇತ್ಯಾದಿಗಳಿಲೇ**–ಎಂಬಿವೇ ಮೊದಲಾದವುಗಳಲ್ಲಿ,

೪. **ದುರ್ಧರ್ಷಃ** – ಯಾರಿಂದಲೂ ಜಯಿಸಲಸಾಧ್ಯರಾದ, **ತ್ವಮಪಿ** – ನೀವೂ ಕೂಡ [ಚತುರ್ಮುಖನು ಸರ್ವೇಶ್ವರನಾದ ಶ್ರೀರಾಮನನ್ನು ಕುರಿತು ಹೇಳುವ ಪ್ರಕರಣವು] **ಸನಾತನಾತ್**– ಅನಾದಿಯಾದ, **ತಸ್ಮಾದ್ಭಾವಾತ್** – ಆ ಕ್ಷೀರ

---

೧ ಭಾರತ, ಶಾಂತಿಪರ್ವ, ೨೧೦–೨೪. ೨ ವರಾಹ ಪುರಾಣ, ೨೫–೬.
೩ ವರಾಹ ಪುರಾಣ, ೯೦–೩. ೪ ರಾಮಾ. ಉತ್ತರ. ೧೦೩–೯,

ರಕ್ಷಾರ್ಥಂ ಸರ್ವಭೂತಾನಾಂ ವಿಷ್ಣುತ್ವಮುಪಜಗ್ಮಿವಾ॥"
ಎನ್ನಿರಪಡಿಯೇ ಸ್ವೇಚ್ಛಾವತೀರ್ಣನಾಯ್ ತ್ರಿಮೂರ್ತಿ ಮಧ್ಯಸ್ಥನಾನ
ವಿಷ್ಣು ನಾರಾಯಣಶಬ್ದವಾಚ್ಯ್ಯ ತಾನೇ ತನ್ನುಡೈಯ ಪೂರ್ವಾವಸ್ಥೈ
ಯಾಲೇ ಸರ್ವ ಜಗತ್ತುಕ್ಕುಮ್ ಕಾರಣಮೆನ್ಸ್ಸೈಯಾಲುಮ್,

"ನಿತ್ಯಂ ಹಿ ನಾಸ್ತಿ ಜಗತಿ ಭೂತಂ ಸ್ಥಾವರ ಜಙ್ಗಮಮ್ ।
ಋತೇ ತನುೇಕಂ ಪುರುಷಂ ವಾಸುದೇವಂ ಸನಾತನಂ ।

ಎನ್ನಿರಪಡಿಯೇ, ಅವನೇ ನಿತ್ಯನೆನ್ಸ್ಸೈಯಾಲುಮ್, ತ್ರಿಮೂರ್ತಿಗಳುಮ್
ಸಮರೆನ್ರುಮ್, ತ್ರಿಮೂರ್ತಿಗಳ್ ಏಕತತ್ವಮೆನ್ರುಮ್, ತ್ರಿಮೂರ್ತ್ಯುತ್ತೀ
ರ್ಣ ಈಶ್ವರನೆನ್ರುಮ್, ತ್ರಿಮೂರ್ತಿಗಳುಕ್ಕುಳ್ಳೇ ಬ್ರಹ್ಮಾವಾದಲ್ ರುದ್ರ

ಸಮುದ್ರದಲ್ಲಿ ಮಲಗಿರುವ ಪದ್ಮನಾಭ ರೂಪದಿಂದ ಹಿಂದಿನ ಶ್ಲೋಕದಲ್ಲಿ"**ಪದ್ಮೇ ದಿವ್ಯೇರ್ಕಸಙ್ಕಾಶೇ ನಾಭ್ಯಾಮುತ್ಪದ್ಯ ಮಾಮಪಿ**" ಎಂದು ಇರುವದರಿಂದ **ತಸ್ಮಾದ್ಭವಾತ್** – ಎಂದರೆ ಆ ಪದ್ಮನಾಭರೂಪದಿಂದ, **ಸರ್ವಭೂತಾನಾಂ ರಕ್ಷಾರ್ಥಂ**–ಸಮಸ್ತ ಪ್ರಾಣಿಗಳ ಸಂರಕ್ಷಣಾರ್ಥವಾಗಿ, **ವಿಷ್ಣುತ್ವಂ** – ವಿಷ್ಣುರೂಪವನ್ನು **ಉಪಜಗ್ಮಿವಾ** – ಸ್ವಸಙ್ಕಲ್ಪ ಮೂಲಕವಾಗಿಯೇ ತಾಳಿದವನಾಗಿ " ಎಂದೂ **ಎನ್ನಿರಪಡಿಯೇ**–ಹೇಳಿರುವ ಹಾಗೆ **ಸ್ವೇಚ್ಛಾವತೀರ್ಣನಾಯ್** – ಬ್ರಹ್ಮ ರುದ್ರರುಗಳ ಹಾಗೆ ಇನ್ನೊಬ್ಬರಿಂದ ಉಂಟಾಗದೆ ತನ್ನ ಸಂಕಲ್ಪಾನುಸಾರ ಅವತರಿಸಿದವನಾಗಿ,**ತ್ರಿಮೂರ್ತಿಮಧ್ಯಸ್ಥನಾನ**–ತ್ರಿಮೂರ್ತಿಗಳ ಮಧ್ಯದಲ್ಲಿರುವ ವಿಷ್ಣು ನಾರಾಯಣ ಮೊದಲಾದ ಶಬ್ದಗಳಿಂದ ಹೇಳಿಸಿಕೊಳ್ಳುವವನಾದ **ತಾನೇತನ್ನುಡೈಯ ಪೂರ್ವಾವಸ್ಥೈಯಾಲೆ** – ತಾನೇ ತನ್ನ ಪೂರ್ವಾವಸ್ಥೆಯಿಂದ, ಸರ್ವಜಗತ್ತುಗಳಿಗೂ ಕಾರಣನು ಎಂದು ಹೇಳಿರುವದರಿಂದಲೂ, ಮತ್ತೂ, "**ತಂ** – ಅಂತಹ **ವಾಸುದೇವಂ ಸನಾತನಂ** – ಅನಾದಿಯಾದ ವಾಸುದೇವನಾದ, **ಏಕಂ ಪುರುಷಂ ಋತೇ,** ಒಬ್ಬ ಪುರುಷನ ವಿನಾ, **ಜಗತಿ**– ಜಗತ್ತಿನಲ್ಲಿ, **ಸ್ಥಾವರಜಙ್ಗಮಂ** – ಸ್ಥಾವರ ಜಙ್ಗಮಾತ್ಮಕವಾದ, **ಭೂತಂ** – ಪ್ರಾಣಿಯು, **ನಿತ್ಯಂ ಹಿ ನಾಸ್ತಿ**– ನಿತ್ಯವಾದುದು ಎಂದರೆ ನಿತ್ಯವಾದ ಅವಸ್ಥೆಯುಳ್ಳದ್ದಾಗಿ ಯಾವುದೂ ಇಲ್ಲವಷ್ಟೇ" ಎಂದು ಹೇಳಿರುವ ಹಾಗೆ, **ಅವನೇ ನಿತ್ಯನೆನ್ಸ್ಸೈಯಾಲುಮ್** – ಆ ವಿಷ್ಣುವೇ ನಿತ್ಯನು ಎಂದು ಹೇಳಿರುವದರಿಂದಲೂ, ಹೀಗೆ ಈ ಮೂರು ಕಾರಣಗಳಿಂದಲೂ, ೧. ತ್ರಿಮೂರ್ತಿಗಳೂ ಎಲ್ಲರೂ ಸಮವೆಂದೂ, ೨. ತ್ರಿಮೂರ್ತಿಗಳು ಮೂವರೂ ಒಂದೇ ತತ್ವವಾದ ಪರಬ್ರಹ್ಮವೆಂದೂ, ೩. **ಈ ತ್ರಿಮೂರ್ತ್ಯುತ್ತೀರ್ಣ ಈಶ್ವರನೆನ್ರುಮ್** – ಈ ತ್ರಿಮೂರ್ತಿಗಳಿಗೂ ಮೇಲುಪಟ್ಟವನಾದವನೇ

ನಾದಲ್ ಈಶ್ವರನೆನ್ರುಮ್ ಶೊಲ್ಲುಗಿರ ಸಾಮ್ಯೈಕ್ಯೋತ್ತೀರ್ಣವ್ಯಕ್ತನ್ರ ಪಕ್ಷಜ್ಞಳ್ ಘಟಿಯಾದು

ಈಶ್ವರನೆಂದೂ, ಳ. **ತ್ರಿಮೂರ್ತಿಗಳಕ್ಕುಳ್ಳೇ** – ಆ ತ್ರಿಮೂರ್ತಿಗಳಲ್ಲೇ, **ಬ್ರಹ್ಮಾವಾದಲ್ ರುದ್ರನಾದಲ್** – ಚತುರ್ಮುಖ ಬ್ರಹ್ಮಾವಾಗಲಿ, ರುದ್ರನಾಗಲಿ, **ಈಶ್ವರನೆನ್ರು ಶೊಲ್ಲುಗಿರ** -- ಈಶ್ವರನೆಂದೂ ಹೇಳುವಂತಹ, **ಸಾಮ್ಯೈಕ್ಯೋತ್ತೀರ್ಣವ್ಯಕ್ತನ್ರ** – ಸಮಭಾವವೇನು, ಐಕ್ಯಭಾವವೇನು, ಅಧಿಕಭಾವವೇನು, ಅವರಲ್ಲದೆ ಒಂದು ಬೇರೆ ವ್ಯಕ್ತಿಯು ಈಶ್ವರನೆಂಬ ಭಾವವೇನು, ಇವು ಯಾವುವೂ ಸರಿಹೋಗುವದಿಲ್ಲವು.

ಈ ವಾಕ್ಯವು ಪ್ರಮಾಣಗಳೊಂದಿಗೆ ಸೇರಿರುವದರಿಂದ ಬಹು ದೊಡ್ಡ ವಾಕ್ಯವು. ಈ ವಾಕ್ಯದಿಂದ ಮೇಲೆ ಕಾಣಿಸಿರುವ ತ್ರಿಮೂರ್ತಿಗಳೂ ಸಮ, ಐಕ್ಯ, ಇವರುಗಳಿಗಿಂತ ಬೇರೊಬ್ಬನು ಈಶ್ವರನು, ಇವರುಗಳಲ್ಲೇ ಬ್ರಹ್ಮನಾಗಲಿ ರುದ್ರನಾಗಲಿ ಸರ್ವೇಶ್ವರನು ಎಂಬೀ ನಾಲ್ಕು ಪಕ್ಷಗಳನ್ನೂ ಸಪ್ರಮಾಣವಾಗಿ ನಿರಾಕರಿಸುತ್ತಾರೆ. ಅದಕ್ಕಾಗಿ ಮೂರು ಕಾರಣಗಳನ್ನು ತೋರಿಸಿರುತ್ತಾರೆ:—

೧. ಬ್ರಹ್ಮರುದ್ರರುಗಳಿಗೆ ಕಾರ್ಯತ್ವ ಉಂಟು, ಕರ್ಮವಶ್ಯತ್ವ ಉಂಟು, ಇವರುಗಳಿಗೆ ಕಾರ್ಯತ್ವ ಯಾವಾಗ ಉಂಟಾಯಿತೋ, ಬೇರೆ ಕಾರಣವಿರಬೇಕು. ಆ ಕಾರಣವೇ ಶ್ರೀಮನ್ನಾರಾಯಣನು. ಇವರುಗಳಿಗೆ ಕರ್ಮವಶ್ಯತ್ವ ಉಂಟು. ಆದ, ದರಿಂದ ಜೀವಕೋಟಿಗೆ ಸೇರಿದವರು. ಇವರುಗಳು ಸುಕೃತಶಾಲಿಗಳಾದುದರಿಂದು ಅವರುಗಳ ಪುಣ್ಯ ಕರ್ಮಾನುಸಾರವಾಗಿ ಬ್ರಹ್ಮಲೋಕ ರುದ್ರಲೋಕ ಪದವಿಯನ್ನನುಭವಿಸುತ್ತಿರುತ್ತಾರೆ. ಇವರುಗಳು ಇನ್ನೂ ಕರ್ಮವಶ್ಯರಾಗಿಯೇ ಇರುವದರಿಂದ ಇವರಿಗೆ ಇನ್ನೂ ಮೋಕ್ಷವಿಲ್ಲವು. ಇವರುಗಳು ಕಾರ್ಯರೂಪದಲ್ಲಿ ಶ್ರೀಮನ್ನಾರಾಯಣನಿಂದ ಉಂಟಾದರೆಂದು ತೋರಿಸಲು ಮೂರು ಪ್ರಮಾಣಗಳನ್ನು ತೋರಿಸುತ್ತಾರೆ. ಆದರೆ ಈ ಬ್ರಹ್ಮರುದ್ರರಿಗೆ ನಾರಾಯಣನು ಕಾರಣನೆಂದು ಭಾರತ, ವರಾಹಪುರಾಣ ವಾಕ್ಯಗಳಲ್ಲೇನೋ ತೋರಿಬರುತ್ತದೆ. ಆದರೆ ನಾರಾಯಣನೇ ತ್ರಿಮೂರ್ತಿಗಳ ಮಧ್ಯೆ ಇರುವ ವಿಷ್ಣುವು ಎನ್ನುವದಕ್ಕೆ ಪ್ರಮಾಣವೇನಿದೆ ಎಂಬ ಆಕ್ಷೇಪ ಬಂದೀತೆಂದು ಭಾವಿಸಿ, **"ತತಸ್ತ್ವಮಪಿ"** ಎಂಬ ವಾಲ್ಮೀಕಿ ಮಹರ್ಷಿಯ ವಾಕ್ಯಿನಿಂದ್ಲ ವಿಷ್ಣುತ್ವವು ಶ್ರೀಮನ್ನಾರಾಯಣನ ಪ್ರಥಮಾವತಾರವೆಂದು ತೋರಿಸಿರುತ್ತಾರೆ. ಆದುದರಿಂದ ಬ್ರಹ್ಮರುದ್ರಾದಿಗಳಿಗೆ ಕಾರ್ಯತ್ವವೂ, ಕರ್ಮವಶ್ಯತ್ವವೂ ಉಂಟು. ಆ ಕರ್ಮವಶ್ಯತ್ವವೂ ಉಂಟು ಎಂದು ಹೇಳುವದಕ್ಕಾಗಿ,**"ಇದ್ದೇವತೈಗಳಿಲ್ ಪ್ರಧಾನರಾಕಚ್ಚೊಲ್ಲುಗಿರ** ಎಂದು ಪ್ರಯೋಗಿಸಲ್ಪಟ್ಟಿರುತ್ತದೆ. ದೇವತೆಗಳೆಲ್ಲಾ

ಜೀವಕೋಟಿಗೆ ಸೇರಿದವರಾಗಿ ಕರ್ಮವಶ್ಯರು. ಅವರಲ್ಲಿ ಬ್ರಹ್ಮಾ ರುದ್ರರೂ ಸಹ ಪ್ರಧಾನರೆಂದು ಹೇಳಲ್ಪಟ್ಟಿರುತ್ತದೆ. ಶ್ರೀ ವಾಲ್ಮೀಕಿ ಭಗವಾನರವರೂ,

[1] "**ಏವಮುಕ್ತೇಷು ದೇವೇಷು ದೇವದೇವೇಶ್ವರಃ ಪ್ರಭುಃ।**
ಪ್ರಾದುರಾಸೀತ್ತತೋ ತ್ರೈವ ಶಂಖಚಕ್ರಧರೋ ಹರಿಃ॥
ಉವಾಚೈನಂ ಸ್ಮಿತಂ ಕೃತ್ವಾ ರುದ್ರಂ ಶೂಲಧರಂ ಹರಂ।
ತ್ವದೀಯಂ ಹಿ ಸುರಶ್ರೇಷ್ಠ ಸುರಾಣಾಮಗ್ರಜೋಸಿಯತ್॥
ಅಗ್ರಪೂಜಾಮಿಮಾಂ ಮತ್ತಾ ಗೃಹಾಣೇದಂ ವಿಷಂ ಪ್ರಭೋ ॥

ಸಮುದ್ರ ಮಥನ ಕಾಲದಲ್ಲಿ ವಿಷ್ಣುವು, ರುದ್ರನನ್ನು ಸುರಶ್ರೇಷ್ಠನೆಂದೂ, ಸುರರಲ್ಲಿ ಅಗ್ರಜನೆಂದೂ ಸಂಬೋಧಿಸುವ ಹಾಗೆ ಮಾಡಿ, **ವಿಷ್ಣುವನ್ನು ದೇವದೇವೇಶ್ವರಃ ಪ್ರಭುಃ** ಎಂದು ಹೇಳಿರುವದರಿಂದಲೂ, ಬ್ರಹ್ಮರುದ್ರರು ದೇವತೆಗಳು, ವಿಷ್ಣುವು ಅವರಿಗೆ ಕಾರಣವು. ಆದುದರಿಂದ ತ್ರಿಮೂರ್ತಿಗಳೆಲ್ಲಾ ಸಮ, ಐಕ್ಯವು, ಇವರುಗಳಿಗಿಂತ ಬೇರೆಯೊಬ್ಬನು ಈಶ್ವರನು, ಬ್ರಹ್ಮರುದ್ರರಲ್ಲೇ ಒಬ್ಬನು ಈಶ್ವರನು ಎಂಬುವ ಸಿದ್ಧಾನ್ತಗಳು ಅಪಸಿದ್ಧಾನ್ತಗಳೆಂಬ ಭಾವವು. ಆದರೆ,

"**ಬ್ರಹ್ಮಾವಿಷ್ಣು ರುದ್ರೇಂದ್ರಾಸ್ತೇ ಸರ್ವೇ ಸಂಪ್ರಸೂಯನ್ತೇ**"

ಎಂದು ಹೇಳಿರುವ ಹಾಗೆ ಬ್ರಹ್ಮಾ, ವಿಷ್ಣು, ರುದ್ರ, ಇಂದ್ರ ಇವರೇ ಮೊದಲಾದವರುಗಳಿಗೆಲ್ಲಾ ಉತ್ಪತ್ತಿ ಹೇಳಿರುವದರಿಂದ, ಉತ್ಪತ್ತಿಯಿಲ್ಲದವನಲ್ಲವೇ ಜಗತ್ತಿಗೆ ಕಾರಣನಾಗಿ ಸರ್ವೇಶ್ವರನು ಎಂದು ಹೇಳಿಸಿಕೊಳ್ಳುವನು? ಆವಾಗ ವಿಷ್ಣುವು ಹೇಗೆ ಪರತತ್ವವು? ಎಂಬ ಆಕ್ಷೇಪಕ್ಕೆ ಸಮಾಧಾನ ಹೇಳುವದಕ್ಕಾಗಿ ಹೊರಟು, ಎರಡನೇ ಕಾರಣವನ್ನು ತಿಳಿಸುತ್ತಾರೆ.

೨. ವಿಷ್ಣುವಿನ ಉತ್ಪತ್ತಿಯು ಕರ್ಮವಶ್ಯವಾಗಿ ಬಂದುದಲ್ಲವು. ಅದು ಪ್ರಥಮಾವತಾರವು. ಅದು ಅತನ ಸ್ವೇಚ್ಛಾ ಮೂಲಕ ಉಂಟಾದುದು ಎಂದು ತಿಳಿಸುತ್ತಾರೆ. ಆದರೆ ಮೂರು ಜನರೂ ತ್ರಿಮೂರ್ತಿಗಳೆಂದು ಹೇಳಲ್ಪಟ್ಟು ಅದರಲ್ಲಿ ವಿಷ್ಣು ಸರ್ವೋತ್ತಮವೆಂಬುವದು ಹೇಗೆ; ಲೋಕದಲ್ಲಿ ಹಾಗೆ ಉಂಟೋ ಎಂದರೆ:- ತನಗೆ ಪ್ರಿಯವಾದ ಸೃಷ್ಟಿ ಲಯಗಳನ್ನು ಬ್ರಹ್ಮಾ ರುದ್ರರುಗಳಿಗೆ ನೇಮಿಸಿಬಿಟ್ಟು, ಪಾಲನವನ್ನು ಮಾತ್ರ ತಾನೇ ಸ್ವತಃ ಇಟ್ಟುಕೊಳ್ಳುವದುಂಟು. ಹಾಗೆಯೇ ಲೋಕದಲ್ಲಿ ಒಬ್ಬ ರಾಜನು ಇತರ ಆಡಳಿತಗಳನ್ನು ತನ್ನ ಮಂತ್ರಿಗಳಿಗೆ ಒಪ್ಪಿಸಿ, ಪ್ರಜಾ ಪಾಲನವನ್ನು ತಾನೇ ಇಟ್ಟುಕೊಳ್ಳಬಹುದು. ಹಾಗೆಯೇ ಪರಮಾತ್ಮನು ಕೂಡ ಎಂದು ಭಾವಿಸತಕ್ಕದ್ದು. ಅದಕ್ಕಾಗಿಯೇ ಮಹರ್ಷಿಯು "**ರಕ್ಷಾರ್ಥಂ ಸರ್ವಭೂ**

---

1. ರಾಮಾಯಣ, ಬಾಲಕಾಂಡ, ೪೫-೨೧-೨

ತಾನಾಂವಿಷ್ಣುತ್ವ ಮುಪಜಗ್ಮಿರ್ವಾ" ಎಂದು ಪ್ರಯೋಗಿಸಿರುತ್ತಾರೆ. **ಉಪ ಜಗ್ಮಿರ್ವಾ** ಎಂದು ಹೇಳಿರುವದರಿಂದಲೇ ಇನ್ಯಾರಿಂದಲೂ ಇಲ್ಲದೇ ತಾನೇ ಸ್ವೇಚ್ಛೆಯಿಂದ ಅವತರಿಸಿದನೆಂಬುವದು ತೋರಿಬರುತ್ತದೆ. ಇಲ್ಲಿ ಮುಖ್ಯವಾಗಿ ಗ್ರಹಿಸತಕ್ಕದ್ದೇನೆಂದರೆ:—ಮೊದಲು ಸಮಷ್ಟಿಸೃಷ್ಟಿಯಿಂದ ತತ್ವಗಳು ಉತ್ಪತ್ತಿಯಾಗುತ್ತವೆ. ಆಲ್ಲಿಂದ ವ್ಯಷ್ಟಿ ಸೃಷ್ಟಿ ಮೂಲಕ ಅಂಡಗಳು ಉತ್ಪತ್ತಿಯಾಗುತ್ತವೆ. ಪ್ರತಿಯೊಂದು ಅಂಡಕ್ಕೂ ಮುಂದಕ್ಕೆ ಮಾಡಬೇಕಾದ ಸೃಷ್ಟಿ ಲಯಗಳಿಗೆ ಒಬ್ಬೊಬ್ಬ ಬ್ರಹ್ಮನೂ, ಒಬ್ಬೊಬ್ಬ ರುದ್ರರೂ ವಿಷ್ಣುವಿನಿಂದಲೇ ಸತ್ತೆಯನ್ನು ಹೊಂದಿ ನಿಯಮಿಸಲ್ಪಡುತ್ತಾರೆ. ಪಾಲನವನ್ನು ಮಾತ್ರ ತಾನೇ ಇಟ್ಟುಕೊಂಡು ಸ್ವತಃ ಪ್ರತಿಯೊಂದು ಬ್ರಹ್ಮಾಂಡದಲ್ಲಿಯೂ ತಾನೇ ನಡಿಸುತ್ತಾನೆ. ಇದೀಗ ತತ್ವವು. ಆದುದರಿಂದ ವಿಷ್ಣುವಿಗೆ ಹಾಗೆ **ಉತ್ಪತ್ತಿ**ಯೂ, ಕಾರಣವೂ ಇಲ್ಲದೆ, ತಾನೇ ಎಲ್ಲಾ ಜಗತ್ತಿಗೂ ಕಾರಣನಾದುದರಿಂದ ಆ ನಾಲ್ಕು ಪಕ್ಷಗಳೂ ಕೂಡುವದಿಲ್ಲವು. ಆದುದರಿಂದಲೇ ಮಹರ್ಷಿಯು "**ಅಧಿಕಂ ಮೇನಿರೆ ವಿಷ್ಣುಂ**" [ರಾ. ಬಾ. 57-19] ಎಂದು ಪ್ರಯೋಗಿಸಿರುತ್ತಾರೆ.

೩. ಮೂರನೇ ಕಾರಣ ಹೇಳಿರುವದೇನೆಂದರೆ:—"**ನಿತ್ಯಂ ಹಿ ನಾಸ್ತಿ**" ಎಂಬ ಶಾಂತಿಪರ್ವ ಶ್ಲೋಕದಿಂದ ಸಮಸ್ತ ಚಿದಚಿತ್ತುಗಳೂ ಸೃಷ್ಟಿ ಲಯಾದಿಗಳಿಗೆ ಸಿಲುಕಿ ಪರಿಣಾಮ ಹೊಂದುವದರಿಂದಲೂ, ಅಂತಹ ಪರಿಣಾಮಾದಿಗಳು ವಿಷ್ಣುವಿಗೆ ಇಲ್ಲದೆ, ಆತನು ನಿತ್ಯನಾದುದರಿಂದಲೂ, ಮೇಲೆ ಹೇಳಿದ ನಾಲ್ಕು ವಿಧವಾದ ತ್ರಿಮೂರ್ತಿಗಳು ಸಮರು ಎಂಬಿವೇ ಮೊದಲಾದ ಅಪಸಿದ್ಧಾನ್ತಗಳಿಗೆ ಅವಕಾಶವಿಲ್ಲವೆಂದು ಹೇಳಿರುತ್ತಾರೆ. "**ನಿತ್ಯಂ ಹಿ ನಾಸ್ತಿ**" ಎಂಬ ಶ್ಲೋಕದಿಂದ ಚತುರ್ಮುಖ ರುದ್ರರೂ ಕೂಡ **ಆಯಾ ಸ್ಥಾನಗಳಲ್ಲಿ** ನಿತ್ಯರಲ್ಲವೆಂಬುವದು ವ್ಯಕ್ತಪಡುತ್ತದೆ.

ಹಿಂದೆ ಬ್ರಹ್ಮ ರುದ್ರಾದಿಗಳಿಗೆ **ಕಾರ್ಯತ್ವ ಕರ್ಮವಶ್ಯತ್ವ**ಗಳುಂಟೆಂದು ಹೇಳಿ ಅವರು ಬದ್ಧ ಜೀವಕೋಟಿಗೆ ಸೇರಿದವರೆಂದು ತಿಳಿಸಿದ್ದರು. ಈಗ ಅದಕ್ಕೆ ಪ್ರಮಾಣಗಳನ್ನು ತಿಳಿಸುತ್ತಾರೆ. ಮುಂದೆ ವಿಷ್ಣುವು ಕಾರಣವಾಗಿರುವದರಿಂದ, ಚತುರ್ಮುಖ ರುದ್ರಾದಿಗಳು ಆತನ ಕಾರ್ಯಭೂತರಾದುದರಿಂದ ಕಾರ್ಯದಲ್ಲಿ ಅಂತರ್ಗತರೆಂದು ತೋರಿಸುವದಕ್ಕಾಗಿ ಪ್ರಮಾಣಗಳನ್ನು ಪ್ರದರ್ಶಿಸುತ್ತಾರೆ. ಇದು ಏತಕ್ಕೆ ಮುಖ್ಯವಾಗಿ **ಉ**ಪಪಾದನೆಮಾಡಿರುವರೆಂದರೆ:—ಪ್ರಥಮತಃ ಕಾರ್ಯದಲ್ಲಿ ಸೇರಿರುವ ಚೇತನರಿಗೆ ಕಾರಣದಲ್ಲಿ ಅನ್ವಯವಿಲ್ಲವೆಂದು ಹೇಳುವದಕ್ಕೂ, ಎರಡನೇದು ಹೀಗೆ **ಕಾರಣ**ದಲ್ಲಿ ಯಾವಾಗ ಅನ್ವಯವಿಲ್ಲವೋ, ಈ ಎರಡುವಿಧ ಚೇತನರಿಗೆ ಐಕ್ಯ ತಾನೇ ಹೇಗೆ ಕೂಡುತ್ತದೆಂದು ಉಪದೇಶಿಸುವದಕ್ಕಾಗಿಯೂ ಎಂದು ತಿಳಿಯತಕ್ಕದ್ದು.

ಬ್ರಹ್ಮರುದ್ರಾದೀನಾಂ ಸರ್ವೇಶ್ವರ ಕಾರ್ಯಭೂತತ್ವಕಥನಂ

ಬ್ರಹ್ಮರುದ್ರಾದಿಗಳ್ ಸರ್ವೇಶ್ವರನುಕ್ಕು ಕಾರ್ಯಭೂತರಿನ್ನುಮಿಡುಮ್,

[2] "ತದ್ವಿಸೃಷ್ಟಸ್ಸಪುರುಷೋ ಲೋಕೇ ಬ್ರಹ್ಮೇತಿ ಕೀರ್ತ್ಯತೇ।"

ಇತ್ಯಾದಿಗಳಾಲುಮ್,

[3] "ಸಂಕ್ಷಿಪ್ಯಚ ಪುರಾ ಲೋಕಾನ್ಮಾಯಯಾ ಸ್ವಯಮೇವಹಿ।

ಬ್ರಹ್ಮರುದ್ರಾದಿಗಳಿಗೆ ಸರ್ವೇಶ್ವರನ ಕಾರ್ಯಭಾವ ಸಮರ್ಥನೆಯು

ಬ್ರಹ್ಮ ರುದ್ರಾದಿಗಳು ಸರ್ವೇಶ್ವರನಿಗೆ, "**ಕಾರ್ಯಭೂತರಿನ್ನು ಮಿಡುಂ** ಕಾರ್ಯಭೂತರು ಎಂದರೆ ಕಾರ್ಯದಲ್ಲಿ ಸೇರಿದವರು ಎಂಬುವ ಸಂದರ್ಭದಲ್ಲಿ, **ತದ್ವಿಸೃಷ್ಟಃ** – ಆ ನಾರಾಯಣನಿಂದ ಸೃಷ್ಟಿಸಲ್ಪಟ್ಟವನಾಗಿ ಎಂದರೆ ಸೃಷ್ಟಿಗೆ ಒಳಪಟ್ಟವನಾಗಿರುವ, **ಸಪುರುಷಃ** – ಆ ಪುರುಷನು, **ಲೋಕೇ ಬ್ರಹ್ಮೇತಿ ಕೀರ್ತ್ಯತೇ**" ಲೋಕದಲ್ಲಿ ಚತುರ್ಮುಖ ಬ್ರಹ್ಮನೆಂದು ಹೊಗಳಿಸಿಕೊಳ್ಳುತ್ತಾನೆ ಎಂಬ ಮನುಸ್ಮೃತಿ ಮೊದಲಾದ ವಾಕ್ಯಗಳಿಂದ ಸಿದ್ಧವು. **ಇತ್ಯಾದಿಗಳಾಲುಂ** ಎಂದು ಆದಿ ಪದಪ್ರಯೋಗದಿಂದ ಇತರ ಮಹರ್ಷಿಗಳ ಸೂಕ್ತಿಗಳಿಂದಲೂ ಸಿದ್ಧವೆಂಬಭಿಪ್ರಾಯವು. "**ಯನ್ನಾಭಿಜಾತಾದರವಿನ್ದಕೋಶಾದ್ಬ್ರಹ್ಮಾ ಪರಾಸೀದ್ಯತ ಏಷ ಲೋಕಃ**" ಎಂದರೆ ಯಾವ ಮಹಾವಿಷ್ಣುವಿನ ನಾಭೀಕಮಲದಿಂದ ಚತುರ್ಮುಖನು ಆವಿರ್ಭವಿಸಿದನೋ, ಯಾವ ಚತುರ್ಮುಖನಿಂದ ಈ ಲೋಕವು **ಉಂಟಾಯಿತೋ** ಎಂದೂ,

"**ಯಸ್ಯಾಮ್ಬುಸಿ ಶಯಾನಸ್ಯ ಯೋಗನಿದ್ರಾಂ ವಿತನ್ವತಃ।**
ನಾಭಿಹ್ರದಾನ್ಮ್ಬುಜಾದಾಸೀತ್ ಬ್ರಹ್ಮಾ ವಿಶ್ವಸೃಜಾಂ ಪತಿಃ"

ಎಂದೂ ಶುಕಮಹರ್ಷಿಯೂ ಹೇಳಿರುತ್ತಾರೆ. **ವಿಶ್ವಸೃಜಾಂಪತಿಃ** – ಮರೀಚಿ ಮೊದಲಾದವರುಗಳಿಗೆ ಪತಿಯಾದ ಚತುರ್ಮುಖನು ಯೋಗನಿದ್ರೆಯಲ್ಲಿರುವ ಸಮುದ್ರಶಾಯಿಯಾದ ಅನಿರುದ್ಧರೂಪಿಯಾದ ನಾರಾಯಣನ ನಾಭೀ ಕಮಲದಿಂದ ಜನಿಸಿದನೆಂದು ಹೇಳಿರುತ್ತದೆ.

ಮತ್ತೂ "**ಪುರಾ** – ಮೊದಲು, **ಮಾಯಯಾ** – ಸಂಕಲ್ಪದಿಂದಲೇ **ಸ್ವಯಮೇವ ಹಿ** – ತಾನಾಗಿಯೇ, **ಲೋಕಾನ್** – ಲೋಕಗಳನ್ನು **ಸಂಕ್ಷಿಪ್ಯ**-

---

2 ಮನು, ೧-೧೧. 3 ರಾಮಾ. ಉತ್ತರ. ೧೦೪-೪

ಮಹಾರ್ಣವೇ ಶಯಾನೋಪ್ಸ್ವಮಾಂತ್ವಂ ಪೂರ್ವಮಜೀಜನಃ॥"

3 "ಕ ಇತಿ ಬ್ರಹ್ಮಣೋ ನಾಮ ಈಶೋಹಂ ಸರ್ವದೇಹಿನಾಂ।
ಆವಾಂ ತವಾಙ್ಗೇ ಸಂಭೂತೌ ತಸ್ಮಾತ್ತೇ ಕೇಶವ ನಾಮವಾ॥"

4 "ಅಹಂ ಪ್ರಸಾದಜಸ್ತಸ್ಯ ಕಸ್ಮಿಂಶ್ಚಿತ್ ಕಾರಣಾನ್ತರೇ।
ತ್ವಂಚೈವ ಕ್ರೋಧಜಸ್ತಾತ ಪೂರ್ವಸರ್ಗೇ ಸನಾತನೇ (ನಃ) ॥"

ಎನ್ರೆದಿರಿ ಕೈಯಾಲೇ ವಿಡುತೀಟ್ಟಾನ ಪಡಿಯೇ ಅವರ್‌ಗಳ್ ತಜ್ಗಳ್ ಪಾಶುರಙ್ಗಳಾಲೇ ಸಿದ್ಧಮ್.

ಪ್ರಳಯಕಾಲದಲ್ಲಿ ಸೂಕ್ಷ್ಮವಾಗಿ ಮಾಡಿ, ಎಂದರೆ ಸೂಕ್ಷ್ಮ ಚೆದಚಿದ್ವಿಶಿಷ್ಟನಾಗಿ ಕೊಂಡು, ಅನಂತರ ವ್ಯಷ್ಟಿಸೃಷ್ಟ್ಯುನ್ಮುಖನಾಗಿ, **ಮಹಾರ್ಣವೇ** – ಮಹಾಸಮುದ್ರದಲ್ಲಿ, **ಅಪ್ಸು** – ಉದಕದಲ್ಲಿ, **ಶಯಾನಃ** – ಮಲಗಿರುವವನಾಗಿ, **ತ್ವಂ**–ನೀನು, **ಮಾಂ** – ನನ್ನನ್ನು, **ಅಜೀಜನಃ** – ಕರಣಕಳೇಬರಗಳನ್ನು ಕೊಟ್ಟು ಸೃಷ್ಟಿಸಿದೆ. ಇದು ಶ್ರೀ ರಾಮನಿಗೆ ಚತುರ್ಮುಖ ಬ್ರಹ್ಮನು ಕಾಲರೂಪಿಯಾಗಿರುವ ತಾಪಸವೇಷಧಾರಿಯೊಂದಿಗೆ ಹೇಳಿ ಕಳುಹಿಸಿದ ಮಾತು."

3. "**ಕ ಇತಿ ಬ್ರಹ್ಮಣೋನಾಮ, ಕ** ಎಂಬದಾಗಿ ಚತುರ್ಮುಖ ಬ್ರಹ್ಮನ ಹೆಸರು, ಸಮಸ್ತ ಬದ್ಧಜೀವರಿಗೂ ನಾನು **ಈಶ**ನಾದುದರಿಂದ ನನಗೆ **ಈಶ**ನೆಂದು ಹೆಸರು. ನಾವಿಬ್ಬರೂ ನಿನ್ನ ಶರೀರದಿಂದ ಹುಟ್ಟಿದವರು. ಆದುದರಿಂದ ನಿನಗೆ **ಕೇಶವ** ನೆಂಬ ಹೆಸರುಂಟಾಯಿತು. ಇದು ರುದ್ರನು **ಸರ್ವೇಶ್ವರ**ನನ್ನು ಕುರಿತು ಹೇಳುವ ವಾಕ್ಯವು."

4. "**ಹೇ ತಾತ** – ಓ ಅಪ್ಪನೇ, **ಸನಾತನೇ** – ಅನಾದಿಯಾದ ಸರ್ವೇಶ್ವರನು, **ಪೂರ್ವಸರ್ಗೇ** – ಮೊದಲು ಸೃಷ್ಟಿಯಲ್ಲಿ ಪ್ರವರ್ತಿಸಲಾಗಿ, **ಅಹಂಪ್ರಸಾದಜಃ** – ಯಾವುದೋ ಒಂದು ಕಾರಣದಿಂದ ಸ್ವಾಮಿಯ ಅನುಗ್ರಹದಿಂದ ಹುಟ್ಟಿದೆನು. **ತ್ವಂಚ** – ನೀನಾದರೋ, **ಕಸ್ಮಿಂಶ್ಚಿತ್ ಕಾರಣಾನ್ತರೇ** – ಬೇರೆಯೊಂದು ಕಾರಣಾಂತರದಲ್ಲಿ, **ಕ್ರೋಧಜಃ** – ಸ್ವಾಮಿಯ ಕೋಪದಿಂದ ಹುಟ್ಟಿದವನು. ಇದು ಬ್ರಹ್ಮನು ರುದ್ರನಿಗೆ ಹೇಳುವ ವಾಕ್ಯವು."

ಹೀಗೆ ಈ ಪ್ರಮಾಣಗಳಿಂದ **ಎದಿರ್‌ಕ್ಕೈಯಾಲೇ** – ಪ್ರತಿವಾದಿಯ ಕೈಯಿಂದಲೇ **ವಿಡುತೀಟ್ಟಾನಪಡಿಯೇ** – ಕೊಡಲ್ಪಟ್ಟ ದಸ್ತೈವಜಿನ ಹಾಗೆಯೇ **ವಿಡುತೀಟ್ಟು** ಎಂದರೆ ಬಿಡುಗಡೆಪತ್ರ, **ಅವರ್ಗಳ್ ತಜ್ಗಳ್** – ಅವರವರ,

---

3. ಹರಿವಂಶ 131, 48. 4. ಭಾರ. ಶಾಂತಿ. 352, 62.

ಬ್ರಹ್ಮರುದ್ರಾಣಾಂ ಕರ್ಮವಶ್ಯತ್ವಕಥನಂ

ಇವರ್ಗಳ್ ಕರ್ಮವಶ್ಯರಾಯ್ ಶಿಲಕರ್ಮವಿಶೇಷಜ್ಞಾಲೇ ಸರ್ವೇ

ಪಾಶುರಜ್ಞಾಲೇ – ವಾಕ್ಯಗಳಿಂದಲೇ, **ಸಿದ್ಧಂ** – ಸಿದ್ಧವು, ಎಂದರೆ ಬ್ರಹ್ಮರುದ್ರರು ತಾವೇ ತಮ್ಮ **ಉಕ್ತಿ**ಗಳಿಂದ ಸರ್ವೇಶ್ವರನಿಂದ ಜನಿಸಿದರೆಂದು **ಈ** ಮೇಲಿನ ಪ್ರಮಾಣಗಳಿಂದ ಹೇಳಿಕ್ಕೊಂಡಿರುವದರಿಂದ ತಾವು ಸರ್ವೇಶ್ವರರೆಂಬ ವಿವಾದಕ್ಕೆ ಕಾರಣವೇ ಇಲ್ಲವೆಂಬ ಭಾವವು. ಆದುದರಿಂದ ಬ್ರಹ್ಮರುದ್ರರು ಆದಿಕಾರಣನಾದ ಸರ್ವೇಶ್ವರನಾದ ವಿಷ್ಣುವಿನ ಕಾರ್ಯಭಾಗಕ್ಕೆ ಸೇರಿದವರು ಎಂಬ ತಾತ್ಪರ್ಯವು. ಲೋಕದಲ್ಲಿ ಇತರ ಸಾಕ್ಷಿಗಳು ಹಾಗಿರಲಿ, ಪ್ರತಿವಾದಿಯೇ ಸ್ವಹಸ್ತದಿಂದ ತನಗೇನೂ ಹಕ್ಕಿಲ್ಲವೆಂದು ಬರೆದುಕೊಟ್ಟ ದಸ್ತೈವಜು ತುಂಬಾ ಪ್ರಬಲವಾದುದರಿಂದ, **ವಿಡುತೀಟ್ಟಾನಪಡಿಯೇ** ಎಂದು ಪ್ರಯೋಗಿಸಿರುತ್ತಾರೆ. ಹಾಗೆಯೇ ರುದ್ರನು 1"**ಶ್ರೀರಾಮರಾಮರಾಮೇತಿ**" ಎಂಬುದರಿಂದ ರಾಮನಾಮ ಸಂಕೀರ್ತನವು ವಿಷ್ಣುಸಹಸ್ರನಾಮಪಠನಕ್ಕೆ ಸಮಾನವೆಂದೂ ಅದರಿಂದ **ವಿಷ್ಣು**ವೇ ಪರತತ್ವವೆಂದೂ ಹೊಗಳಿರುತ್ತಾನೆ. ಮತ್ತೂ ಬಾಣಾಸುರ ಯುದ್ಧದಲ್ಲಿ ರುದ್ರಭಗವಾನನು ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸುತ್ತಾನೆ:—ಹೇಗೆಂದರೆ,

2 **ತಂತ್ವಾಜಗತ್ಸ್ಥಿತ್ಯುದಯಾನ್ತಹೇತುಂ**
ಸಮಂ ಪ್ರಶಾನ್ತಂ ಸುಹೃದಾತ್ಮನಾಯಕಂ ।
ಅನನ್ಯಮೇಕಂ ಜಗದಾತ್ಮಕೇತಂ
ಭವಾಪವರ್ಗಾಯ ಭಜಾಮ ದೇವ ॥

ನೀನು ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣಭೂತನು, ವೈಷಮ್ಯವಿಲ್ಲದವನು, ಅಶನಾಯಾ ಮೊದಲಾದ ಊರ್ಮಿಷಟ್ಕಗಳಿಲ್ಲದವನು, ಆಶ್ರಯಿಸಲು ನಿನಗೆ ಸಮಾನರೂ ಅಧಿಕರೂ ಇಲ್ಲದೆ ಒಬ್ಬನಾಗಿ ಜಗತ್ತಿನ ಆತ್ಮರುಗಳಿಗೆಲ್ಲಾ ಆಶ್ರಯನೂ ಆಧಾರನೂ, ಇಂಥಾವನಾದ ನಿನ್ನನ್ನು ಓ ದೇವನೇ ಐಹಿಕಾಮುಷ್ಮಿಕ ಫಲಪ್ರಾಪ್ತಿಗಾಗಿ ಶರಣು ಹೊಂದುವೆವು" ಎಂಬರ್ಥವು.

ಬ್ರಹ್ಮರುದ್ರರಿಗೆ ಕರ್ಮವಶ್ಯತ್ವದ ಕಥನವು.

ಇವರ್ಗಳ್ – ಈ ಬ್ರಹ್ಮರುದ್ರರು, ತಮ್ಮತಮ್ಮ ಕರ್ಮಗಳಿಗೆ ವಶರಾಗಿ, **ಶಿಲಕರ್ಮವಿಶೇಷಜ್ಞಾಲೇ ಸರ್ವೇಶ್ವರನೈ ಆರಾಧಿತ್ತು** – ಕೆಲವು ಸುಕೃತಗಳಾದ

1. ವಿಷ್ಣುಸಹಸ್ರನಾಮ. 2. ಭಾಗ. 10, 64, 45.

ಶ್ವರನ್ನೈ ಆರಾಧಿತ್ತು ತನ್ತಮ್ ಪದಙ್ಗಳೈ ಪೆಱ್ಱಾರ್ಗಳ್ ಎನ್ನುಮಿಡಂ

1 " ಸರ್ವೇ ದೇವಾ ವಾಸುದೇವಂ ಯಜನ್ತೇ।
ಸರ್ವೇ ದೇವಾವಾಸುದೇವಂ ನಮನ್ತೇ॥"

2 "ಸ ಬ್ರಹ್ಮಕಾಸ್ಸರುದ್ರಾಶ್ಚ ಸೇಂದ್ರಾಃದೇವಾ ಮಹರ್ಷಯಃ।
ಅರ್ಚಯನ್ತಿ ಸುರಶ್ರೇಷ್ಠಂ ದೇವಂ ನಾರಾಯಣಂ ಹರಿಂ॥"

3 "ಚಿನ್ತಯನ್ತೋ ಹಿ ಯಂ ನಿತ್ಯಂ ಬ್ರಹ್ಮೇಶಾನಾದಯಃ ಪ್ರಭುಂ।

ಕರ್ಮವಿಶೇಷಗಳಿಂದ ಸರ್ವೇಶ್ವರನನ್ನು ಆರಾಧಿಸಿ, **ತನ್ತಾಂ ಪದಙ್ಗಳೈ ಪೆಱ್ಱಾರ್ಗಳ್** – ತಮ್ಮ ತಮ್ಮ ಇಹಲೋಕದ ಉತ್ಕೃಷ್ಟ ಸ್ಥಾನಗಳನ್ನು ಹೊಂದಿದರು, **ಎಂ**ಬುವದಕ್ಕೆ ಮುಂದೆ ಅನೇಕ ಪ್ರಮಾಣಗಳನ್ನು **ಉ**ದಾಹರಿಸಿ, **ಇತ್ಯಾದಿಗಳಿಲೇ ಪ್ರಸಿದ್ಧಂ ಎಂ**ದು ಮುಂದೆ ವಾಕ್ಯವನ್ನು ಪೂರೈಸಿರುತ್ತಾರೆ; **ಎಂ**ದರೆ ಇವರುಗಳು ಕರ್ಮವಶ್ಯರಾದುದರಿಂದ ತಮ್ಮ ಸದ್ಗತಿಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಸರ್ವೇಶ್ವರನನ್ನು ಸ್ತುತಿಸಿರುವದರಿಂದ, ಕರ್ಮವಶ್ಯರೆಂಬುವದು ಸಿದ್ಧವು **ಎಂ**ಬಭಿಪ್ರಾಯವು. ಆ ಪ್ರಮಾಣಗಳು ಯಾವುವೆಂದರೆ :—

(1) ಸಮಸ್ತ ದೇವತೆಗಳೂ ವಾಸುದೇವನನ್ನು ಅರ್ಚಿಸುತ್ತಾರೆ, ಸಮಸ್ತ ದೇವತೆಗಳೂ ಆತನನ್ನು ನಮಸ್ಕರಿಸುತ್ತಾರೆ. ಇವರೂ ದೇವತೆಗಳೇ ಆದುದರಿಂದ ಇವರೂ ಕೂಡ ಅರ್ಚಿಸಿ, ನಮಸ್ಕರಿಸುತ್ತಾರೆ. ಎಂಬ ಭಾವವು. ದೇವತೆಗಳಾದುದರಿಂದ ಕರ್ಮವಶ್ಯರೆಂಬುವದು ಏರ್ಪಟ್ಟಿತು.

(2) ಚತುರ್ಮುಖ ಬ್ರಹ್ಮ, ರುದ್ರ, ಇಂದ್ರರಿಂದ ಸಹಿತರಾದ ದೇವತೆಗಳೂ, ಮಹರ್ಷಿಗಳೂ, ಆ ದೇವತೆಗಳಿಗಿಂತಲೂ ಶ್ರೇಷ್ಠನಾದ ದೇವನಾದ ನಾರಾಯಣನಾದ ವಿಷ್ಣುವನ್ನು ಪೂಜಿಸುತ್ತಾರೆ. ಆದುದರಿಂದ ಬ್ರಹ್ಮರುದ್ರರೂ ಕೂಡ ದೇವತೆಗಳಲ್ಲೇ ಸೇರಿದವರಾಗಿ ಕರ್ಮವಶ್ಯರಾಗಿರುವದರಿಂದ ವಿಷ್ಣುವನ್ನು ಆರಾಧಿಸುತ್ತಾರೆಂಬ ಭಾವವು. ಆದರೆ ವಿಷ್ಣುವೂ ಕೂಡ **ಸುರಶ್ರೇಷ್ಠ**ನೆಂದು ಹೇಳಿರುವದರಿಂದ ದೇವತೆಗಳಲ್ಲೇ ಸೇರಿದವನಲ್ಲವೇ ಎಂದರೆ, **ಸುರಾಣಾಂ** ಅಥವಾ **ಸುರೇಷು ಶ್ರೇಷ್ಠಃ** ಎಂದು ವಿಗ್ರಹವಾಕ್ಯವಲ್ಲವು. **ಸುರೇಭ್ಯಃಶ್ರೇಷ್ಠಃ** – ದೇವತೆಗಳಿಗಿಂತಲೂ ವಿಲಕ್ಷಣನಾಗಿ ಶ್ರೇಷ್ಠನೆಂದು ಅರ್ಥವನ್ನು ಹೇಳತಕ್ಕದ್ದು.

(3) **ಬ್ರಹ್ಮೇಶಾನಾದಯಃ** – ಚತುರ್ಮುಖ ಬ್ರಹ್ಮರುದ್ರಾದಿಗಳು, **ಯಂ** – ಯಾವ ಪ್ರಸಿದ್ಧನಾದ, **ಪ್ರಭುಂ** – ಸ್ವಾಮಿಯಾದ ಸರ್ವೇಶ್ವರನನ್ನು, **ಚಿನ್ತಯನ್ತಃ** - ಧ್ಯಾನಿಸುವರಾಗಿ, **ನಿಶ್ಚಯಂ** – ಆತನ ನಿಜಸ್ಥಿತಿಯನ್ನು,

---

2, ಭಾರ. ಶಾಂತಿ. 350, 30. 3. ಭಾರ. ಶಾಂತಿ. 210, 3
3. ರಾಮಾ. ಉತ್ತರ. 104. 7-8

ನಿಶ್ಚಯಂ ನಾಧಿಗಚ್ಛನ್ತಿ ತಮುಸ್ಮಿ ಶರಣಂ ಗತಃ॥"

4 "ಪದ್ಮೇ ದಿವ್ಯೇರ್ಕಸಜ್ಞಾಕ್ಷೇ ನಾಭ್ಯಾಮುತ್ಪಾದ್ಯ ಮಾಮಪಿ।
ಪ್ರಾಜಾಪತ್ಯಂ ತ್ವಯಾಕರ್ಮ ಸರ್ವಂ ಮಯಿ ನಿವೇಶಿತಂ।
ಸೋಹಂ ಸನ್ಯಸ್ತ ಭಾರೋಹಿ ತ್ವಾಮುಪಾಸೇ ಜಗತ್ಪತಿಂ॥"

5 "ಯುಗ ಕೋಟಿ ಸಹಸ್ರಾಣಿ ವಿಷ್ಣುಮಾರಾಧ್ಯಪದ್ಮಭೂಃ।
ಪುನಸ್ತ್ರೈಲೋಕ್ಯ ಧಾತೃತ್ವಂ ಪ್ರಾಪ್ತವಾನಿತಿ ಶುಶ್ರುಮ॥"

ನಾಧಿಗಚ್ಛನ್ತಿ – ಹೊಂದದೇಹೋದರೋ, ಎಂದರೆ ತಿಳಿಯದೇ ಹೋದರೋ, **ತಂ** – ಅಂತಹ ಪರಮಾತ್ಮನನ್ನು, **ಶರಣಂ ಗತೋಸ್ಮಿ** – ಶರಣುಹೊಂದಿದವನಾಗುವೆನು. ಇವರು ಕರ್ಮವಶ್ಯರಾದುದರಿಂದಲೇ ಕರ್ಮನಾಶಕ್ಕಾಗಿ ಪ್ರಪನ್ನರಾಗಿ ಶರಣಾಗತಿಯನ್ನು ಮಾಡಿದರೆಂದುಭಾವಿಸತಕ್ಕದ್ದು.

(4) **ನಾಭ್ಯಾಂ** – ನಾಭಿಪ್ರದೇಶದಲ್ಲಿರುವ, **ದಿವ್ಯೇ** – ಬಹು ಮನೋಹರವಾದ, **ಅರ್ಕಸಜ್ಞಾಕ್ಷೇ** – ಸೂರ್ಯನಿಗೆ ಸಮಾನವಾದ ಪ್ರಕಾಶವುಳ್ಳ, **ಪದ್ಮೇ** – ಕಮಲದಲ್ಲಿ, **ಮಾಂ**–ನನ್ನನ್ನು, **ಉತ್ಪಾದ್ಯ**–ಉತ್ಪತ್ತಿ ಹೊಂದುವಹಾಗೆ ಮಾಡಿ, **ತ್ವಯಾ** – ನಿನ್ನಿಂದ, **ಪ್ರಾಜಾಪತ್ಯಂ** – ಪ್ರಜೆಯನ್ನುಂಟುಮಾಡುವ ಸೃಷ್ಟಿರೂಪವಾದ, **ಸರ್ವಂಕರ್ಮ** – ಸಮಸ್ತಕಾರ್ಯವೂ, **ಮಯಿ** – ನನ್ನಲ್ಲಿ, **ನಿವೇಶಿತಂ** – ಇಡಲ್ಪಟ್ಟಿತು, **ಸೋಹಂ** – ಅಂತಹ ನಾನು, **ಸನ್ಯಸ್ತಭಾರೋಹಿ** – ಇರಿಸಲ್ಪಟ್ಟ ಪ್ರಜೋತ್ಪತ್ತಿ, ಸೃಷ್ಟಿ ಮೊದಲಾದ ಭಾರವುಳ್ಳವನಾದುದರಿಂದಲೇ, **ಜಗತ್ಪತಿಂ** – ಜಗನ್ನಾಯಕನಾದ, **ತ್ವಾಂ** – ನಿನ್ನನ್ನು, **ಉಪಾಸೇ** – ಉಪಾಸನೆ ಮಾಡುತ್ತಲಿದ್ದೇನೆ, ಇದು ಚತುರ್ಮುಖ ಬ್ರಹ್ಮನು ಕಾಲನೊಂದಿಗೆ ಶ್ರೀರಾಮನಲ್ಲಿ ಹೇಳುವಹಾಗೆ ಹೇಳಿಕಳುಹಿಸಿಕೊಟ್ಟ ವಾಕ್ಯವು. ಇದರಿಂದ ಚತುರ್ಮುಖನು ಸರ್ವೇಶ್ವರನಿಂದ ಹುಟ್ಟಿದವನಾಗಿ ಸತ್ತೆಯನ್ನು ಹೊಂದಿರುವನೆಂಬುವದು ತೋರಿಬರುತ್ತದೆ.

(5) **ಪದ್ಮಭೂಃ** – ವಿಷ್ಣುವಿನ ನಾಭೀಕಮಲದಲ್ಲಿ ಜನಿಸಿದ ಚತುರ್ಮುಖನು, **ಯುಗಕೋಟಿಸಹಸ್ರಾಣಿ** – ಅನೇಕ ಯುಗಗಳ ಕಾಲ, **ವಿಷ್ಣುಂ** – ವಿಷ್ಣುವನ್ನು, **ಆರಾಧ್ಯ** – ಪೂಜಿಸಿ, ಪುನಃ, **ತ್ರೈಲೋಕ್ಯಧಾತೃತ್ವಂ** – ಮೂರು ಲೋಕದ ಸೃಷ್ಟಿರೂಪಕರ್ಮವನ್ನು, **ಪ್ರಾಪ್ತವಾ** – ಹೊಂದಿದನು,

---

5. ಭಾರತ–ಕುಂಡಧಾರೋಪಾಖ್ಯಾನ.

6 "ವಿಶ್ವರೂಪೋ ಮಹಾದೇವ ಸ್ಸರ್ವಮೇಧೇ ಮಹಾಕ್ರತೌ।
ಜುಹಾವ ಸರ್ವಭೂತಾನಿ ಸ್ವಯಮಾತ್ಮಾನಮಾತ್ಮನಾ॥"

7 "ಮಹಾದೇವಸ್ಸರ್ವಮೇಧೇ ಮಹಾತ್ಮಾ।
ಹುತ್ವಾತ್ಮಾನಂ ದೇವದೇವೋ ಬಭೂವ॥
ವಿಶ್ವಾ ಲೋಕಾ ವ್ಯಾಪ್ಯ ವಿಷ್ಟಭ್ಯಕೀರ್ತ್ಯಾ।
ವಿರಾಜತೇ ದ್ಯುತಿವಾ ಕೃತ್ತಿವಾಸಾಃ॥"

ಇತಿ ಶುಶ್ರುಮ - ಎಂದು ಕೇಳಿರುವೆವು. ಚತುರ್ಮುಖನು ಕರ್ಮವಶ್ಯನಾದುದರಿಂದ ವಿಷ್ಣುವನ್ನು ಆರಾಧಿಸಿ, ತ್ರೈಲೋಕ್ಯಧಾತೃತ್ವವನ್ನು ಪಡೆದನು ಎಂದು ಹೇಳಿರುತ್ತದೆ.

(6) **ವಿಶ್ವರೂಪಃ** – ವಿಶ್ವರೂಪನೆಂದು ಹೇಳಿಸಿಕೊಳ್ಳುವ, **ಮಹಾದೇವಃ** - ರುದ್ರನು, **ಸರ್ವಮೇಧೇ** - ಸಮಸ್ತಪ್ರಾಣಿಗಳನ್ನೂ ಹವಿಸ್ಸಾಗಿವುಳ್ಳ, **ಮಹಾಕ್ರತೌ** - ಮಹಾಯಜ್ಞದಲ್ಲಿ, **ಸ್ವಯಂ** - ತಾನಾಗಿಯೇ, **ಸರ್ವಭೂತಾನಿ**- ಸರ್ವಭೂತಗಳನ್ನು, **ಆತ್ಮಾನಂಚ** - ತನ್ನನ್ನು ಕೂಡ, **ಆತ್ಮನಾ** - ಮನಸ್ಸಿನಿಂದ, **ಜುಹಾವ** - ಹೋಮ ಮಾಡಿದನು. ಮೇಲಿನ ಐದು ಪ್ರಮಾಣಗಳಿಂದ, ಚತುರ್ಮುಖಬ್ರಹ್ಮನ ಉತ್ಪತ್ತಿ, ಸತ್ತೆ,ಪದವಿ ಎಲ್ಲವೂ ಸರ್ವೇಶ್ವರನಿಂದುಂಟಾದುದೆಂದೂ, ಆತನಿಗೆ ಕರ್ಮವಶ್ಯತೆಯುಂಟೆಂದೂ ಅದಕ್ಕಾಗಿ ಸರ್ವೇಶ್ವರನನ್ನು ಕುರಿತು ಉಪಾಸನಾದಿಗಳನ್ನು ಮಾಡುತ್ತಾನೆಂದೂ ತೋರ್ಪಡಿಸಿದರು. ಹಾಗೆಯೇ ರುದ್ರನೂ ಕೂಡ ಸರ್ವೇಶ್ವರನನ್ನು ಆರಾಧಿಸಿ ದೇವದೇವನಾದನೆಂಬುವದಕ್ಕೆ ಪ್ರಮಾಣವನ್ನು ತೋರಿಸುತ್ತಾತೆ.

(7) **ಮಹಾತ್ಮಾ** - ಮಹಾತ್ಮನಾದ, **ಮಹಾದೇವಃ** - ರುದ್ರನು, **ಸರ್ವಮೇಧೇ** – ಸರ್ವಮೇಧವೆಂಬ ಯಾಗದಲ್ಲಿ, **ಆತ್ಮಾನಂ** - ತನ್ನನ್ನು, **ಹುತ್ವಾ** - ಹೋಮಮಾಡಿ, **ದೇವದೇವಃ** - ದೇವತೆಗಳಲ್ಲಿ ಶ್ರೇಷ್ಠನು, **ಬಭೂವ**-ಆದನು. **ವಿಶ್ವಾ ಲೋಕಾ** - ಸಮಸ್ತ ಲೋಕಗಳನ್ನೂ, **ವ್ಯಾಪ್ಯ** - ತನ್ನ ಧರ್ಮಭೂತ ಜ್ಞಾನದಿಂದ ವ್ಯಾಪಿಸಿ, **ವಿಷ್ಟಭ್ಯ** - ಧರಿಸಿ, **ದ್ಯುತಿವಾ** – ಕಾನ್ತಿ ಹೊಂದಿದವನಾಗಿಯೂ, **ಕೃತ್ತಿವಾಸಾಃ** - ಗಜಚರ್ಮವನ್ನು ಧರಿಸಿರುವವನಾಗಿಯೂ, **ಕೀರ್ತ್ಯಾ** - ಯಶಸ್ಸಿನಿಂದ, **ವಿರಾಜತೇ** - ಪ್ರಕಾಶಿಸುತ್ತಾನೆ.

(8) **ಅಸ್ಮಿನ್** - ಈ, **ಮಹಾಕ್ರತೌ** - ಮಹಾಯಾಗದಲ್ಲಿ, **ಯಃ** -

---

6. ಭಾರತ ಶಾಂತಿ. 8, 37. 7. ಭಾರ. ಶಾಂತಿ. 20, 12.

8 "ಯೋ ಮೇ ಯಥಾ ಕಲ್ಪಿತವಾ೯ ಭಾಗಮಸ್ಮಿ೯ ಮಹಾಕ್ರತೌ।
ಸ ತಥಾ ಯಜ್ಞಭಾಗಾರ್ಹೋ ವೇದಸೂತ್ರೇ ಮಯಾಕೃತಃ"॥
ಇತ್ಯಾದಿಗಳಿಲೇ ಪ್ರಸಿದ್ಧಂ

ಬ್ರಹ್ಮರುದ್ರಾದೀನಾಂ ಭಗವನ್ಮಾಯಾ ಪಾರತನ್ತ್ರ್ಯಾದಿ ಕಥನಮ್

ಇವರ್ಗಳ್ ಭಗವನ್ಮಾಯಾಪರತನ್ತ್ರರಾಯ್, ಗುಣವಶ್ಯರಾಯ್, ಜ್ಞಾನಸಙ್ಕೋಚವಿಕಾಸವಾನ್ಗಳಾಯ್ ಇರುಪ್ಪಾರ್ಗಳೆನ್ಬುಮಿಡಂ, ವೇದಾಪಹಾರಾದಿ ವೃತ್ತಾಂತಂಗಳಿಲುಮ್,

---

ಯಾವ ರುದ್ರನು, **ಯಥಾ** - ಹೇಗೆ, **ಭಾಗಂ** – ಹವಿರ್ಭಾಗವನ್ನು **ಕಲ್ಪಿತವಾ೯** - ಮಾಡಿದನೋ **ಎಂದರೆ** ದ್ರವ್ಯ ಮನ್ತ್ರ ವೇದವಾಕ್ಯಗಳು ಮೊದಲಾದವುಗಳಿಂದ ಮಾಡಿದನೋ, **ಸಃ**-ಅವನು, **ತಥಾ** - ಹಾಗೆಯೇ, **ವೇದಸೂತ್ರೇ** - ವೇದದಲ್ಲೂ, ಆಪಸ್ತಂಬ ಸೂತ್ರದಲ್ಲೂ, **ಯಜ್ಞಭಾಗಾರ್ಹಃ** – ಯಜ್ಞದ ಹವಿರ್ಭಾಗಕ್ಕೆ ಯೋಗ್ಯನಾಗಿ, **ಮಯಾಕೃತಃ** – ನನ್ನಿಂದ ಮಾಡಲ್ಪಟ್ಟನು.

ಹೀಗೆ ಈ ಮೇಲೆ ಹೇಳಿದ ರಾಮಾಯಣ, ಭಾರತವಚನಗಳಿಂದ ಈ ಚತುರ್ಮುಖ ರುದ್ರರು ಜೀವಾತ್ಮರೂ, ದೇವತೆಗಳಲ್ಲಿ ಸೇರಿದವರೂ, ಪರಮಾತ್ಮನಿಂದ ಕೊಡಲ್ಪಟ್ಟ ಸತ್ತೆ ಮತ್ತು ಅಧಿಕಾರವುಳ್ಳವರೂ, ಕರ್ಮವಶ್ಯರಾದುದರಿಂದ ಸರ್ವೇಶ್ವರನನ್ನೇ ಆರಾಧಿಸುವರೂ, ಎಂಬುವದು ಪ್ರಸಿದ್ಧವು.

ಇವರ್ಗಳ್ – ಈ ಬ್ರಹ್ಮರುದ್ರರೇ ಮೊದಲಾದವರು, **ಭಗವನ್ಮಾಯಾಪರತನ್ತ್ರರಾಯ್** - ಸರ್ವೇಶ್ವರನಿಗೆ ಸಂಬಂಧಪಟ್ಟ ಪ್ರಕೃತಿಗೆ ಅಧೀನರಾಗಿ, **ಎಂದರೆ** ಪ್ರಕೃತಿಸಂಬಂಧವುಳ್ಳವರಾಗಿ, **ಗುಣವಶ್ಯರಾಯ್** - ಪ್ರಕೃತಿಯು ಸತ್ವ ರಜಸ್ತಮೋರೂಪವಾದ ಮೂರು ಗುಣಗಳಿಂದ ಸೇರಿದುದಾದುದರಿಂದ ತ್ರಿಗುಣವೆಂದು ಹೇಳಲ್ಪಡುತ್ತದೆಂದು ಹಿಂದೆಯೇ ಹೇಳಲ್ಪಟ್ಟಿರುತ್ತದೆ, ಆದುದರಿಂದ, **ಈ** ಮೂರು ಗುಣಗಳನ್ನೂ ಹೊಂದಿದವರಾಗಿ, **ಜ್ಞಾನಸಙ್ಕೋಚವಿಕಾಸವಾನ್ಗಳಾಯ್** - ಯಾವಾಗ ಪ್ರಕೃತಿ ಸಂಬಂಧ ಉಂಟಾಯಿತೋ ಒಡನೆ ಜ್ಞಾನ ಸಙ್ಕೋಚಾದಿಗಳುಂಟಾಗುವದರಿಂದ,ಜ್ಞಾನಸಙ್ಕೋಚವನ್ನೂ ಒಂದುಕಾಲದಲ್ಲೂ, ಇನ್ನೊಂದು ಕಾಲದಲ್ಲಿ ಸ್ವಲ್ಪ ವಿಕಾಸವನ್ನೂ ಹೊಂದಿದವರಾಗಿ, **ಇರುಪ್ಪಾರ್ಗಳ್**– ಇರುವರು, **ಎನ್ಬುಮಿಡಂ** - ಎನ್ನುವ ಸಂದರ್ಭದಲ್ಲಿ, **ವೇದಾಪಹಾರಾದಿ**

---

8. ಭಾರ. ಶಾಂತಿ. 349, 61.

1 "ಬ್ರಹ್ಮಾದ್ಯಾಸ್ಸಕಲಾದೇವಾ ಮನುಷ್ಯಾಃ ಪಶವಸ್ತಥಾ ।
ವಿಷ್ಣುಮಾಯಾ ಮಹಾವರ್ತ ಮೋಹಾನ್ಧ (ಗರ್ತಾನ್ಧ)
ತಮಸಾವೃತಾಃ ॥"

2. "ಬ್ರಹ್ಮಾ ವಿಶ್ವಸೃಜೋ ಧರ್ಮೋ ಮಹಾನವ್ಯಕ್ತಮೇವಚ ।
ಉತ್ತಮಾಂ ಸಾತ್ವಿಕೀಮೇತಾಂ ಗತಿಮಾಹುರ್ಮನೀಷಿಣಃ ॥"

ಇತ್ಯಾದಿಗಳಿಲುಮ್ ಸುವ್ಯಕ್ತಂ.

ವೃತ್ತಾನ್ತಂಗಳಿಲುಮ್-ಮಧುಕೈಟಭರೆಂಬ ರಾಕ್ಷಸರಿಂದ ವೇದಗಳು ಅಪಹರಿಸಲ್ಪಟ್ಟ ವೃತ್ತಾನ್ತವೇ ಮೊದಲಾದವುಗಳಿಂದಲೂ, ಇಲ್ಲಿ **ಆದಿ** ಶಬ್ದದಿಂದ ಗುರು ಪಾತಕವಾದ ರುದ್ರನಿಂದ ಚತುರ್ಮುಖನ ಮೊದಲಿದ್ದ ಐದನೇ ಶಿರಸ್ಸಿನ ಛೇದನವು ಹೇಳಲ್ಪಟ್ಟಿತು; ಇಂತಹ ವೃತ್ತಾಂತಗಳಿಂದಲೂ, ಮತ್ತು

1. **ಬ್ರಹ್ಮಾದ್ಯಾಃ**-ಚತುರ್ಮುಖ ಬ್ರಹ್ಮನೇ ಮೊದಲಾದ, ಆದಿ ಪದದಿಂದ ರುದ್ರ ಇಂದ್ರರೇ ಮೊದಲಾದವರೂ ಹೇಳಲ್ಪಟ್ಟರು; **ಸಕಲಾದೇವಾಃ** - ಸಮಸ್ತ ದೇವತೆಗಳೂ, **ಮನುಷ್ಯಾಃ** - ಮನುಷ್ಯರೂ, **ತಥಾ** – ಹಾಗೆಯೇ, **ಪಶವಃ** - ತಿರ್ಯಕ್ಕುಗಳಾದ ಪಶುಗಳೂ, **ವಿಷ್ಣುಮಾಯಾ** - ವಿಷ್ಣುವಿನ ಪ್ರಕೃತಿ ಎಂಬ, **ಮಹಾವರ್ತ** - ದೊಡ್ಡ ಸುಳಿಯಲ್ಲಿರುವ, **ಮೋಹಾನ್ಧ ತಮಸಾ** - ಮೋಹ ವೆಂಬ ಅನ್ಧತಾಮಿಸ್ರವೆಂಬುವ ನರಕದಲ್ಲಿರುವ ಕತ್ತಲೆಯಿಂದ, **ಆವೃತಾಃ** - ಆವರಿಸಲ್ಪಟ್ಟಿರುವರು". ಇದರಿಂದ ಬ್ರಹ್ಮರುದ್ರಾದಿಗಳೂ ಕೂಡ ನಮ್ಮ ಹಾಗೆ ಪ್ರಕೃತಿ ಸಂಬನ್ಧವುಳ್ಳವರೆಂದೂ, ಅದಕ್ಕೆ ಪರವಶರಾಗಿ ಜ್ಞಾನಸಙ್ಕೋಚಯುಕ್ತರೆಂದೂ ನಿದರ್ಶಿಸಲ್ಪಟ್ಟಿತು.

ಮತ್ತು (2) **ಬ್ರಹ್ಮಾ** - ಚತುರ್ಮುಖ ಬ್ರಹ್ಮನೂ, **ವಿಶ್ವಸೃಜಃ** - ಒಂಬತ್ತು ಪ್ರಜಾಪತಿಗಳೂ, **ಧರ್ಮಃ** – ಯಮಧರ್ಮರಾಯನೂ, **ಮಹಾ** – ಮಹತ್ತತ್ತ್ವಾಭಿಮಾನಿದೇವತೆಯೂ, **ಅವ್ಯಕ್ತಮೇವಚ** - ಅವ್ಯಕ್ತತತ್ತ್ವಾಭಿಮಾನಿದೇವತೆಯೂ ಕೂಡ, **ಉತ್ತಮಾಂ** – ಉತ್ತಮವಾದ. **ಏತಾಂ** – ಈ ನಾರಾಯಣಾಖ್ಯ ದೇವತಾರೂಪವಾದ, **ಸಾತ್ವಿಕೀಂ** - ಸತ್ವಗುಣಾಧಿಕ್ಯವುಳ್ಳ **ಗತಿಂ** - **ಗಮ್ಯತೇ ಇತಿ ಗತಿಃ** ಎಂಬ ವ್ಯುತ್ಪತ್ತಿಯಿಂದ ಪ್ರಾಪ್ಯವೆಂಬರ್ಥವು. ಅಥವಾ ಮೋಕ್ಷವನ್ನು ಕೊಡುವ ಉಪಾಯವೆಂದೂ, **ಮನೀಷಿಣಃ** - ವಿದ್ವಾಂಸರು, **ಆಹುಃ** – ಹೇಳುತ್ತಾರೆ. ಈ ಶ್ಲೋಕದ ಹಿಂದೆ,

---

1. ವಿ. ಪು. ೫. ೩೦ ೧೭. 2. ಮನುಸ್ಮೃತಿ, ೧೨. ೫೦.

ದೇವತ್ವಾಂ ಸಾತ್ವಿಕಾ ಯಾನ್ತಿ, ಮನುಷ್ಯತ್ವಂತು ರಾಜಸಾಃ
ತಿರ್ಯಕ್ತ್ವಂ ತಾಮಸಾ ನಿತ್ಯಮಿತ್ಯೇಷಾ ತ್ರಿವಿಧಾಗತಿಃ॥

ಸತ್ವಗುಣಾಧಿಕ್ಯವುಳ್ಳವರಿಗೆ ದೇವಜನ್ಮವೂ, ರಾಜಸರಿಗೆ ಮನುಷ್ಯಜನ್ಮವೂ ತಾಮಸಿಗಳಿಗೆ ತಿರ್ಯಕ್ ಜನ್ಮವೂ ಎಂದು ಹೇಳಿರುವದಕ್ಕನುಸಾರವಾಗಿ ಬ್ರಹ್ಮರುದ್ರಾದಿಗಳಿಗೆ ದೇವತೆಗಳ ಜನ್ಮವುಂಟಾಗಿರುವದರಿಂದ, ಹಿಂದಿನ ಜನ್ಮಗಳಲ್ಲಿ ಸತ್ವಗುಣಾಧಿಕ್ಯವನ್ನು ಹೊಂದಿದ್ದರೆಂದು ತಾತ್ಪರ್ಯವು

ಎಂಬೀ ಪ್ರಮಾಣಗಳಿಂದಲೂ ಬ್ರಹ್ಮರುದ್ರರು ಭಗವನ್ಮಾಯಾ ಪರತನ್ತ್ರರೆಂಬುವದೂ ಮತ್ತು ತ್ರಿಗುಣವಶ್ಯರೆಂಬುವದೂ ಬಹು ಸ್ಪುಟವಾಗಿ ತೋರಿಬರುತ್ತವೆಂಬ ಭಾವವು.

ವೇದಾಪಹಾರ ವಿಷಯವು:—ಸರ್ವೇಶ್ವರನು ಸಮಷ್ಟಿಸೃಷ್ಟಿಕ್ರಮವನ್ನು ಸ್ವಸಙ್ಕಲ್ಪದಿಂದ ನಡಿಸಿದ ನಂತರ ವ್ಯಷ್ಟಿಸೃಷ್ಟಿಯನ್ನುಪಕ್ರಮಿಸಿದಾಗ ಅಂಡಸೃಷ್ಟಿಯೂ ಹಿರಣ್ಯಗರ್ಭೋತ್ಪತ್ತಿಯೂ ಉಂಟಾಗುತ್ತದೆಂದು ಹಿಂದೆಯೇ ಹೇಳಲ್ಪಟ್ಟಿರುತ್ತದೆ. ಇದಕ್ಕೆ ಪ್ರಮಾಣವು:—**"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ"** ಎಂದು ಹೇಳಿರುವ ಹಾಗೆ ಚತುರ್ಮುಖನ ಸೃಷ್ಟ್ಯನಂತರ ವೇದಗಳನ್ನು ಕಳುಹಿಸಿಕೊಟ್ಟನು. ಆ ವೇದಗಳನ್ನು ಮಧುಕೈಟಭರೆಂಬ ರಾಕ್ಷಸರು ಅಪಹರಿಸಿ ರಸಾತಲವನ್ನು ಪ್ರವೇಶಿಸಿದರು. ಆಗ ಚತುರ್ಮುಖನು ತುಂಬಾ ವ್ಯಾಕುಲನಾಗಿ, ಸರ್ವೇಶ್ವರನನ್ನು ಕುರಿತು,

ವೇದಾ ಮೇ ಪರಮಂ ಚಕ್ಷುರ್ವೇದಾ ಮೇ ಪರಮಂ ಧನಂ
ವೇದಾ ಮೇ ಪರಮಂ ಧಾಮ ವೇದಾ ಮೇ ಬ್ರಹ್ಮ ಚೋತ್ತಮಂ॥
ಮಮ ವೇದಾ ಹೃತಾಸ್ಸರ್ವೇ ದಾನವಾಭ್ಯಾಂ ಬಲಾದಿತಃ।
ಅಂಧಕಾರಾ ಇಮೇ ಲೋಕಾ ಜಾತಾ ವೇದೈರ್ವಿವರ್ಜಿತಾಃ॥

ಎಂದು ಹೇಳಿರುವ ಮೇರಿಗೆ ವೇದಗಳೇ ನನಗೆ ಕಣ್ಣುಗಳು, ವೇದಗಳೇ ನನಗೆ ಅಮಿತವಾದ ಧನವು, ಎಂಬಿವೇ ಮೊದಲಾದವುಗಳಿಂದ ವೇದಗಳನ್ನು ಸ್ತುತಿಸಿ, ಅವುಗಳಿಲ್ಲದುದರಿಂದ ಲೋಕಗಳೆಲ್ಲಾ ಅಂಧಕಾರದಲ್ಲಿ ಮುಗ್ನವಾಗಿವೆ, ಸೃಷ್ಟಿಕ್ರಮವೆಲ್ಲಾ ನಿಂತುಹೋಗಿವೆ ಎಂದು ಮೊರೆಯಿಡಲು; ಶ್ರೀಹರಿಯು ಆ ರಾಕ್ಷಸರನ್ನು ಸಂಹರಿಸಿ, ವೇದಗಳನ್ನು ತಂದು ಕೊಟ್ಟು, ಚತುರ್ಮುಖನ ದುಃಖವನ್ನು ಹೋಗಲಾಡಿಸಿದನೆಂಬುವದು ವೇದಾಪಹಾರವೃತ್ತಾನ್ತವು.

ಗುರುಘಾತಕ ವಿಷಯವು:—ಚತುರ್ಮುಖ ಬ್ರಹ್ಮನಿಗೆ ಪ್ರಥಮತಃ ಐದು ಶಿರಸ್ಸುಗಳಿದ್ದವೆಂದೂ, ಅವುಗಳಲ್ಲಿ ಒಂದನ್ನು ನಿಷ್ಕಾರಣವಾಗಿ ಆತನ ಮಗನಾದ ರುದ್ರನು ಕ್ರೋಧಮೂರ್ಛಿತನಾಗಿ ಕತ್ತರಿಸಿಬಿಟ್ಟನೆಂಬದಾಗಿ ಮಾತ್ಸ್ಯಪುರಾಣದಲ್ಲಿ ರುದ್ರನು ತಾನೇ ಹೇಳಿಕೊಂಡಿರುವ ವೃತ್ತಾಂತವಿರುತ್ತದೆ:—

ತತಃ ಕ್ರೋಧ ಪರೀತೇನ ಸಂರಕ್ತ ನಯನೇನಚ ।
ವಾಮಾಙ್ಗುಷ್ಠ ನಖಾಗ್ರೇಣ ಚ್ಛಿನ್ನಂ ತಸ್ಯ ಶಿರೋ ಮಯಾ ॥

ಎಂದು ಹೇಳಲ್ಪಟ್ಟಿರುತ್ತದೆ. ಇದಕ್ಕೆ ಚತುರ್ಮುಖಬ್ರಹ್ಮನು ಕುಪಿತನಾಗಿ ನಿರಪರಾಧಿಯಾದ ತನ್ನ ಶಿರಚ್ಛೇದವಮಾಡಿದುದರಿಂದ, ಆ ತನ್ನ ಕಪಾಲವನ್ನೇ ಯಾವಾವಾಗಲೂ ಕೈಯಲ್ಲಿ ಧರಿಸಿ, ಶ್ಮಶಾನವಾಸಿಯಾಗಿ ಭಿಕ್ಷಾಟನವನ್ನು ಮಾಡುತ್ತಿರೆಂದು ಶಾಪವನ್ನು ಕೊಟ್ಟನು. ಆಗ ಬ್ರಹ್ಮಹತ್ಯಾದೋಷಾಕುಲಿತನಾಗಿ ತೀರ್ಥಯಾತ್ರೆಗಳಿಂದ ಆ ಪಾಪವನ್ನು ಕಳೆದುಕೊಳ್ಳಬೇಕೆಂಬ ಆಶೆಯಿಂದ ಸಂಚರಿಸುತ್ತಾ ಹಿಮವತ್ಪರ್ವತವನ್ನು ಸಾರಿದನು. ಅಲ್ಲಿ ಲಕ್ಷ್ಮೀನಾರಾಯಣರನ್ನು ಕುರಿತು ತಪಸ್ಸನ್ನು ಮಾಡಿದುದರಿಂದ ಅವರು ಪ್ರತ್ಯಕ್ಷರಾಗಿ, ರುದ್ರನ ದೀನ ದೆಶೆಯನ್ನು ಕಂಡು, ತನ್ನಿವಾರಣಾರ್ಥವಾಗಿ, ತನ್ನ ಪಾರ್ಶ್ವವನ್ನು ನಖಾಗ್ರದಿಂದ ಸೀಳಿದುದರಿಂದ, ರಕ್ತಪ್ರವಾಹವು ಪ್ರವಹಿಸಿ, ಅದರಲ್ಲಿ ಈತನ ಕಪಾಲವು ಸಹಸ್ರ ಚೂರಾಗಿ ಒಡೆದುಹೋಯಿತೆಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ವಿಷ್ಣು ಕೃಪೆಯಿಂದ ರುದ್ರನಿಗೆ ಬ್ರಹ್ಮಹತ್ಯೆಯಿಂದುಂಟಾದ ದೋಷ ಪರಿಹಾರವುಂಟಾಯಿತೆಂದು ಹೇಳಲ್ಪಟ್ಟಿರುತ್ತದೆ.

ವಿಷ್ಣು ಪ್ರಸಾದಾತ್ಸ್ಯಶ್ರೋಣಿ ಕಪಾಲಂ ತತ್ಸಹಸ್ರಧಾ ।
ಸ್ಫುಟಿತಂ ಬಹುಧಾಯಾತಂ ಸ್ವಪ್ನಲಬ್ಧಂ ಧನಂ ಯಥಾ ॥

ಬೇರೆ ಕಡೆಯಲ್ಲಿ, ಉಗುರಿನಿಂದ ಗೀರಿದುದರಿಂದ ಸ್ವೇದಜಲ ಹೊರಟಿತೆಂದೂ ಅದರಿಂದ ಕಪಾಲವನ್ನು ತೊಳೆದುದರಿಂದ ಕಪಾಲವು ಒಡೆದುಹೋಯಿತೆಂದೂ ಹೇಳಿರುತ್ತದೆ.

ಈ ಎರಡು ವೃತ್ತಾಂತಗಳಿಂದಲೂ ಬ್ರಹ್ಮರುದ್ರರು ಪ್ರಕೃತಿಪರಾಧೀನರಾಗಿ ತ್ರಿಗುಣಗಳಿಂದ ಯುಕ್ತರಾದುದರಿಂದ ಅದಕ್ಕೆ ವಶ್ಯರಾಗಿ, ಜ್ಞಾನಸಙ್ಕೋಚಗಳನ್ನು ಹೊಂದಿ, ಕ್ಲೇಶಪಟ್ಟರೆಂದೂ, ಆ ಕ್ಲೇಶಗಳು ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದುದರಿಂದ ನಿವೃತ್ತಿಯನ್ನು ಹೊಂದಿದವೆಂದೂ, ತೋರಿಬರುತ್ತದೆ. ಈ ಅಭಿಪ್ರಾಯವೇ ಶ್ರೀ ಯಾಮುನಮುನಿಗಳ

ವೇದಾಪಹಾರ ಗುರುಪಾತಕ ದೈತ್ಯಪೀಡಾ ।
ದ್ಯಾಪದ್ವಿಮೋಚನ ಮಹಿಷ್ಯಫಲಪ್ರದಾನೈಃ ॥
ಕೋನ್ಯಃ ಪ್ರಜಾಪಶುಪತೀ ಪರಿಪಾತಿ ಕಸ್ಯ ।
ಪಾದೋದಕೇನ ಸಶಿವಃ ಸ್ವಶಿರೋಧೃತೇನ ॥

ಎಂಬ ಶ್ಲೋಕದಲ್ಲಿ, ಉಪಪಾದಿಸಲ್ಪಟ್ಟಿರುತ್ತದೆ. ಬ್ರಹ್ಮನಿಗೆ ವೇದಾಪಹಾರದಿಂದುಂಟಾದ ಕ್ಲೇಶವೇನು, ರುದ್ರನಿಗೆ ತನ್ನ ತಂದೆಯಾಗಿಯೂ ಗುರುವಾ

ಬ್ರಹ್ಮರುದ್ರೌ ಶ್ರೀಮಹಾವಿಷ್ಣು ಕಿಙ್ಕರೌ.

ಇವರ್ಗಳ್ ತಙ್ಗಳಕ್ಕು ಅನ್ತರಾತ್ಮಾವಾನ ಅವನ್ಕೊಡುತ್ತ ಜ್ಞಾನಾದಿಗಳೈ ಕೊಣ್ಡವನುಕ್ಕೇ ವಲ್ತೇವೈ ಶೆಯ್ಕಿರಾರೆನ್ನುಮಿಡವ್

೧. ಏತೌದ್ವೌ ವಿಬುಧಶ್ರೇಷ್ಠೌ ಪ್ರಸಾದ ಕ್ರೋಧಜೌ ಸ್ಮೃತೌ ।

ಗಿಯೂ ಇರುವ ಚತರ್ಮುಖಬ್ರಹ್ಮನ ಐದನೇ ಶಿರಸ್ಸನ್ನು ಛೇದಿಸಿದ ಬ್ರಹ್ಮಹತ್ಯಾ ಪಾತಕವೇನು, ಹಾಗೆಯೇ ನರಕಾಸುರ, ಅಂಧಕಾಸುರರ, ಬಾಧೆಯಿಂದುಂಟಾದ ವಿಪತ್ತೇನು, ಇವುಗಳಿಂದ ಬಿಡುಗಡೇ ಮೊದಲಾದ ಶ್ರೇಷ್ಠವಾದ ಫಲಗಳನ್ನು ಕೊಟ್ಟು, ಈ ಪ್ರಜಾಪತಿ ಪಶುಪತಿಗಳನ್ನು ರಕ್ಷಿಸುವುದಕ್ಕೆ ಶ್ರೀಮನ್ನಾರಾಯಣನಲ್ಲದೆ ಇನ್ಯಾರು ಸಮರ್ಥರು. ಅದೂ ಅಲ್ಲದೆ ಆ ನಾರಾಯಣನ ಪಾದದಿಂದುಂಟಾದ ಗಂಗೆಯನ್ನು ತನ್ನ ಶಿರಸ್ಸಿನಲ್ಲಿ ಧರಿಸಿದುದರಿಂದ ತನ್ನ ಪಾಪವನ್ನು ನೀಗಿಕೊಂಡು ಮಂಗಳಕರನಾಗಿ ರುದ್ರನು ಯಾವ ಶಿವನೆಂಬ ನಾಮಧೇಯವನ್ನು ಹೊಂದಿದನೋ" ಎಂದು ಹೇಳಿರುವದರಿಂದ ಬ್ರಹ್ಮರುದ್ರರೂ ಕೂಡ ಶ್ರೀ ಮಹಾವಿಷ್ಣುವಿನಿಂದ ರಕ್ಷಿಸಲ್ಪಟ್ಟರೆಂದು ತೋರಿಬರುತ್ತದೆ. ಮುಂದಿನ ವಾಕ್ಯದಿಂದ ಬ್ರಹ್ಮರುದ್ರರು ವಿಷ್ಣುವಿಗೆ ಕಿಂಕರರಾಗಿ ಅತನಿಂದಾಜ್ಞಾಪ್ತರಾಗಿ ಕಾರ್ಯ ನಿರ್ವಾಹಮಾಡುತ್ತಾರೆಂಬುವದಕ್ಕೆ ಪ್ರಮಾಣವನ್ನು ನಿದರ್ಶಿಸುತ್ತಾರೆ. ಹೀಗೆ ಪ್ರಕೃತಿ ಸಂಬಂಧವಿದ್ದು ಜ್ಞಾನಸಂಕೋಚವನ್ನು ಹೊಂದಿದ್ದರೆ, ಇವರುಗಳಿಗೆ ಲೋಕದ ಸೃಷ್ಟಿ ಲಯ ಕಾರ್ಯಗಳನ್ನು ನಿರ್ವಹಿಸಲು ಶಕ್ತಿಯುಂಟೋ ಎಂಬ ಸಂದೇಹ ನಿವಾರಣಾರ್ಥವಾಗಿಯೂ, ಆ ಸೃಷ್ಟಿ ಸಂಹಾರ ಕಾರ್ಯಕ್ಕನುಗುಣವಾದ ಜ್ಞಾನ, ಶಕ್ತಿ, ಸತ್ತೆ ಮೊದಲಾದವುಗಳನ್ನು ಸರ್ವೇಶ್ವರನಿಂದಲೇ ಹೊಂದಿದವರಾಗಿಯೂ, ಅತನ ಕಿಂಕರರಾಗಿ ಕಾರ್ಯನಿರ್ವಾಹ ಮಾಡುತ್ತಾರೆಂದು ನಿರೂಪಿಸುತ್ತಾರೆ.

ಬ್ರಹ್ಮರುದ್ರರು ಮಹಾವಿಷ್ಣುವಿನ ಕಿಙ್ಕರರು

ಇವರ್ಗಳ್ ತಙ್ಗಳಕ್ಕು – ಈ ಬ್ರಹ್ಮರುದ್ರರುಗಳಿಗೆ, **ಅಂತರಾತ್ಮಾವಾನ** – ಅನ್ತರಾತ್ಮಾವಾದ, **ಅವನ್ಕೊಡುತ್ತ** – ಆ ಮಹಾವಿಷ್ಣುವು ಕೊಟ್ಟ, **ಜ್ಞಾನಾದಿಗಳೈ** – ಜ್ಞಾನ, ಶಕ್ತಿ, ಸತ್ತೆ ಮೊದಲಾದವುಗಳನ್ನು, **ಕೊಣ್ಡು** – ಸ್ವೀಕರಿಸಿ, **ಏವಲ್ತೇವೈ** – ಭೃತ್ಯರ ಕೃತ್ಯವನ್ನು, **ಶೆಯ್ಕಿರಾರ್**–ಮಾಡುತ್ತಾರೆ, **ಎನ್ನುಮಿಡಂ** – ಎಂಬುವ ಸಂದರ್ಭದಲ್ಲಿ, "**ಪ್ರಸಾದಕ್ರೋಧಜೌ**–ಅನುಗ್ರಹ ಕೋಪ

---

(೧) ಭಾರತ, ಶಾಂತಿ. ೩೫೦. ೧೯

ತದಾದರ್ಶಿತ ಪನ್ಥಾನೌ ಸೃಷ್ಟಿ ಸಂಹಾರಕಾರಕೌ॥"
ಎನ್ನುಶೊಲ್ಲಪಟ್ಟದು.

ತಯೋಃ ಶುಭಾಶ್ರಯರಾಹಿತ್ಯಂ

ಇವರ್ಗಳುಕ್ಕು ಶುಭಾಶ್ರಯತ್ವಮಿಲ್ಲೈ ಎನ್ನುಮಿಡತ್ತೈ,

ದಿಂದ ಉಂಟಾದವರೆಂದು, **ಸ್ಮೃತೌ** – ಹೇಳಲ್ಪಟ್ಟ, **ಏತೌದ್ವೌ** – ಈ ಇಬ್ಬರಾದ, **ವಿಬುಧಶ್ರೇಷ್ಠೌ** – ದೇವತೆಗಳಲ್ಲಿ ಶ್ರೇಷ್ಠರಾದ ಚತುರ್ಮುಖಬ್ರಹ್ಮ ರುದ್ರರು, **ತದಾದರ್ಶಿತಪನ್ಥಾನೌ** – ಆ ಸರ್ವೇಶ್ವರನಿಂದ ತೋರಿಸಲ್ಪಟ್ಟ ಮಾರ್ಗವುಳ್ಳವರಾಗಿ, **ಸೃಷ್ಟಿಸಂಹಾರಕಾರಕೌ** – ಈ ಜಗತ್ತಿನ ಸೃಷ್ಟಿಸಂಹಾರ ಕೆಲಸವನ್ನು, ಮಾಡುವವರಾಗಿದ್ದಾರೆ.'' **ಎನ್ರು ಶೊಲ್ಲಪಟ್ಟದು** – ಎಂದು ಹೇಳಲ್ಪಟ್ಟಿರುತ್ತದೆ. ಇಲ್ಲಿ **ವಿಬುಧಶ್ರೇಷ್ಠೌ** ಎಂಬ ಪ್ರಯೋಗವಿರುವದರಿಂದ ಇವರುಗಳ **ಅಂತಸ್ತು** ಯಾವುದೆಂಬುವದು ಸ್ಫುಟವಾಗಿ ವ್ಯಕ್ತಪಡುತ್ತದೆ. ದೇವತೆಗಳು **ಹೇಗೆ** ಬದ್ಧರೋ, ಕರ್ಮವಶ್ಯರೋ, ಪ್ರಕೃತಿಸಂಬಂಧವುಳ್ಳವರೋ, ಜ್ಞಾನಸಙ್ಕೋಚಯುಕ್ತರೋ, ಅವರುಗಳಲ್ಲಿ ಶ್ರೇಷ್ಠರಾದ, ಇವರೂ ಕೂಡ ಹಾಗೆಯೇ ಎಂಬುವದು ಸ್ಫುಟವಾಗಿ ವ್ಯಕ್ತಪಡುತ್ತದೆ. ಶ್ರೀ ವಾಲ್ಮೀಕಿ ಭಗವಾನರವರು ಹಾಗೆಯೇ ವ್ಯಾಸಮಹರ್ಷಿಯು ಹೇಳಿರುವ ಹಾಗೆ, ರುದ್ರನನ್ನು **ಸುರಶ್ರೇಷ್ಠ**ನೆಂದೂ, **ಸುರಾಣಾಂ ಅಗ್ರಜೋಸಿಯತ್** ಎಂದೂ ಪ್ರಯೋಗಿಸಿರುತ್ತಾರೆ. ೬೩ನೇ ಪುಟವನ್ನು ನೋಡಿ. ಶುಕಮಹರ್ಷಿಯೂ ಕೂಡ ಹಾಗೆಯೇ ಪ್ರಯೋಗಿಸಿರುತ್ತಾರೆ. **ತದಾದರ್ಶಿತಪನ್ಥಾನೌ** ಎಂದು ಹೇಳಿರುವದರಿಂದ ಸರ್ವೇಶ್ವರನಿಂದಲೇ ತೋರಿಸಲ್ಪಟ್ಟ ಮಾರ್ಗವುಳ್ಳವರಾಗಿ ಸತ್ತ್ವಯನ್ನು ಹೊಂದಿ, ಸೃಷ್ಟಿಲಯ ಕಾರ್ಯಗಳನ್ನು ನಿರ್ವಹಿಸುವದರಿಂದ ಶ್ರೀಮನ್ನಾರಾಯಣನಿಗೆ ಇವರುಗಳು ಕಿಙ್ಕರರು ಎಂಬ ಭಾವವು.

ಇವರುಗಳು ಮೇಲೆ ಹೇಳಿದ ಹಾಗೆ ಜೀವಕೋಟಿಗೆ ಸೇರಿ, ಬದ್ಧರಾಗಿ ವಿಬುಧರಲ್ಲೇ ಸೇರಿದವರಾಗಿ ಪ್ರಕೃತಿಯಿಂದ ಸೇರಿದ ದೇಹಗಳುಳ್ಳವರಾದರೆ, ಇವರಿಗೆ ಲೋಕದಂಪತಿಗಳ ಹಾಗೂ, ನಿತ್ಯಮುಕ್ತರ ಹಾಗೂ, ದಿವ್ಯಮಙ್ಗಳವಿಗ್ರಹವನ್ನು ಹೊಂದಿರೋಣವು ಕೂಡುವದಿಲ್ಲವು. ಆದುದರಿಂದ ದಿವ್ಯಮಙ್ಗಳವಿಗ್ರಹವು ಇವರಿಗಿಲ್ಲವೆಂಬುವದಕ್ಕೆ ಮುಂದೆ ಪ್ರಮಾಣವನ್ನು ತೋರ್ಪಡಿಸುತ್ತಾರೆ.

ಆ ಬ್ರಹ್ಮರುದ್ರರಿಗೆ ದಿವ್ಯಮಙ್ಗಳವಿಗ್ರಹವಿಲ್ಲವು.

ಇವರ್ಗಳುಕ್ಕು – ಈ ಬ್ರಹ್ಮರುದ್ರರಿಗೆ, **ಶುಭಾಶ್ರಯತ್ವಂ** – ದಿವ್ಯಮಙ್ಗಳವಿಗ್ರಹವುಳ್ಳ ಭಾವವು, **ಶುಭ** ವೆಂದರೆ ಸಂಸಾರ ನಿವರ್ತ್ತಕರೂಪವಾಮುದು,

೧. "ಹಿರಣ್ಯಗರ್ಭೋ ಭಗವಾ೯ ವಾಸವೋಽಥ ಪ್ರಜಾಪತಿಃ" ಎನ್ನುತುಡಜ್ಗಿ,

೨. "ಅಶುದ್ಧಾಸ್ತೇ ಸಮಸ್ತಾಸ್ತು ದೇವಾದ್ಯಾಃ ಕರ್ಮಯೋನಯಃ" ಎನ್ನುವ್,

೩. "ಆಬ್ರಹ್ಮಸ್ತಂಬಪರ್ಯನ್ತಾ ಜಗದನ್ತರ್ವ್ಯವಸ್ಥಿತಾಃ।

ಆಶ್ರಯವೆಂದರೆ ಚಿತ್ತಾಲಮ್ಬನರೂಪವಾದುದು, ಉಪಾಸನೆಗೆ ಯೋಗ್ಯವಾದ ದಿವ್ಯಮಜ್ಗಳಮೂರ್ತಿಯು, **ಇಲ್ಲೈ ಎನ್ನುಮಿಡತ್ತೈ** - ಇಲ್ಲವು ಎಂಬ ಸಂದರ್ಭದಲ್ಲಿ, **ಭಗವಾ೯**-ಮಹಾಭಾಗವತನಾದ, ೧. **ಹಿರಣ್ಯಗರ್ಭಃ**-ಚತುರ್ಮುಖ ಬ್ರಹ್ಮನೂ, **ವಾಸವಃ** - ಇನ್ದ್ರನೂ, **ಅಥ** - ಹಾಗೆಯೇ, **ಪ್ರಜಾಪತಿಃ** - ನವಪ್ರಜಾಪತಿವರ್ಗವೂ (ಜಾತ್ಯೇಕವಚನವು.) **ಎನ್ನು ತುಡಜ್ಗಿ** - ಎಂದು ಪ್ರಾರಂಭಿಸಿ, ಮುಂದೆ **ಮರುತೋ ವಸವೋ ರುದ್ರಾಃ ಭಾಸ್ಕರಾಸ್ತಾರಕಾಗ್ರಹಾಃ** ಎಂದು ಉತ್ತರಾರ್ಧವಿರುವದರಿಂದ ಸಪ್ತಮರುತ್ತುಗಳೂ, ಅಷ್ಟವಸುಗಳೂ, ಏಕಾದಶರುದ್ರರೂ ಸಹ ಹೇಳಲ್ಪಟ್ಟರು. ೨. "**ತೇ** - ಆ ಮೇಲೆ ಹೇಳಿದ, **ದೇವಾದ್ಯಾಃ** ದೇವತೆಗಳೇ ಮೊದಲಾದವರುಗಳಾದ, **ಸಮಸ್ತಾಸ್ತು** - ಎಲ್ಲರೂ ಕೂಡ, **ಕರ್ಮಯೋನಯಃ** - ಕರ್ಮದಿಂದುಂಟಾದ ಜನ್ಮವನ್ನೆತ್ತಿದವರು, ಆದುದರಿಂದ, **ಅಶುದ್ಧಾಃ** - ಪರಿಶುದ್ಧರಲ್ಲವು ಅಂದರೆ ಪರಿಶುದ್ಧವಾದ, ಮಜ್ಗಳಕರವಾದ ಅಪ್ರಾಕೃತವಾದ ಶರೀರವನ್ನು ಹೊಂದಿದವರಲ್ಲವು." ಎಂದೂ,

೩. "**ಆಬ್ರಹ್ಮಸ್ತಂಬಪರ್ಯಂತಾಃ** - **ಆಬ್ರಹ್ಮ** - ಚತುರ್ಮುಖ ಬ್ರಹ್ಮ ಮೊದಲುಗೊಂಡು, **ಸ್ತಂಬಪರ್ಯನ್ತಾಃ** - ಕೀಟ ಅಥವಾ ಇರುವೆವರಿವಿಗೂ ಇರುವ, **ಜಗದಂತರ್ವ್ಯವಸ್ಥಿತಾಃ** - ಈ ಲೋಕದಲ್ಲಿ ಅಡಗಿರುವ, **ಪ್ರಾಣಿನಃ** - ಸಮಸ್ತ ಪ್ರಾಣಿಗಳೂ, **ಕರ್ಮಜನಿತಸಂಸಾರವಶವರ್ತಿನಃ** - ಕರ್ಮದಿಂದ ಹುಟ್ಟಿದ ಸಂಸಾರಕ್ಕೆ ಅಧೀನರಾದವರು." ಎಂದೂ,

೪. "**ಕರ್ಮಣಾಂ**-ಕರ್ಮಗಳಿಗೆ, **ಪರಿಪಾಕತ್ವಾತ್**-ವಶಪಟ್ಟು ಪರಿಣಾಮ ಹೊಂದಿದ ಚೆತೆಯಿಂದ, **ಆವಿರಿಞ್ಚಾತ್** - ಚತುರ್ಮುಖ ಬ್ರಹ್ಮ ಮೊದಲುಗೊಂಡು ಎಲ್ಲರೂ, **ಅಮಜ್ಗಳಂ** - ಅಪರಿಶುದ್ಧರೆಂದು, **ಇತಿ ಮತ್ವಾ** - ಹಾಗೆ ತಿಳಿದ್ದ **ವಿರಕ್ತಸ್ಯ** - ವೈರಾಗ್ಯಹೊಂದಿದ ಪ್ರಪನ್ನನಿಗೆ, **ವಾಸುದೇವಃ** - ಶ್ರೀವಾಸುದೇ

---

(೧) ವಿ. ಪು. ೬-೭-೫೬. (೨) ವಿ. ಪು. ೬-೭-೨೨.

(೩) ವಿಷ್ಣುತತ್ವ ೧೦೪-೨೩

ಪ್ರಾಣಿನಃ ಕರ್ಮಜನಿತ ಸಂಸಾರವಶವರ್ತಿನಃ"
ಎನ್ನುವುಮ್,

೪. "ಕರ್ಮಣಾಂ ಪರಿಪಾಕತ್ವಾದಾವಿರಿಞ್ಚಾದಮಙ್ಗಳಂ।
ಇತಿ ಮತ್ವಾ ವಿರಕ್ತಸ್ಯ ವಾಸುದೇವಃ ಪರಾಗತಿಃ ॥"

ಎನ್ನುವುಮ್, ಪರಾಶರ ಶೌನಕ ಶುಕಾದಿಗಳ್ ಪ್ರತಿಪಾದಿತ್ತಾರ್ಗಳ್.

ಬ್ರಹ್ಮರುದ್ರಯೋಃ ಭಗವದಾಶ್ರಿತತ್ವ ಕಥನಂ

ಇವರ್ಗಳುಕ್ಕು ಭಗವಾನಾಶ್ರಯಣೀಯನೆನ್ನುಮಿಡತ್ತೈಯುಮ್ ಭಗವಾನುಕ್ಕೋರಾಶ್ರಯಣೀಯರಿಲ್ಲೈಯೆನ್ನುಮಿಡತ್ತೈಯುಮ್,

1. "ರುದ್ರಂ ಸಮಾಶ್ರಿತಾದೇವಾಃ ರುದ್ರೋ ಬ್ರಹ್ಮಾಣಮಾಶ್ರಿತಃ

ವನೇ, **ಪರಾಗತಿಃ** – ಶ್ರೇಷ್ಠವಾದ ಗತಿಯು" **ಎನ್ನುಂ** - ಎಂಬದಾಗಿಯೂ ಪರಾಶರ, ಶೌನಕ, ಶುಕ ಮಹರ್ಷಿಗಳು, ಆದಿ ಶಬ್ದದಿಂದ ವಾಲ್ಮೀಕಿ ಮೊದಲಾದ ಇತರ ಮಹರ್ಷಿಗಳೂ ಕೂಡ, **ಪ್ರತಿಪಾದಿತ್ತಾರ್ಗಳ್**–ಉಪಪಾದನೆಮಾಡಿದರು.

ಈ ಪ್ರಮಾಣಗಳಿಂದ ಇವರಿಗೆ ಕರ್ಮವಶ್ಯತೆಯೂ, ಶುಭಾಶ್ರಯರಾಹಿತ್ಯವೂ, ಹೇಳಲ್ಪಟ್ಟಿತು. ಈ ಪ್ರಮಾಣಗಳಿಂದಲೇ **ವಿಷ್ಣುವೇ** ಪರಾಗತಿ ಎಂದು ಹೇಳಿರುವದರಿಂದ, ತ್ರಿಮೂರ್ತಿಗಳು ಸಮನೆಂಬ, ತ್ರಿಮೂರ್ತ್ಯೈಕ್ಯವೆಂಬ, ತ್ರಿಮೂರ್ತಿಗಳಿಗೆ ಬೇರೆಯಾದವನು ಈಶ್ವರನೆಂಬ ಅವರುಗಳಲ್ಲಿ ಬ್ರಹ್ಮನಾಗಲಿ ರುದ್ರನಾಗಲಿ ಈಶ್ವರನೆಂಬ ಈ ನಾಲ್ಕುಪಕ್ಷಗಳು ಕೂಡುವದಿಲ್ಲವೆಂಬುವದು ಸ್ಥಾಪಿಸಲ್ಪಟ್ಟಿತು. **ವಾಸುದೇವಃ ಪರಾಗತಿಃ** - ಎಂದು ಹೇಳಿರುವದರಿಂದ, ವಿಷ್ಣು ಶಬ್ದವು ವಾಸುದೇವ ಪರ್ಯಾಯ ನಾಮವಾದುದರಿಂದ, ವಿಷ್ಣುವೇ ಪರದೇವತೆ ಎಂದು ಸ್ಥಾಪಿಸಿದಂತಾಯಿತು. ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯದಿಂದ ಸಪ್ರಮಾಣವಾಗಿ ಉಪದೇಶಿಸುತ್ತಾರೆ

ಬ್ರಹ್ಮರುದ್ರರಿಗೆ ವಿಷ್ಣುವು ಆಶ್ರಯವು, ವಿಷ್ಣುವಿಗೆ ಯಾರೂ ಇಲ್ಲವು.

ಇವರ್ಗಳುಕ್ಕು–ಈ ಬ್ರಹ್ಮರುದ್ರರಿಗೆ, **ಭಗವಾ**–ಹೇಯಪ್ರತ್ಯನೀಕನಾಗಿ ಷಾಡ್ಗುಣ್ಯ ಪರಿಪೂರ್ಣನಾದ ಸರ್ವೇಶ್ವರನು, **ಆಶ್ರಯಣೀಯನೆನ್ನುಮಿಡತ್ತೈಯುಂ**-ಆಶ್ರಯಿಸಲುಯೋಗ್ಯನು ಎಂಬುವದಕ್ಕೂ, **ಭಗವಾನುಕ್ಕು**-ಸರ್ವೇಶ್ವರನಿಗೆ, **ಓರ್ ಆಶ್ರಯಣೀಯರಿಲ್ಲೈಯೆನ್ನುಮಿಡತ್ತೈಯುಂ**-ಯಾರೊಬ್ಬರೂ ಆಶ್ರಯಿಸಲು ಯೋಗ್ಯರಿಲ್ಲವು ಎನ್ನುವದಕ್ಕೂ, ಪ್ರಮಾಣವಾಗಿ, (1) **ದೇವಾಃ**-ದೇವತೆ

---

(4) ಶ್ರೀಭಾಗ 11-19-18. (1) ಭಾರತ 118.37-8.

ಬ್ರಹ್ಮಾ ಮಾಮಾಶ್ರಿತೋ ರಾಜನ್ನಾಹಂ ಕಞ್ಚಿದುಪಾಶ್ರಿತಃ ॥
ಮಮಾಶ್ರಯೋ ನ ಕಶ್ಚಿತ್ತು ಸರ್ವೇಷಾಮಾಶ್ರಯೋಹ್ಯಹಂ ।"
ಎನ್ನು ತಾನೇ ಯರುಳಿಚ್ಚಿಯ್ದಾ.

ಬ್ರಹ್ಮರುದ್ರಯೋಃ ಭಗವದ್ವಿಭೂತಿತ್ವವರ್ಣನಂ

ಇವರ್ಗಳ್ ಉಭಯ ವಿಭೂತಿ ನಾಥನಾನ ಸರ್ವೇಶ್ವರನುಕ್ಕು ವಿಭೂ

ಗಳು, **ರುದ್ರಂ**-ರುದ್ರನನ್ನು, **ಸಮಾಶ್ರಿತಾಃ** - ಆಶ್ರಯಿಸಿದರು;**ರುದ್ರಃ**- ರುದ್ರನು **ಬ್ರಹ್ಮಾಣಂ**-ಚತುರ್ಮುಖಬ್ರಹ್ಮನನ್ನು, **ಆಶ್ರಿತಃ**-ಆಶ್ರಯಿಸಿದನು; **ಬ್ರಹ್ಮಾ**-ಚತುರ್ಮುಖಬ್ರಹ್ಮನು, **ಮಾಂ**-ಸರ್ವೇಶ್ವರನಾದ ನನ್ನನ್ನು, **ಆಶ್ರಿತಃ** - ಆಶ್ರಯಿಸಿದನು; **ಹೇ ರಾಜನ್** - ಓ ರಾಜನೇ, **ಅಹಂ** - ನಾನು, **ಕಞ್ಚಿತ್** - ಯಾರೊಬ್ಬರನ್ನಾಗಲಿ, **ನೋಪಾಶ್ರಿತಃ**-ಆಶ್ರಯಿಸಲಿಲ್ಲವು. **ಮಮಾಶ್ರಯೋನಕಶ್ಚಿತ್ತು**- ನನಗಾದರೋ ಯಾರೊಬ್ಬರೂ ಆಶ್ರಯವಿಲ್ಲವು, ಆದರೆ **ಸರ್ವೇಷಾಮಾಶ್ರಯೋಹ್ಯಹಂ** - ನಾನಾದರೋ ಎಲ್ಲರಿಗೂ ಆಶ್ರಯವು. **ಎನ್ನು ತಾನೇ ಯರುಳಿಚ್ಚಿಯ್ದಾನ್** - ಎಂದು ತಾನೇ ಕೃಪಯಾ ಹೇಳಿಕೊಂಡಿರುತ್ತಾನೆ. (ಮೇಲೆ ರುದ್ರನಿಗೆ ಚತುರ್ಮುಖ ಬ್ರಹ್ಮನು ಆಶ್ರಯವೆಂದು ಹೇಳಿ, ಇಲ್ಲಿ ಎಲ್ಲರಿಗೂ ತಾನೇ ಆಶ್ರಯವೆಂಬ ಸರ್ವೇಶ್ವರನ ವಾಕ್ಯವು ಹೇಗೆ ಸರಿಹೋಗುತ್ತದೆಂದರೆ, ರುದ್ರನು ತನಗೆ ಗುರುವಾದ ಚತುರ್ಮುಖನನ್ನು ಆಶ್ರಯಿಸಿದನು. ಹಾಗೆ ಆಶ್ರಯಿಸುವದರಿಂದ ತತ್ತಚ್ಛರೀರಕ ಪರಮಾತ್ಮನೇ ಆಶ್ರಯಿಸಲ್ಪಡುವದರಿಂದ ಏನೂ ಪ್ರತ್ಯವಾಯವಿಲ್ಲವು. ಸರ್ವೇಶ್ವರನೇ ಅದರಿಂದ ಸುಪ್ರೀತನಾಗಿ ಸರ್ವರಿಗೂ ತಾನೇ ಶರಣ್ಯನು ಎಂಬ ಭಾವವು. ಆದುದರಿಂದ ಬ್ರಹ್ಮರುದ್ರರಿಗೂ ಕೂಡ ವಿಷ್ಣುವೇ ಆಶ್ರಯವು. ವಿಷ್ಣುವು ನಿಸ್ಸಮಾಭ್ಯಧಿಕನಾದ ಪ್ರಯುಕ್ತ ಅವನಿಗೆ ಯಾರೂ ಆಶ್ರಯವಿಲ್ಲವು ಎಂಬ ಭಾವವು.)

ಬ್ರಹ್ಮ ರುದ್ರರು ಭಗವದ್ವಿಭೂತಿಗೆ ಸೇರಿದವರು

ಇವರ್ಗಳ್ - ಈ ಬ್ರಹ್ಮರುದ್ರರು, **ಉಭಯ ವಿಭೂತಿ ನಾಥನಾನ**-ತ್ರಿಪಾದ್ವಿಭೂತಿ ಎನಿಸುವ ನಿತ್ಯವಿಭೂತಿಯಾದ ದಿವ್ಯ ವೈಕುಂಠ ಲೋಕಕ್ಕೂ, ಏಕಪಾದ್ವಿಭೂತಿ ಎನಿಸುವ ಈ ಲೀಲಾ ವಿಭೂತಿಯಾದ ಸರ್ವಜಗತ್ತುಗಳಿಗೂ, ಹೀಗೆ ಈ ಎರಡು ವಿಭೂತಿಗಳಿಗೂ, ನಿಯಾಮಕನಾಗಿ ಸ್ವಾಮಿಯಾದ, **ಸರ್ವೇಶ್ವರನುಕ್ಕು**-ಸರ್ವೇಶ್ವರನಿಗೆ, **ವಿಭೂತಿಭೂತರೆನ್ನುಮಿಡಂ** - ನಿಯಾಮ್ಯ ವರ್ಗಕ್ಕೆ ಸೇರಿದ

ವಿಭೂತರೆನ್ನುವುದು, (೧)"ಬ್ರಹ್ಮಾದಕ್ಷಾದಯಃ ಕಾಲಃ"(೨)"ರುದ್ರಃ ಕಾಲಾಂತಕಾದ್ಯಾಶ್ಚ" ಇತ್ಯಾದಿಗಳಿಲೆ, ಮತ್ತು'ಳ್ಳಾರೋಡು ತುಲ್ಯವಾಕ ಚ್ಹೊಲ್ಲಪಟ್ಟದು.

ವರು ಎನ್ನುವದಕ್ಕೆ ಪ್ರಮಾಣವಾಗಿ, **ವಿಭೂತಿ** ಶಬ್ದಕ್ಕೆ ಶ್ರೀ ಭಾಷ್ಯಕಾರರು **ನಿಯಮನವಿಶೇಷ**ವೆಂದು ಭಾಷ್ಯವನ್ನು ಬರೆದಿರುತ್ತಾರೆ; ಯಾವುದು ನಿಯಮಿಸಲ್ಪಡುತ್ತದೋ ಅದು ವಿಭೂತಿಯು.

ಬ್ರಹ್ಮಾದಕ್ಷಾದಯಃ ಕಾಲಸ್ತಥೈವಾಖಿಲ ಜನ್ತವಃ।
ವಿಭೂತಯೋ ಹರೇರೇತಾ ಜಗತಸ್ಸೃಷ್ಟಿ ಹೇತವಃ ॥ ೩೧ ॥

ವಿಷ್ಣುರ್ಮನ್ವಾದಯಃ ಕಾಲಸ್ಸರ್ವಭೂತಾನಿಚದ್ವಿಜ ।
ಸ್ಥಿತೇ ರ್ನಿಮಿತ್ತ ಭೂತಸ್ಯ ವಿಷ್ಣೋರೇತಾ ವಿಭೂತಯಃ ॥ ೩೨ ॥

ರುದ್ರಃಕಾಲಾನ್ತಕಾದ್ಯಾಶ್ಚ ಸಮುಸ್ತಾಶ್ಚೈವ ಜನ್ತವಃ ।
ಚತುರ್ಥಾಪ್ರಳಯಾಯೈತಾ ಜನಾರ್ದನ ವಿಭೂತಯಃ ॥ ೩೩ ॥

ಚತುರ್ಮುಖ ಬ್ರಹ್ಮನೂ, ದಕ್ಷಪ್ರಜಾಪತಿ ಮೊದಲಾದವರೂ ಕಾಲವೂ, ಸಮಸ್ತ ಜನ್ತುಗಳೂ ಸೃಷ್ಟಿಗೆ ಕಾರಣಭೂತರಾದ ವಿಭೂತಿಗಳೆಂದೂ; ವಿಷ್ಣುವೂ, ಮನ್ವಾದಿಗಳೂ, ಕಾಲವೂ, ಸರ್ವಭೂತಗಳೂ, ಸ್ಥಿತಿಗೆ ಕಾರಣಭೂತವಾದ ವಿಭೂತಿಗಳೆಂದೂ, ರುದ್ರನೂ, ಕಾಲವೂ, ಯಮನೂ ಸಮಸ್ತ ಜನ್ತುಗಳೂ ಪ್ರಳಯಕ್ಕೆ ಕಾರಣಭೂತರಾದ ವಿಭೂತಿಗಳೆಂದೂ, ಪರಾಶರರು ಹೇಳಿರುತ್ತಾರೆ. ಸೃಷ್ಟಿಯಲ್ಲಿ ಹರಿ ಶಬ್ದದಿಂದಲೂ, ಸ್ಥಿತಿಯಲ್ಲಿ ವಿಷ್ಣು ಶಬ್ದದಿಂದಲೂ, ಪ್ರಳಯದಲ್ಲಿ ಜನಾರ್ದನ ಶಬ್ದದಿಂದಲೂ ಹೇಳಿಸಿಕೊಳ್ಳುವ ಶ್ರೀಮನ್ನಾರಾಯಣ ವಿಭೂತಿಗಳು ಎಂಬ ಭಾವವು. ಈ ವಿಭೂತಿಗಳಲ್ಲಿಮುಖ್ಯಕಾರಣಭೂತವಿಭೂತಿಗಳು ಸೃಷ್ಟಿಗೆ ಚತುರ್ಮುಖನೂ, ಸ್ಥಿತಿಗೆ ವಿಷ್ಣುವೂ, ಲಯಕ್ಕೆ ರುದ್ರನೂ, ಎಂದು ಹೇಳಲ್ಪಟ್ಟರು. ಚತುರ್ಮುಖ ರುದ್ರರೇನೋ ಕ್ಷೇತ್ರಜ್ಞರಾಗಿ ನಿಯಾಮ್ಯ ವರ್ಗಕ್ಕೆ ಸೇರಿದವರಾದುದರಿಂದ ವಿಭೂತಿ ಶಬ್ದವು ಇವರುಗಳಿಗೆ ಉಪಪನ್ನವು. ಆದರೆ ವಿಷ್ಣುವು ವಿಭೂತಿ ಹೇಗೆ ಎಂದರೆ, **ನಹಿಪಾಲನ ಸಾಮರ್ಥ್ಯಮೃತೇಸರ್ವೇಶ್ವರಂಹರಿಂ** ಸಂರಕ್ಷಿಸುವುದಕ್ಕೆ ತನ್ನನ್ನು ಬಿಟ್ಟರೆ ಇನ್ಯಾರಿಗೂ ಶಕ್ತಿಯಿಲ್ಲವೆಂದು ಈ ಸಂದರ್ಭದಲ್ಲೇ ಹೇಳಿರುವದರಿಂದ ವಿಷ್ಣುವಿಗೆ ವಿಷ್ಣುವೇ ವಿಭೂತಿಯೆಂದೂ ಶ್ಲೋಕದಲ್ಲಿ ಹೇಳಿರುವದರಿಂದ, ತನಗೆ ತಾನೇ ನಿಯಾಮ್ಯನಾಗಿ ಪರಿಣಮಿಸಿದ ಹಾಗಾಯಿತು ಎಂದು ತೋರಿಬರುವದರಿಂದ **ವಿಭೂತಿ** ಶಬ್ದವು ಈ

---

(೧) ವಿ. ಪು. ೧-೨೨-೩೧. (೨) ವಿ. ಪು. ೧-೨೨-೩೩.

ಬ್ರಹ್ಮರುದ್ರಯೋಃ ಭಗವಚ್ಛರೀರತ್ವಂ

ಇಪ್ಪಡಿ ವಸ್ತ್ವನ್ತರಜ್ಞಳ್‌ಪೋಲೆ ಇವರ್ಗಳುಮ್ ಸರ್ವ ಶರೀರಿಯಾನ ಸರ್ವೇಶ್ವರನುಕ್ಕು ಪ್ರಕಾರಭೂತರೆನ್ನುಮಿಡಂ, ವಸ್ತ್ವನ್ತರಜ್ಞಳುಕ್ಕುಮ್ ಇವರ್‌ಗಳುಕ್ಕುಮ್ ಶೇರ ನಾರಾಯಣಾದಿ ಶಬ್ದ ಸಾಮಾನಾಧಿಕರಣ್ಯತ್ತಾಲೇ ಸಿದ್ಧಂ.

ಸಂದರ್ಭದಲ್ಲಿ ಮಾತ್ರ ಔಪಚಾರಿಕವಾಗಿ ಉಪಯೋಗಿಸಲ್ಪಟ್ಟಿದೆ ಎಂದು ಭಾವಿಸಬಹುದು. ವಿಷ್ಣುವಿನ ವಿಷಯದಲ್ಲಿ ವಿಭೂತಿ ಶಬ್ದವು ಔಪಚಾರಿಕವಾದರೆ, ಬ್ರಹ್ಮರುದ್ರರ ವಿಷಯದಲ್ಲೂ ಸಹ ಏಕೆ ಔಪಚಾರಿಕವಾಗಕೂಡದೆಂಬ ಆಕ್ಷೇಪ ಬಂದೀತೆಂದು ಭಾವಿಸಿ, ಮುಂದಿನ ವಾಕ್ಯದಿಂದ ಸಮಾಧಾನ ಹೇಳುತ್ತಾರೆ. ಸಮಾಧಾನ ಹೇಗೆಂದರೆ:—ಬ್ರಹ್ಮರುದ್ರರೂ ಶ್ರೀಮನ್ನಾರಾಯಣ ಶರೀರವಾದುದರಿಂದ, ಬ್ರಹ್ಮರುದ್ರಶಬ್ದಗಳು ತತ್ತಚ್ಛರೀರಕ ಪರಮಾತ್ಮನನ್ನು ಬೋಧಿಸುವದರಿಂದ "**ಬ್ರಹ್ಮಾ ನಾರಾಯಣಃ**" "**ಶಿವಶ್ಚ ನಾರಾಯಣಃ**" ಎಂದೂ, "**ಸ ಬ್ರಹ್ಮಾ ಸ ಶಿವಃ**" ಎಂಬ ಸಾಮಾನಾಧಿಕರಣ್ಯ ಪ್ರಯೋಗಗಳುಂಟು "**ವಿಷ್ಣುಶ್ಚ ನಾರಾಯಣಃ**" ಎಂಬ ಪ್ರಯೋಗವಿಲ್ಲವು. ಏತರಿಂದೆಂದರೆ, "**ಕುಂಭಃ ಘಟಃ**" ಎಂಬ ಪದಗಳಿಗೆ ಸಮಾನಾಧಿಕರಣ್ಯ ಪ್ರಯೋಗವಿಲ್ಲವು, ಅವುಗಳು ಪರ್ಯಾಯ ಪದಗಳು. ಹಾಗೆಯೇ ವಿಷ್ಣುವೇ ನಾರಾಯಣನಾದುದರಿಂದ ಸಾಮಾನಾಧಿಕರಣ್ಯವು ಕೂಡುವದಿಲ್ಲವು. ಎರಡು ಪದಾರ್ಥಗಳು ಭಿನ್ನಾರ್ಥವುಳ್ಳವುಗಳಾಗಿ ಒಂದರಲ್ಲೇ ಅನ್ವಯಿಸಲು ಸಾಧ್ಯವಾದರೆ ಆಗ ಸಾಮಾನಾಧಿಕರಣ್ಯವು ಸರಿಹೋಗುತ್ತದೆ.

ಹೀಗೆ ಚತುರ್ಮುಖನೂ ರುದ್ರನೂ ಸಹ ಭಗವನ್ತನಿಗೆ ವಿಭೂತಿ ಎಂದೂ, **ಇತ್ಯಾದಿಗಳಿಲೇ** - ಇಂತಹ ಪ್ರಮಾಣಗಳಲ್ಲಿ, **ಮತ್ತುಳ್ಳಾರೋಡು** - ಇನ್ನೂ ಇತರರೊಂದಿಗೆ ಎಂದರೆ ದಕ್ಷ, ಕಾಲ, ಅನ್ತಕ, ಅಖಿಲ ಜನ್ತುಗಳು, ಇವರೊಂದಿಗೆ, **ತುಲ್ಯಮಾಕ** - ಸಮಾನ ವಿಭೂತಿಗಳಾಗಿ, **ಚೊಲ್ಲಪಟ್ಟದು** - ಶ್ರೀ ಪರಾಶರರಿಂದ ಹೇಳಲ್ಪಟ್ಟಿತು.

ಬ್ರಹ್ಮರುದ್ರರು ಸರ್ವೇಶ್ವರನಿಗೆ ಶರೀರವು.

ಇಪ್ಪಡಿ - ಈ ವಿಭೂತಿರೂಪದಲ್ಲಿ, **ವಸ್ತ್ವನ್ತರಜ್ಞಳ್‌ಪೋಲೆ** - ಬೇರೆ ಇತರ ವಸ್ತುಗಳ ಹಾಗೆ, **ಇವರ್‌ಗಳುಮ್** - ಈ ಬ್ರಹ್ಮರುದ್ರರೂ **ಸರ್ವಶರೀರಿಯಾನ** - ಸಮಸ್ತವನ್ನೂ ಶರೀರವಾಗಿ ಹೊಂದಿರುವ, **ಸರ್ವೇಶ್ವರನುಕ್ಕು**-ಸರ್ವೇಶ್ವರನಿಗೆ, **ಪ್ರಕಾರಭೂತರ್** - ಕಾರ್ಯರೂಪರಾಗಿ ಅಪೃಥಕ್ಸಿದ್ಧ ವಿಶೇಷಭೂತರಾ

ದುದರಿಂದ ಪ್ರಕಾರಭೂತರು, **ಎನ್ನುಮಿಡಂ**–ಎನ್ನುವ ಸಂದರ್ಭದಲ್ಲಿ, **ವಸ್ತ್ವನ್ತರ ಜ್ಞಳುಕ್ಕುವ್** - ಬೇರೆವಸ್ತುಗಳಿಗೂ, **ಇವರ್‌ಗಳುಕ್ಕುವ್**–ಇವರುಗಳಿಗೂ, **ಶೇರ**–ಸೇರಿಸಿ, ನಾರಾಯಣ ಮೊದಲಾದ ಶಬ್ದದೊಂದಿಗೆ ಸಾಮಾನಾಧಿಕರಣ್ಯ ಪ್ರಯೋಗದಿಂದ ಸಿದ್ಧವು. (ಶ್ರೀಮನ್ನಾರಾಯಣನು, ಶರೀರಿಯಾಗಿಯೂ, ಎಲ್ಲವೂ ಆತನಿಗೆ ಶರೀರವಾಗಿಯೂ ಇರುವದರಿಂದ, ಹೀಗೆ ಚಿದಚಿತ್ತುಗಳು ಶರೀರವಾಗಿ ಆತನಿಗೆ ಅಪೃಥಕ್ಸಿದ್ಧ ವಿಶೇಷಣಗಳಾದುದರಿಂದ, ನಾರಾಯಣನು ಪ್ರಕಾರಿಯು, ಮಿಕ್ಕೆದ್ದೆಲ್ಲವೂ ಪ್ರಕಾರವು. ಅಂತಹ ಸಂದರ್ಭದಲ್ಲಿ ಸಾಮಾನಾಧಿಕರಣ್ಯವು ಕೂಡುತ್ತದೆ. ಶರೀರವಾಚಕಶಬ್ದಗಳು ಶರೀರಿಯನ್ನು ಬೋಧಿಸುತ್ತವೆ. ಆದುದರಿಂದ ಎಲ್ಲಾ ಶಬ್ದಗಳೂ ತತ್ತ ಚ್ಛರೀರಕ ಪರಮಾತ್ಮನನ್ನು ಬೋಧಿಸುತ್ತವೆ. ಹಾಗೆ ಬ್ರಹ್ಮರುದ್ರರೂ ಇತರ ಎಲ್ಲಾಪದಾರ್ಥಗಳ ಹಾಗೂ ನಾರಾಯಣನಿಗೆ ಶರೀರವಾದುದರಿಂದಲೇ ಬ್ರಹ್ಮರುದ್ರರೂ ಸಾಮಾನಾಧಿಕರಣ್ಯದಿಂದ ನಾರಾಯಣಶಬ್ದದಿಂದ ಹೇಳಲ್ಪಡುವರು. "**ಬ್ರಹ್ಮಾ ನಾರಾಯಣಃ ಶಿವಶ್ಚ ನಾರಾಯಣಃ ಶಕ್ರಶ್ಚ ನಾರಾಯಣಃ**" "**ವಿಶ್ವಂನಾರಾಯಣಂದೇವಂ**" "**ವಿಶ್ವಮೇವೇದ ಪುರುಷಃ**" "**ಸಬ್ರಹ್ಮಾ ಸಶಿವಸ್ಸೇನ್ದ್ರಃ**" ಇತ್ಯಾದಿ ಶ್ರುತಿಪ್ರಯೋಗಗಳಿವೆ. ಹಾಗೆಯೇ ವಿಷ್ಣುಪುರಾಣದಲ್ಲೂ (೨. ೧೨. ೩೮)

"**ಜ್ಯೋತೀಂಷಿ ವಿಷ್ಣುರ್ಭುವನಾನಿ ।**
ವಿಷ್ಣುರ್ವನಾನಿ ವಿಷ್ಣುರ್ಗಿರಯೋದಿಶಶ್ಚ ॥
ನದ್ಯ ಸ್ಸಮುದ್ರಾಶ್ಚ ಸ ಏವ ಸರ್ವಂ ।
ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ॥"

ಎಂಬ ಶ್ಲೋಕದಲ್ಲಿ ಇದು ಉಪಪಾದಿಸಲ್ಪಟ್ಟಿರುತ್ತದೆ.

ಹಿಂದಿನ ಶ್ಲೋಕದಲ್ಲಿ **ಯದವ್ಯಕ್ತಂ ವೈಷ್ಣವಃಕಾಯಃ** ಎಂಬುವ ಪ್ರಯೋಗವಿರುವದರಿಂದ ಸಮಸ್ತವೂ ವಿಷ್ಣುವಿಗೆ ಶರೀರವೆಂದೂ, ವಿಷ್ಣುವು ಎಲ್ಲಕ್ಕೂ ಆತ್ಮಾವಾದುದರಿಂದ ಎಲ್ಲವೂ ವಿಷ್ಣುವೇ ಎಂದು ಸಾಮಾನಾಧಿಕರಣ್ಯದಿಂದ ಈ ಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆ. ಜ್ಯೋತಿಸ್ಸುಗಳೂ, ಲೋಕಗಳೂ, ವನಗಳೂ, ಗಿರಿಗಳೂ, ದಿಕ್ಕುಗಳೂ, ನದಿಗಳೂ, ಸಮುದ್ರಗಳೂ, ಪರಿಣಾಮವಿಲ್ಲದುದರಿಂದ ಅಸ್ತಿ ಶಬ್ದವಾಚ್ಯವಾದ ಎಲ್ಲಾ ಚೇತನವರ್ಗವೂ, ಯಾವಾಗಲೂ ಪರಿಣಾಮ ಉಳ್ಳದ್ದಾದುದರಿಂದ ನಾಸ್ತಿ ಶಬ್ದವಾಚ್ಯವಾದ ಸಮಸ್ತ ಅಚಿದ್ವರ್ಗವೂ ಕೂಡ ಶ್ರೀಮಹಾವಿಷ್ಣುವೇ ಸರಿ ಎಂಬುವದು ಈ ಶ್ಲೋಕಾಭಿಪ್ರಾಯವು. ಹಾಗಾದರೆ ಈ ಬ್ರಹ್ಮರುದ್ರರು ನಾರಾಯಣನಿಗೆ ಶರೀರವೆಂದೂ, ನಾರಾಯಣನು ಇವರಿಗೆ ಆತ್ಮಾವೆಂದೂ ಹೇಳಲು ಪ್ರಮಾಣವಿದೆಯೋ ಎಂದರೆ ಉಂಟೆಂದು ಮುಂದೆ ಉದಾಹರಿಸಿರುತ್ತಾರೆ.

ಇವರ್ಗಳ್ ಶರೀರಮಾಯವನಾತ್ಮಾವಾಯಿರುಕ್ಕಿರಪಡಿಯೈ,
(೧) "ತವಾನ್ತರಾತ್ಮಾ ಮಮಚ ಯೇಚಾನ್ಯೇ ದೇಹಿ ಸಂಜ್ಞಿತಾಃ
ಸರ್ವೇಷಾಂ ಸಾಕ್ಷಿಭೂತೋ ಸೌ ನಗ್ರಾಹ್ಯಃ ಕೇನಚಿತ್ಕ್ವಚಿತ್"
ಎನ್ರು ಬ್ರಹ್ಮಾರುದ್ರನೈಕ್ಕುರಿತ್ತುಚ್ಚೊನ್ನಾರ್.

ಇವರ್ಗಳ್-ಈ ಚತುರ್ಮುಖಬ್ರಹ್ಮರುದ್ರರು, ಶ್ರೀಮನ್ನಾರಾಯಣನಿಗೆ, **ಶರೀರಮಾಯ್**-ಶರೀರವಾಗಿಯೂ, **ಅವನ್**-ಆ ಶ್ರೀಮನ್ನಾರಾಯಣನು, ಇವರುಗಳಿಗೆ, **ಆತ್ಮಾವಾಯಿರುಕ್ಕಿರಪಡಿಯೈ**-ಆತ್ಮವಾಗಿರುವ ವಿಧಾನವನ್ನು,"**ತವ**-ನಿನಗೂ, **ಮಮಚ**-ನನಗೂ, ಸಹ,ಮತ್ತು **ಯೇ ಅನ್ಯೇ**-ಮಿಕ್ಕ ಇನ್ಯಾರು, **ದೇಹಿಸಂಜ್ಞಿತಾಃ**-ದೇಹಗಳನ್ನು ಹೊಂದಿ ಪ್ರಾಣಿಗಳೆಂದು ಹೇಳಿಸಿಕೊಂಡಿರುವವರೋ ಅಂತಹ **ಸರ್ವೇಷಾಂ**-ಎಲ್ಲರಿಗೂ ಸಹ, **ಅಸೌ**-ಈ ನಾರಾಯಣನು, ಶ್ರಿಯಃಪತಿಯು, **ಅನ್ತರಾತ್ಮಾ**-ಅನ್ತರಾತ್ಮನು; ಮತ್ತು ಹಾಗೆಯೇ, **ಸರ್ವೇಷಾಂ**-ಎಲ್ಲರಿಗೂಸಹ, **ಸಾಕ್ಷಿಭೂತಃ**-ಸಾಕ್ಷಿಭೂತನು, ಹಾಗಾದರೂ **ಕೇನಚಿತ್**-ಯಾರಿಂದಲೇ ಆಗಲಿ, **ಕ್ವಚಿತ್**-ಎಲ್ಲಿಯೇ ಆಗಲಿ, **ನಗ್ರಾಹ್ಯಃ**-ತಿಳಿಯತಕ್ಕವನಲ್ಲವು," **ಎನ್ರುಬ್ರಹ್ಮಾರುದ್ರನೈಕುರಿತ್ತುಚ್ಚೆನ್ನಾರ್**-ಎಂದು ಚತುರ್ಮುಖಬ್ರಹ್ಮನು ರುದ್ರನನ್ನು ಕುರಿತು ಹೇಳಿದನು. ಇದು ವೈಶಂಪಾಯನರು ಜನಮೇಜಯರಾಯನಿಗೆ ಉಪದೇಶಿಸುವ ಚತುರ್ಮುಖರುದ್ರರ ಸಂವಾದವು. ಇದರಲ್ಲಿ ಪರಮ ಪುರುಷನ ಸ್ವರೂಪವನ್ನೂ ಆತನ ಮಹಿಮೆಯನ್ನೂ ಚತುರ್ಮುಖನು ರುದ್ರನಿಗೆ ಉಪದೇಶಿಸುವನು. ಸರ್ವೇಶ್ವರನನ್ನು **ಪುರುಷ** ಶಬ್ದವಾಚ್ಯನೆಂದು ಹೇಳಿ, ಆತನು ಎಲ್ಲಾದಕ್ಕೂ **ಎಲ್ಲಾ** ಚೇತನರಿಗೂ ಸಹ ಅಂತರಾತ್ಮನೆಂದು ಬೋಧಿಸಿ, **ಅಸೌ** ಎಂದು ಈ ಶ್ಲೋಕದಲ್ಲಿ ಹೇಳಲ್ಪಟ್ಟವನು ಯಾರೆಂದರೆ, ಮುಂದೆ ೧೪ನೇ ಶ್ಲೋಕದಲ್ಲಿ **"ಸಹಿನಾರಾಯಣೋ ಜ್ಞೇಯಃ ಸರ್ವಾತ್ಮಾ ಪುರುಷೋ ಹಿ ಸಃ"** ಶ್ರೀಮನ್ನಾರಾಯಣನೇ ಎಂದು ಹೇಳುತ್ತಾರೆ. ಇದೇ ಪುರುಷಸೂಕ್ತದ ಅಭಿಪ್ರಾಯವು. ಅಲ್ಲಿ **ಸಹಸ್ರಶೀರ್ಷಾ ಪುರುಷಃ** ಎಂದು ಪ್ರಾರಂಭಿಸಿ, ಪುರುಷಶಬ್ದದಿಂದ ಹೇಳಲ್ಪಟ್ಟ ಪರಮಾತ್ಮನು ಯಾರೆಂದರೆ **ನಾರಾಯಣಃಪರಂಬ್ರಹ್ಮ, ಆತ್ಮಾನಾರಾಯಣಃಪರಃ** ಎಂದು ಶ್ರುತಿಯೂ ಹೇಳುತ್ತದೆ.ಆದಕಾರಣ ಸರ್ವರಿಗೂ ಆತ್ಮಾವಾಗಿರುವವನು ನಾರಾಯಣನೇ ಎಂದು ಹೇಳಿರುದರಿಂದ ಬ್ರಹ್ಮರುದ್ರರಿಗೂ ಸಹ ನಾರಾಯಣನೇ ಆತ್ಮನು ಎಂಬ ಅಭಿಪ್ರಾಯವು.

ಭಾರತ, ಶಾನ್ತಿ. ೩೬೧-೪

ಬ್ರಹ್ಮರುದ್ರಯೋಃ ಶ್ರೀಮನ್ನಾರಾಯಣ ಶೇಷತ್ವಂ

ಇವರ್‌ಗಳ್ ಶೇಷಭೂತರ್, ಅರ್ಥ ಶೇಷಿ ಎನ್ನುವಿಡತ್ತೈ,

"ದಾಸಭೂತಾಸ್ಸ್ವತೆಸ್ಸ ರ್ವೇ ಹ್ಯಾತ್ಮಾನಃ ಪರಮಾತ್ಮನಃ।
ಅತೋಹಮಪಿತೇ ದಾಸ ಇತಿ ಮತ್ವಾ ನಮಾಮ್ಯಹಂ॥"

ಎನ್ರು ಮನ್ತ್ರರಾಜ ಪದಸ್ತೋತ್ರತ್ತಿಲೇ ಸರ್ವಜ್ಞನಾನ ರುದ್ರ ತಾನೇ ಶೊನ್ನಾರ್.

ಚತುರ್ಮುಖರುದ್ರರು ನಾರಾಯಣನಿಗೆ ಶೇಷಭೂತರು, ದಾಸರು.

ಇವರ್‌ಗಳ್ ಶೇಷಭೂತರ್–ಈಬ್ರಹ್ಮರುದ್ರರು ಶೇಷಭೂತರು ಶ್ರಿಯಃಪತಿಯು ಶೇಷಿ, **ಎನ್ನುವಿಡತ್ತೈ**–ಎನ್ನುವ ಸ್ಥಳದಲ್ಲಿ, ಸಂದರ್ಭದಲ್ಲಿ, ಎಂದರೆ **ಎಂಬ** ಪ್ರಮಾಣಕ್ಕಾಗಿ, **ಸರ್ವೇಅತ್ಮಾನಃ**-ಸಮಸ್ತ ಜೀವಾತನರೂ, **ಪರಮಾತ್ಮನಃ**-ಪರಮಾತ್ಮನಿಗೆ, **ಸ್ವತೆಃ**–ತಾವಾಗಿಯೇ, ಅಂದರೆ ಸ್ವಭಾವತಃ, **ದಾಸಭೂತಾಃ**-ದಾಸಭೂತರು, **ಅತಃ**-ಆದುದರಿಂದ, **ಅಹಮಪಿ**-ನಾನೂ ಕೂಡ, **ತೇದಾಸಃ**–ನಿನಗೆ ದಾಸನು, **ಇತಿಮತ್ವಾ**–ಹೀಗೆ ತಿಳಿದು, **ನಮಾಮ್ಯಹಂ**-ನಮಸ್ಕರಿಸುವೆನು'ಎಂದ ಮನ್ತ್ರರಾಜಪದಸ್ತೋತ್ರದಲ್ಲಿ ಸರ್ವಜ್ಞನಾದರುದ್ರನೇ, **ತಾನೇಶೊನ್ನಾರ್**-ತಾನೇ ಹೇಳಿದನು.

ಇವರುಗಳು **ಶೇಷಭೂತರೆನ್ನುವುದಕ್ಕೆ** ಮಂತ್ರರಾಜಪದಸ್ತೋತ್ರ ಪ್ರಮಾಣವನ್ನು ಉದಾಹರಿಸಿರುವದು, ಭಾರತವಾಕ್ಯಕ್ಕೆ ಇತರರು ಅಸೂಯೆಯಿಂದ ಪ್ರಾಮುಖ್ಯತೆಯನ್ನು ಒಂದು ವೇಳೆ ಕೊಡದೇ ಹೋದರೂ, ಮಂತ್ರರಾಜವೆನಿಸಿ ಮಹಿಮೆ ಹೊಂದಿದ ಶ್ರೀನೃಸಿಂಹಾನುಷ್ಟುಪ್ ಮಂತ್ರದ ಪದ ವ್ಯಾಖ್ಯಾನ ರೂಪವಾದ ಈಶ್ವರಸಂಹಿತೆಯಲ್ಲಿರುವ ಸ್ತೋತ್ರವಾಗಿ, ಆ ಸಂಹಿತೆಯು ಶಾಂಕರಾದಿ ಮತಾಂತರದವರಿಗೂ ಸಹ ಪರಿಗೃಹೀತವಾದುದರಿಂದ, ಪ್ರತಿಕಕ್ಷಿಯವರಿಗೆ ಇಷ್ಟವಾದ ಶಾಸ್ತ್ರ ಪ್ರಮಾಣವಾಗಿ ತಮಗೆ ಬಲವಾದ ಸಾಧಕವೆಂಬ ಅಭಿಪ್ರಾಯದಿಂದ ಎಂಬದಾಗಿ ತಿಳಿಯುವದು. ಇದೂ ಅಲ್ಲವೇ ರುದ್ರನೇ ಪರತತ್ವವೆಂದು ಸಾಧಿಸಬೇಕೆಂದಿರುವವರಿಗೆ ರುದ್ರನು ತಾನೇ ಪರಮಾತ್ಮನಿಗೆ ದಾಸನು ಎಂದು ಹೇಳಿಕೊಳ್ಳುವದರಿಂದ ಇನ್ನೂ ಪ್ರಬಲತರವಾದ ಪ್ರಮಾಣವೆಂಬ ಭಾವನೆಯು. ಆದುದರಿಂದ **ತಾನೇ ಶೊನ್ನಾರ್** ಎಂದು ಹೇಳಿರುತ್ತಾರೆ. ಹಾಗೆ ಹೇಳಿಕೊಂಡವನು ಮಹಾಪ್ರಜ್ಞಾಶಾಲಿಯು, ಸಾಮಾನ್ಯನಲ್ಲವು ಎಂದು ತಿಳಿಸುವದಕ್ಕಾಗಿ **ಸರ್ವಜ್ಞನಾನ ರುದ್ರ** ಎಂಬ ಪ್ರಯೋಗವು.

ನಾರಾಯಣಸ್ಯ ನಿಸ್ಸಮಾಭ್ಯಧಿಕತ್ವವರ್ಣನಮ್

ಇಪ್ಪಡಿ ಸರ್ವಪ್ರಕಾರತ್ತಾಲುಮ್ ನಾರಾಯಣ‌ಃ ಸಮಾಧಿಕದರಿದ್ರನೆನ್ನುಮಿಡತ್ತೈ

ಶ್ರೀಯಃಪತಿಯು ನಿಸ್ಸಮಾಭ್ಯಧಿಕನು.

(ಹಿಂದೆ ಚತುರ್ಮುಖಬ್ರಹ್ಮರುದ್ರರೂ ಶ್ರೀಮನ್ನಾರಾಯಣನ ಕಾರ್ಯಭೂತರೆಂದೂ, ಅವರಿಗೆ ಕರ್ಮವಶ್ಯತೆಯುಂಟೆಂದೂ, ಅವರು ಭಗವನ್ಮಾಯಾ ಪರತಂತರೆಂದೂ, ಅವರಿಗೆ ದಿವ್ಯಮಙ್ಗಳವಿಗ್ರಹವಿಲ್ಲವೆಂದೂ, ಭಗವನ್ತನನ್ನು ಆಶ್ರಯಿಸಿರುವರೆಂದೂ, ಭಗವದ್ವಿಭೂತಿಗೆ ಸೇರಿದವರೆಂದೂ, ಭಗವಂತನಿಗೆ ಶರೀರಭೂತರೆಂದೂ ಹೇಳಿ, ಅದಕ್ಕೆ ವಿಪುಳವಾಗಿ ಪ್ರಮಾಣಗಳನ್ನು ಪ್ರದರ್ಶಿಸಿದರು. ಈಗ ಶ್ರೀಮನ್ನಾರಾಯಣನೇ ನಿಸ್ಸಮಾಭ್ಯಧಿಕನೆಂಬುವದಕ್ಕೆ ತುಂಬಾ ಪ್ರಮಾಣಗಳನ್ನು ಉದಾಹರಿಸುತ್ತಾರೆ.)

ಇಪ್ಪಡಿ-ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಸರ್ವ ಪ್ರಕಾರತ್ತಾಲುಂ**-ಸಮಸ್ತ ವಿಧದಿಂದಲೂ, **ನಾರಾಯಣ‌ಃ**- ಶ್ರೀಮನ್ನಾರಾಯಣನು, **ಸಮಾಧಿಕದರಿದ್ರನು** - ಸಮರೂ ಅಧಿಕರೂ ಇಲ್ಲದವನು, **ಎನ್ನುಮಿಡತ್ತೈ** – ಎನ್ನುವ ವಿಷಯದಲ್ಲಿ ಅನೇಕ ಪ್ರಮಾಣಗಳನ್ನು ಉದಾಹರಿಸಿ, **ಇತ್ಯಾದಿಗಳಿಲೇ ಪಲಪಡಿಯುಮ್ ಶೊನ್ನಾರ್ಗಳ್** – ಇವೇ ಮೊದಲಾದ ಪ್ರಮಾಣಗಳಲ್ಲ ನಾನಾ ವಿಧವಾಗಿ ವ್ಯಾಸಮಹರ್ಷಿ ಮೊದಲಾದವರುಗಳು ಹೇಳಿರುತ್ತಾರೆಂದು ಮುಂದೆ ವಾಕ್ಯಪೂರಣವಿರುತ್ತದೆ. ಇಲ್ಲಿ **ಸರ್ವಪ್ರಕಾರತ್ತಾಲುಂ** - ಎಂಬುವದಕ್ಕೆ ಸಾದೀಪಿಕಾ ವ್ಯಾಖ್ಯಾತೃವು ಸ್ವರೂಪ ರೂಪ ಗುಣ ವಿಭವೈಶ್ವರ್ಯಾದಿಗಳಿಂದ ಎಂದು ವ್ಯಾಖ್ಯಾನ ಬರೆದಿರುತ್ತಾರೆ. ಈ ಕಾರಣಗಳಿಂದ ನಿಸ್ಸಮಾಭ್ಯಧಿಕನೆಂಬ ಭಾವವು, ಸಾರಾಸ್ವಾದಿನಿಯವರು, ಜಗತ್ಕಾರಣತ್ವ, ದಿವ್ಯಮಙ್ಗಳ ವಿಗ್ರಹವಿಶಿಷ್ಟತ್ವ, ಬ್ರಹ್ಮರುದ್ರಜನಕತ್ವ, ನಿಯಮನತ್ವ, ತಚ್ಛೇಷಿತ್ವ, ತದಾಶ್ರಯಣೀಯತ್ವಾದಿಗಳು ಹೇಳಲ್ಪಟ್ಟವೆಂದು ಬರೆದಿರುತ್ತಾರೆ. ಸಾರಪ್ರಕಾಶಿಕೆಯವರು:—ಬ್ರಹ್ಮರುದ್ರರಿಗಿಂತಲೂ ನಾರಾಯಣನಿಗಿರುವ ಜಗತ್ಸೃಷ್ಟ್ಯತ್ವ,ಅಕರ್ಮವಶ್ಯತ್ವ, ಮೋಕ್ಷಪ್ರದತ್ವ, ಸರ್ವಸಮಾಶ್ರಯಣೀಯತ್ವ, ಸರ್ವಶರೀರಿತ್ವ, ಸರ್ವಶೇಷಿತ್ವಾದಿಗಳು ಸೂಚಿಸಲ್ಪಟ್ಟವೆಂದು ಹೇಳಿರುತ್ತಾರೆ, ಯಾವಾಗ **ಸರ್ವಪ್ರಕಾರತ್ತಾಲುಂ**-ಎಂದು ಸರ್ವಶಬ್ದ ಉಪಯೋಗಿಸಿರುವುದರಿಂದ ಇವೆಲ್ಲವೂ ಹೇಳಲ್ಪಟ್ಟವೆಂದೇ ಭಾವಿಸತಕ್ಕದ್ದು. ಸಾರದೀಪಿಕೆಯವರು

೧. "ನಪರಂ ಪುಂಡರೀಕಾಕ್ಷಾದ್ದೃಶ್ಯತೇ ಪುರುಷರ್ಷಭ"
೨. "ಪರಂ ಹಿ ಪುಂಡರೀಕಾಕ್ಷಾನ್ನಭೂತಂ ನ ಭವಿಷ್ಯತಿ"
೩. "ನ ವಿಷ್ಣೋಃ ಪರಮೋ ದೇವೋ ವಿದ್ಯತೇ ನೃಪಸತ್ತಮ"
೪, "ನ ವಾಸುದೇವಾತ್ಪರಮಸ್ತಿ ಮುಂಗಳಂ।

ಹೇಳಿರುವದರಲ್ಲೇ ಇವೆಲ್ಲವೂ ಅಂತರ್ಗತವು. ನಿಸ್ಸಮಾಭ್ಯಧಿಕನೆನ್ನುವದಕ್ಕೆ ಪ್ರಮಾಣಗಳು ಯಾವುವೆಂದರೆ:—

೧. ಭಾರತ, ಭೀಷ್ಮ.೬೭. ೨. **ಹೇಪುರುಷರ್ಷಭ**-ಓ ಪುರುಷಶ್ರೇಷ್ಠನಾದ ದುರ್ಯೋಧನನೆ, **ಪುಂಡರೀಕಾಕ್ಷಾತ್**-ಕಮಲದೋಪಾದಿಯಲ್ಲಿ ಮಾರ್ದವ ಶೈತ್ಯ ಗಳಿಂದ ಯುಕ್ತವಾಗಿರುವ ದಯಾರ್ದ್ರಹೃದಯವನ್ನು ತೋರಿಸುವ ಕಣ್ಣುಗಳುಳ್ಳ ವಾಸುದೇವನಿಗಿಂತ, **ನಪರಂದೃಶ್ಯತೇ**-ಅಧಿಕವಾದುದು ಯಾವುದೂಕಾಣುವುದಿಲ್ಲ ವೆಂದು ಭೀಷ್ಮರು ಹೇಳುತ್ತಾರೆ. ಪ್ರಕರಣವೇನೆಂದರೆ ದುರ್ಯೋಧನನು ವಾಸು ದೇವಮಾಹಾತ್ಮ್ಯವನ್ನು ಕುರಿತು ಭೀಷ್ಮರನ್ನುಪ್ರಶ್ನಿಸಲು, ಭೀಷ್ಮರು ಆತನ ಮಾಹಾ ತ್ಮ್ಯೆಯನ್ನು ತಿಳಿಸಿದವರಾಗಿ ಆ ಅವತಾರರೂಪನೇಕೃಷ್ಣನು, **"ಕೃಷ್ಣೋಯಸ್ಯ ಪ್ರಸೀದೇತ ಲೋಕಾಸ್ತೇನಾಕ್ಷಯಾಜಿತಾಃ**" ಎಂದು ಹೇಳಿ, ಯುಧಿಷ್ಠಿರನು ಕೃಷ್ಣನನ್ನಾಶ್ರಯಿಸಿರುವದರಿಂದ ಆತನಿಗೆ ಜಯ ಉಂಟು ಎಂದು ತಿಳಿಸುವರು.

೨. ಭಾರ. ಭೀಷ್ಮ. ೬೭. ೧೭ ಈ ಶ್ಲೋಕವೂ ಅದೇ ಪ್ರಕರಣದಲ್ಲೇ ಅದೇ ಅಧ್ಯಾಯದಲ್ಲೇ ಹೇಳಲ್ಪಟ್ಟಿರುತ್ತದೆ. ಅಭಿಪ್ರಾಯವೂ ಮೇಲಿನ ಶ್ಲೋಕದ ಹಾಗೆಯೇ. **ಹಿ**-ಯಾವಕಾರಣದಿಂದ **ಪುಂಡರೀಕಾತ್**-ಕಮಲಾಕ್ಷನಾದ ಶ್ರೀ ಹರಿಗಿಂತಲೂ **ಪರಂ**-ಉತ್ಕೃಷ್ಟವಾದ ವಸ್ತುವು, **ನಭೂತಂ**-ಹಿಂದೆ ಇದ್ದು ದಿಲ್ಲವೋ, **ನಭವಿಷ್ಯತಿ**-ಮುಂದಕ್ಕೂ ಇಲ್ಲವೋ, ಎಂಬರ್ಥವು, ಈ ಶ್ಲೋಕದ ಉತ್ತರಾರ್ಧವು:—**ಮುಖತಃಸೋಸೃಜದ್ವಿಪ್ರಾನ್ ಬಾಹುಭ್ಯಾಂ ಕ್ಷತ್ರಿಯಾಂಸ್ತಥಾ** ಎಂದು ಹೇಳಿ ಪುರುಷಸೂಕ್ತದಲ್ಲಿ ಹೇಳಿರುವ ಪರಮಪುರುಷನೇ ಕೃಷ್ಣಾದ್ಯನೇಕವತಾರಗಳನ್ನೂ ಎತ್ತುವವನೂ, ಕೇಶವಾದಿ ನಾಮಗಳಿಂದಲೂ ಹೇಳ ಲ್ಪಡುವವನು ಎಂದು ಭೀಷ್ಮರು ದುರ್ಯೋಧನನಿಗೆ ಹೇಳುತ್ತಾರೆ. ಮಹಾ ಮೂಢ ನಿಗೆ ಎಷ್ಟು ಉಪದೇಶಿಸಿದರೆ ತಾನೇ ಏನು ಫಲವು? ದುರ್ಯೋಧನನು ಕಡೆಗೂ ದುರ್ಯೋಧನನೇ.

೩. **ವಿಷ್ಣೋಃ**-ವಿಷ್ಣುವಿಗಿಂತಲೂ, **ಪರಮೋದೇವಃ**-ಉತ್ಕೃಷ್ಟನಾದ ದೇವನು, **ಹೇನೃಪಸತ್ತಮ**-ಓರಾಜನೇ, **ನವಿದ್ಯತೇ**-ಇರುವದಿಲ್ಲವು, ಇದರಿಂದ ವಿಷ್ಣುವೇ ಎಲ್ಲರಿಗಿಂತ ಅಧಿಕನೆಂದು ಹೇಳಲ್ಪಟ್ಟಿತು.

೪. **ವಾಸುದೇವಾತ್** – ಶ್ರೀವಾಸುದೇವನಿಗಿಂತಲೂ, **ಪರಂ**-ಉತ್ಕೃಷ್ಟ

ನ ವಾಸುದೇವಾತ್ಪರಮಸ್ತಿ ಪಾವನಂ॥
ನ ವಾಸುದೇವಾತ್ಪರಮಸ್ತಿ ದೈವತಂ ।
ನ ವಾಸುದೇವಂ ಪ್ರಣಿಪತ್ಯ ಸೀದತಿ॥"

೫, "**ತ್ರೈಲೋಕ್ಯೇ ತಾದೃಶಃ ಕಶ್ಚಿನ್ನ ಜಾತೋ ನ ಜನಯಿಷ್ಯತೇ**"
೬. "**ನ ದೈವಂ ಕೇಶವಾತ್ಪರಂ**"

ವಾದ, **ಮಂಜ್ಗಳಂ**-ಶುಭಕರವಾದ ವಸ್ತು ಅಂದರೆ ಶ್ರೇಯಸ್ಸನ್ನುಂಟುಮಾಡುವ ವಸ್ತುವು, **ನಾಸ್ತಿ**-ಇಲ್ಲವು. ಎಂದರೆ ಈತನೇ ಸರ್ವೋತ್ಕೃಷ್ಟವಾದ ಶ್ರೇಯಃ ಪದವು. **ವಾಸುದೇವಾತ್ಪರಂ, ಪಾವನಂ** - ಪವಿತ್ರವಾದುದು ಎಂದರೆ ಅನಿಷ ನಿವರ್ತಕ ವಸ್ತುವು, **ನಾಸ್ತಿ** - ಇಲ್ಲವು. ಹಾಗೆಯೇ, ವಾಸುದೇವನಗಿಂತಲೂ ಶ್ರೇಷ್ಠವಾದ **ದೈವತಂ** - ದೇವನು, ಈಶ್ವರನು, **ನಾಸ್ತಿ** - ಇಲ್ಲವು. ಆದುದರಿಂದ ಶ್ರೀ ವಾಸುದೇವನೇ ಪರದೇವತೆಯು ಎಂಬರ್ಥವು. **ವಾಸುದೇವಂ ಪ್ರಣಿಪತ್ಯ** ಶ್ರೀವಾಸುದೇವನನ್ನು ನಮಸ್ಕರಿಸಿ, ಆಶ್ರಯಿಸಿ, **ನಸೀದತಿ** - ಯಾರೊಬ್ಬರೂ ದುಃಖಿಸುವುದಿಲ್ಲ.

೫. **ತ್ರೈಲೋಕ್ಯೇ** - ಮೂರು ಲೋಕದಲ್ಲಿಯೂ, **ತಾದೃಶಃ** - ಆತನಿಗೆ (ವಿಷ್ಣುನಿಗೆ) ಸಮಾನನು, **ಕಶ್ಚಿತ್** - ಯಾರೊಬ್ಬನೂ, **ನಜಾತಃ**-ಹಿಂದೆ ಹುಟ್ಟಿದಿದೂ ಇಲ್ಲವು, **ನಜನಯಿಷ್ಯತಿ** - ಮುಂದಕ್ಕೆ ಹುಟ್ಟುವದೂ ಇಲ್ಲವು. ವಿಷ್ಣುವಿಗೆ ಸಮಾನರಾದವರು ಯಾರೂ ಇಲ್ಲವೆಂದು ಹೇಳಲ್ಪಟ್ಟಿತು. (೪) ನೇದರಲ್ಲಿ ಆತನಿಗಿಂತ ಅಧಿಕನಿಲ್ಲವೆಂದು ಹೇಳಲ್ಪಟ್ಟಿತು. ಆದುದರಿಂದಲೇ ವಿಷ್ಣುವೇ ನಿಸ್ಸಮಾಭ್ಯಧಿಕನು ಎಂದು ಹೇಳಿದಂತಾಯಿತು.

೬. **ಕೇಶವಾತ್ಪರಂ** - ಶ್ರೀ ಕೇಶವನಾಮನಾದ ಶ್ರೀಮನ್ನಾರಾಯಣನಿಗಿಂತಲೂ, **ಪರಂದೈವಂ** - ಉತ್ಕೃಷ್ಟನಾದ ದೇವನು, **ನ**- ಇಲ್ಲವು.

ಅಲೋಡ್ಯಸರ್ವಶಾಸ್ತ್ರಾಣಿ ವಿಚಾರ್ಯಚ ಪುನಃಪುನಃ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣೋ ಹರಿಃ ।
ವೇದಶಾಸ್ತ್ರಾತ್ಪರಂ ನಾಸ್ತಿ ನದೈವಂ ಕೇಶವಾತ್ಪರಂ ॥

ಎಂಬುನದು ಪೂರಾ ಶ್ಲೋಕವು **ಕೇಶವಶಬ್ದಕ್ಕೆ** ಅರ್ಥ ಹೇಗೆಂದರೆ:—

ಕ ಇತಿ ಬ್ರಹ್ಮಣೋ ನಾಮ ಈಶೋಹಂ ಸರ್ವದೇಹಿನಾಂ ।
ಆವಾಂ ತ್ವದಜ್ಞೀ ಸಂಭೂತೌ ತಸ್ಮಾತ್ಕೇಶವನಾಮವಾ॥

ಇದು ರುದ್ರವಾಕ್ಯವು. **ಕಃ** ಎಂದರೆ ಚತುರ್ಮುಖಬ್ರಹ್ಮನಿಗೆ ಹೆಸರು, **ಸರ್ವದೇಹಿ**

೭- ರಾಜಾಧಿರಾಜಸ್ಸರ್ವೇಷಾಂ ವಿಷ್ಣುರ್ಬ್ರಹ್ಮಮಯೋಽಮಹಾ।
ಈಶ್ವರಂ ತಂ ವಿಜಾನೀಮಸ್ಸಪಿತಾ ಸಪ್ರಜಾಪತಿಃ"
ಇತ್ಯಾದಿಗಳಾಲೆ ಪಲಪಡಿಯುಮ್ ಶೊನ್ನಾರ್‌ಗಳ್.

ಜನನ ಕಾಲತ್ತಿಲ್, ಭಗವತ್ಕಟಾಕ್ಷಂ ಮೋಕ್ಷಸಾಧಕಂ,
ಬ್ರಹ್ಮರುದ್ರ ಕಟಾಕ್ಷಂ ಬನ್ಧನತ್ತಿರ್ಕ್ಕು ಕಾರಣಂ.

ಕರುವಿಲೇ ತಿರುವುಡೈಯಾರ್‌ಗಳಾಯ್ ಜಾಯುವಾನ ದಶೈಯಿಲೇ

ನಾಂ - ಸಮಸ್ತ ಪ್ರಾಣಿಗಳಿಗೂ, **ಅಹಂ**- ನಾನು, **ಈಶಃ** - ಈಶನು ಆದರಿಂದ ನನಗೆ ಈಶನೆಂದು ಹೆಸರು. **ಆವಾಂ**- ನಾವಿಬ್ಬರೂ, **ತ್ವದಙ್ಗೇ**-ನಿನ್ನ ಶರೀರದಲ್ಲಿ, **ಸಂಭೂತೌ** - ಹುಟ್ಟಿದವರು. **ತಸ್ಮಾತ್**- ಆ ಕಾರಣದಿಂದ, ನೀನು, **ಕೇಶವನಾಮವಾ** - ಕೇಶವನೆಂಬ ಹೆಸರನ್ನು ಹೊಂದಿದ್ದೀಯೆ.

7. ಭಾರತ, ಆಶಂ ೪೩. ೧೩. **ವಿಷ್ಣುಃ** - ವಿಷ್ಣುವು, **ಸರ್ವೇಷಾಂ** - ಸಮಸ್ತರಿಗೂ, **ರಾಜಾಧಿರಾಜಃ**- ಲೋಕಾಧಿಪರೆನಿಸಿ ರಾಜರಾದ ಬ್ರಹ್ಮರುದ್ರರಿಗೂ **ಅಧಿರಾಜಃ** - ಚಕ್ರವರ್ತಿಯು, **ಬ್ರಹ್ಮಮಯಃ** - ಸ್ವಾರ್ಥವಮಯಟ್, ಪರಬ್ರಹ್ಮಸ್ವರೂಪನು, **ಮಹಾ** - ಸರ್ವಶ್ರೇಷ್ಠನು. ಆದುದರಿಂದಲೇ, **ತಂ** - ಆತನನ್ನು **ಈಶ್ವರಂ** - ಲೋಕಕ್ಕೆಲ್ಲಾ ನಾಥನನ್ನಾಗಿ, **ವಿಜಾನೀಮಃ** - ತಿಳಿಯುತ್ತೇವೆ. **ಸಃ** - ಆತನೇ, **ಪಿತಾ** - ತಂದೆಯು, **ಸಃ** - ಆತನೇ, **ಪ್ರಜಾಪತಿಃ** - ಪ್ರಜೆಗಳಿಗೆ ಪತಿಯಾದ ರಾಜನು.

ಇತ್ಯಾದಿಗಳಿಲೇ - ಎಂಬಿವೇ ಮೊದಲಾದ ಮೇಲೆ ಹೇಳಿದ ಪ್ರಮಾಣವಾಕ್ಯಗಳಲ್ಲಿ, **ಪಲಪಡಿಯುಮ್** - ನಾನಾವಿಧವಾಗಿ, ಅಂದರೆ, ಅವನಿಗೆ ಕಾಲತ್ರಯದಲ್ಲೂ ಸಮರೂ ಅಧಿಕರೂ ಇಲ್ಲವೆಂದೂ, **ಅ**ವನೇ ಇಷ್ಟಪ್ರಾಪಕನೆಂದೂ, ಅವನೇ ಅನಿಷ್ಟನಿವರ್ತಕನೆಂದೂ, ಅವನೇ ಪರತತ್ವವೆಂದೂ, ಹೀಗೆಲ್ಲಾ ನಾನಾಬಗೆಯಾಗಿ, **ಶೊನ್ನಾರ್‌ಗಳ್** - ವ್ಯಾಸಶೌನಕಾದಿ ಮಹರ್ಷಿಗಳು ಹೇಳಿದರು.

ಜನನ ಕಾಲದ ಭಗವತ್ಕಟಾಕ್ಷವು ಮೋಕ್ಷಕ್ಕೆ ಸಾಧಕವು;
ಬ್ರಹ್ಮರುದ್ರರ ಕಟಾಕ್ಷವು ಪುನಸ್ಸಂಸಾರಕ್ಕೆ ಕಾರಣವು.

(ವಿಷ್ಣುವಿಗೂ, ಚತುರ್ಮುಖರುದ್ರರಿಗೂ ಇರುವ ಇನ್ನೊಂದು ವ್ಯತ್ಯಾಸವನ್ನು ತಿಳಿಸುತ್ತಾರೆ. ಜನನಕಾಲದಲ್ಲಿ ವಿಷ್ಣುವಿನ ಕಟಾಕ್ಷ ಉಂಟಾದರೆ, ಸಾತ್ವಿಕಗುಣ

ರಜಸ್ತಮಃ ಪ್ರಶಮ ಹೇತುವಾನ ಮಧುಸೂದನ ನುಡೈಯ ಕಟಾಕ್ಷಮು ಡೈಯಯವರ್ಗಳ್ ಮುಮುಕ್ಷುಕ್ಕಳಾವಾರ್ಗಳೆನ್ನುಮಿಡಮುಮ್, ಬ್ರಹ್ಮ ರುದ್ರದೃಷ್ಟರಾನವರ್ಗಳ್ ರಜಸ್ತಮಃ ಪರತೆನ್ರಾವರ್ಗಳೆನ್ನು ಮಿಡ ಮುಮ್,

೧. **"ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ।**
ಸಾತ್ವಿಕಸ್ಸತು ವಿಜ್ಞೇಯಃ ಸವೈ ಮೋಕ್ಷಾರ್ಥಚಿನ್ತಕಃ॥

ಯುಕ್ತನಾಗಿ ಮೋಕ್ಷಾರ್ಥಿಯಾಗುವನೆಂದೂ, ಬ್ರಹ್ಮರುದ್ರರ ದೃಷ್ಟಿಬಿದ್ದರೆ ರಜಸ್ತ ಮೋಗುಣ ಯುಕ್ತರಾಗಿ ಪುನಃ ಸಂಸಾರ ಬಂಧನವನ್ನೇ ಹೊಂದುವರೆಂದು ಸಪ್ರ ಮಾಣವಾಗಿ ಹೇಳುತ್ತಾರೆ.)

ಕರುವಿಲೇ - ಗರ್ಭದಲ್ಲೇ, **ತಿರುವುಡೈಯಾರ್ಗಳಾಯ್** - ಭಾಗ್ಯವಂತ ರಾಗಿ, **ಜಾಯಮಾನದಶೈಯಿಲೇ** - ಹುಟ್ಟುವ ಸಮಯದಲ್ಲೇ, **ರಜಸ್ತಮಃ - ಪ್ರಶಮಹೇತುವಾನ** - ರಜಸ್ತಮೋಗುಣಗಳು ನಷ್ಟವಾಗಲು ಕಾರಣರೂಪವಾದ **ಮಧುಸೂದನನುಡೈಯ ಕಟಾಕ್ಷಮುಡೈಯವರ್ಗಳ್** - ಮಧು ಎಂಬ ರಾಕ್ಷ ಸನನ್ನು ಕೊಂದ ಶ್ರೀಮನ್ನಾರಾಯಣನ ಕಟಾಕ್ಷವನ್ನು ಹೊಂದಿದವರು, **ಮು ಮುಕ್ಷುಕ್ಕಳಾವಾರ್ಗಳೆನ್ನು ಮಿಡಮುಮ್** - ಮೋಕ್ಷಾರ್ಥಿಗಳಾಗುವರೆಂಬುವ ವಿಷಯದಲ್ಲೂ, ಮತ್ತೂ **ಬ್ರಹ್ಮರುದ್ರದೃಷ್ಟರಾನವರ್ಗಳ್** - ಬ್ರಹ್ಮರುದ್ರರಿಂದ ಕಟಾಕ್ಷಿಸಲ್ಪಟ್ಟವರು, **ರಜಸ್ತಮಃ ಪರತೆನ್ರಾವರ್ಗಳೆನ್ನು ಮಿಡುಮ್** - ರಜೋಗುಣ ತಮೋಗುಣಗಳಿಗೆ ಅಧೀನರಾಗುವರು ಎನ್ನುವ ವಿಷಯದಲ್ಲೂ, ಅಂದರೆ ರಜೋಗುಣ ತಮೋಗುಣಕ್ಕೆ ಯಾವಾಗ ಅಧೀನರೋ ಆವಾಗ **ಪುನಃ ಪುನಃ** ಇಲ್ಲಿಯೇ ಜನ್ಮವನ್ನೆತ್ತುವರು, ಅಥವಾ, ನರಕಾದಿಗಳನ್ನು ಹೊಂದುವರು ಎಂಬ ಭಾವವು.

೧. ಭಾರತ, ಶಾಂತಿ. ೩೫೮--೨೩, ೨೭. **ಹಿ** - ಯಾವ ಕಾರಣದಿಂದ, **ಜಾಯಮಾನಂ** - ಹುಟ್ಟುತ್ತಿರುವ **ಯಂಪುರುಷಂ** - ಯಾವ ಮನುಷ್ಯನನ್ನು **ಮಧುಸೂದನಃ** - ರಜೋಗುಣ ತಮೋಗುಣ ಪರಿಪೂರ್ಣನಾದ ಮಧು ಎಂಬ ಅಸುರನನ್ನು ಕೊಂದವನಾದ ಶ್ರೀಮನ್ನಾರಾಯಣನುಎಂದು ಹೇಳಿರುವದರಿಂದ ರಜ ಸ್ತಮಃಪ್ರಶಮನು ಎಂದು ಸೂಚಿಸಲ್ಪಟ್ಟಿತು. **ಪಶ್ಯೇತ್** - ಕಟಾಕ್ಷಿಸುವನೋ, **ಸ್ಸತು**- ಅಂತವನಾದರೋ, **ಸಾತ್ವಿಕಃ** - ಸತ್ವಗುಣ ಪರಿಪೂರ್ಣನನ್ನಾಗಿ, **ವಿಜ್ಞೇ ಯಃ** - ತಿಳಿಯಲ್ಪಡತಕ್ಕವನು. **ಸವೈ** - ಅವನೇ, **ಮೋಕ್ಷಾರ್ಥ ಚಿನ್ತಕಃ** - ಮೋಕ್ಷರೂಪ ಪ್ರಯೋಜನವನ್ನು ಅಪೇಕ್ಷಿಸುವನಾಗುವನು, ಎಂದರೆ ಮೋಕ್ಷಾರ್ಥಿ

ಪಶ್ಯತ್ಯೇನಂ ಜಾಯಮಾನಂ ಬ್ರಹ್ಮಾ ರುದ್ರೋಽಥವಾ ಪುನಃ।
ರಜಸಾ ತಮಸಾ ಚೈವ ಮಾನಸಂ ಸಮುಭಿಪ್ಲುತಂ॥

ಎನ್ನು ವಿಭಜಿಕ್ಕಪಟ್ಟದು.

ಮುಮುಕ್ಷು ವುಕ್ಕು ಬ್ರಹ್ಮರುದ್ರರ್ ಅನುಪಾಸ್ಯರ್,
ಶ್ರೀಯಃಪತಿಯೇ ಉಪಾಸ್ಯನ್

ಇವರ್ಗಳ್ ಮುಮುಕ್ಷು ವುಕ್ಕು ಅನುಪಾಸ್ಯ ರೆನ್ರುಮಿಡಮುಮ್,

ಯಾಗುವನು, **ಜಾಯಮಾನಂ** – ಹುಟ್ಟುತ್ತಿರುವ, **ಏನಂ**–ಈ ಪುರುಷನನ್ನು **ಬ್ರಹ್ಮಾ**-ಚತುರ್ಮುಖನೇ ಆಗಲಿ, **ಅಥವಾ ರುದ್ರೋಪುನಃ**–ಅಥವಾ ರುದ್ರನೇ ಆಗಲಿ, **ಪಶ್ಯತಿ** – ಕಟಾಕ್ಷದಿಂದ ನೋಡಿದರೆ, **ರಜಸಾ** – ರಜೋಗುಣದಿಂದಲೂ, **ತಮಸಾಚೈವ** – ತಮೋಗುಣದಿಂದಲೂ ಕೂಡ, (ಕ್ರಮಾಲಂಕಾರವು, ಬ್ರಹ್ಮನು ಈಕ್ಷಿಸಿದರೆ ರಜೋಗುಣದಿಂದಲೂ, ರುದ್ರನು ಈಕ್ಷಿಸಿದರೆ ತಮೋಗುಣದಿಂದಲೂ) **ಮಾನಸಂ** – ಇವನ ಮನಸ್ಸು, **ಸಮುಭಿಪ್ಲುತಂ** – ವ್ಯಾಪಿಸಲ್ಪಡುತ್ತದೆ, ಅಂದರೆ ತುಂಬಿರುತ್ತದೆ." **ಎನ್ರು ವಿಭಜಿಕ್ಕಪಟ್ಟದು** – ಹೀಗೆ ಈ ಮೇಲೆ ಹೇಳಿದ ರೀತಿಯಲ್ಲಿ ವಿಭಾಗಿಸಲ್ಪಟ್ಟಿರುತ್ತದೆ. ಈ ಅಭಿಪ್ರಾಯವನ್ನೇ ಶ್ರೀಮದಾಚಾರ್ಯರವರು, ಶರಣಾಗತಿ ದೀಪಿಕೆಯ ೧೩ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ:—

"ಜನ್ತೋ ರಮುಷ್ಯಜನನೇ ವಿಧಿಶಮ್ಭುದೃಷ್ಟೌ।
ರಾಗಾದಿನೈವ ರಜಸಾ ತಮಸಾ ಚ ಯೋಗಃ॥
ದ್ವೈಪಾಯನ ಪ್ರಭೃತಯ ಸ್ತ್ವದವೇಕ್ಷಿತಾನಾಂ।
ಸತ್ವಂ ವಿಮುಕ್ತಿ ನಿಯತಂ ಭವತೀತ್ಯುಶನ್ತಿ."

ಇದರ ಅರ್ಥವೇನೆಂದರೆ, "ಪ್ರಾಣಿಗಳ ಈ ಜನ್ಮದಲ್ಲಿ ಬ್ರಹ್ಮನಿಂದಲೂ ರುದ್ರನಿಂದಲೂ ನೋಡಲ್ಪಟ್ಟವರಾದರೆ, ಅವರುಗಳಿಗೆ ವಿಷಯಗಳಲ್ಲಿ ಸಂಗ ಉಂಟಾಗಿ ರಜೋಗುಣ ತಮೋಗುಣಗಳ ಯೋಗ ಉಂಟಾಗುತ್ತದೆ. ಓ ದೀಪ ಪ್ರಕಾಶಸ್ವಾಮಿಯಾದ ನಾರಾಯಣನೇ, ನಿನ್ನ ಕಟಾಕ್ಷ ವೀಕ್ಷಣೆಯುಂಟಾದವರಿಗೆ ಮೋಕ್ಷಸಾಧಕವಾದ ಸತ್ವಗುಣ ಉಂಟಾಗುತ್ತದೆ ಎಂದು ವ್ಯಾಸಮಹರ್ಷಿ ಮೊದಲಾದವರು ಹೇಳುತ್ತಾರೆ."

ಮೋಕ್ಷಾರ್ಥಿಗೆ ಬ್ರಹ್ಮರುದ್ರರು ಉಪಾಸ್ಯರಲ್ಲವು.
ಶ್ರೀಯಃಪತಿಯೇ ಉಪಾಸ್ಯನು.

ಇವರ್ಗಳ್–ಈ ಚತುರ್ಮುಖ ಬ್ರಹ್ಮರುದ್ರರು, **ಮುಮುಕ್ಷು ವುಕ್ಕು**–ಮೋ.

ಇವರ್‌ಗಳುಕ್ಕು ಕಾರಣಭೂತನಾನ ಸರ್ವೇಶ್ವರನ್ ಇವರ್‌ಗಳುಕ್ಕುಮ್ ಮತ್ತವುಳ್ಳ ಮುಮುಕ್ಷುಕ್ಕಳುಕ್ಕುಮ್ ಉಪಾಸ್ಯನೆನ್ನು ಮಿಡ ಮುಮ್,

೧. **"ಸಂಸಾರಾರ್ಣವ ಮಗ್ನಾನಾಂ ವಿಷಯಾಕ್ರಾಂತ ಚೇತಸಾಂ।**
ವಿಷ್ಣು ಪೋತಂ ವಿನಾ ನಾನ್ಯ ತ್ಕಿಞ್ಚಿದಸ್ತಿ ಪರಾಯಣಂ॥"

ಎನ್ನುಂ,

೨. **ಬ್ರಹ್ಮಾಣಂ ಶಿತಿಕಣ್ಠಂಚ ಯಾಶ್ಚಾನ್ಯಾ ದೇವತಾಃಸ್ಮೃತಾಃ।**

ಕ್ಷಾರ್ಥಿಗೆ, **ಅನುಪಾಸ್ಯರೆನ್ನುಮಿಡಂ**–ಉಪಾಸ್ಯರಲ್ಲನೆಂಬ ವಿಷಯದಲ್ಲೂ, **ಇವರ್‌ಗಳುಕ್ಕುಕಾರಣಭೂತನಾನ ಸರ್ವೇಶ್ವರ**–ಈ ಬ್ರಹ್ಮರುದ್ರಾದಿಗಳಿಗೂ ಕಾರಣಭೂತನಾದ ಸರ್ವೇಶ್ವರನು, **ಇವರ್‌ಗಳುಕ್ಕುಮ್**–ಈ ಬ್ರಹ್ಮರುದ್ರರಿಗೂ (ಇವರೂ ಮೋಕ್ಷಾರ್ಥಿಗಳಾಗಿ ಇನ್ನೂ ಮೋಕ್ಷಪ್ರಾಪ್ತಿ ಇಲ್ಲದೆ ಇರುವವರು,) **ಮತ್ತವುಳ್ಳ ಮುಮುಕ್ಷುಗಳುಕ್ಕುಮ್** – ಮಿಕ್ಕ ಎಲ್ಲಾ ಮೋಕ್ಷಾರ್ಥಿಗಳಿಗೂ, **ಉಪಾಸ್ಯನೆನ್ನುಮಿಡಂ** – ಉಪಾಸ್ಯನು ಎಂಬುವ ವಿಷಯದಲ್ಲಿ,

೧. ವಿಷ್ಣುತತ್ವ. ೧. ೫೯. **ಸಂಸಾರಾರ್ಣವ ಮಗ್ನಾನಾಂ** – ಸಂಸಾರ ಸಮುದ್ರದಲ್ಲಿ ಮುಳುಗಿರುವ, **ವಿಷಯಾಕ್ರಾಂತ ಚೇತಸಾಂ**–ಶಬ್ದಾದಿ ವಿಷಯಗಳಿಂದ ಆಕ್ರಮಿಸಲ್ಪಟ್ಟ ಮನಸ್ಸುಳ್ಳ ಚೇತನರುಗಳಿಗೆ, ಹಿಂದೆ ಸಂಸಾರವೇ ಒಂದು ಸಮುದ್ರವಾಗಿ ಭಾವಿಸಿ ಇಲ್ಲಿ **ವಿಷಯಾಕ್ರಾಂತ** ಎಂದು ಪ್ರಯೋಗಿಸಿರುವದರಿಂದ ವಿಷಯಗಳೇ ಆ ಸಂಸಾರ ಸಮುದ್ರದಲ್ಲಿರುವ ಮೊಸಳೆಗಳು, ಆ ನಕ್ರಾಕ್ರಾಂತವಾದುದು ಮನಸ್ಸು ಎಂಬ ಧ್ವನ್ಯರ್ಥವು ತೋರಿಬರುತ್ತದೆ. ಅಂತಹ ಮೊಸಳೆಗಳ ಬಾಧೆಯಿಲ್ಲದೆ ಈ ಸಮುದ್ರವನ್ನು ದಾಟಬೇಕಾದರೆ, **ವಿಷ್ಣು ಪೋತಂವಿನಾ**–ವಿಷ್ಣು ಎಂಬ ನಾವೆಯಲ್ಲದೆ, **ಅನ್ಯತ್ಕಿಂಚಿತ್**–ಮತ್ತೆ ಇನ್ಯಾವದಾಗಲಿ ಒಂದು, **ಪರಾಯಣಂ**–ಶ್ರೇಷ್ಠವಾದ ಪ್ರಾಪ್ಯ, ಪ್ರಾಪಕ, ಆಧಾರರೂಪದಲ್ಲಿ ಆಶ್ರಯಿಸಲು ಯೋಗ್ಯವಸ್ತುವು, **ನಾಸ್ತಿ** – ಇಲ್ಲವು, ಆದುದರಿಂದ ಬ್ರಹ್ಮರುದ್ರರು ಶ್ರೇಷ್ಠವಾದ ಗತಿಯಲ್ಲವು, ಶ್ರೀಮಹಾವಿಷ್ಣುವೇ **ಪರಾಯಣ**ವು ಎಂಬ ಭಾವವು ಈ ಸಂದರ್ಭದಲ್ಲಿ ಕುಲಶೇಖರಾಳ್ವಾರವರ **"ತೃಷ್ಣಾತೋಯೇ"** ಎಂಬ ಶ್ಲೋಕವು ಅನುಸಂಧೇಯವು (ಮುಕುಂದ. ೧೪) **ಎನ್ನುಂ** – ಎಂದೂ,

೨. ಭಾರತ. ಶಾಂತಿ. ೩೫೦. ೩೬. ವಿಷ್ಣುವಿಗೇ ನೋಕ್ಷಪ್ರದತ್ವ ಶಕ್ತಿಯು ಎಂದು ಹಿಂದಿನ ಪ್ರಮಾಣದಿಂದ ತೋರಿಸಿ ಈ ಪ್ರಮಾಣದಿಂದ ಬ್ರಹ್ಮ ರುದ್ರರಿಗೆ ಅಂತಹ ಶಕ್ತಿಯಿಲ್ಲವೆಂದು ತೋರಿಸುತ್ತಾರೆ. **ಬ್ರಹ್ಮಾಣಂ** – ಚತುರ್ಮುಖಬ್ರಹ್ಮ

ಪ್ರತಿಬುದ್ಧಾ ನ ಸೇವನ್ತೇ ಯಸ್ಮಾತ್ಪರಿಮಿತಂ ಫಲಂ ॥"
ಎನ್ನುವುದು,

೩. "ಹರಿರೇಕ ಸ್ಸದಾ ಧ್ಯೇಯೋ ಭವದ್ಭಿ ಸ್ಸತ್ವಸಂಸ್ಥಿತೈಃ ।

ನನ್ನೂ, **ತಿತಿಕ್ಷಂಚ** - ನೀಲಕಂಠನಾವ ರುದ್ರನನ್ನೂ ಸಹ, **ಯಾಶ್ಚಾನ್ಯಾಃ**- ಇನ್ನು ಬೇರೆ ಯಾರು, **ದೇವತಾಃ** ದೇವತೆಗಳೂ, **ಸ್ಮೃತಾಃ** - ಹೇಳಲ್ಪಟ್ಟಿರುವರೋ ಅವರನ್ನೂ ಸಹ, **ಪ್ರತಿಬುದ್ಧಾಃ**-ಸ್ವಸ್ವರೂಪಗಳನ್ನು ತಿಳಿದ **ವಿವೇಕಿಗಳು**, **ಯಸ್ಮಾತ್**-ಯಾವ ಕಾರಣದಿಂದ, **ಪರಿಮಿತಂ ಫಲಂ** - ಅವರಿಂದುಂಟಾಗುವದು ಪರಿಮಿತವಾದ ಫಲವೋ, ಆ ಕಾರಣದಿಂದ, **ನಸೇವನ್ತೆ**-ಸೇವಿಸುವದಿಲ್ಲವು. **ಶ್ರೀ** ಕೃಷ್ಣನು ಅರ್ಜುನನಿಗೆ ಉಪದೇಶಿಸುವ ಸಂದರ್ಭವು. ಪರತತ್ವವು ಯಾವ ಹೆಸರುಗಳಿಂದ ಶ್ರುತಿಯಲ್ಲೂ ಮಹರ್ಷಿಗಳಿಂದಲೂ ಪ್ರೋಕ್ತವಾಗಿರುತ್ತವೆಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಉತ್ತರಹೇಳುವ ಸಂದರ್ಭವು. ಪರತತ್ವವು ಶ್ರೀಮನ್ನಾರಾಯಣ ಶಬ್ದದಿಂದ ಹೇಳಲ್ಪಡುತ್ತದೆಂದು **ಉ**ಪದೇಶಿಸಿರುತ್ತಾರೆ. ಇದಲ್ಲದೆ ಕೇಶವಾದಿ ಇತರ ನಾಮಗಳನ್ನು ಉದಾಹರಿಸುತ್ತಾರೆ. ಈಚಿಗೆ ಅಚ್ಚಾಗಿರುವ ಭಾರತ **ಪು**ಸ್ತಕಗಳಲ್ಲಿ ಉತ್ತರಾರ್ಧವು, "**ಪ್ರಬುದ್ಧಚರ್ಯಾಃ ಸೇವನ್ತೇ ಮಾಮೇ ವೈಷ್ಯನ್ತಿ ಯತ್ಫಲಂ**" ಎಂಬದಾಗಿರುತ್ತದೆ.

ಹೀಗೆ ಮಹರ್ಷಿಗಳ ವಾಕ್ಯಗಳನ್ನು ವ್ಯತ್ಯಾಸ ಮಾಡುವದು ಸರಿಯಾದುದಲ್ಲವು. ಹೀಗೆ **ಎ**ಲ್ಲಾ ದೇವತೆಗಳನ್ನೂ ಆರಾಧಿಸುವವರು ಪ್ರಬುದ್ಧಚರ್ಯರು ಹೇಗಾಗುವರು ? ಈ ಶ್ಲೋಕಾಭಿಪ್ರಾಯವೇನೆಂದರೆ ಬ್ರಹ್ಮರುದ್ರರು ಪರಿಮಿತವಾದ ಐಹಿಕಫಲವನ್ನು ಕೊಡತಕ್ಕವರು. ಆ ಐಹಿಕ ಫಲಗಳಿಗಾಗಿ ಅನೇಕರು ಬ್ರಹ್ಮರುದ್ರರುಗಳನ್ನು ಕುರಿತು ತಪಸ್ಸು **ಮಾ**ಡಿ ವರಗಳನ್ನು ಪಡೆದಿರುತ್ತಾರೆ ಆದರೆ, ಇವರುಗಳೂ ಚೇತನರೇ ಆದುದರಿಂದ, ಮೋಕ್ಷಕೊಡುವ ಶಕ್ತಿಯು ಇವರಿಗಿಲ್ಲವು. ವಿವೇಕಿಯಾದವರು ಯಾರೆಂದರೆ :---ನಿರತಿಶಯಾನಂದ ರೂಪವಾದ ನಿತ್ಯವಾನ **ಮೋ**ಕ್ಷವನ್ನು ಅಪೇಕ್ಷಿಸ ವಂಥಾವರು, ಅಂಥಾವರು ಈ ಬ್ರಹ್ಮರುದ್ರರನ್ನು ಸೇವಿಸರು, ಎಂಬ ಭಾವವು.

೩. ಹರಿವಂಶ. ೧೩೨—ಲ, ೧೪. **ಸತ್ವಸಂಸ್ಥಿತೈಃ**-ಸತ್ವಗುಣನಿಷ್ಠರಾದ, **ಭವದ್ಭಿಃ** - ನಿಮ್ಮಗಳಿಂದ, **ಹರಿರೇಕಃ** - ಶ್ರೀ ಹರಿ ಒಬ್ಬನೇ, **ಸದಾಧ್ಯೇಯಃ** - ಯಾವಾಗಲೂ ಉಪಾಸನೆಮಾಡಲು **ಯೋ**ಗ್ಯನು. **ಹೇ ವಿಪ್ರಾಃ**-ಓ ಬ್ರಾಹ್ಮ

ಉಪಾಸ್ಯೋಯಂ ಸದಾ ವಿಪ್ರಾ ಉಪಾಯೋಸ್ಮಿ ಹರೇಃಸ್ಮೃತೌ" ಎನ್ನುವುದು ಶೊಲ್ಲಪಟ್ಟದು,

ಇತ್ತಾಲೇ ಇವರ್‌ಗಳೈ ಮೋಕ್ಷೋಪಕಾರಕರಾಕ ಚ್ಚೊನ್ನ ವಿಡಜ್ಞ ಳುಮ್ ಆಚಾರ್ಯಾದಿಗಳೈ ಪ್ಪೋಲೇ ಜ್ಞಾನಾದಿ ಹೇತುಕ್ಕಳಾಕ್ಕೈಯಾಲೇ ಯೆನ್ರು ನಿರ್ಣೀತಂ. ಇವರ್ಥಂ,

---

ಣರೇ, **ಸದಾ** - ಯಾವಾಗಲೂ, **ಅಯಂ** - ಇವನು, **ಉಪಾಸ್ಯಃ** - ಉಪಾಸಿಸಲು ಯೋಗ್ಯನು, **ಹರೇಃ ಸ್ಮೃತೌ**-ಶ್ರೀ ವಿಷ್ಣುವಿನ ಧ್ಯಾನದಲ್ಲಿ, **ಉಪಾಯಃ**-ಉಪಾಯಭೂತನು, **ಅಸ್ಮಿ** – ಆಗಿದ್ದೇನೆಂಬುದಾಗಿ ರುದ್ರವಾಕ್ಯವು. ಶ್ರೀಮಹಾವಿಷ್ಣುವಿನ ಧ್ಯಾನ ಉಂಟಾಗಲು ತಾನು ಉಪಾಯವು ಎಂದು ರುದ್ರನು ಹೇಳಿಕೊಂಡಿರುತ್ತಾನೆ. ಜ್ಞಾನವನ್ನು ಕೊಡುವದರ ಮೂಲಕವಾಗಿಯೋ, ಅಥವಾ "**ಶ್ರೀರಾಮರಾಮೇತಿ**" ಎಂಬಿವೇ ಮೊದಲಾವ ಸಂದರ್ಭದಲ್ಲಿ, ಉಪದೇಶಮಾಡುವದರ ಮೂಲಕವಾಗಿಯೋ, ರುದ್ರನು ಆಚಾರ್ಯರ ಹಾಗೆ **ಉಪಾಯವು** ಎಂಬ ಭಾವವು. **ಎನ್ರುಂಶೊಲ್ಲಪಟ್ಟದು** - ಹೀಗೆ ಪ್ರಮಾಣಗಳು ಹೇಳಲ್ಪಟ್ಟಿವೆ.

(ಈ ಕೊನೇ ಶ್ಲೋಕದಲ್ಲಿ ಬ್ರಹ್ಮರುದ್ರರು ಭಗವದುಪಾಸನೆಯಲ್ಲಿ ಅಭಿರುಚಿಯನ್ನುಂಟುಮಾಡುವದರಲ್ಲಿ ಉಪಾಯಭೂತರು ಎಂದು ಹೇಳಲ್ಪಟ್ಟಿತಲ್ಲಾ, ಅದರಭಿಪ್ರಾಯವೇನೆಂಬುವದನ್ನು ತಾವೇ ವಿವರಿಸುತ್ತಾರೆ.)

ಇತ್ತಾಲೇ - ಈ ಮೇಲಿನ ಪ್ರಮಾಣಗಳ ಮೂಲಕ ಬ್ರಹ್ಮರುದ್ರಾದಿಗಳಿಗೆ ಮೋಕ್ಷ ಕೊಡುವ ಶಕ್ತಿಯಿಲ್ಲವೆಂದು ಸ್ಥಾಪಿತವಾದ ಮೇಲೆ, **ಇವರ್‌ಗಳೈ** – ಈ ಬ್ರಹ್ಮರುದ್ರಾದಿಗಳನ್ನು, **ಮೋಕ್ಷೋಪಕಾರಕರಾಕ ಚ್ಚೊನ್ನ ವಿಡಜ್ಞಳಿಲುಂ**-ಮೋಕ್ಷಪ್ರಾಪ್ತಿಗೆ ಸಹಕಾರಿಗಳೆಂದು ಹೇಳಿದ ಸ್ಥಳಗಳಲ್ಲೆಲ್ಲಾ, **ಆಚಾರ್ಯಾದಿಗಳೈ ಪ್ಪೋಲೆ** – ಆಚಾರ್ಯರೇ ಮೊದಲಾದವರ ಹಾಗೆ, **ಜ್ಞಾನಾದಿ ಹೇತುಕ್ಕಳಾಕ್ಕೈಯಾಲೆ** - ಮೋಕ್ಷಪ್ರಾಪ್ತಿಗೆ ಬೇಕಾದ ಜ್ಞಾನ ಮೊದಲಾದವುಗಳನ್ನು ಕೊಡುವದರ ಮೂಲಕ, ಕಾರಣಭೂತರಾದುದರಿಂದ, **ಎನ್ರು ನಿರ್ಣೀತಂ** – ಎಂದು ನಿರ್ಣಯಿಸಲ್ಪಟ್ಟಿರುತ್ತೆ. ಬ್ರಹ್ಮರುದ್ರರು ಮೋಕ್ಷೋಪಕಾರಕರಾಗಿ ಎಲ್ಲಿ ಹೇಳಲ್ಪಟ್ಟಿವೆ ಎಂದರೆ :—ಹಿಂದೆ ಹರಿವಂಶ ಪ್ರಮಾಣದಲ್ಲಿ ಹೇಳಿದೆ ; ಮತ್ತು ಭಾಗವತಾದಿ ಪುರಾಣಗಳಲ್ಲಿ,

"ತ್ವಮೇಕಸ್ಸರ್ವಜಗತಾಮೀಶ್ವರೋ ಬನ್ಧಮೋಕ್ಷಯೋಃ ।
ತಂ ತ್ವಾಮರ್ಚಂತಿ ಕುಶಲಾಃ ಪ್ರಪನ್ನಾರ್ತಿ ಹರಂ ಗುರುಂ ॥"

ಅಂದರೆ, ನೀನೊಬ್ಬನೇ ಸಮಸ್ತ ಜಗತ್ತಿನ ಬನ್ಧಮೋಕ್ಷಗಳಿಗೆ ನಾಥನು, ಅಂತಪ

"ಸೂರ್ಯಸ್ಯೈವತು ಯೋ ಭಕ್ತಸ್ಸಪ್ತ ಜನ್ಮಾನ್ತರಂ ನರಃ ।
ತಸ್ಯೈವತು ಪ್ರಸಾದೇನ ರುದ್ರಭಕ್ತಃ ಪ್ರಜಾಯತೇ ॥
ರುದ್ರಸ್ಯೈವತು ಯೋ ಭಕ್ತಸ್ಸಪ್ತ ಜನ್ಮಾನ್ತರಂ ನರಃ ।
ತಸ್ಯೈವತು ಪ್ರಸಾದೇನ ವಿಷ್ಣುಭಕ್ತಃ ಪ್ರಜಾಯತೇ ॥
ವಾಸುದೇವಸ್ಯಯೋ ಭಕ್ತ ಸ್ಸಪ್ತಜನ್ಮಾನ್ತರಂ ನರಃ ।
ತಸ್ಯೈವತು ಪ್ರಸಾದೇನ ವಾಸುದೇವೇ ಪ್ರಲೀಯತೇ ॥"

ಎನ್ಗಿರವಿಡತ್ತಿಲುಮ್ ವಿವಕ್ಷಿತಂ.

ಪ್ರಪನ್ನರ ಆರ್ತಿಯನ್ನು ಹೋಗಲಾಡಿಸುವ ಗುರುವಾದ ನಿನ್ನನ್ನು ಕುಶಲರು ಅರ್ಚಿಸುವರು ಎಂದು ಹೇಳಿರುತ್ತದೆ. ಇಂತಹ ಸ್ಥಳಗಳಲ್ಲಿ, ರುದ್ರನು ಜ್ಞಾನಪ್ರದನಾಗಿ ಆಚಾರ್ಯನ ಹಾಗೆ ಮೋಕ್ಷಕ್ಕೆ ಉಪಕಾರಕನೆಂದು ಭಾವಿಸತಕ್ಕದ್ದು. ಈ ಅಭಿಪ್ರಾಯವು ಬಹು ಸ್ವಾರಸ್ಯವಾಗಿ, "**ಈಶ್ವರಾದ್ಜ್ಞಾನ ಮನ್ವಿಚ್ಛೇ ನ್ಮೋಕ್ಷ ಮಿಚ್ಛೇಜ್ಜನಾರ್ದನಾತ್**" ಎಂಬ ವಾಕ್ಯದಲ್ಲಿ ಹೇಳಲ್ಪಟ್ಟಿರುತ್ತದೆ. ಹೀಗೆ ರುದ್ರನು ತನ್ನನ್ನು ಪೂಜಿಸಿದವನಿಗೆ ವಿಷ್ಣುವಿನಲ್ಲಿ ಭಕ್ತಿಯನ್ನುಂಟು ಮಾಡಿ, ಮೋಕ್ಷಕ್ಕೆ ಕಾರಣಭೂತನಾಗುವನೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ.

ಇನ್ನರ್ಥಂ - ಈ ಅಭಿಪ್ರಾಯವು, ರುದ್ರನು ಜ್ಞಾನಪ್ರದತ್ವ ದ್ವಾರಾ ಮೋಕ್ಷೋಪಕಾರನೆಂಬಭಿಪ್ರಾಯವು, **ಎನ್ಗಿರ ವಿಡತ್ತಿಲುಮ್ ವಿವಕ್ಷಿತಂ**- ಎಂಬ ಪ್ರಮಾಣವಲ್ಲಿಯೂ ತೋರಿಬರುತ್ತದೆ. ಆ ಪ್ರಮಾಣ ಯಾವುದೆಂದರೆ :— "**ಯಃ ನರಃ** - ಯಾವ ಮನುಷ್ಯನು, **ಸಪ್ತಜನ್ಮಾನ್ತರಂ** - ಏಳು ಜನ್ಮಗಳೂ, **ಸೂರ್ಯಸ್ಯೈವತು ಭಕ್ತಃ** - ಸೂರ್ಯನಿಗೆ ಮಾತ್ರವೇ ಭಕ್ತನಾಗಿರುತ್ತಾನೆಯೋ, ಅವನು, **ತಸ್ಯೈವತು ಪ್ರಸಾದೇನ** - ಆ ಸೂರ್ಯನ ಅನುಗ್ರಹದಿಂದಲೇ, **ರುದ್ರ ಭಕ್ತಃ ಪ್ರಜಾಯತೇ** - ರುದ್ರಭಕ್ತನಾಗಿ ಹುಟ್ಟುತ್ತಾನೆ. ಹಾಗೆಯೇ ಏಳು ಜನ್ಮಗಳು, ಯಾವ ಮನುಷ್ಯನು ರುದ್ರಭಕ್ತನಾಗಿಯೇ ಇರುತ್ತಾನೋ ಆತನು ರುದ್ರಾನುಗ್ರಹದಿಂದಲೇ ವಿಷ್ಣುಭಕ್ತನಾಗಿ ಹುಟ್ಟುವನು, ಹಾಗೆಯೇ ಏಳು ಜನ್ಮಗಳು ಯಾವ ಮನುಷ್ಯನು ವಿಷ್ಣುಭಕ್ತನಾಗಿಯೇ ಇರುತ್ತಾನೋ ಆತನು ವಿಷ್ಣುವಿನ ಅನುಗ್ರಹದಿಂದ ಆತನಲ್ಲೇ ಸೇರುವನು" ಎಂಬುವದು ಈ ಶ್ಲೋಕಗಳ ಅಭಿಪ್ರಾಯವು. ಇಲ್ಲಿ **ಪ್ರಲೀಯತೇ** - ಎಂದರೆ ಅದ್ವೈತಿಗಳು ಹೇಳುವ ಹಾಗೆ ಸ್ವರೂಪೈಕ್ಯವಾಗಿ ನಷ್ಟವಾಗಿ ಹೋಗಿ ಬಿಡುವದು **ಎಂಬರ್ಥವಲ್ಲವು**; ಪ್ರಾಕೃತ ನಾಮರೂಪಗಳು ಕಳೆದುಹೋಗುವದರಿಂದ ಅಪಹತ ಪಾಪ್ಮತ್ವಾದಿ **ಗುಣಗಳುಳ್ಳ**

ಇಪ್ಪಡಿ, ಸೂರ್ಯಭಕ್ತ್ಯಾದಿಗಳ್ ಪರಂಪರಯಾ ಭಗವದ್ಭಕ್ತ್ಯಾದಿಗಳಿಲೇ ಮೂಟ್ಟುವದುಮ್, ಪರಾವರ ತತ್ವಜ್ಞಿಳಿಲ್ ಐಕ್ಯಬುದ್ಧಿಯುಮ್ ವ್ಯತ್ಯಯಬುದ್ಧಿಯುಮ್ ಸಮತ್ವಬುದ್ಧಿಯುಂ ಮತ್ತುಂ ಇಪ್ಪುಡ್ಗೈಗಳಿಲೇ ನರುಮ್ ಮತಿಮಯಕ್ಕ್ಗಳುಮ್, ಅಸುರ ಸ್ವಭಾವತ್ತಾಲೇ ಯೊರು

ವನಾಗಿ ಸಮನಾಗುತ್ತಾನೆ. ಆದರೆ ಈತನು ಸ್ವರೂಪತಃ ಅಣುವಾಮದರಿಂದ **ಪ್ರಲೀಯತೇ** - ಎಂಬ ಲಾಕ್ಷಣಿಕ ಪ್ರಯೋಗವು ಇಲ್ಲಿ ಸೂರ್ಯಭಕ್ತನು, ರುದ್ರ ಭಕ್ತನು ಎಂದು ಹೇಳಿದುದು, ಅವರುಗಳೇ ಪರತತ್ವವೆಂದು ಭಾವಿಸಿ ಆರಾಧಿಸಿದವನು ಎಂಬಭಿಪ್ರಾಯವಲ್ಲವು; ಹಾಗೆ ಅವರುಗಳೇ ಪರತತ್ವವೆಂದು ಆರಾಧಿಸಿದವರು ಪಾಷಂಡಿಗಳಾಗಿ ಭಗವನ್ನಿಗ್ರಹಕ್ಕೆ ಪಾತ್ರರಾಗುವರು, ಇಲ್ಲಿ ಸೂರ್ಯಭಕ್ತ, ರುದ್ರಭಕ್ತ ಎಂಬುವದರಿಂದ, ಇವರುಗಳ ಮೂಲಕ ತನಗೆ ಶ್ರೇಯಸ್ಸುಂಟಾಗಲಿ ಎಂದು ಆರಾಧಿಸಿದವನು ಎಂಬರ್ಥವು. ಈ ಅಭಿಪ್ರಾಯವನ್ನು ಮುಂದಿನ ವಾಕ್ಯದಿಂದ ಸೂಚಿಸುತ್ತಾರೆ. ಲೋಕದಲ್ಲೂ ಕೂಡ ಒಬ್ಬ ಮನುಷ್ಯನು ಇನ್ನೊಬ್ಬನನ್ನು ತನಗೆ ಶ್ರೇಯಸ್ಸುಂಟಾಗುವದಕ್ಕಾಗಿ ಅರ್ಚಿಸುವದುಂಟು. ಹಾಗೆ ಪೂಜಿಸುವದು ಆತನೇ ಪರತತ್ವ ಎಂಬ ಬುದ್ಧಿಯಿಂದಲ್ಲವಷ್ಟೇ; ಹಾಗೆಯೇ ಈ ಸಂದರ್ಭದಲ್ಲೂ ಎಂದು ಭಾವಿಸತಕ್ಕದ್ದು.

ಇಪ್ಪಡಿ – ಈ ಮೇಲಿನ ವಾಕ್ಯಗಳಲ್ಲಿ ಹೇಳಿರುವ ಹಾಗೆ, **ಸೂರ್ಯಭಕ್ತ್ಯಾದಿಗಳ್** - ಸೂರ್ಯನಲ್ಲಿ ಮಾಡುವ ಭಕ್ತಿಯೇ ಮೊದಲಾದವುಗಳು, **ಪರಂಪರಯಾ**- ಕ್ರಮಕ್ರಮವಾಗಿ, **ಭಗವದ್ಭಕ್ತ್ಯಾದಿಗಳಿಲೇ** - ಭಗವದ್ಭಕ್ತಿ ಮೊದಲಾದವುಗಳಲ್ಲಿ, ಎಂದರೆ ಉಪಾಸನಾಕ್ರಮದಲ್ಲೋ ಅಥವಾ ಪ್ರಪತ್ತ್ಯನುಷ್ಠಾನದಲ್ಲೋ, **ಮೂಟ್ಟುವದುಂ** - ಪ್ರವರ್ತಿಸುವಹಾಗೆ ಮಾಡುವದು, **ಪರಾವರ ತತ್ವಜ್ಞಿಳಿಲ್ ಐಕ್ಯಬುದ್ಧಿಯುಮ್** - ಪರತತ್ವವು ಶ್ರೀಮನ್ನಾರಾಯಣನು, ಅವರ ತತ್ವಗಳು ಚಿದಚಿತ್ತುಗಳು, ಇವುಗಳೆಲ್ಲಾ ಒಂದೇ ಎಂಬ ಬುದ್ಧಿಯೇನು, **ವ್ಯತ್ಯಯ ಬುದ್ಧಿಯುಮ್** - ಪರತತ್ವ ಅವರ ತತ್ವನೆಂದೂ, ಅವರ ತತ್ವವು ಪರತತ್ವವೆಂಬುವ ಅಭಿಪ್ರಾಯವೇನು, **ಸಮತ್ವಬುದ್ಧಿಯುಮ್** - ಇನೆರಡು ಸಮವೆಂಬ ಬುದ್ಧಿಯೇನು, **ಮತ್ತುಂ ಇಪ್ಪುಡ್ಗೈಗಳಿಲೆವರುಮ್ ಮತಿಮಯಕ್ಕ್ಗಳುಮ್** – ಮತ್ತು ಈ ವಿಧವಾದ ಪ್ರಕಾರಗಳಲ್ಲಿ ಉಂಟಾಗುವ ಭ್ರಮೆಗಳೇನು ಎಂದರೆ ದೇಹಾತ್ಮಭ್ರಾಂತಿ ಸ್ವತಂತ್ರಾತ್ಮ ಭ್ರಾಂತಿಗಳೇನು, ಮತ್ತು ತಾನೇ ಪರಬ್ರಹ್ಮನೆಂಬ ಭ್ರಾಂತಿಯೇನು, ಹೀಗೆ, **ಅಸುರಸ್ವಭಾವತ್ತಾಲೇ** - ಭಗವಂತನ ಆಜ್ಞಾತಿಲಂಘನ ರೂಪ ಸ್ವಭಾವದಿಂದ, **ಒರುವಿಷಯತ್ತಿಲ್** - ಒಂದು ವಿಷಯದಲ್ಲೂ, ಎಂದರೆ ಪರಾ

ವಿಷಯತ್ತಿಲ್ ಪ್ರದ್ವೇಷಾದಿಗಳು ಮನ್ನಿಕ್ಕೇ ಸೂರ್ಯಾದಿಗಳೈಪ್ಪತ್ತು ಮವರ್ಗಳುಕ್ಕೇ ಎನ್ನುಮಿಡತ್ತೈ

"ಯೇ ತು ಸಾಮಾನ್ಯಭಾವೇನ ಮನ್ಯಂತೇ ಪುರುಷೋತ್ತಮಂ।
ತೇವೈ ಪಾಷಂಡಿನೋ ಜ್ಞೇಯಾ ಸ್ಸರ್ವಕರ್ಮಬಹಿಷ್ಕೃತಾಃH"

ಇತ್ಯಾದಿಗಳಿಲೇ ಕಣ್ಣಿಕೊಳ್ವದು.

ವರ ತತ್ವಗಳಲ್ಲಿ ಯಾವುದರಲ್ಲೂ, ಪ್ರದ್ವೇಷಾದಿಗಳೇನು. ಇವು ಯಾವವೂ, **ಅನ್ನಿಕ್ಕೆ** - ಇಲ್ಲದೆ, **ಸೂರ್ಯಾದಿಗಳೈ ಪತ್ತುಮವರ್‌ಗಳುಕ್ಕೇ** - ಸೂರ್ಯಾದಿಗಳನ್ನು ಆಶ್ರಯಿಸುವರ್‌ಗಳಿಗೆ ಉಂಟಾಗುತ್ತದೇ ವಿನಾ ಇತರರಿಗೆ ಆಗುವುದಿಲ್ಲವೆಂಬ ಭಾವವು. ಹಾಗೆ ಸೂರ್ಯಾದಿಗಳಲ್ಲುಂಟಾದ ಭಕ್ತಿಯು ಪರಂಪರೆಯಿಂದ ವಿಷ್ಣುಭಕ್ತಿಯಲ್ಲಿ ಪರ್ಯವಸಾನವಾಗಬೇಕಾದರೆ, ಈಶ್ವರಜೀತನರು ಒಂದೇ ಎಂದೂ ಸಮವೆಂದೂ, ಜೀತನನೀಶ್ವರನು, ಈಶ್ವರನು ಜೀತನನೆಂದೂ ಹೀಗೆಲ್ಲಾ ಭ್ರಮೆಗಳೊಂದೂ ಇಲ್ಲದೆಯೂ, ರುದ್ರನೇ ಸರ್ವೇಶ್ವರನು ಮಿಕ್ಕಿವ್ವೆಲ್ಲಾ ತತ್ವವಲ್ಲವೆಂದೂ ಹೀಗೆ ಯಾತರಲ್ಲೂ ದ್ವೇಷಬುದ್ಧಿ ಇಲ್ಲದಿದ್ದರೆ, ಸೂರ್ಯಭಕ್ತಿಯು ರುದ್ರಭಕ್ತಿಯಲ್ಲೂ, ರುದ್ರಭಕ್ತಿಯು ವಿಷ್ಣುಭಕ್ತಿಯಲ್ಲೂ, ವಿಷ್ಣುಭಕ್ತಿಯು ಮೋಕ್ಷಪ್ರಾಪ್ತಿಯಲ್ಲೂ ಪ್ರವರ್ತಿಸುತ್ತದೆ. ಹಾಗಿಲ್ಲದೆ ಹೋದರೆ ಅಂತವರು ಪಾಷಂಡಿಗಳೆನಿಸುತ್ತಾರೆಂಬುವದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ.

ಎನ್ನುಮಿಡುಂ - ಹೀಗೆ ಹೇಳುವ ವಿಷಯವನ್ನು, **ಯೇತು** - ಯಾರಾದರೆ, **ಪುರುಷೋತ್ತಮಂ-ಪು**ರುಷಶ್ರೇಷ್ಠನಾದ ಶ್ರೀಮನ್ನಾರಾಯಣನನ್ನು, **ಸಾಮಾನ್ಯಭಾವೇನ** - ಇತರರಿಗೆ ಸಮವೆಂಬ ಸಾಧಾರಣ ಭಾವದಿಂದ, **ಮನ್ಯನ್ತೇ** - ತಿಳಿಯುತ್ತಾರೋ, **ತೇವೈ** - ಅವರಾದರೋ, **ಸರ್ವಕರ್ಮಬಹಿಷ್ಕೃತಾಃ** - ಸಮಸ್ತ ಶಾಸ್ತ್ರವಿಹಿತ ಕರ್ಮಗಳಿಂದ ಬಹಿಸ್ಕೃತರಾದ, ಎಂದರೆ ಅವುಗಳಿಗೆ ಯೋಗ್ಯರಲ್ಲದ, **ಪಾಷಂಡಿನಃ** - ಪಾಷಂಡಿಗಳೆಂದು, **ಜ್ಞೇಯಾಃ** - ತಿಳಿಯತಕ್ಕವರು," **ಇತ್ಯಾದಿಗಳಿಲೇ ಕಣ್ಣಿಕೊಳ್ವದು** - ಇವೇ ಮೊದಲಾದ ಪ್ರಮಾಣಗಳಲ್ಲಿ, ನಾವು ಹೇಳುವ ಅಭಿಪ್ರಾಯವನ್ನು ತಿಳಿದುಕೊಳ್ಳುವದು. ಸೂರ್ಯ, ರುದ್ರರಲ್ಲಿ ಭಕ್ತಿಮಾಡಿದರೆ, ಅವರು ಕೊಡತಕ್ಕ ಐಹಿಕ ಫಲವೇನೋ ಕೊಡಬಲ್ಲರು. ಅವರನ್ನೇ ಪರತತ್ವವೆಂದು ಭಾವಿಸಿದರೆ ಸರ್ವೇಶ್ವರ ನಿಗ್ರಹಕ್ಕೆ ಪಾತ್ರರಾಗುವರು. ಆಗ ಆ ಸೂರ್ಯಾದಿಗಳು ಕೊಡುವ ಫಲವನ್ನು ಸರ್ವೇಶ್ವರನು ಕೊಡಿಸದೆ, ಅದೂ ತಪ್ಪಿಹೋಗುವದಲ್ಲದೆ ಭಗವನ್ನಿಗ್ರಹಕ್ಕೆ ಗುರಿಯಾದವರಾಗಿ ಪಾಷಂಡಿಗಳಾಗುತ್ತಾರೆಂದು ಈ ಪ್ರಮಾಣವು ತೋರಿಸುತ್ತದೆ. **ಪಾಷಂಡಿಗಳು** ಎಂದರೆ ಸಂಸಾರಬಂಧನ ಹೇತುವಾದ ವೇಷ

ಇಪ್ಪಡಿ ಜ್ಞಾನಾದಿಗಳಿಲ್ ಮಾರಾಟ್ಟ ಮುಡೈಯಾರ್‌ಕ್ಕು ದೇವತಾ ನ್ತರಭಕ್ತಿ ಯುಣ್ಡೇಯಾಕಿಲುಂ ಭಗವನ್ನಿಗ್ರಹತ್ತಾಲೆ ಪ್ರತ್ಯವಾಯಮೇ ಫಲಿಕ್ಕುಮ್.

ಬಾಹ್ಯವಾದ ಅಸಚ್ಛಾಸ್ತ್ರಗಳನ್ನು ಹೇಳುವಂಥಾವರು. ಇಂತಹಜನ ೨,

"ಕಲೌಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರ ಮೀಶ್ವರಂ।
ನಾರ್ಚಯಿಷ್ಯನ್ತಿ ಮೈತ್ರೇಯ ಪಾಷಂಡೋಪಹತಾಜನಾಃ ॥"

ಕಲಿಕಾಲದಲ್ಲಿ ಸರ್ವೇಶ್ವರನಾಗಿ ಜಗತ್ತುಗಳ ಸೃಷ್ಟಿಕರ್ತವಾದ ವಿಷ್ಣುವನ್ನು ಆರಾಧಿಸುವದಿಲ್ಲವೆಂದು ವಿಷ್ಣುಪುರಾಣದಲ್ಲಿ (೬ ೧ ೫೦)ಹೇಳಿರುತ್ತದೆ.

ಇಪ್ಪಡಿ-ಈ ರೀತಿಯಾಗಿ ಅಂದರೆ ಮೇಲೆ ಹೇಳಿದ ರೀತಿಯಲ್ಲಿ, **ಜ್ಞಾನಾದಿಗಳಿಲ್** - ಜ್ಞಾನ ಮೊದಲಾದವುಗಳಲ್ಲಿ, **ಮಾರಾಟ್ಟ ಮುಡೈಯಾರ್‌ಕ್ಕು** - ವ್ಯತ್ಯಾಸ ಹೊಂದಿದವರಿಗೆ, **ದೇವತಾನ್ತರಭಕ್ತಿಯುಣ್ಡೇಯಾಕಿಲುಮ್** - ದೇವತಾನ್ತರದಲ್ಲಿ ಭಕ್ತಿ ಇದ್ದರೂ ಕೂಡ, **ಭಗವನಿಗ್ರಹತ್ತಾಲೆ** - ಭಗವನ್ನಿಗ್ರಹದಿಂದ **ಪ್ರತ್ಯವಾಯಮೇ ಫಲಿಕ್ಕುಮ್** - ತೊಂದರೆಯೇ ಫಲಿಸುತ್ತದೆ ಅಂದರೆ, ಆ ಸೂರ್ಯ ರುದ್ರಾದಿಗಳನ್ನಾರಾಧಿಸಿದ ಫಲವಿಲ್ಲದೆ ಹೋಗಿ ಭಗವನ್ನಿಗ್ರಹದಿಂದ ಉಂಟಾಗುವ ಫಲಪ್ರಾಪ್ತಿಯುಂಟಾಗುತ್ತದೆ. (ಅವರುಗಳನ್ನು ಬೇಕಾದರೆ ಉಪಾಸಿಸಿ, ಸರ್ವೇಶ್ವರನು ಅವರಿಗೆ ಕೊಟ್ಟಿರುವ ಶಕ್ತಿಯ ಮೂಲಕ ಐಹಿಕಾದಿ ಫಲಗಳನ್ನು ಹೊಂದಬಹುದು. ಆದರೆ ಅವರುಗಳೇ ಪರತತ್ವವೆಂದು, ಸರ್ವೇಶ್ವರನೊಂದಿಗೆ ಏಕತ್ವ ಸಮತ್ವಾದಿ ಭಾವಗಳನ್ನಾರೋಪಿಸಿದರೆ ಸರ್ವೇಶ್ವರನ ಆಗ್ರಹಕ್ಕೆ ಪಾತ್ರರಾಗುತ್ತಾರೆ; ಅವರುಗಳು ಕೊಡುವ ಫಲವೂ ಇಲ್ಲವು. ಆದರೆ ಮೋಕ್ಷಾರ್ಥಿಯು ಅದನ್ನೂ ಕೂಡ ವಸ್ತುತಃ ಮಾಡತಕ್ಕದ್ದಲ್ಲವು; ಏತಕ್ಕೆಂದರೆ, ಮೋಕ್ಷವ್ಯತಿರಿಕ್ತವಾದುದು ಆತನಿಗೆ ಬೇಕಾಗಿಲ್ಲವಾದುದರಿಂದ, ಆತನು ಇತರ ಫಲಗಳನ್ನು ಬಯಸಕೂಡದು.

ಆದರೆ ಜಗತ್ಸೃಷ್ಟಿಯಲ್ಲಿ ಪಾಶುಮತ ಬೌದ್ಧ ಮೊದಲಾದ ವೇದಬಾಹ್ಯ ಶಾಸ್ತ್ರವೂ ಮತ್ತು ವೇದಗಳಿಗೆ ಅಪಾರ್ಥ ಕಲ್ಪಿಸಿರುವ ಶಾಸ್ತ್ರಗಳೂ, ಏಕೆ ಇರಬೇಕು? ಅವರುಗಳ ಉಪದೇಶವು ಭಗವನ್ನಿಗ್ರಹಕ್ಕೆ ಆಸ್ಪದವಾಗುವಾಗ, ಅಂತಹ ಅನರ್ಥವನ್ನುಂಟುಮಾಡತಕ್ಕುದು ಲೋಕದಲ್ಲಿರಬಹುದೋ? ಇಂತಹ ಶಂಕಾಗಳ ನಿವಾರಣಾರ್ಥವಾಗಿ ಮುಂದೇ ಅವುಗಳಿಂದಲೂ ಆಗತಕ್ಕ ಕಾರ್ಯ ಉಂಟೆಂದು ಹೇಳುತ್ತಾರೆ. ಅನೇಕ ಪ್ರಾಣಿಗಳು, ಸ್ವಾಮಿಯು ಕೊಟ್ಟ ಕರಣ ಕಳೇಬರಗಳನ್ನು ದುರುಪಯೋಗ

ಆಕ್ಕೈಯಾಲೇ

"ತ್ವಂ ಹಿ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ
ದರ್ಶಯಿತ್ವಾಲ್ಪಮಾಯಾಸಂ ಫಲಂ ಶೀಘ್ರಂ ಪ್ರದರ್ಶಯ"॥

ಎನ್‌ಗಿರಪಡಿಯೇ, ಮೋಹನ ಶಾಸ್ತ್ರಜ್ಞಳಿಲೇ ದೃಷ್ಟಫಲ ಸಿದ್ಧಿಯುಣ್ಡಾಕ್ಕಿನದುವುಮ್, ಅವತ್ತೈಯಿಟ್ಟು ಮೋಹಿಪ್ಪತ್ತು ನರಕತ್ತಿಲೆ ವಿಳವಿಡುಗೈಕ್ಕಾಕವತ್ತನೈ.

ಪಡಿಸಿ ದುಷ್ಕರ್ಮಗಳನ್ನೆಸಗುತ್ತಾ ಸರ್ವೇಶ್ವರನ ಆಜ್ಞಾತಿಲಂಘನೆಯನ್ನು ಮಾಡಿರುತ್ತಾರೆ ಅಂತವರನ್ನು ಸರ್ವೇಶ್ವರನು ಶಾಸ್ತಾವಾಗಿ ದಂಡಿಸುವನು.

"ಕ್ಷಿಪಾಮ್ಯಜಸ್ರ ಮಶುಭಾ ಆಸುರೇಷ್ವಿವಯೋನಿಷು" (ಗೀ ೧೬ ೧೯.) **ಎಂಬ** ಶ್ರೀಕೃಷ್ಣಭಗವಾನರವರ ವಾಕ್ಯದ ಪ್ರಕಾರ, ಅಶುಭಗಳಾದ ಯೋನಿಗಳಲ್ಲಿ ಪುನಃ ಪುನಃ ಹುಟ್ಟಲು ಯೋಗ್ಯವಾದ ದುರ್ಗತಿಯನ್ನು ಹೊಂದಿಸುವದಕ್ಕಾಗಿ ಇಂತಹ ಅಸಚ್ಛಾಸ್ತ್ರಗಳನ್ನು ನಿರ್ಮಿಸುವ ಹಾಗೆ ಸರ್ವೇಶ್ವರನೇ ಮಾಡಿರುತ್ತಾನೆಂದು ಮುಂದೆ ಪ್ರಮಾಣವನ್ನು ತೋರಿಸುತ್ತಾರೆ.

ಆಕ್ಕೈಯಾಲೇ - ಆದುದರಿಂದ ಅಂದರೆ ಸರ್ವವೈದಿಕ ಕರ್ಮಬಹಿಷ್ಕೃತರಾಗಿರುವದರಿಂದ, ಇವರು ಸರ್ವೇಶ್ವರನ ಕೃಪಾಲೇಶಕ್ಕೂ ಕೂಡ ಅರ್ಹತೆಯನ್ನು ಸಂಪಾದಿಸದಿರುವದರಿಂದ, **"ಹೇ ಮಹಾಬಾಹೋ**-ಓ ಪರಾಕ್ರಮಶಾಲಿಯಾದ, **ರುದ್ರ**-ರುದ್ರನೇ, **ಮೋಹಶಾಸ್ತ್ರಾಣಿ ಕಾರಯ** - ಮೋಹಶಾಸ್ತ್ರಗಳನ್ನು ಮಾಡು. **ಅಲ್ಪಾಯಾಸಂ** - ಸ್ವಲ್ಪಶ್ರಮವನ್ನು ಮಾತ್ರವೇ, **ದರ್ಶಯಿತ್ವಾ** - ತೋರಿಸಿ, **ಫಲಂ** - ಫಲವನ್ನು, **ಶೀಘ್ರಂ** - ಬೇಗನೇ, **ಪ್ರದರ್ಶಯ** - ತೋರಿಸಿಕೊಡು ; ಅಂದರೆ ಅಲ್ಪಾಯಾಸರೂಪವಾದ ಅರ್ಚನ ಧ್ಯಾನಾದಿಗಳಿಂದಲೇ, ಪ್ರತ್ಯಕ್ಷದಲ್ಲೇ ಕಾಣಬಹುದಾದ, ಅವರುಗಳಿಗೆ ಅದರಿಂದಲೇ ಕೊನೆಗೆ ಪ್ರತ್ಯವಾಯ ಉಂಟಾಗಬಹುದಾದ ಫಲಗಳೇ ಉಂಟಾಗುವ ಹಾಗೆ ಮಾಡು. ಇದರಿಂದಲೇ **ಅನ್ಯದೇವತಾಭಜನ**, ಚೌಡಿ ಮೊದಲಾದ ಶಕ್ತಿಪೂಜೆಗಳೂ, ಅದಕ್ಕಾಗಿ ಪಶು ಮೊದಲಾದ ವಧೆಗಳೂ ಎಲ್ಲಾ ನಡೆಯುತ್ತಲಿವೆ." **ಎನ್ಗಿರಪಡಿಯೇ** – ಎಂದು ಹೇಳಿರುವ ಹಾಗೆ, **ಮೋಹನ ಶಾಸ್ತ್ರಜ್ಞಳಿಲೇ** ಮೋಹಬುದ್ಧಿಯನ್ನುಂಟುಮಾಡುವ ಶಾಸ್ತ್ರಗಳಲ್ಲಿ, ಆದುದರಿಂದ ಅಯಥಾರ್ಥಶಾಸ್ತ್ರಗಳಲ್ಲಿ, **ದೃಷ್ಟಫಲಸಿದ್ಧಿಯುಂಡಾಕ್ಕಿನದುಂ** - ಪ್ರತ್ಯಕ್ಷವಾಗಿ ಫಲಸಿದ್ಧಿಯನ್ನುಂಟು ಮಾಡಿದುದೂ, **ಅವತ್ತೈಯಿಟ್ಟು ಮೋಹಿಪ್ಪತ್ತು** – ಆವುಗಳ ಮೂಲಕವಾಗಿ ಭ್ರಮೆಯನ್ನುಂಟುಮಾಡಿ **ನರಕತ್ತಿ**

ಭಗವನ್ನಿಗ್ರಹಾಧೀನನೈ ಬ್ರಹ್ಮರುದ್ರರ್ ರಕ್ಷಿಕ್ಕ ಅಶಕ್ತರ್

ಸತ್ಯಸಙ್ಕಲ್ಪನಾನ ಭಗವರ್ ನೊರುವನೈ ನಿಗ್ರಾಹ್ಯನಾಕ ಕ್ಕೊಂಡಾಲ್,

(೧) "**ಬ್ರಹ್ಮಾ ಸ್ವಯಮ್ಭೂ ಶ್ಚತುರಾನನೋವಾ**

ಲೆ – ನರಕದಲ್ಲಿ, **ವಿಳವಿಡೈಕ್ಕಾಕವತ್ತನೈ** – ಅವರು ಮಾಡಿದ ದುಷ್ಕರ್ಮಕ್ಕಾಗಿ ಅವರನ್ನು ಬೀಳಿಸುವದಕ್ಕಾಗಿ ಮಾತ್ರವೇ ಎಂದು ತಿಳಿಯತಕ್ಕದ್ದು,

ಆದರೆ ಸರ್ವೇಶ್ವರನು ಹೀಗೆ ಮಾಡತಕ್ಕದ್ದು ಸರಿಯೇ ಎಂಬ ಶಂಕಾ, ಶಾಸ್ತ್ರ ಜ್ಞಾನವಿಲ್ಲದವರ ಹೃದಯದಲ್ಲಿ ನೆಲಗೊಂಡಿರಬಹುದು. ಲೋಕದಲ್ಲಿಯಷಿಗಳೂ ಇದ್ದಾರೆ, ಘಾತುಕ ಮೃಗಗಳೂ ಕ್ರೂರಸರ್ಪಾದಿಗಳೂ ಇವೆ. ಇವುಗಳಿರಡೂ ಲೋಕದಲ್ಲಿರಲು ಏನು ಸಮಾಧಾನ ಹೇಳಲು ಸಾಧ್ಯವೋ ಅದೇ ಸಮಾಧಾನವೇ ಸಚ್ಛಾಸ್ತ್ರ ಮೋಹಶಾಸ್ತ್ರಗಳಿರಡೂ ಲೋಕದಲ್ಲಿರುವದಕ್ಕೂ ಎಂದು ಭಾವಿಸತಕ್ಕದ್ದು. ಆದುದರಿಂದ, ಇವುಗಳ ಸಂಬಂಧವು ಸುಕೃತಿ ದುಷ್ಕೃತಿಗಳಿಗಾಗಿ ಏರಟ್ಟವೆಂದು ಭಾವಿಸತಕ್ಕದ್ದು. ದುಷ್ಟಶಾಸ್ತ್ರಗಳ ಸಂಸರ್ಗವು ಸುಕೃತಿಗೆ ಎಂದಿಗೂ ಉಂಟಾಗಲಾರದು; ಒಂದು ವೇಳೆ ಪೊರೆತರೂ ಪ್ರತ್ಯವಾಯವನ್ನುಂಟು ಮಾಡಲಾರದು ಎಂದು ಭಾವಿಸತಕ್ಕದ್ದು.

ಭಗವನ್ನಿಗ್ರಹಕ್ಕೆ ಸಿಕ್ಕಿದವರನ್ನು ಬ್ರಹ್ಮರುದ್ರರು ರಕ್ಷಿಸಲು ಅಶಕ್ತರು.

ಸತ್ಯಸಙ್ಕಲ್ಪನಾನ – ದುಷ್ಟನಿಗ್ರಹ, ಶಿಷ್ಟರಕ್ಷಣ, ಧರ್ಮಸ್ಥಾಪನಾದಿಗಳಲ್ಲಿ ದೃಢಸಙ್ಕಲ್ಪನಾದ ಭಗವಂತನು, **ಒರುವನೈನಿಗ್ರಾಹ್ಯನಾಕಕೊಂಡಾಲ್**.– ಒಬ್ಬನನ್ನು ನಿಗ್ರಹಿಸಬೇಕೆಂದು ಇಷ್ಟಪಟ್ಟರೆ, ಅಂತಾವನನ್ನು, ಮಹಾ ಪ್ರಭಾವಶಾಲಿಗಳಾದ ಶ್ರೇಷ್ಠದೇವರಾದ, ಜೀವಕೋಟಿಗೆ ಸೇರಿದ **ಬ್ರಹ್ಮರುದ್ರ** ಇಂತಾದಿಗಳು, ರಕ್ಷಿಸಲು ಸಮರ್ಥರಲ್ಲವೆಂಬುವದಕ್ಕೆ ಶ್ರೀವಾಲ್ಮೀಕಿ ಭಗವಾನ್ ವಾಕ್ಯವನ್ನು ಉದಾಹರಿಸುತ್ತಾರೆ :---

(೧) ರಾಮಾ ಸುಂದರ. ೫೧. ೪೫. **ಬ್ರಹ್ಮಾ** -- ಬೃಹತ್ವದಿಂದಲೂ, ಅಣ್ಡಾಧಿಪನಾಗಿ ಸೃಷ್ಟಿಕರ್ತಾವಾಗಿ ನಿಯಾಮಿಕನಾಗಿರುವದರಿಂದಲೂ ಪ್ರಸಿದ್ಧನಾದ **ಸ್ವಯಮ್ಭೂ** – ಲೋಕದವರ ಹಾಗೆ ಯೋನಿಯಿಂದ ಜನಿಸದೆ ತಾನಾಗಿಯೇ ಸ್ವಾಮಿಯ ನಾಭೀಕಮಲದಲ್ಲಿ ಹುಟ್ಟಿ ಪ್ರಸಿದ್ಧನಾದ, **ಚತುರಾನನೋವಾ** –

ರುದ್ರಸ್ತ್ರಿನೇತ್ರ ಸ್ತ್ರಿಪುರಾಂತಕೋವಾ ।
ಇನ್ದ್ರೋ ಮಹೇನ್ದ್ರ ಸ್ಸುರನಾಯಕೋ ವಾ
ತ್ರಾತುಂ ನ ಶಕ್ಯಾ ಯುಧಿ ರಾಮವಧ್ಯಂ ॥”

ಎನ್ದಿರಪಡಿಯೇ ಬೇವತಾನ್ತರಜ್ಞಳ್ ರಕ್ಷಿಕ್ಕ ಶಕ್ತರಲ್ಲರ್‌ಗಳ್.

ನಾಲ್ಕು ವೇದಗಳಿಗೂ ನಾಲ್ಕುಮುಖದಿಂದ ಪ್ರವರ್ತಕನಾಗಿ ಪ್ರಸಿದ್ಧನಾದ, ಹೀಗೆ ಸ್ವರೂಪ, ಜನ್ಮ, ವೃತ್ತಗಳಿಂದಲೂ ಪ್ರಸಿದ್ಧನಾದ ಚತುರ್ಮುಖ ಬ್ರಹ್ಮನೇ ಆಗಲಿ, ಅಥವಾ, **ರುದ್ರಃ** - ಅಂಡಪ್ರಳಯಕ್ಕೆ ಅಧಿಪನಾಗಿ, ಅದರಿಂದ ಎಲ್ಲವನ್ನೂ ಅಳುವ ಹಾಗೆ ನೂಡುವವನಾಗಿ ಮಹಾ ಕ್ರೌರ್ಯವುಳ್ಳವನಾಗಿ ಪ್ರಸಿದ್ಧನಾದ, **ತ್ರಿನೇತ್ರಃ** - ಲೋಕವನ್ನೆಲ್ಲಾ ಮೋಹಿಸಿ ಸ್ವಾಧೀನಗೊಳಿಸುವ ಮನ್ಮಥನನ್ನು ಭಸ್ಮಮಾಡಿದ ಮುಕ್ಕಣ್ಣನೆಂದು ಪ್ರಸಿದ್ಧನಾದ, **ತ್ರಿಪುರಾನ್ತಕೋವಾ** - “**ತೇಷಾಮಸು ರಾಣಾಂ ತ್ರಿಸ್ರಃಪುರಆಸನ್**” ಎಂದು ಶ್ರುತಿಯಲ್ಲಿ ದುರ್ಜಯವಾದುದೆಂದು ಪ್ರಸಿದ್ಧಿ ಹೊಂದಿದ ತ್ರಿಪುರವನ್ನು ನಿರ್ಮೂಲಮಾಡಿ ಪ್ರಖ್ಯಾತನಾದ, ಇಂತಹ ರುದ್ರನೇ ಆಗಲಿ, ಅಥವಾ, **ಇನ್ದ್ರಃ**-ತ್ರಿಲೋಕಾಧಿಪತ್ಯವನ್ನು ಹೊಂದಿ ಮಹದ್ಐಶ್ವರ್ಯವನ್ನು ಹೊಂದಿ ಪ್ರಸಿದ್ಧನು, **ಮಹೇನ್ದ್ರಃ**-“**ಮಹಾನ್ವಾzಯಮಭೂದ್ಯೋ ವೃತ್ರಮವಧೀತ್**” ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ, ಮಹಾ ಪರಾಕ್ರಮಿಯಾದ ವೃತ್ರಾಸುರನನ್ನು ಕೊಂದ ಖ್ಯಾತಿಯಿಂದ ಮಹೇನ್ದ್ರನೆಂದು ಹೇಳಿಸಿಕೊಳ್ಳುವನಾದ, **ಸುರನಾಯಕೋವಾ** - ದೇವತೆಗಳಿಗೆಲ್ಲಾ ರಾಜನೆಂದು, ಹೀಗೆಲ್ಲಾ ಪ್ರಖ್ಯಾತನಾದ ಇನ್ದ್ರನೇ ಆಗಲಿ, **ರಾಮವಧ್ಯಂ** – ಶ್ರೀರಾಮನಿಂದ ಕೊಲ್ಲಲ್ಪಡಲು ಯೋಗ್ಯನಾದವನನ್ನು, ಅಂದರೆ ಶ್ರೀರಾಮನು ಕೊಲ್ಲಬೇಕೆಂದಿರುವವನನ್ನು **ತ್ರಾತುಂ**-ರಕ್ಷಿಸಲು, **ನಶಕ್ಯಾಃ** - ಸಮರ್ಥರಲ್ಲವು. ಇದು ಸರ್ವಜ್ಞನಾದ ಆಂಜನೇಯನು, ಪಾಪಿಯಾದ ಭಗವನ್ನಿಗ್ರಹಕ್ಕೆ ಪಾತ್ರನಾದ ರಾವಣನಂ ಕುರಿತು ಹೇಳುವ ವಾಕ್ಯವು.” ಈ ಚತುರ್ಮುಖನಿಗಿಂತಲೂ ಶ್ರೇಷ್ಠನೊಬ್ಬನು “**ಹಿರಣ್ಯಗರ್ಭಸ್ಸಮವರ್ತತಾಗ್ರೇ**” ಎಂಬ ಶ್ರುತಿಯಲ್ಲೂ, ರುದ್ರನಿಗಿಂತಲೂ ಅಧಿಕನಾದ ಮಂಗಳಕರನಾದ ಶಿವನೊಬ್ಬನುಂಟೆಂದು “**ನಸನ್ನಚಾಸೀಚ್ಛಿವಏವ ಕೇವಲಃ**” ಎಂಬ ಶ್ರುತಿಯಲ್ಲೂ, ಇಂದ್ರನಿಗಿಂತಲೂ ಮಹತ್ತಾದವನೊಬ್ಬನುಂಟೆಂದು “**ಇಂದ್ರೋ ಮಾಯಾಭಿಃ ಪುರುರೂಪ ಈಯತೇ**” ಎಂಬ ಶ್ರುತಿಯಲ್ಲೂ ಹೇಳಲ್ಪಟ್ಟಿರುತ್ತದೆ ಎಂಬ ಭಾವವು. **ಎನ್ದಿರಪಡಿಯೇ** - ಎಂದು ಮೇಲಿನ ಶ್ಲೋಕದಲ್ಲಿ ಉಪಪಾದಿತವಾಗಿರುವ ಹಾಗೆ, **ಬೇವತಾನ್ತರಜ್ಞಳ್** - ಸರ್ವೇಶ್ವರನಿಗಿಂತ ಬೇರೆಯಾದ **ಈ** ಬ್ರಹ್ಮರುದ್ರೇಂದ್ರಾದಿಗಳು, **ರಕ್ಷಿಕ್ಕ ಶಕ್ತರಲ್ಲರ್‌ಗಳ್** – ರಕ್ಷಿಸಲು ಶಕ್ತ

ಭಗವದನುಗ್ರಹಪಾತ್ರನೈ ಹಿಂಸಿಕ್ಕ ಬ್ರಹ್ಮರುದ್ರಾದಿ ಸರ್ವರುಂ ಅಶಕ್ತರ್

ಸರ್ವದೇವತೈಗಳುಮ್ ಶ್ರೀಸುಗ್ರೀವ ಮಹಾರಾಜಾದಿಗಳೈ ಪ್ಪೋಲೆ ತನಕ್ಕನ್ತರಜ್ಞರಾ ಯಿರುಪ್ಪಾರುಮ್ ತನ್ನೈಯಡನ್ದಾನೊರುವನೈ ನಲಿ

ರಲ್ಲರು. ಈ ಪ್ರಸಿದ್ಧರಾಗಿರುವ, ಮಹಾ ಪರಾಕ್ರಮಿಗಳಾದವರೇ ರಕ್ಷಿಸಲು ಶಕ್ತರಲ್ಲ ವೆಂದು ಹೇಳಿದಮೇಲೆ, ಕೈಮುತಿಕ ನ್ಯಾಯದಿಂದ ಇತರ ದೇವತೆಗಳೂ ರಕ್ಷಿಸ ಲಾರರೆಂಬುವದು ಸಿದ್ಧವು. (ಬಾಣಾಸುರ ಯುದ್ಧದಲ್ಲಿ ಶ್ರೀಕೃಷ್ಣನು ಅಸುರನ ಸಹಸ್ರ ಬಾಹುಗಳನ್ನೂ ಛೇದಿಸುವಾಗ ರುದ್ರನು ತನ್ನ ಶಿಷ್ಯನಾದ ಅಸುರನನ್ನು ಕಾಪಾಡಲು ಅಶಕ್ತನಾದ ವಿಷಯವು ಪುರಾಣವಿದಿತವಾಗಿರುತ್ತದೆ. ರುದ್ರನು ವಿಷ್ಣು ವನ್ನು ಸ್ತೋತ್ರಮಾಡಿ (೧) "**ಅಯಂಮಮೇಷ್ಟೋದಯಿತೋನುವರ್ತೀ**" ಈ ಬಾಣಾಸುರನು ನನಗೆ ಪರಮಪ್ರಿಯನಾಗಿ ಭಕ್ತನು, ನಿನ್ನ ಭಕ್ತನಾದ ಪ್ರಹ್ಲಾದ ಪೌತ್ರನು, ಆದುದರಿಂದ ಪ್ರಹ್ಲಾದನಾದ ನಿನ್ನ ಭಕ್ತನಲ್ಲಿ ಹೇಗೆ ನಿನಗೆ ಕೃಪೆಯೋ ಹಾಗೆಯೇ ಆತನ ಪೌತ್ರನಲ್ಲೂ ದಯೆಯನ್ನು ತೋರಿಸು ಎಂದು ಪ್ರಾರ್ಥಿಸಿದುದ ರಿಂದ, ಆಗ ಆತನನ್ನು ಜೀವದೊಂದಿಗೆ ಬಿಟ್ಟನು ಎಂಬ ಇತಿಹಾಸವುಂಟು. ಈ ವಿಷಯದಲ್ಲಿ ಇನ್ನೂ ಅನೇಕ ಇತಿಹಾಸಗಳುಂಟು.)

ಭಗವಂತನು ರಕ್ಷಿಸಬೇಕೆಂದಿರುವವನನ್ನು ಬ್ರಹ್ಮರುದ್ರಾದಿಗಳು ತೊಂದರೆ ಮಾಡಲು ಅಶಕ್ತರು

ಹಿಂದಿನ ವಾಕ್ಯದಲ್ಲಿ ಭಗವನ್ನಿಗ್ರಹಕ್ಕೆ ಪಾತ್ರನನ್ನು ಇವರುಗಳಲ್ಲಿ ಯಾರೂ ರಕ್ಷಿಸಲು ಅಶಕ್ತರೆಂದು ಹೇಳಿದರು. ಈ ಮುಂದಿನ ವಾಕ್ಯದಿಂದ ಆತನು ರಕ್ಷಿಸ ಬೇಕೆಂದಿರುವನನ್ನು ತೊಂದರೆ ಮಾಡಲು ಕೂಡ ಇವರುಗಳು ಅಶಕ್ತರೆಂದು ಹೇಳಿ ಅದಕ್ಕೆ ರಾಮಾಯಣದಿಂದ ದೃಷ್ಟಾಂತಗಳನ್ನು ತೋರಿಸುತ್ತಾರೆ.

ಶ್ರೀಸುಗ್ರೀವಮಹಾರಾಜಾದಿಗಳೈ ಪ್ಪೋಲೆ - ಶ್ರೀ ಸುಗ್ರೀವಮಹಾ ರಾಜನೂ, ಆದಿಶಬ್ದದಿಂದ ಶರಭ, ಅಂಗದ, ಜಾಂಬವ, ಮೈಂದರು ಹೇಳಲ್ಪಟ್ಟರು. ಇವರುಗಳು ಶರಣಾಗತನಾದ ವಿಭೀಷಣನನ್ನು ಪರಿಗ್ರಹಿಸಕೂಡದೆಂದು ನಿರೋಧಿ ಸಿದ ಹಾಗೆ, **ಸಮಸ್ತ ದೇವತೆಗಳುಮ್** - ಸಮಸ್ತ ದೇವತೆಗಳೂ, **ತನಕ್ಕನ್ತರ**

---

(೧) ಭಾಗ. ೧೦. ೬೩. ೪೬.

ಯನಿನ್ಯೈತ್ತಾಲ್ (1) "ಸಕೃದೇವಪ್ರಪನ್ನಾಯ" ಎನ್ಗಿರಪಡಿಯೇ, ಸತ್ಯ ಪ್ರತಿಜ್ಞಾನಾನ ತ್ಱವ್ರತಂ ಕುಲೈಯಾ ಮೈಕ್ಕಾಗ ರಾವಣಾದಿಗಳೈ ಪ್ಪೋಲೆ ದುಷ್ಪ್ರಕೃತಿಗಳಾಯ್ ನಿರಾಕರಿಕ್ಕವೇಣ್ಡುವಾರೈ ನಿರಾಕರಿತ್ತುಂ, ಶ್ರೀವಾನರ ವೀರರ್ಗಳೈ ಪ್ಪೋಲೆ ಸತ್ಪ್ರಕೃತಿಗಳಾಯ್ ಅನುಕ್ಕೂಲಿಪ್ಪಿಕ್ಕವೇಣ್ಡುವಾರೈ ಅನುಕ್ಕೂಲಿಪ್ಪಿತ್ತುಮ್ ಸರ್ವೇಶ್ವರನ್ ರಕ್ಷಿಕ್ಕುಮ್.

ಜ್ಞರಾಯ್ಯಿರುಪ್ಪಾರುಂ - ತನಗೆ ಎಂದರೆ ಸರ್ವೇಶ್ವರನಿಗೆ ಬೇಕಾದವರಾಗಿದ್ದರೂ ಕೂಡ, ತನ್ನೈಯಡನ್ಪಾನೊರುವನೈ - ತನ್ನಲ್ಲಿ ಶರಣಾಗತಿಮಾಡಿದ ಒಬ್ಬನನ್ನು, ನಲೈಯನಿನ್ಯೈತ್ತಾಲ್ - ಬಾಧಿಸಬೇಕೆಂದು ನಿಶ್ಚಯಿಸಿದರೆ, "ಸಕೃದೇವಪ್ರಪನ್ನಾಯ" ಎನ್ಗಿರಪಡಿಯೇ - ಎಂಬ ಶ್ಲೋಕದಲ್ಲಿ ಉಪಪಾದಿತವಾಗಿರುವ ಹಾಗೆ, ಸತ್ಯಪ್ರತಿಜ್ಞಾನಾನ - ಆಶ್ರಿತರಕ್ಷಣೆ ವಿಷಯದಲ್ಲಿ ಸತ್ಯ ಪ್ರತಿಜ್ಞೆಯನ್ನು ಮಾಡಿರುವ, ತ್ಱವ್ರತಂ -

ಸರ್ವ ಧರ್ಮಾ೯ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।
ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ॥

ಮತ್ತು,

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಞ್ಚನ ।
ಅನೃತಂ ನೋಕ್ತಪೂರ್ವಂ ಮೇ ನ ಚ ವಕ್ಷ್ಯೇ ಕದಾಚನ ।
ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂವಾಸೀತೇ ಸಲಕ್ಷ್ಮಣಾಂ ।
ನತುಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥"

ಇತ್ಯಾದಿ ಅನೇಕ ಸಲ ಪ್ರತಿಜ್ಞೆಮಾಡಿ ಹೇಳಿದ, ಆಶ್ರಿತ ರಕ್ಷಣೆಯಲ್ಲಿ ತಾನು ಬದ್ಧಕಂಕಣನೆಂದು ಹೇಳಿಕೊಂಡ ತನ್ನ ವ್ರತವು, ಕುಲೈಯಾಮೈಕ್ಕಾಗ - ನಾಶವಾಗದಿರುವದಕ್ಕಾಗಿ, ಕೆಟ್ಟು ಹೋಗದಿರುವದಕ್ಕಾಗಿ, ರಾವಣಾದಿಗಳೈಪ್ಪೋಲೆ - ರಾವಣಾದಿಗಳ ಹಾಗೆ, ದುಷ್ಪ್ರಕೃತಿಗಳಾಯ್ - ಕೆಟ್ಟ ಸ್ವಭಾವವುಳ್ಳವರಾಗಿ ನಿರಾಕರಿಕ್ಕವೇಣ್ಡುವಾರೈ ನಿರಾಕರಿತ್ತುಮ್ - ನಿರಸನ ಮಾಡಬೇಕಾದವರನ್ನು ನಿರಸನಮಾಡಿ, ಶ್ರೀವಾನರವೀರರ್ಗಳೈಪ್ಪೋಲೆ - ಸುಗ್ರೀವ, ಅಂಗದ, ಜಾಂಬವಾ೯ ಪ್ರಭೃತಿಗಳಾದ ವಾನರ ಧೀರರ ಹಾಗೆ, ಸತ್ಪ್ರಕೃತಿಗಳಾಯ್ - ಒಳ್ಳೇ

---

(1) ರಾ. ಯುದ್ಧ ೧೮-೩೩.

ಸತ್ಸ್ವಭಾವವುಳ್ಳವರನ್ನು, **ಅನುಕ್ಕೂಲಿಪ್ಪಿತ್ತುಂ** – ಅನುಕೂಲರನ್ನಾಗಿ ಮಾಡಿಕೊಂಡು, **ಸರ್ವೇಶ್ವರನ್ ರಕ್ಷಿಕ್ಕುಮ್** – ಸರ್ವೇಶ್ವರನು ರಕ್ಷಿಸುವನು.

ಇದು ವಿಭೀಷಣ ಶರಣಾಗತಿ ವಿಷಯವು. ತನ್ನ ಅಣ್ಣನಾದ ರಾವಣನು ಅನ್ಯಾಯವಾಗಿ ನಾಶವನ್ನು ಹೊಂದುತ್ತಾನಲ್ಲಾ ಎಂಬ ಪರಿತಾಪದಿಂದ ಹಿತವಾದುದನ್ನು ಹೇಳಿದುದಕ್ಕಾಗಿ ಸಭೆಯಲ್ಲಿ ಅವಮಾನವನ್ನು ಹೊಂದಿ **ತ್ವಾಂತುಧಿಕ್ಕು ಲಪಾಂಸನಂ** ಎಂದು ನಿಂದಿತನಾದುದರಿಂದಲೂ ಅಧರ್ಮದ ಮಧ್ಯದಲ್ಲಿರತಕ್ಕದ್ದು ಸ್ವರೂಪಕ್ಕೆ ಕುಂದಕವಾದುದರಿಂದಲೂ, ರಾವಣನನ್ನು ತ್ಯಜಿಸಿ ಶ್ರೀರಾಮನನ್ನು ಶರಣು ಹೊಂದಿದನು. ಆತನನ್ನು ರಾಮಗೋಷ್ಟಿಯಲ್ಲಿ ಸೇರಿಸುವದು ಸರಿಯಲ್ಲವು. ಶತ್ರುಪಂಗಡದಿಂದ ಬಂದವನು ನಿಗ್ರಹಾರ್ಹನೆಂದು ಸುಗ್ರೀವ, ಅಂಗದ, ಶರಭ, ಜಾಂಬವ, ಮೈಂದರು ಪ್ರತಿಭಟಿಸಿದರು. ಆದರೆ ಶ್ರೀರಾಮನು,

(೧) **"ಸಕೃದೇವ ಪ್ರಪನ್ನಾಯ ತವಾಸ್ಮೀತಿಚ ಯಾಚತೇ ।**
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ॥"

ನಿನ್ನವನೈಯಾ ನಾನು, ಎಂದು ಹೇಳಿ ಒಂದು ಸಲ ಶರಣಾಗತನಾಗಿ ರಕ್ಷಿಸು ಎಂದು ಬೇಡಿದರೂ, ಏನೊಂದೂ ತಾರತಮ್ಯವಿಲ್ಲದೆ ಎಲ್ಲರನ್ನೂ ರಕ್ಷಿಸುತ್ತೇನೆಂಬುವದೇ ತನ್ನ ದೃಢಸಂಕಲ್ಪವೆಂದು ಹೇಳಿ,

(೨) **"ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ ।**
ವಿಭೀಷಣೋವಾ ಸುಗ್ರೀವ ಯದಿವಾ ರಾವಣಸ್ವಯಂ ॥"

ಆ ವಿಭೀಷಣನನ್ನು ಕರೆದುಕೊಂಡು ಬರುವವೆಂದು ಸುಗ್ರೀವನಿಗೆ ಆಜ್ಞಾಪಿಸಿ, ವಿಭೀಷಣನೇ ಆಗಲಿ ಅಥವಾ ರಾವಣನೇ ಆಗಲಿ ಶರಣಾಗತನಾದರೆ ಅಭಯ ಉಂಟೆಂದು ಹೇಳಲು, ಆಗ ಸುಗ್ರೀವಾದಿಗಳೆಲ್ಲಾ ಅದಕ್ಕೆ ಒಪ್ಪಿಕೊಂಡು,

"ವಿಭೀಷಣೋ ಮಹಾಪ್ರಾಜ್ಞಸ್ಸಖಿತ್ವಂ ಚಾಭ್ಯುಪೈತುನಃ"

"ಆಮಹಾ ಪ್ರಾಜ್ಞನಾದ ವಿಭೀಷಣನು ನಮ್ಮೊಂದಿಗೆ ಸಖ್ಯಭಾವವನ್ನು ಹೊಂದಲಿ" ಎಂದು ಒಪ್ಪಿಕೊಂಡು ಅನುಕೂಲರಾದರು. ಆದರೆ ಪ್ರತಿಕೂಲನಾದ ರಾವಣನು ಯಾವಾಗಲೂ ಪ್ರತಿಕೂಲನಾಗಿಯೇ ಇದ್ದುಬಿಟ್ಟು,

"ದ್ವಿಧಾಭಜ್ಯೇಯಮಪ್ಯೇವಂ ನ ನ ಮೇಯಂ ತು ಕಸ್ಯಚಿತ್ ।
ಏಷ ಮೇ ಸಹಜೋ ದೋಷಸ್ಸ್ವಭಾವೋ ದುರತಿಕ್ರಮಃ॥"

(ರಾಮಾ. ಯುದ್ಧ ಸಂ. ೧೧) "ತನ್ನನ್ನು ಎರಡಾಗಿ ಕತ್ತರಿಸಿದರೂ ತಾನು

---

(೧) ರಾಮಾ. ಯುದ್ಧ. ೧೮-೩೩ (೨) ರಾಮಾ. ಯುದ್ಧ. ೧೮-೩೪

ದೇವತಾನ್ತರಙ್ಗಳ್ ಪಕ್ಕಲ್

ಯಾರಿಗೆ ಆಗಲಿ ತಗ್ಗಿ ನಡೆಯುವನಲ್ಲವು, ಇದು ತನ್ನ ಸಹಜವಾದ ದೋಷವು. ಅಂತಹ ಸ್ವಭಾನವನ್ನು ತಿದ್ದುವದು ಸಾಧ್ಯವಲ್ಲವು" ಎಂದು ರಾವಣನೇ ಹೇಳಿಕೊಂಡುದರಿಂದ ಆತನು ನಿಗ್ರಹಿಸಲ್ಪಟ್ಟನು. ಆದುದರಿಂದ ಸರ್ವೇಶ್ವರನಿಗೆ ಅಧರ್ಮಾಚರಣೆಯಿಂದ ವಿರೋಧಿಯಾದವನನ್ನು ನಿಗ್ರಹಿಸಲೆತ್ನಿಸಿದಾಗ ಯಾರೂ ಅಂತಹ ವಿರೋಧಿಯನ್ನು ರಕ್ಷಿಸಲಾರರು ; ಮತ್ತು ಸ್ವಾಮಿಯು ರಕ್ಷಿಸಬೇಕೆಂದು ಸಙ್ಕಲ್ಪಿಸಿದವರಿಗೆ ತೊಂದರೆಯನ್ನುಂಟುಮಾಡಲೂ ಕೂಡ ಇತರರು ಅಶಕ್ತರೆಂಬ ಭಾವವು. ಹಿರಣ್ಯಕಶಿಪುವು ಭಕ್ತಶಿಖಾಮಣಿಯಾದ ಪ್ರಹ್ಲಾದನನ್ನೂ, ದುರ್ಯೋಧನನು ತನಗೆ ಪ್ರಾಣಪ್ರಿಯರಾದ ಪಾಂಡವರನ್ನೂ, ದೂರ್ವಾಸಮಹರ್ಷಿಯು ಪರಮ ಭಕ್ತವಾದ ಅಂಬರೀಷನನ್ನೂ, ಹಿಂಸಿಸಬೇಕೆಂದು ಮಾಡಿದ ಸರ್ವಪ್ರಯತ್ನಗಳೂ ವಿತಥವಾದವಷ್ಟೇ. ಈ ಎರಡು ಅಭಿಪ್ರಾಯಗಳನ್ನೂ ಶ್ರೀಮದಾಚಾರ್ಯರವರು ಅಭೀತಿಸ್ತವದ,

"ವಿಧಿಸ್ತ್ರಿಪುರಮರ್ದನ ಸ್ತ್ರಿದಶಪುಙ್ಗವಃಪಾವಕೋ ।
ಯಮಪ್ರಭೃತಯೋಪಿ ಯದ್ವಿಮತರಕ್ಷಣೇ ನ ಕ್ಷಮಾಃ ॥
ರಿರಕ್ಷಿಷತಿ ಯತ್ರಚ ಪ್ರತಿಭಯಂ ನಕಿಞ್ಚಿತ್ಕ್ವಚಿತ್ಜನಃ ।
ಪ್ರತಿಭಟ್ಯಾ ಪ್ರಭೋ ಶಮಯ ರಙ್ಗಧಾನಾದಿಷು ॥"

ಎಂಬ ಶ್ಲೋಕದಲ್ಲಿ ಬಹು ಚೆನ್ನಾಗಿ ಉಪಪಾದಿಸಿರುತ್ತಾರೆ.

(ಅಭೀತಿಸ್ತವ ೧೧೩---೧. ೮ ಪುಟಗಳನ್ನು ನೋಡಿ.) ಹೀಗೆ ಆಶ್ರಿತ ರಕ್ಷಣೆಯಲ್ಲಿ ಸ್ಥಿರಸಙ್ಕಲ್ಪನೇನೋ ಸರ್ವೇಶ್ವರನು ಹೌದು. ಆದರೆ ಕೆಲವು ತುಂಬಾ ಪ್ರಿಯರಾದವರು ಆ ಸಙ್ಕಲ್ಪಕ್ಕೆ ವಿರೋಧವಾಗಿ ಬಂದರೆ ಆಗಲಾದರೂ ತನ್ನ ಸ್ಥಿರಸಂಙ್ಕಲ್ಪಕ್ಕೇನಾದರೂ ಸಂಚ್ಯುತಿಯೇ ಉಂಟೋ ಎಂದರೆ,

"ಅಪ್ಯಹಂಜೀವಿತಂ ಜಹ್ಯಾಂ ತ್ವಾಂವಾ ಸೀತೇ ಸಲಕ್ಷ್ಮಣಾಂ ।
ನತುಪ್ರತಿಜ್ಞಾಂ ಸಂಶೃತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥"

ಸೀತಾಲಕ್ಷ್ಮಣರನ್ನಾದರೂ ಬಿಟ್ಟೀನೇ ನಿನಾ, ತನ್ನ ಪ್ರತಿಜ್ಞೆಯನ್ನು ಎಂದಿಗೂ ಬಿಡುವನಲ್ಲವು ಎಂದು ಹೇಳಲ್ಪಟ್ಟಿರುತ್ತದೆ.

ಹೀಗೆ ಸರ್ವಶಕ್ತನು ಭಕ್ತನ ವಿರೋಧಿನಿಗ್ರಹಕ್ಕೂ, ಆಶ್ರಿತ ಸಂರಕ್ಷಣೆಗೂ ಬದ್ಧಕಂಕಣನಾಗಿರುವಲ್ಲಿ, ರುದ್ರಾದಿಅನ್ಯದೇವತಾ ಭಜನವನ್ನು ಅನೇಕರು ಏತಕ್ಕೆ ಮಾಡುತ್ತಾರೆಂದರೆ ಅದಕ್ಕೆ ಕಾರಣವನ್ನು ತಿಳಿಸುತ್ತಾರೆ.

ದೇವತಾನ್ತರಙ್ಗಳ್ ಪಕ್ಕಲ್ – ಬ್ರಹ್ಮ, ರುದ್ರ, ಇಂದ್ರ, ಅಗ್ನಿ ಆದಿತ್ಯ

(೧) "ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹದೇವತಾಃ ।
ಕ್ಷಿಪ್ರಂಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ ॥"
ಎಜ್ಜರೆಪಡಿಯೇ ವಿಷಮುಧು ತುಲ್ಯಜ್ಗಳಾನ ಕ್ಷುದ್ರಫಲಜ್ಗಳ್ ಕಡುಗ ಸಿದ್ಧಿಕ್ಕುಮ್.

ಮೊದಲಾದವರ ಮೂಲಕ ಅಂದರೆ ಅವರುಗಳನ್ನು ಯಜ್ಞಯಾಗಾದಿಗಳಲ್ಲಿ ಆರಾಧಿಸುವದರಿಂದ, "**ಕರ್ಮಣಾಂಸಿದ್ಧಿಂ** - ಕರ್ಮಗಳ ಫಲಗಳನ್ನು, **ಕಾಂಕ್ಷನ್ತಃ** - ಆಪೇಕ್ಷಿಸುವರಾಗಿ, ಅನೇಕರು **ಇಹ** - ಈ ಕರ್ಮಭೂಮಿಯಲ್ಲಿ, **ದೇವತಾಃ** - ರುದ್ರೇಂದ್ರಾದಿ ದೇವತೆಗಳನ್ನು, **ಯಜನ್ತೇ** - ಆರಾಧಿಸುತ್ತಾರೆ. ಎಲ್ಲೋ ಅಲ್ಪಸ್ವಲ್ಪ ಜನರು ಕರ್ಮಫಲಾಪೇಕ್ಷೆಯಿಲ್ಲದವರಾಗಿ ಆ ರುದ್ರೇಂದ್ರಾದಿ ದೇವತೆಗಳಿಗೂ ಅಂತರಾತ್ಮಾವಾದ ಮತ್ತು ಸರ್ವಯಜ್ಞ ಭೋಕ್ತಾವಾದ ನನ್ನನ್ನು ಆರಾಧಿಸುವರು; ಇದು ಏತಕ್ಕೆ ಹೀಗೆ ಎಂದರೆ, **ಮಾನುಷೇ ಲೋಕೇ**-ಈ ಮನುಷ್ಯಲೋಕದಲ್ಲೇ **ಕ್ಷಿಪ್ರಂಹಿ**-ಬಲು ಶೀಘ್ರವಾಗಿ ಅಂದರೆ ಈ ಜನ್ಮದಲ್ಲೇ, **ಕರ್ಮಜಾಸಿದ್ಧಿಃ**-ಆ ಕರ್ಮದಿಂದುಂಟಾಗುವ ಸುಖದುಃಖಮಿಶ್ರವಾದ, ಅಲ್ಪಾಸ್ಥಿರವಾದ ಫಲವು, **ಭವತಿ**-ಉಂಟಾಗುತ್ತದೆ; ಪುತ್ರ, ಪಶು, ಅನ್ನ, ಸಂಪತ್ತು ಮೊದಲಾದವುಗಳನ್ನು ಆ ಅನ್ಯದೇವತೆಗಳ ಆರಾಧನ ಮೂಲಕವಾಗಿ ಕ್ಷಿಪ್ರವಾಗಿ ಹೊಂದುತ್ತಾರೆಯೇ ವಿನಾ, ನಿರತಿಶಯವಾದ, ದುಃಖಮಿಶ್ರವಲ್ಲದ, ಅನಿತ್ಯವಲ್ಲದ ಸುಖಕ್ಕಾಗಿ ತನ್ನನ್ನು ಬಹು ಜನರು ಆರಾಧಿಸುವದಿಲ್ಲವು", **ಎಜ್ಜರೆಪಡಿಯೇ**-ಎಂದು ಮೇಲಿನ ಶ್ಲೋಕದಲ್ಲಿ ಹೇಳಿರುವ ಹಾಗೆ, **ವಿಷಮುಧುತುಲ್ಯಜ್ಗಳಾನ** - ವಿಷಮಿಶ್ರವಾದ ಜೇನತುಪ್ಪ ಸಮಾನವಾದ ಅಂದರೆ ದುಃಖದ ಪ್ರಾಬಲ್ಯವೂ ಅಲ್ಪ ಸುಖವೂ ಉಳ್ಳ, **ಕ್ಷುದ್ರಫಲಜ್ಗಳ್**-ಅಲ್ಪಾಸ್ಥಿರಫಲಗಳು, **ಕಡುಗ ಸಿದ್ಧಿಕ್ಕುಂ**-ಶೀಘ್ರವಾಗಿ ಈ ಜನ್ಮದಲ್ಲೇ ಸಿದ್ಧಿಸುವುವು. ಅನೇಕರು ಧನಗೃಹಾರಾಮ, ಕಳತ್ರ ಪುತ್ರಾದಿ ಐಹಿಕ ಸುಖಗಳನ್ನು ಬೇಗನೆ ಈ ಜನ್ಮದಲ್ಲೇ ಪಡೆಯುವದಕ್ಕಾಗಿ ಈ ಅನ್ಯದೇವತೆಗಳನ್ನು ಆರಾಧಿಸುತ್ತಾರೆ. ಅವುಗಳು ಬಹು ದುಃಖಮೂಲಗಳಾಗಿಯೂ ಅಲ್ಪಾಸ್ಥಿರ ಫಲಗಳುಳ್ಳವಾಗಿಯೂ ಇದ್ದರೂ ಬೇಗನೆ ಇಲ್ಲಿಯೇ ಲಭಿಸುವದರಿಂದ, ಅವರುಗಳನ್ನಾರಾಧಿಸಿ ಪಡೆಯುವರು. ನಿರತಿಶಯವಾಗಿ, ದುಃಖಮಿಶ್ರವಿಲ್ಲದೆ, ನಿತ್ಯವಾದ ಫಲವು ಸರ್ವೇಶ್ವರನನ್ನು ಆರಾಧಿಸಿದರೆ, ವಿಳಂಬದಿಂದ ಉಂಟಾಗುವದರಿಂದ ಅತ್ಯಲ್ಪ ಜನರು ತನ್ನನ್ನು ಆರಾಧಿಸುವರು ಎಂಬ ಭಾವವು.

---

(೧) ಗೀತಾ. ೪-೧೨

ಬ್ರಹ್ಮರುದ್ರಯೋಃಕ್ಷುದ್ರಫಲಪ್ರದತ್ವಸ್ಯಾಪಿ ಭಗವದಧೀನತ್ವಂ.

ಅವೈತಾನುಮ',

(೧)"ಲಭತೇ ಚತತಃ ಕಾಮಾನ್ ಮಯೈವ ವಿಹಿತಾನ್ ಹಿತಾನ್"

(೨)''ಏಷವೋತಾ ಪಿತಾಚಾಪಿ ಯುಷ್ಮಾಕಂಚ ಪಿತಾಮಹಃ।
ಮಯಾನುಶಿಷ್ಟೋ ಭವಿತಾ ಸರ್ವಭೂತ ವರಪ್ರದಃ॥"

ಬ್ರಹ್ಮರುದ್ರರು ಈ ಕ್ಷುದ್ರಫಲಗಳನ್ನು ಕೊಡುವದೂ ಕೂಡ ಭಗವದಧೀನವು.

ಹೀಗೆ ಬಹು ದುಃಖಕ್ಕೆ ಕಾರಣವಾಗಿ ಅಲ್ಪವಾದ ಅನಿತ್ಯವಾದ ಸುಖ ಫಲಗಳನ್ನು ಕೊಡುವ ಈ ಶಕ್ತಿಯೂ ಕೂಡ ಈ ಅನ್ಯ ದೇವತೆಗಳಿಗೆ ಸ್ವತಂತ್ರವಾಗಿಲ್ಲವು, ಆ ಶಕ್ತಿಯೂ ಸರ್ವೇಶ್ವರನ ಅನುಗ್ರಹದಿಂದ ಅವರಿಗೆ ಉಂಟಾದುದೆಂದು ಹೇಳುವದಕ್ಕಾಗಿ ಪ್ರಮಾಣಗಳನ್ನು ಉದಾಹರಿಸುತ್ತಾರೆ:--

"**ಲಭತೇಚ ತತಃ ಕಾಮಾನ್**" ಎಂಬುವದು ಉತ್ತರಾರ್ಧವು. '**ಸತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೆ**" ಎಂಬುವದು ಪೂರ್ವಾರ್ಧವು. **ಸಃ** - ಅನ್ಯದೇವತಾರಾಧಕನು, **ತಯಾಶ್ರದ್ಧಯಾ** - ಅಂತಹ ನಿರ್ವಿಘ್ನವಾದ ಶ್ರದ್ಧೆಯಿಂದ, **ಯುಕ್ತಃ** - ಕೂಡಿದವನಾಗಿ, **ತಸ್ಯಾರಾಧನಂ** - ಆ ಅನ್ಯದೇವತಾರಾಧನವನ್ನು, **ಈಹತೇ** - ಮಾಡಲಿಚ್ಛಿಸುತ್ತಾನೆ, **ತತಃ** - ಆ ಅನ್ಯದೇವತೆಯ ಮೂಲಕವಾಗಿ, **ಮಯೈವ** - ಆಯಾ ಅನ್ಯದೇವತೆಗಳಿಗೆಲ್ಲಾ ಅಂತರ್ಯಾಮಿಯಾದ ನನ್ನಿಂದಲೇನೆ, **ವಿಹಿತಾನ್** - ಕೊಡಲ್ಪಟ್ಟ, **ಕಾಮಾನ್** - ಇಷ್ಟಾರ್ಥಗಳನ್ನು, **ಲಭತೇಚ** - ಹೊಂದುವನಷ್ಟೆ. ಮುಂದಿನ ಶ್ಲೋಕದಲ್ಲಿ **ಅಂತವತ್ತು ಫಲಂ ತೇಷಾಂ** ಎಂದು ಆ ಅನ್ಯದೇವತೆಗಳು ಕೊಡುವ ಫಲಗಳು ಅನಿತ್ಯಗಳಾದುದರಿಂದ ಅಂತವುಳ್ಳ ವುಗಳೆಂದುಹೇಳಲ್ಪಟ್ಟಿರುತ್ತದೆ.

"**ಏಷ ಪಿತಾಮಹಃ** - ಈ ಚತುರ್ಮುಖಬ್ರಹ್ಮನು, **ಯುಷ್ಮಾಕಂಚ**- ನಿಮಗಳಿಗಾದರೋ (ದೇವತೆಗಳನ್ನು ಕುರಿತು ಹೇಳುವ ಭಗವದ್ವಾಕ್ಯವು), **ಮಾತಾ** - ತಾಯಿಯು, **ಪಿತಾಚಾಪಿ** - ತಂದೆಯೂ ಕೂಡ ಅವನೇ, ಆತನೇ, **ಮಯಾನು**

---

(೧)ಗೀತಾ. ೭. ೨೨

(೨) ಭಾರ. ಶಾಂತಿ. ೩೪೯. "**ಸರ್ವಸತ್ವವರಪ್ರದಃ**" ಎಂಬುವದಕ್ಕೆ ಕುಂಭಘೋಣೆಯ ಪ್ರತಿಯಲ್ಲಿ, "**ಸರ್ವಭೂತಧರಃ ಪ್ರಭುಃ**" ಎಂದು ಇದೆ.

ಅಸ್ಯ ಚೈವಾನುಜೋ ರುದ್ರೋ ಲಲಾಟಾದ್ಯಸ್ಸಮುತ್ಥಿತಃ।
ಬ್ರಹ್ಮಾನುಶಿಷ್ಟೋ ಭವಿತಾ ಸರ್ವಸತ್ವ ವರಪ್ರದಃ ॥
ಇತ್ಯಾದಿಗಳಿರ್ಪಡಿಯೇ ಭಗವದಧೀನಜ್ಞಳ್.

ಬ್ರಹ್ಮರುದ್ರಾದೀನಾಂ ಮೋಕ್ಷಪ್ರದಯೋಗ್ಯತಾನಾಸ್ತಿ,

(೧) "**ಯಸ್ಮಾತ್ಪರಮಿತಂಫಲಂ**"

ಶಿಷ್ಟಃ - ನನ್ನಿಂದ ಆಜ್ಞಪ್ತನಾಗಿ, **ಸರ್ವಭೂತ ವರಪ್ರದಃ** – ಸರ್ವರೂ ಮಾಡುವ ಯಜ್ಞಾದಿಗಳಿಗೆ ತದನುಗುಣವಾದ ವರವನ್ನು ದಯಪಾಲಿಸುವವನು, **ಭವಿತಾ** - ಆಗುವನು, **ಅಸ್ಯ** - ಈ ಚತುರ್ಮುಖನ, **ಅನುಜಃ** – ತಮ್ಮನಾಗಿ, **ಯಃರುದ್ರಃ** - ಯಾವ ರುದ್ರನು, **ಲಲಾಟಾತ್** – ನನ್ನ ಮುಖದಿಂದ ಅಂದರೆ ನೇತ್ರದಿಂದ, **ಸಮುತ್ಥಿತಃ** - ಉತ್ಪನ್ನನಾದನೋ, ಅವನು, **ಬ್ರಹ್ಮಾನುಶಿಷ್ಟಃ**– ಚತುರ್ಮುಖಬ್ರಹ್ಮನಿಂದಾಜ್ಞಪ್ತನಾಗಿ, **ಸರ್ವಸತ್ವವರಪ್ರದಃ** – ಸಮಸ್ತಯಜ್ಞಾದಿ ಕರ್ಮಾನುಷ್ಠಾನ ಮಾಡುವ ಚೇತನರಿಗೂ ವರವನ್ನು ಕೊಡುವವನು, **ಭವಿತಾ** - ಆಗುವನು," **ಇತ್ಯಾದಿಗಳಿರ್ಪಡಿಯೇ** - ಎಂಬಿವೇ ವೆದಲಾದ ಪ್ರಮಾಣಗಲ್ಲಿ ಹೇಳಿರುವ ಹಾಗೆ, **ಅವೈತಾನುಮ್** - ಆ ಕ್ಷುದ್ರವಾದ ಅಲ್ಪಾಸ್ಥಿರ ಸುಖವುಳ್ಳ ಫಲಗಳೂ ಕೂಡ, **ಭಗವದಧೀನಜ್ಞಳ್** - ಸರ್ವೇಶ್ವರನಿಗೆ ಅಧೀನವಾದವುಗಳು. ಈ ಬ್ರಹ್ಮರುದ್ರರುಗಳು ತಮ್ಮನ್ನು ಆರಾಧಿಸಿದವರ ಇಷ್ಟಾರ್ಥಗಳನ್ನು ಸಲ್ಲಿಸುವ ಶಕ್ತಿಯೂ ಶ್ರೀಹರಿಯಿಂದ ಕೊಡಲ್ಪಟ್ಟುದುದಾಗಿ ಆತನ ಸಙ್ಕಲ್ಪಾನುಸಾರವಾಗಿ ನಡೆಯತಕ್ಕವುಗಳಾದುದರಿಂದ, **ಅವೈತಾನುಮ್ ಭಗವದಧೀನಜ್ಞಳ್** - ಎಂದು ಹೇಳಿರುತ್ತಾರೆ.

ಈ ಐಹಿಕಗಳಾದ ಅಲ್ಪಾಸ್ಥಿರಗಳಾದ ಫಲಗಳನ್ನೀಯಲು ಇವರು ಸರ್ವೇಶ್ವರನಿಂದೇನೋ ಆಜ್ಞಪ್ತರಾಗಿರುವಲ್ಲಿ, ವಿಳಂಬವಾಗಿಯಾದರೂ ಮೋಕ್ಷವನ್ನು ಕೊಡುವ ಶಕ್ತಿಯು ಇವರಿಗೆ ಉಂಟೋ ಎಂದರೆ, ಆಶಕ್ತಿಯು ಅವರಿಗಿಲ್ಲವೆಂದು ಸಪ್ರಮಾಣವಾಗಿ ತೋರಿಸುತ್ತಾರೆ :—

ಬ್ರಹ್ಮರುದ್ರರೇಮೊದಲಾದವರಿಗೆ ಮೋಕ್ಷಪ್ರದತ್ವಶಕ್ತಿಯಿಲ್ಲವು.

(೧) ಭಾರತ. ಶಾಂತಿ ೩೫೦. ೩೬.
ಬ್ರಹ್ಮಾಣಂ ಶಿತಿಕಣ್ಠಞ್ಚ ಯಾಶ್ಚಾನ್ಯಾ ದೇವತಾಸ್ಸೃತಾಃ।
ಪ್ರತಿಬುದ್ಧಾ ನಸೇವನ್ತೇ ಯಸ್ಮಾತ್ಪರಮಿತಂಫಲಂ" ॥

(೨) "ಸಾತ್ವಿಕೇಷುತು ಕಲ್ಪೇಷು ಮಾಹಾತ್ಮ್ಯ ಮಧಿಕಂಹರೇಃ।
ತೇಷ್ವೇವ ಯೋಗಸಂಸಿಧ್ಧಾಗಮಿಷ್ಯಂತಿ ಪರಾಂಗತಿಂ"॥
ಎನ್ನೆಯಾಲವರ್ಗವರ್‌ಗಳ್ ಪಕ್ಕಲ್ ಮೋಕ್ಷಮ್ ವಿಳಂಬಿತ್ತುಂಕಿಡೈಯಾದು.

ಎಂಬುವದು ಪೂರಾ ಶ್ಲೋಕವು. ಇದರ ಅರ್ಥವು ಹಿಂದೆ ವಿವರಿಸಲ್ಪಟ್ಟಿರುತ್ತದೆ. ಬ್ರಹ್ಮರುದ್ರರು ಆರಾಧಿಸಲ್ಪಟ್ಟರೆ ಐಹಿಕಗಳಾಗಿ, ಅಲ್ಪ ಮತ್ತು ಅಸ್ಥಿರ ಫಲಗಳನ್ನು ಕೊಡಬಲ್ಲರು. ಮೋಕ್ಷಕ್ಕಾಗಿ ಅವರನ್ನಾಶ್ರಯಿಸಿದರೂ, ಆ ಶಕ್ತಿಯು ಅವರಿಗಿಲ್ಲವಾದುದರಿಂದ ಅದನ್ನು ಕೊಡಲಾರರು ಎಂಬ ಭಾವವು. ಮೋಕ್ಷಪ್ರದತ್ವವು ಇವರಿಗಿಲ್ಲವೆಂಬುವದಕ್ಕೆ ವ್ಯಾಸಮಹರ್ಷಿಯ ಉಕ್ತಿಯನ್ನು ಪ್ರಮಾಣವಾಗಿ ತೋರಿಸಿರುತ್ತಾರೆ. ಆದುದರಿಂದ ವಿವೇಕಿಗಳಾಗಿರುವ ಪ್ರಪನ್ನರು ಅವರುಗಳನ್ನು ಸೇವಿಸುವದಿಲ್ಲವು ಎಂಬ ಭಾವವು.

(೨) ಮಾತ್ಸ್ಯಪುರಾಣ. ೨೯೦. ೧೬. "**ಸಾತ್ವಿಕೇಷು** - ಸತ್ವಗುಣಾಭಿವೃದ್ಧಿಯುಳ್ಳ, **ಕಲ್ಪೇಷುತು** - ಕಲ್ಪಗಳಲ್ಲಿಯಾದರೋ, **ಹರೇಃ** - ಶ್ರೀಹರಿಯ **ಮಾಹಾತ್ಮ್ಯಂ** - ಮಾಹಾತ್ಮ್ಯವು, **ಅಧಿಕಂ** - ಹೆಚ್ಚಾಗಿ ಹೇಳಲ್ಪಟ್ಟಿರುವದು. **ತೇಷ್ವೇವ** - ಅಂತಹ ಕಲ್ಪಗಳಲ್ಲೇ, **ಯೋಗಸಂಸಿದ್ಧಾಃ** - ಧ್ಯಾನಯೋಗದ ಸಿದ್ಧಿಯುಳ್ಳವರು, **ಪರಾಂಗತಿಂ** - ಶ್ರೇಷ್ಠಗತಿರೂಪವಾದ ಮೋಕ್ಷ ಸಾಮ್ರಾಜ್ಯವನ್ನು, **ಗಮಿಷ್ಯಂತಿ** - ಹೊಂದುವರು. ಈ ಪ್ರಮಾಣದಿಂದ ವಿಷ್ಣುವಿನಿಂದಲೇ ಮೋಕ್ಷವೆಂಬುವದು ತೋರಿಬರುತ್ತದೆ. ಮೇಲಿನ ಭಾರತ ಪ್ರಮಾಣದಿಂದ ಬ್ರಹ್ಮರುದ್ರರುಗಳಿಗೆ ಮೋಕ್ಷಪ್ರದತ್ವ ಸಾಮರ್ಥ್ಯವಿಲ್ಲವೆಂಬುವದು ತೋರಿಬರುತ್ತದೆ. ಸಾತ್ವಿಕ ಕಲ್ಪಗಳಲ್ಲಿ ಉಂಟಾದವು ಸಾತ್ವಿಕ ಸ್ಮೃತಿ ಪುರಾಣಗಳು ಸ್ಮೃತಿಗಳು ೧೮, ಪುರಾಣಗಳು ೧೮, ಇವುಗಳಲ್ಲಿ ಆರಾರು ಸಾತ್ವಿಕಗಳು. ಪುರಾಣಗಳಲ್ಲಿ ಸಾತ್ವಿಕಗಳು ಯಾವುವೆಂದರೆ :---

ವೈಷ್ಣವಂ ನಾರದೀಯಂಚ ತೆಥಾ ಭಾಗವತಂ ಶುಭಂ।
ಗಾರುಡಂಚ ತಥಾ ಪಾದ್ಮಂ ವಾರಾಹಂ ಶುಭದರ್ಶನೇ
ಷಡೇತಾನಿ ಪುರಾಣಾನಿ ಸಾತ್ವಿಕಾನಿ ಮತಾನಿವೈ ॥

ರಾಜಸ ಪುರಾಣಗಳು ಆರು, ಅವು ಯಾವುವೆಂದರೆ: --

ಬ್ರಹ್ಮಾಂಡಂ ಬ್ರಹ್ಮಕೈವರ್ತಂ ಮಾರ್ಕಂಡೇಯಮ್ ತಥೈವಚ।
ಭವಿಷ್ಯದ್ವಾಮನಂ ಬ್ರಾಹ್ಮಂ ರಾಜಸಾನಿ ನಿಬೋಧಷಟ್ ॥

ತಾಮಸ ಪುರಾಣಗಳು ಆರು ಅವು ಯಾವುವೆಂದರೆ :—

ಮಾತ್ಸ್ಯಂ ಕೌರ್ಮ್ಯಂ ತಥಾ ಲೈಙ್ಗಂ ಶೈವಂ ಸ್ಕಾಂದಂ ತಥೈವಚ
ಆಗ್ನೇಯಂಚ ಷಡೇತಾನಿ ತಾಮಸಾನಿರಯಪ್ರದಾಃ ।

ಪ್ರಪನ್ನನಿಗೆ ಸಾತ್ವಿಕಸ್ಮೃತಿಗಳೂ ಸಾತ್ವಿಕ ಪುರಾಣಗಳೂ ಗ್ರಾಹ್ಯವು. ಪುರಾಣಗಳಲ್ಲೆಲ್ಲಾ ವಿಷ್ಣುಪುರಾಣವು ರತ್ನವೆನಿಸಿರುವದರಿಂದ, ವಿಷ್ಣುಪುರಾಣವು ಮೊದಲು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಸಾತ್ವಿಕ ಸ್ಮೃತಿಗಳೂ ಯಾವುವೆಂದರೆ :—

ವಾಸಿಷ್ಠಂಚೈವ ಹಾರೀತಂ ವ್ಯಾಸಂ ಪಾರಾಶರಂ ತಥಾ ।
ಭಾರದ್ವಾಜಂ ಕಾಶ್ಯಪಂಚ ಸಾತ್ವಿಕಾಮುಕ್ತಿದಾಯಿನಃ ॥

ಎನ್ನಿಯಾಲೇ - ಹೀಗೆ ಈ ಮೇಲಿನ ಪ್ರಮಾಣಗಳಿಂದ, **ಅವರ್ಗಳ್ ಪಕ್ಕಲ್**-ಆ ಬ್ರಹ್ಮರುದ್ರಾದಿಗಳ ಮೂಲಕ, **ಮೋಕ್ಷಂ** - ಮೋಕ್ಷವು, **ವಿಳಂಬಿತ್ತುಂ ಕಿಡೈಯಾದು** - ನಿದಾನವಾಗಿಯೂ ಕೂಡ ಪ್ರಾಪ್ತವಾಗಲಾದು; ಎಂದರೆ, ಬ್ರಹ್ಮರುದ್ರಾದಿಗಳಿಗೆ ಮೋಕ್ಷವನ್ನು ಕೊಡುವ ಶಕ್ತಿಯೇ ಇಲ್ಲವೆಂಬ ಭಾವವು.

ಆದರೆ ಐಹಿಕೈಶ್ವರ್ಯಾದಿಗಳು ಬ್ರಹ್ಮರುದ್ರಾದಿಗಳ ಮೂಲಕ ಪ್ರತ್ಯಕ್ಷದಲ್ಲೇ ಶೀಘ್ರವಾಗಿ ಪ್ರಾಪ್ತವಾಗುತ್ತವೆ; ಸರ್ವೇಶ್ವರನ ಮೂಲಕ ಮೋಕ್ಷವೂ ಪರೋಕ್ಷದಲ್ಲಿ ವಿಳಂಬಿಸಿ ಉಂಟಾಗುತ್ತದೆ ಎಂದರೆ ಪರಬ್ರಹ್ಮನನ್ನು ಆರಾಧಿಸುವದರಲ್ಲಿ ಅನೇಕರು ಹಿಂತೆಗೆಯಬಹುದೋ ಎಂದರೆ ಹಾಗಲ್ಲವು. ಸರ್ವೇಶ್ವರನು ಎಲ್ಲಾ ಪುರುಷಾರ್ಥಗಳನ್ನೂ ಕೊಡಬಲ್ಲನು. "**ತಸ್ಮಿನ್ ಪ್ರಸನ್ನೇಕಿಮಿಹಾಸ್ತ್ಯಲಭ್ಯಂ**" (ವಿ. ಪು.) ಎಂದು ಮಹರ್ಷಿ ಹೇಳಿರುವಹಾಗೆ, ಚತುರ್ವಿಧಪುರುಷಾರ್ಥಗಳೂ ಅತನಿಂದ ಕರಗತವಾಗುವವು. ಗೀತೆಯೂ

"ಚತುರ್ವಿಧಾಭಜನ್ತೇ ಮಾಂ ಜನಾಸ್ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸು ರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥"

ಎಂದು ನಾಲ್ಕು ಪುರುಷಾರ್ಥಗಳಿಗಾಗಿಯೂ ಸುಕೃತಿಗಳು ಆರಾಧಿಸುವರೆಂದು ಹೇಳುತ್ತದೆ. ಹಾಗೆ ಇತರ ಪುರುಷಾರ್ಥಗಗಳನ್ನು ಸರ್ವೇಶ್ವರನು ಕೊಡುವಾಗ ಬ್ರಹ್ಮರುದ್ರಾದಿಗಳು ಕೊಡುವದಕ್ಕಿಂತ ಅತಿಶಯವಾಗಿ ಬ್ರಹ್ಮಾಧಿಪತ್ಯ, ರುದ್ರಾಧಿಪತ್ಯ, ಇಂದ್ರಾಧಿಪತ್ಯಾದಿಗಳನ್ನು ಕೊಡುವ ಶಕ್ತಿಯಿರುವುದರಿಂದ ಈ ಐಶ್ವರ್ಯಾದಿಗಳಿಗಾಗಿಯೂ ಕೂಡ ಸರ್ವೇಶ್ವರನನ್ನು ಪ್ರಾರ್ಥಿಸುವದೇ ಯುಕ್ತವೇ ವಿನಾ ಬ್ರಹ್ಮರುದ್ರೇಂದ್ರಾದಿಗಳನ್ನು ಪ್ರಾರ್ಥಿಸುವದು ಸರಿಯಲ್ಲವೆಂಬಭಿಪ್ರಾಯದಿಂದ ಭಗವಂತನೇ ಸರ್ವಫಲಪ್ರದನು, ಆದುದರಿಂದ ಅತನೇ ಸೇವ್ಯನು ಎಂದು ಉಪದೇಶಿಸುತ್ತಾರೆ.

ಭಗವಾನೇವ ಸರ್ವಫಲಪ್ರದಃ

ಸರ್ವೇಶ್ವರನ್ ಪಕ್ಕಲ್

"ಯುಗಕೋಟಿ ಸಹಸ್ರಾಣಿ ವಿಷ್ಣುಮಾರಾಧ್ಯ ಪದ್ಮಭೂಃ"

ಇತ್ಯಾದಿಗಳಿರ್ ಪಡಿಯೇ ಅತಿಶಯಿತವಾನ ಐಶ್ವರ್ಯಾದಿಗಳುಮ್ ವರುಮ್

ಶ್ರೀಮಹಾವಿಷ್ಣುವೇ ಸರ್ವಫಲಪ್ರದನು.

ಸರ್ವೇಶ್ವರನ್ ಪಕ್ಕಲ್ - ಸರ್ವೇಶ್ವರನ ಮೂಲಕ, **ಇದಕ್ಕೆ ವರುಮ್** ಎಂಬುವದರೊಂದಿಗೆ ಅನ್ವಯವು. **" ಯುಗಕೋಟಿ ಸಹಸ್ರಾಣಿ"** - ಅನೇಕ ಕೋಟಿ **ಸಂವತ್ಸರಗಳ** ಕಾಲ, **ವಿಷ್ಣುಂ ಆರಾಧ್ಯ** –ವಿಷ್ಣುವನ್ನು ಆರಾಧಿಸಿ, **ಪದ್ಮಭೂಃ**–ಸರ್ವೇಶ್ವರನ ನಾಭೀಕಮಲಡದಿಂದ ಜನಿಸಿದ ಚತುರ್ಮುಖಬ್ರಹ್ಮನು, **ಬ್ರಹ್ಮಪಟ್ಟವನ್ನು** ಹೊಂದಿದನು,' **ಇತ್ಯಾದಿಗಳಿರ್ ಪಡಿಯೇ** - ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಅತಿಶಯಿಶವಾದ** - ಬ್ರಹ್ಮರುದ್ರಾದಿಗಳು **ಕೊಡಲು** ಶಕ್ತಿಯುಳ್ಳ ಐಶ್ವರ್ಯಕ್ಕಿಂತಲೂ ಹೆಚ್ಚಾದ,ಅವರುಗಳು ತಮ್ಮಂಥಾ ಅಧಿಪತ್ಯಗಳನ್ನು ಕೊಡಲಾರರು, ಸರ್ವೇಶ್ವರನಾದರೋ ಅವುಗಳನ್ನು ಕೂಡ ಕೊಡಬಲ್ಲನು. **ಹಾಗೆ** ಅತಿಶಯಿತವಾದುದು ;ಮತ್ತು, **ಈ** ಬ್ರಹ್ಮರುದ್ರಾದಿಗಳು ಕೊಡುವ ಫಲವು ದುಃಖಮಿಶ್ರವಾದ ಐಶ್ವರ್ಯ ರೂಪವಾದುದರಿಂದ ಹಿಂದೆ ವಿಷಮಧುತುಲ್ಯವಾದುದೆಂದು ಹೇಳಲ್ಪಟ್ಟಿತು ; ಸರ್ವೇಶ್ವರನನ್ನು ಚನ್ನಾಗಿ ಆರಾಧಿಸಿದರೆ ದುಃಖಮಿಶ್ರವಲ್ಲದ ಐಶ್ವರ್ಯಪ್ರಾಪ್ತಿಯುಂಟಾಗಬಹುದೆಂಬಭಿಪ್ರಾಯದಿಂದ, **ಅತಿಶಯಿತವಾದ**-ಎಂದು ಪ್ರಯೋಗಿಸಿರುತ್ತಾರೆ; ಹೀಗೆ ಅತಿಶಯವಾದ, **ಐಶ್ವರ್ಯಾದಿಗಳುಂ ವರುಂ**-ಐಶ್ವರ್ಯಾದಿಗಳೂ ಬರಬಹುದು. ಇಲ್ಲಿ ಐಶ್ವರ್ಯ ಶಬ್ದದಿಂದ, ಐಹಿಕೈಶ್ವರ್ಯವೂ, ಸ್ವರ್ಗ ಮೊದಲಾದ ಇತರೆ ಲೋಕಗಳ ಐಶ್ವರ್ಯವೂ ಹೇಳಲ್ಪಟ್ಟಿತು. **ಆದಿ** ಶಬ್ದದಿಂದ ಕೈವಲ್ಯವೂ ಸೂಚಿಸಲ್ಪಟ್ಟಿತು. ಹಾಗೆ ಐಶ್ವರ್ಯಕ್ಕಾಗಿ ಆ ಸರ್ವೇಶ್ವರನನ್ನು ಆರಾಧಿಸಿದರೆ, ದುಃಖ ಸಂಪರ್ಕವಿಲ್ಲದ ಐಶ್ವರ್ಯ ಪ್ರಾಪ್ತಿಯೂ ಅಲ್ಲದೆ ಇನ್ನೊಂದು ಮುಖ್ಯ ಪ್ರಯೋಜನ ಉಂಟು ; ಬ್ರಹ್ಮರುದ್ರಾದಿಗಳನ್ನು ಬಿಟ್ಟು ಸರ್ವೇಶ್ವರನನ್ನು ಐಶ್ವರ್ಯಕ್ಕಾಗಿ ಆರಾಧಿಸುವುದರಿಂದ, ಹಾಗೆ ಆರಾಧಿಸುವವನು ತುಂಬಾ ಭಕ್ತನಾಗುವದರಿಂದ ಆತನಿಗೆ ರಜಸ್ತಮೋಗುಣಗಳು ಕ್ಷಯಿಸುವ ಹಾಗೂ ಸತ್ವಗುಣ ವೃದ್ಧಿಯಾಗುವ ಹಾಗೂ, ಮಾಡಿ, ಮೋಕ್ಷದಲ್ಲಿ ಅಭಿರುಚಿಯನ್ನುಂಟು ಮಾಡಿ, ಸಾಧ್ಯೋಪಾಯಗಳನ್ನವಲಂಬಿಸುವ ಹಾಗೆ ಮಾಡಿ, ಮೋಕ್ಷವನ್ನೀಯುವನು ಎಂದು ಮುಂದೆ ಹೇಳುತ್ತಾರೆ. ಈ ಕಾರಣದಿಂದಲೂ ಆತನು ಕೊಡುವ ಐಶ್ವರ್ಯಾದಿಗಳು **ಅತಿಶಯಿತ** ವಾದವು ಎಂಬಭಿಪ್ರಾಯವು.

ಪಿನ್ಬು, ವಿಡಾಯ್‌ತೀರ ಗಂಗಾಸ್ನಾನಂ ಪಣ್ಣ, ಪಾಪಂ ಪೋವುಮಾಪ್ಪೋಲೆ ವಿಷಯ ಸ್ವಭಾವತ್ತಾಲೇಯಾನುಷಜ್ಞಕವುಂಕ ಪಾಪಕ್ಷಯವುಂ‌ಪಿರನ್ದು ರಜಸ್ತಮಸ್ಸುಕ್ಕಳ್ ತಲೈಶಾಯ್‌ನ್ದು ಸತ್ತ್ವೋನ್ಮೇಷ ಮುಣ್ಡಾಯ್ ಜನಕಾವುಂಬರೀಷ ಕೇಕಯಾದಿಗಳುಕ್ಕುಪ್ಪೋಲೆ ಕ್ರಮೇಣ ಮೋಕ್ಷಪರ್ಯನ್ತಮಾಯ್ ವಿಡುಮ್.

ಪಿನ್ಬು - ಅನನ್ತರದಲ್ಲಿ ಎಂದರೆ ಸರ್ವೇಶ್ವರನನ್ನು ಐಶ್ವರ್ಯಕ್ಕಾಗಿ ಪ್ರಾರ್ಥಿಸಿ ತತ್ಪ್ರಾಪ್ತಿಯುಂಟಾದ ನಂತರ, **ವಿಡಾಯ್‌ತೀರ** - ಶ್ರಮಪರಿಹಾರಕ್ಕಾಗಿ, **ಗಂಗಾಸ್ನಾನಂಪಣ್ಣ** - ಗಂಗಾಸ್ನಾನ ಮಾಡಿದರೆ, **ಪಾಪಂಪೋವುಮಾಪ್ಪೋಲೆ** - ಪಾಪವು ನಾಶವಾಗುವ ಹಾಗೆ, **ವಿಷಯ ಸ್ವಭಾವತ್ತಾಲೆ** - ವಸ್ತುವಿನ ಸ್ವಭಾವದಿಂದ ಇಲ್ಲಿ ಗಙ್ಗಾನದಿಗೆ ಪಾಪನಿವಾರಣವು ಹೇಗೆ ಸ್ವಭಾವಸಿದ್ಧವಾದುದೋ ಹಾಗೆಯೇ ಸರ್ವೇಶ್ವರನನ್ನು ಐಶ್ವರ್ಯಕ್ಕಾಗಿಯಾದರೂ ಆರಾಧಿಸಿದರೂ, ಅತನ ಸ್ವಭಾವವು ಪಾಪಕ್ಷಯವನ್ನು ಮಾಡತಕ್ಕದ್ದು, ಅದು ಉಂಟಾಗುತ್ತದೆ ಎಂಬ ಭಾವವು ; ಹೀಗೆ ವಸ್ತು ಸ್ವಭಾವದಿಂದ **ಆನುಷಜ್ಞಕವುಂಕ**-ಇವನು ಅಪೇಕ್ಷಿಸದೆ ಇದ್ದರೂ ತಾನಾಗಿಯೇ ಸಂಬಂಧಿಸಿ ಬರುವ, ಗಙ್ಗಾಸ್ನಾನಮಾಡುವವನಿಗೆ ಉದ್ದೇಶವು ಶ್ರಮಪರಿಹಾರಮಾತ್ರವೇ, ಪಾಪನಾಶವನ್ನು ಅತನು ಅಪೇಕ್ಷಿಸಲಿಲ್ಲವು, ಆದರೂ ಅದು ಹೇಗೆ ಉಂಟಾಯಿತೋ, ಹಾಗೆಯೇ ಸರ್ವೇಶ್ವರನನ್ನು ಆರಾಧಿಸಿರುವದು ಐಶ್ವರ್ಯಕ್ಕಾಗಿ, ಹಾಗಾದರೂ ಸ್ವಾಮಿಯ ಸ್ವಭಾವಮೂಲಕ ಈತನಿಗೆ ದುಷ್ಕೃತ ತೊಲಗಿ, ಸುಕೃತಪ್ರಾಪ್ತವಾಗಿ ಮೋಕ್ಷಕ್ಕೆ ಅನುಗುಣವಾದ ಜನ್ಮಾದಿಗಳು ಪ್ರಾಪ್ತವಾಗಬಹುದೆಂಬಭಿಪ್ರಾಯವು ; ಹೀಗೆ ತಾನಾಗಿ **ಪಾಪಕ್ಷಯಂಪಿರನ್ದು** - ಪಾಪಗಳ ನಾಶವು ಇವನಿಗೆ ಪ್ರಾಪ್ತವಾಗಿ, **ರಜಸ್ತಮಸ್ಸುಕ್ಕಳ್ ತಲೈಶಾಯ್‌ನ್ದು**-ರಜಸ್ತಮೋಗುಣಗಳನ್ನು ನಿವರ್ತಿಸಿ ಹೋಗುವ ಹಾಗೆ ನೂಡಿ, **ಸತ್ತ್ವೋನ್ಮೇಷಣ ಮುಣ್ಡಾಯ್** - ಸತ್ವವು ತಲೆಎತ್ತೋಣ ಉಂಟಾಗಿ, ಜನಕ, ಅಂಬರೀಷ ಕೇಕೆಯ ಮೊದಲಾದವರುಗಳ ಹಾಗೆ, **ಕ್ರಮೇಣ** - ಕ್ರಮವಾಗಿ ಎಂದರೆ ಕರ್ಮಯೋಗ ಜ್ಞಾನಯೋಗ, ಭಕ್ತಿಯೋಗ, ಅಥವಾ ಪ್ರಪದನ ಹೀಗೆ ಕ್ರಮವಾಗಿ, **ಮೋಕ್ಷ ಪರ್ಯನ್ತಮಾಯ್‌ವಿಡುಂ** - ಮೋಕ್ಷಪರ್ಯನ್ತವಾಗಿ ಫಲಪ್ರಾಪ್ತಿಯ್ನುಂಟು ಮಾಡಿ ಬಿಡುತ್ತದೆ. ಇದಕ್ಕೆ ಕರ್ತೃಪದವು ಐಶ್ವರ್ಯಕ್ಕಾಗಿಯಾದರೂ ಭಗವಂತನನ್ನು ಆಶ್ರಯಿಸೋಣವು ಎಂದು ಇಟ್ಟುಕೊಳ್ಳತಕ್ಕದ್ದು. ಸರ್ವೇಶ್ವರನನ್ನು ಆಶ್ರಯಿಸಿದರೆ ಸತ್ತ್ವೋನ್ಮೇಷಣವೂ, ರಜಸ್ತಮಸ್ಸುಗಳ ನಾಶವೂ ಉಂಟಾಗುತ್ತದೆ. ಪಾಪಕರ್ಮಗಳೆಲ್ಲಾ ರಜಸ್ತಮೋ ಗುಣಗಳ ವಿಜೃಂಬಣೆಯು.

ಮೋಕ್ಷೋಪಾಯನಿಷ್ಠನಾವು' ಪೋದು,

ಯಥಾಗ್ನಿರುದ್ಧತಶಿಖಃ ಕಕ್ಷಂ ದಹತಿ ಸಾನಿಲಃ।
ತಥಾ ಚಿತ್ತ ಸ್ಥಿತೋವಿಷ್ಣುಃ ಯೋಗಿನಾಂ ಸರ್ವ ಕಿಲ್ಬಿಷಂ॥

ಎಂದು ಹೇಳಿರುವ ಹಾಗೆ ಅಗ್ನಿಯು ಹೇಗೆ ಒಣಗಿದ ತರಗನ್ನು ಸುಟ್ಟುಬಿಡುವನೋ ಹಾಗೆಯೇ ಉಪಾಸಕನ ಚಿತ್ತದಲ್ಲಿರುವ ವಿಷ್ಣುವು ಆತನ ರಜಸ್ತಮೋಗುಣಗಳ ವಿಜೃಂಬಣೆಯಾದ ಸರ್ವ ಪಾಪಗಳನ್ನು ದಹಿಸುತ್ತಾನೆ. ಬ್ರಹ್ಮರುದ್ರರು ಸ್ವತಃ ರಜಸ್ತಮೋಗುಣಗಳಿಗೆ ಆಕರರಾಗಿ, ಕರ್ಮವಶ್ಯತೆಯುಳ್ಳವರಾದ ಪ್ರಯುಕ್ತ ಸತ್ತ್ವೋದ್ರೇಕವನ್ನುಂಟುಮಾಡಲಾರರು. ಹೇಗೆಂದರೆ ಶ್ರಮಪರಿಹಾರಮಾಡಿಕೊಳ್ಳತಕ್ಕವನು, ಗಂಗೆಯಲ್ಲಿ ಸ್ನಾನಮಾಡಿದುದರಿಂದ ದುರಿತವೂ ಪರಿಹೃತವಾಗುತ್ತದೆ. ಹಾಗಲ್ಲದೆ ಯಾವುದಾದರೂ ಒಂದು ಕೊಳ ಕುಂಟೆಯಲ್ಲಿ ಮುಳುಗಿದರೆ ಹೇಗೆ ದುರಿತನಾಶವಿಲ್ಲವೋ, ಹಾಗೆಯೇ ಬ್ರಹ್ಮರುದ್ರಾದಿಗಳ ಆರಾಧನೆಯಿಂದ ರಜಸ್ತಮೋಗುಣಗಳನಾಶವೂ ಸತ್ತ್ವೋದ್ರೇಕವೂ ಇಲ್ಲವೆಂಬ ಭಾವವು. ಜನಕಮಹಾರಾಜನು ಕರ್ಮಯೋಗಮೂಲಕ ಸರ್ವಕರ್ಮಾರಾಧ್ಯನಾದ ಭಗವಂತನನ್ನು ಆಶ್ರಯಿಸಿದನು. ಆದುದರಿಂದ ಕ್ರಮೇಣ ಆತನಿಗೆ ಮೋಕ್ಷಸಾಧಕ ಮಾರ್ಗಗಳಲ್ಲಿ ಪ್ರವರ್ತನೆಯುಂಟಾಗುವ ಹಾಗೆ ಮಾಡಿ

"ಕರ್ಮಣೈವಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ" (ಗೀ. ೩. ೨೦)

ಎಂದು ಹೇಳಿರುವ ಹಾಗೆ ಕಡೆಗೆ ಮೋಕ್ಷವನ್ನು ಹೊಂದಿದನು. ಅಂಬರೀಷೋಪಾಖ್ಯಾನಕ್ಕೆ ಅಭೀತಿಸ್ತವದ ಲಟನೇ ಪುಟವನ್ನು ಪರಾಂಬರಿಸಬಹುದು. ಮಹಾಭಾಗವತನಾದ ಅಂಬರೀಷನು ಶ್ರೀಮನ್ನಾರಾಯಣನನ್ನು ಆರಾಧಿಸಿದುದರಿಂದ ದುರ್ವಾಸ ಋಷಿಯ ಕೋಪದಿಂದ ರಕ್ಷಿಸಲ್ಪಟ್ಟಿದುದೂ ಅಲ್ಲದೆ ಕೊನೆಗೆ ಮೋಕ್ಷವನ್ನೂ ಹೊಂದಿದನು.

ಹೀಗೆ ಸರ್ವೇಶ್ವರನನ್ನು ಮೋಕ್ಷವ್ಯತಿರಿಕ್ತವಿಷಯಕ್ಕಾಗಿ ಆರಾಧಿಸಿದರೆ ವಿಳಂಬದಿಂದ ಮೋಕ್ಷಪ್ರಾಪ್ತಿಯೂ, ಹಾಗಿಲ್ಲದೆ ಮೋಕ್ಷಾರ್ಥವಾಗಿಯೇ ಸಾಧ್ಯೋಪಾಯಗಳ ಮೂಲಕ ಆಶ್ರಯಿಸಿದರೆ ವಿಳಂಬವಿಲ್ಲದೆ ಮೋಕ್ಷಪ್ರಾಪ್ತಿಯುಂಟೆಂದು ಸಪ್ರಮಾಣವಾಗಿ **"ಮೋಕ್ಷೋಪಾಯನಿಷ್ಠನಾಂಪೋದು"** ಎಂದು ಪ್ರಾರಂಭಿಸಿ ಎರಡು ವಾಕ್ಯಗಳಿಂದ ಉಪದೇಶಿಸುತ್ತಾರೆ.

ಮೋಕ್ಷೋಪಾಯನಿಷ್ಠನಾವು'ಪೋದು ಎಂದರೆ ಮೇಲೆ ಹೇಳಿದ ಐಶ್ವರ್ಯಕ್ಕಾಗಿ ಸರ್ವೇಶ್ವರನನ್ನು ಆಶ್ರಯಿಸಿದವನು ಮೋಕ್ಷೋಪಾಯಗಳಾದ ಭಕ್ತಿ

(೧) "**ಬಹೂನಾಂ ಜನ್ಮನಾಮನ್ತೇ ಜ್ಞಾನವಾ ಮಾಂ ಪ್ರಪದ್ಯತೇ**"।
(೨) "**ಯೇ ಜನ್ಮಕೋಟಿಭಿಸ್ಸಿದ್ಧಾ ಸ್ತೇಷಾಮನ್ತೇತ್ರ ಸಂಸ್ಥಿತಿಃ**।"
(೩) "**ಜನ್ಮಾನ್ತರ ಸಹಸ್ರೇಷು ತಪೋಧ್ಯಾನ ಸಮಾಧಿಭಿಃ।**
ನರಾಣಾಂ ಕ್ಷೀಣಪಾಪಾನಂಕೃಷ್ಣೇ ಭಕ್ತಿಃ ಪ್ರಜಾಯತೇ" ।

ಪ್ರಪತ್ತಿ ಮಾರ್ಗಗಳನ್ನು ಅವಲಂಬಿಸುವ ಕಾಲದಲ್ಲಿ **ವಿಳಮ್ಬವುಂಡು** ತುಂಬಾ ಸಾವಕಾಶವಾಗಬಹುದು ಎಂದು ಮುಂದೆ ಹೇಳುತ್ತಾರೆ ; ಅದಕ್ಕೆ ಮೂರು ಪ್ರಮಾಣಗಳನ್ನು ನಿದರ್ಶಿಸುತ್ತಾರೆ.

(೧) ಗೀ ೭. ೧೯. ಇದರ **ಉತ್ತರಾರ್ಧ**ವು:--

"**ವಾಸುದೇವಸ್ಸರ್ವಮಿತಿ ಸಮಹಾತ್ಮಾ ಸುದುರ್ಲಭಃ**"

"ತಾನು ಸರ್ವೇಶ್ವರನಿಗೆ ಶೇಷಭೂತನು ಎಂಬ ಜ್ಞಾನಪೂರ್ವಕವಾಗಿ **ಉಪಾಸನೆ**ಯೂ ತದಂಗ ಪ್ರಪದನವೂ ಸಹ ಸ್ವಲ್ಪ ಕಾಲದಲ್ಲೇ ಲಭಿಸುವದಲ್ಲವು, **ಬಹೂನಾಂ ಜನ್ಮನಾಂ ಅನ್ತೇ** - ಬಹು **ಪುಣ್ಯ** ಜನ್ಮಗಳು ಕಳೆದ ನಂತರ, **ಜ್ಞಾನವಾ** - ತಾನು ಸರ್ವೇಶ್ವರನಿಗೇನೇ ಶೇಷಭೂತನು, ಆತನಿಂದಲೇ ತನ್ನ ಸತ್ತಾಸ್ಥಿತಿ ಪ್ರವೃತ್ತಿಗಳೆಲ್ಲಾ ; ಆದುದರಿಂದ ಆತನೇ ಪರತತ್ವವೆಂದು ತಿಳಿದವನಾಗಿ, **ವಾಸುದೇವಸ್ಸರ್ವಮಿತಿ** - ಶ್ರೀವಾಸುದೇವನೇ ಪ್ರಾಪಕನೂ ಪ್ರಾಪ್ಯನೂ ನನ್ನ ಸರ್ವಮನೋರಥವೂ, ಹೀಗೆ ಸರ್ವವೂ ಎಂದು, **ಮಾಂ ಪ್ರಪದ್ಯತೇ** - ನನ್ನನ್ನು ಕುರಿತು ಉಪಾಸನೆ ಮಾಡುತ್ತಾನೆ. ಅದೇಕೆ ಅಷ್ಟು ಜನ್ಮಗಳು ಕಳೆಯಬೇಕೆಂದರೆ ? **ಸಃ ದುರ್ಲಭಃ** - ಅಂತಹ ಮಹಾನುಭಾವನು ಅತಿ ದುರ್ಲಭವು ಎಂದು ಸರ್ವೇಶ್ವರನು ಹೇಳುತ್ತಾನೆ.

(೨) ಪೌಷ್ಕರ ಸಂಹಿತೆ. **ಯೇ** - ಯಾರು, **ಜನ್ಮಕೋಟಿಭಿಃ** - ಜನ್ಮಕೋಟಿಗಳಿಂದ, **ಸಿದ್ಧಾಃ** - ಐಶ್ವರ್ಯಾದಿ ಫಲಗಳ ಸಿದ್ಧಿಯನ್ನು ಹೊಂದಿರುತ್ತಾರೋ, **ತೇಷಾಂ** - ಅವರುಗಳಿಗೆ, **ಅನ್ತೇ** - ಕೊನೆಗೆ, **ಅತ್ರ** - ಈ ಮೋಕ್ಷೋಪಾಯ ವಿಷಯದಲ್ಲಿ, **ಸಂಸ್ಥಿತಿಃ** - ನಿಷ್ಠೆಯು ಉಂಟಾಗುತ್ತದೆ.

(೩) ಶ್ರೀ ಪಾಞ್ಚರಾತ್ರಂ. **ಜನ್ಮಾನ್ತರಸಹಸ್ರೇಷು** - ಅನೇಕ ಜನ್ಮಗಳಲ್ಲಿ ತಪಸ್ಸು, ಧ್ಯಾನ, ಸಮಾಧಿಗಳ ಅನುಷ್ಠಾನದಿಂದ, **ಕ್ಷೀಣಪಾಪಾನಾಂ** - ನಶಿಸಿಹೋದ ಪಾಪಗಳುಳ್ಳ, **ನರಾಣಾಂ** - ಮನುಷ್ಯರಿಗೆ **ಕೃಷ್ಣೇಭಕ್ತಿಃ** - ಶ್ರೀಕೃಷ್ಣನಲ್ಲಿ ಭಕ್ತಿಯು, **ಪ್ರಜಾಯತೇ** - ಉತ್ಪನ್ನವಾಗುತ್ತದ. ಕೊನೆಗೆ ಭಕ್ತಿಮಾರ್ಗದಲ್ಲಿ ಪ್ರವೇಶ ಉಂಟಾಗುತ್ತದೆ ಎಂಬಭಿಪ್ರಾಯವು.

ಈ ಮೇಲಿನ ಪ್ರಮಾಣಗಳ ಪ್ರಕಾರ, ಐಶ್ವರ್ಯಕ್ಕಾಗಿ ಸರ್ವೇಶ್ವರನನ್ನು ಆಶ್ರ

ಎಜ್ಜಾರಪಡಿಯೇ ವಿಳಮ್ಬವುಣ್ಟು. ಮೋಕ್ಷರುಚಿ ಪಿರನ್ದು ವಲ್ಲದೊರು ವುಪಾಯತ್ತಿಲೇ ಮೂಣ್ಡಾಲ್,

೪. "ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್ ।
ಭವಾಮಿ ನ ಚಿರಾತ್ಪಾರ್ಥ ಮಯ್ಯಾವೇಶಿತ ಚೇತಸಾಂ ॥"

ಎನ್ಗಿರಪಡಿಯೇ ಮೋಕ್ಷಸಿದ್ಧಿಕ್ಕು ವಿಳಂಬವಿಲ್ಲೈ.

ಯಿಸಿದವನಿಗೆ ಅನೇಕ ಪುಣ್ಯಜನ್ಮಗಳನಂತರ ಮೋಕ್ಷೋಪಾಯದಲ್ಲಿ ಅಭಿರುಚಿಯು ಸರ್ವೇಶ್ವರನ ಕೃಪೆಯಿಂದುಂಟಾಗಿ, ಹೀಗೆ ವಿಳಂಬಿಸಿ ಮೋಕ್ಷಪ್ರಾಪ್ತಿಯಾಗುತ್ತದೆಂಬಭಿಪ್ರಾಯವು,

ಮೋಕ್ಷರುಚಿಪಿರನ್ದು – ಮೋಕ್ಷಪ್ರಾಪ್ತಿಯಲ್ಲಿ ಅಭಿರುಚಿಯು ಹುಟ್ಟಿ, ಎಂದರೆ ಹಿಂದೆ ಹೇಳಿದ ಹಾಗೆ ಐಶ್ವರ್ಯಕ್ಕಾಗಿ ಸರ್ವೇಶ್ವರನನ್ನು ಆಶ್ರಯಿಸದೆ ಮೋಕ್ಷಾರ್ಥಿಯಾಗಿಯೇ ಆತನನ್ನು ಆಶ್ರಯಿಸಿದರೆ, **ವಲ್ಲದು**–ತನಗೆ ಸಾಧ್ಯವಾದ **ಒರು ಉಪಾಯತ್ತಿಲೇ** – ಭಕ್ತಿಪ್ರಪತ್ತಿಮಾರ್ಗಗಳಲ್ಲಿ ಯಾವುದಾದರೂ ಒಂದು ತನಗೆ ಶಕ್ಯವಾದ ಉಪಾಯದಲ್ಲಿ, **ಮೂಣ್ಡಾಲ್** – ಪ್ರವೇಶಿಸಿದರೆ,

೪. ಗೀ. ೧೨. ೭. "ಇದು ಭಗವದ್ವಾಕ್ಯವು **ಮಯ್ಯಾವೇಶಿತ ಚೇತಸಾಂ** – ನನ್ನಲ್ಲಿ ಇಡಲ್ಪಟ್ಟ ಮನಸ್ಸುಳ್ಳ, **ತೇಷಾಂ** – ಅಂಥಾವರುಗಳಿಗೆ, ಎಂಥಾವರಿಗೆ ಎಂದರೆ, ಯಾರು ಸಮಸ್ತ ಲೌಕಿಕ, ವೈದಿಕ, ನಿತ್ಯನೈಮಿತ್ತಿಕಾದಿ ಕರ್ಮಗಳೆಲ್ಲವನ್ನೂ ಸರ್ವೇಶ್ವರನಾದ ನನ್ನಲ್ಲಿ ಫಲಾಭಿಸಂಧಿಯಿಲ್ಲದೆ ಸಮರ್ಪಿಸಿ, ಯಾವ ಐಶ್ವರ್ಯಾದಿಗಳನ್ನೂ ಅಪೇಕ್ಷಿಸದೇ, ನನ್ನನ್ನೇ ನಿರಂತರ ಧ್ಯಾನಿಸುತ್ತಾ ಉಪಾಸನೆ ಮಾಡುವರೋ, ಅಂಥಾವರಿಗೆ, **ಮೃತ್ಯುಸಂಸಾರಸಾಗರಾತ್** – ಮೃತ್ಯುರೂಪವಾದ ಸಂಸಾರ ಸಮುದ್ರದಿಂದ, **ನಚಿರಾತ್** – ಬಹು ಶೀಘ್ರವಾಗಿ, **ಸಮುದ್ಧರ್ತಾ ಭವಾಮಿ** – ಮೇಲಕ್ಕೆ ಎತ್ತಿ ಉದ್ಧರಿಸುವನಾಗುವೆನು."

ಎಜ್ಜಾರಪಡಿಯೇ – ಈ ಮೇಲಿನ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಮೋಕ್ಷಸಿದ್ಧಿಕ್ಕು** – ಮೋಕ್ಷಪ್ರಾಪ್ತಿಗೆ ವಿಳಂಬವಿಲ್ಲವು; ಹೀಗೆ ಭಕ್ತಿಮಾರ್ಗವನ್ನವಲಂಬಿಸಿದ ಉಪಾಸಕನಿಗೆ ಪ್ರಾರಬ್ಧಕರ್ಮವು ಪೂರೈಸುವವರೆಗೆ ಮಾತ್ರ ಅವಧಿಯು, ತದನಂತರ ಒಡನೆಯೇ ಕ್ಷಿಪ್ರದಲ್ಲಿಯೇ ಮೋಕ್ಷಪ್ರಾಪ್ತಿ ಎಂಬ ಭಾವವು. ಐಶ್ವರ್ಯಕ್ಕಾಗಿ ಭಗವದಾಶ್ರಯ ಮಾಡಿದವನ ಹಾಗೆ ಅನೇಕ ಜನ್ಮಾನ್ತರಗಳು ಪ್ರಾಪ್ತವಾಗುವ ಹಾಗೆ ವಿಳಂಬವಿಲ್ಲವೆಂಬ ತಾತ್ಪರ್ಯವು. ಇಲ್ಲಿ ಈ ಗೀತಾವಾಕ್ಯವು ಯೋಗನಿಷ್ಠನನ್ನು ಕುರಿತು ಹೇಳಿದ್ದರೂ, ಪ್ರಪತ್ತ್ಯಧಿಕಾರಿ ವಿಷಯದಲ್ಲೂ ಮೇಲೆ

ಸ್ವತಂತ್ರಪ್ರಪತ್ತಿನಿಷ್ಠನುಕ್ಕು ತಾನ್ಕೋಲಿನದೇ ಯಳವು,ವೇರು ವಿಳಮ್ಬಾ ವಿಳಮ್ಬಜ್ಞಳುಕ್ಕುಕ್ಕುರಿಯಿಲ್ಲೈ, ಇನ್ನಿಯುಮಜ್ಞಳಿಲ್ಲಾಮ್, (೧) "ಸ್ವಾ

ಹೇಳಿದ ಹಾಗೆ ವಿಳಂಬವಿಲ್ಲವೆಂದು ತಿಳಿಯತಕ್ಕದ್ದು. (೧) ದೃಪ್ತಪ್ರಪತ್ತಿನಿಷ್ಠನಿಗೆ ದೇಹಾವಸಾನದವರೆಗೆ ಅವಧಿಯು. ದೇಹಾವಸಾನವಾದ ಒಡನೆಯೇ ವಿಳಂಬವಿಲ್ಲದೆ ಮೋಕ್ಷವು. ಆರ್ತನಿಗೆ ಅಷ್ಟು ವಿಳಂಬ ಕೂಡ ಇಲ್ಲವು. ಪ್ರಪತ್ತ್ಯನುಷ್ಠಾನ ಮಾಡಿದ ಒಡನೆಯೇ ದೇಹಾವಸಾನದೊಂದಿಗೆ ಮೋಕ್ಷವು ಎಂಬ ದಾಗಿ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಸ್ವತಂತ್ರಪ್ರಪತ್ತಿ ನಿಷ್ಠನುಕ್ಕು - ಪ್ರಪತ್ತಿಯನ್ನು ಉಪಾಸನಾಂಗವಾಗಿ ಅನುಷ್ಠಿಸದೇ, ಸ್ವತನ್ತ್ರವಾಗಿ ಅನುಷ್ಠಿಸುವವನಿಗೆ ಎಂದರೆ ಭರನ್ಯಾಸಮಾಡಿದವನಿಗೆ, ಪ್ರಪದನವು ಎರಡು ವಿಧವು :— (೧)**ಅಙ್ಗಪ್ರಪತ್ತಿ** - ಇದು ಉಪಾಸನಾಙ್ಗವಾಗಿ ಮಾಡುವ ಪ್ರಪತ್ತಿಯು. (೨) **ಸ್ವತಂತ್ರಪ್ರಪತ್ತಿ** - ಇದೇ ಭರನ್ಯಾಸವು ಅಥವಾ ಪ್ರಪದನವು; ಇಂತಹ ಭರನ್ಯಾಸವನ್ನನುಷ್ಠಿಸಿದವನಿಗೆ, **ತಾನ್ಕೋಲಿನದೇ** - ತಾನು ಅಪೇಕ್ಷಿಸಿದುದೇ, **ಅಳವು** - ಮರ್ಯಾದೆಯು; ಅವಧಿಯು, ಎಂದರೆ ಒಡನೇ ಮೋಕ್ಷಬೇಕೆಂದರೆ ಒಡನೆಯೇ ಉಂಟಾಗುತ್ತದೆಂಬ, ಹಾಗಲ್ಲದೆ ದೇಹಾವಸಾನಾನಂತರ ಅಪೇಕ್ಷಿಸಿದರೆ ದೇಹಾವಸಾನಾನಂತರವೇ ಲಭಿಸುತ್ತದೆಂಬಭಿಪ್ರಾಯವು. **ವೇರುವಿಳಮ್ಬಾವಿಳಮ್ಬಜ್ಞಳುಕ್ಕು** - ಬೇರೆ ವಿಳಂಬ ಮತ್ತು ವಿಳಂಬವಿಲ್ಲದೆ ಇರುವದಕ್ಕೆ, **ಕುರಿಯಿಲ್ಲೈ** - ಬೇರೆ ನಿಯಾಮಕವಿಲ್ಲವು. ಐಶ್ವರ್ಯಕ್ಕಾಗಿ ಸರ್ವೇಶ್ವರನನ್ನು ಆಶ್ರಯಿಸಿದವನಿಗೆ ಅನೇಕ ಜನ್ಮಗಳ ವಿಳಂಬವೆಂದೂ, ಮೋಕ್ಷಕ್ಕಾಗಿ ಗುರೂಪಾಯವಾದ ಭಕ್ತಿಮಾರ್ಗವನ್ನವಲಂಬಿಸಿ ಯೋಗಾಸಕ್ತನಾದವನಿಗೆ ಪ್ರಾರಬ್ಧಕರ್ಮಾವಸಾನಾನಂತರವೆಂದೂ, ಮೋಕ್ಷಕ್ಕಾಗಿ ಲಘೂಪಾಯವಾದ ಭರನ್ಯಾಸವನ್ನು ಮಾಡಿದವನಿಗೆ ಆರ್ತನಾಗಿ ಅತಿಶೀಘ್ರದಲ್ಲಿ ಎಂದು ಅಪೇಕ್ಷಿಸಿದವನಿಗೆ ಅತಿಶೀಘ್ರದಲ್ಲೂ, ದೇಹಾವಸಾನ ಕಾಲಾನಂತರ ಬೇಕೆಂದಪೇಕ್ಷಿಸಿದ ದೃಪ್ತನಿಗೆ ದೇಹಾವಸಾನವಾದ ನಂತರ, ಹೀಗೆ ಶೀಘ್ರದಲ್ಲೇ ಪ್ರಾಪ್ತವಾಗುತ್ತದೆ ಎಂಬಭಿಪ್ರಾಯವು.

ಆದರೆ ಒಂದಾಕ್ಷೇಪವು ತೋರಬಹುದು. ಏನೆಂದರೆ, ಕಷ್ಟಸಾಧ್ಯವಾಗಿ ಗುರೂಪಾಯವನ್ನವಲಂಬಿಸಿರುವ ಯೋಗನಿಷ್ಠರಿಗೆ ಪ್ರಾರಬ್ಧ ಕರ್ಮಾನಂತರ ವಿಳಂ

ದೃಪ್ತಪ್ರಪತ್ತಿನಿಷ್ಠನೆಂದರೆ ಶರಣಾಗತಿಯನ್ನನುಷ್ಠಿಸಿ ದೇಹಾವಸಾನಾನಂತರ ಮೋಕ್ಷವನ್ನಪೇಕ್ಷಿಸುವವನು. ಆರ್ತನು ಇಲ್ಲಿನುವಿಕೆಯನ್ನು ಬೆಂಕಿಯು ತಾಪವಲ್ಲಿದ್ದ ಹಾಗೆ ಭಾವಿಸಿ ಶರಣಾಗತಿಯನ್ನೂಡಿದ ಉತ್ತರಕ್ಷಣವಲ್ಲೇ ಮೋಕ್ಷವನ್ನು ಬಯಿಸುವವನು.

ತನ್ತ್ರ್ಯಮೈಶ್ವರಮುಪರ್ಯನುಯೋಜ್ಯಮಾಹುಃ" ಎಜ್ಜರ ನಿರಙ್ಕುಶ ಸ್ವ ಚ್ಛನ್ದತೈಯಾಲೇ ಸಿದ್ಧಙ್ಗಳೆನ್ರು ಪ್ರಮಾಣಪರತನ್ತ್ರರುಕ್ಕುಸಿದ್ಧಂ.

ಬಿಸಿ ಮೋಕ್ಷಫಲವೂ, ಸುಲಭವಾಗಿ ಲಘೂಪಾಯವಾದ ಸ್ವತಂತ್ರಸ್ವಸಿದ್ಧಿನಿಷ್ಠರಿಗೆ ಅವಿಳಂಬಿತ ಮೋಕ್ಷಫಲವೂ, ಎಂದು ಹೀಗೆ ಹೇಳುವುದು ಯುಕ್ತವೋ, ಸರ್ವೇಶ್ವರನ ಈ ರೀತಿಯಾದ ತೀರ್ಮಾನವು ನ್ಯಾಯವೋ ಎಂಬ ಶಂಕಾ ಉಂಟಾಗಬಹುದು. ತನ್ನಿವಾರಣಾರ್ಥವಾಗಿ ಮುಂದೆ ಅಪ್ಪಣೆಕೊಡಿಸುತ್ತಾರೆ.

ಇನ್ನಿಯುಮುಙ್ಗಳೆಲ್ಲಾಮ್ - ಈ ಮೇಲೆ ಹೇಳಿದ ನಿಯಮಗಳೆಲ್ಲಾ, ಅವ್ ಯಾವುವೆಂದರೆ (ಗ) ಬ್ರಹ್ಮರುದ್ರಾದಿಗಳನ್ನು ಐಹಿಕಕ್ಕಾಗಿ ಆರಾಧಿಸಿದರೆ ಕ್ಷಿಪ್ರ ಫಲವೂ, (ಖ) ಐಶ್ವರ್ಯಕ್ಕಾಗಿ ವಿಷ್ಣುವನ್ನು ಆರಾಧಿಸಿದರೆ, ಅತಿಶಯಿತ ಫಲಪ್ರಾಪ್ತಿಯೂ, ಮೋಕ್ಷಪ್ರಾಪ್ತಿಗೆ ಅನೇಕ ಜನ್ಮಗಳ ವಿಳಂಬವೂ (ಙ) ಮೋಕ್ಷಕ್ಕಾಗಿ ಭಕ್ತಿಮಾರ್ಗದ ಯೋಗನಿಷ್ಠನಿಗೆ ಪ್ರಾರಬ್ಧಕರ್ಮಾವಸಾನದವರೆಗೂ ವಿಳಂಬವೂ (ಳ) ಪರನ್ಯಾಸನಿಷ್ಠನಿಗೆ ಶೀಘ್ರಪ್ರಾಪ್ತಿಯೂ, ಹೀಗೆ ಈ ನಿಯಮಗಳೆಲ್ಲವೂ "**ಐಶ್ವರಂ** - ಈಶ್ವರಸಂಬಂಧವಾದ, **ಸ್ವಾತನ್ತ್ರ್ಯಂ** - ಸ್ವಾತನ್ತ್ರ್ಯವನ್ನು, ಆ ಕಾರಣದಿಂದಲೇ, **ಅಪರ್ಯನುಯೋಜ್ಯಂ**-ಆಕ್ಷೇಪಕ್ಕೆ ಅನರ್ಹವಾದುದೆಂದು, **ಆಹುಃ**-ಹೇಳುತ್ತಾರೆ,"ಎಂಬ ಶ್ರೀವತ್ಸಾಙ್ಕಮಿಶ್ರರ (ಶ್ರೀ ಕೂರೇಶರೆಂಬ ಯತಿರಾಜರ ಪ್ರಿಯ ಶಿಷ್ಯರು) ವೈಕುಂಠಸ್ತವದ ೫೬ನೆಯ ಶ್ಲೋಕದಲ್ಲಿ ಉಪಪಾದಿತವಾದ, **ನಿರಂಕುಶ ಸ್ವಚ್ಛಂದತೈಯಾಲೆ** - ತಡೆಯಿಲ್ಲದ ತನ್ನ ಸ್ವಾತಂತ್ರ್ಯದಿಂದ, **ಸಿದ್ಧಙ್ಗಳೆನ್ರು** - ಉಂಟಾದವುಗಳೆಂದು, **ಪ್ರಮಾಣಪರತನ್ತ್ರರುಕ್ಕು** - ಶಾಸ್ತ್ರ ಪ್ರಮಾಣವಶ್ಯರಾಗಿರುವವರಿಗೆ, **ಸಿದ್ಧಂ** - ವೇದ್ಯವಾದ ವಿಷಯವು. ಎಂದರೆ ಭಗವಂತನು, ಗುರೂಪಾಯಕ್ಕೆ ವಿಳಂಬ ಮೋಕ್ಷವೂ, ಲಘೂಪಾಯಕ್ಕೆ ಶೀಘ್ರಫಲವೂ, ಹೀಗೆ ಏಕೆ ನಿಯಮಿಸಬೇಕಾಗಿತ್ತು ? ವ್ಯತ್ಯಸ್ತವಾಗಿ ಏಕೆ ಸಙ್ಕಲ್ಪಿಸಬಾರದಾಗಿತ್ತು? ಬ್ರಹ್ಮರುದ್ರಾದಿಗಳು ಕ್ಷಿಪ್ರಫಲದಾಯಕರಾಗಿಯೂ, ತಾನು ವಿಳಂಬಿಸಿ ಫಲದಾಯಕನಾಗಿಯೂ ಇ ಎವದಕ್ಕೆ ಬದಲಾಗಿ ಅನ್ಯಥಾ ಏಕೆ ನಿಯಮಿಸಲಿಲ್ಲವು? ಇತ್ಯಾದಿ ಆಕ್ಷೇಪಗಳನ್ನು ಶಾಸ್ತ್ರಪ್ರಮಾಣಶರಣರು ಎಂದಿಗೂ ಮಾಡುವದಿಲ್ಲವು. ಸರ್ವೇಶ್ವರನು ನಿರಙ್ಕುಶಸ್ವಚ್ಛಂದತೆಯುಳ್ಳವನು. ಆತನು ತನ್ನಿಷ್ಟಾನುಸಾರ ಸಙ್ಕಲ್ಪಿಸುವನು. ಅದನ್ನು ಆಕ್ಷೇಪಿಸಲು ಯಾರಿಗೂ ಶಕ್ತಿಯಿಲ್ಲವು. ಅದುದರಿಂದ ಆಕ್ಷೇಪವೂ ಸರಿಯಾದುದೇ ಅಲ್ಲವೆಂಬ ಭಾವವು. ಲೋಕದಲ್ಲೂ ಕೂಡ ಭೃತ್ಯನಾದವನು ಸ್ವಾಮಿಯ ಸ್ವಾತಂತ್ರ್ಯವನ್ನು ಕುರಿತು ಆಕ್ಷೇಪಿಸುವದು ಸರಿಯಲ್ಲವಷ್ಟೇ.

ಈ ಮೇಲಿನ ಪೂರಾ ಶ್ಲೋಕವು:—

"ರೂಪಪ್ರಕಾರ ಪರಿಣಾಮ ಕೃತವ್ಯವಸ್ಥಂ
ವಿಶ್ವಂ ವಿಪರ್ಯಸಿತು ಮನ್ಯದ ಸಚ್ಚಕರ್ತುಂ।
ಕ್ಷಾಮ್ಯೇ ಸ್ವಭಾವ ನಿಯಮಂ ಕಮು ದೀಕ್ಷಸೇತ್ವಂ
ಸ್ವಾತಂತ್ರ್ಯಮೈಶ್ವರ ಮುಪೇಕ್ಷ್ಯ ಯೋಜ್ಯಮಾಹುಃ ॥"

"ಸ್ವರೂಪಗುಣ ಪರಿಣಾಮಗಳಿಂದ ಮಾಡಲ್ಪಟ್ಟ ವ್ಯವಸ್ಥೆಯುಳ್ಳ ಈ ವಿಶ್ವವನ್ನು ವ್ಯತ್ಯಸ್ತವಾಗಿ ಮಾಡುವದಕ್ಕಾಗಲಿ, ಬೇರೆಯಾಗಿ ಮಾಡುವದಕ್ಕಾಗಲಿ, ಸೂಕ್ಷ್ಮವಾಗಿ ಮಾಡುವದಕ್ಕಾಗಲಿ ನಿನಗೆ ಶಕ್ತಿಯಿದ್ದರೂ ನೀನು ಸ್ವಭಾವ ನಿಯಮವನ್ನು ತಾನೇ ಏಕೆ ಅಪೇಕ್ಷಿಸುವೆ? ಏಕೆಂದರೆ ಸರ್ವೇಶ್ವರನ ಸ್ವಾತಂತ್ರ್ಯವು ಆಕ್ಷೇಪಿಸಲ್ಪಡತಕ್ಕದ್ದಲ್ಲವೆಂದು ಜ್ಞಾನಿಗಳು ಹೇಳುವರು. ಆದುದರಿಂದ ಪ್ರಮಾಣಶರಣರು ಪ್ರಮಾಣಗಳನ್ನು ಕುರಿತು ಆಕ್ಷೇಪಿಸುವದು ಯುಕ್ತವಲ್ಲವು. ತರ್ಕಪಾಂಡಿತ್ಯಬಲದಿಂದ ಪ್ರಮಾಣಸ್ವಾರಸ್ಯಕ್ಕೆ ಭಂಗಮಾಡುವದು ಸರಿಯಲ್ಲವೆಂದು **ತರ್ಕಾಪ್ರತಿಷ್ಠಾನಾದಪಿ** ಎಂಬ ಸೂತ್ರದಲ್ಲಿ (೨. ೧. ೧೧.) ಉಪಪಾದಿಸಲ್ಪಟ್ಟಿರುತ್ತದೆ. ಇದನ್ನನುಸರಿಸಿಯೇ **ತರ್ಕೋ ನ ಪ್ರತಿತಿಷ್ಠತಿ** ಎಂಬದಾಗಿ ಶ್ರೀಮದಾಚಾರ್ಯರವರು ಸಚ್ಛಾಸ್ತ್ರಸೂರ್ಯೋದಯದಲ್ಲಿ ಅಪ್ಪಣೆಕೊಡಿಸಿರುತ್ತಾರೆ. ಆದುದರಿಂದ ಈ ನಿಯಮಗಳೆಲ್ಲಾ ಪ್ರಮಾಣಬಲವುಳ್ಳವುಗಳಾದುದರಿಂದ ಮೇಲೆ ಹೇಳಿದ ರೀತ್ಯಾ ಸಿದ್ಧವಾದವುಗಳೆಂಬ ಭಾವವು.

ಆದರೆ ಸರಿಯಾದ ಜ್ಞಾನವುಂಟಾಗಬೇಕಾದರೆ ಜಿಜ್ಞಾಸೆಯೂ ಆವಶ್ಯಕವೆಂಬುವದರಲ್ಲಿ ಸಂಶಯವಿಲ್ಲವು; ಹೀಗಿರುವಾಗ, "ತರ್ಕವು ಪ್ರತಿಷ್ಠಿತವಾದ ಜ್ಞಾನವನ್ನುಂಟುಮಾಡಲಾರದೆಂ"ದು ಶ್ರೀ ವ್ಯಾಸಮಹರ್ಷಿಯು ಹೇಳಿದುದು ಸರಿಯೋ, ಎಂದರೆ, ತರ್ಕವೇನೋ ಬೇಕು ಆದರೆ ಆ ತರ್ಕವು ವೇದಶಾಸ್ತ್ರಕ್ಕೆ ವಿರೋಧವಿಲ್ಲದೆ ಇರಬೇಕೆಂಬ ತಾತ್ಪರ್ಯವು.

ಆರ್ಷಂ ಧರ್ಮೋಪದೇಶಂಚ ವೇದಶಾಸ್ತ್ರಾವಿರೋಧಿನಾ।
ಯಸ್ತರ್ಕೇಣಾನುಸಂಧತ್ತೇ ಸಧರ್ಮಂ ವೇದ ನೇತರಃ ॥

ಮಹರ್ಷಿಗಳು ಧರ್ಮೋಪದೇಶವನ್ನು ಮಾಡಿರುವದು ವೇದಶಾಸ್ತ್ರದಲ್ಲಿ ಹೇಳಿರುವ ಪ್ರಮಾಣಗಳನ್ನನುಸರಿಸಿದುದಾಗಿರುತ್ತದೆ. ಆದುದರಿಂದ ಅಂತಹ ಧರ್ಮೋಪದೇಶವನ್ನು ಯಾರು ತರ್ಕಮೂಲಕ ಅನುಸಂಧಾನಮಾಡುವರೋ ಅವರೀಗ ಧರ್ಮವನ್ನರಿತವರು, ಇತರರಲ್ಲವು. ಇದರಿಂದ ವೇದಪ್ರಮಾಣವನ್ನನುಸರಿಸಿದ ತರ್ಕವೀಗ ಸತ್ತರ್ಕವೆಂದೂ, ಅಂತಹ ಪ್ರಮಾಣವನ್ನು ದೂರೀಕೃತಮಾಡಿ ಎಸಗುವ ವಾದವೀಗ ಕುತರ್ಕವೆಂದೂ ಅಭಿಪ್ರಾಯವು. ಆದುದರಿಂದ ಪ್ರಮಾಣಗಳನ್ನು ತ್ಯಜಿಸಿ ಬರೀ ವಾದ ಮೂಲಕ ಆಕ್ಷೇಪವು ಸರಿಯಾದುದಲ್ಲವೆಂಬುವದೇ ಈಗ ಹೇಳಿದುದರ ಮುಖ್ಯ ತಾತ್ಪರ್ಯವು.

ದೇವತಾನ್ತರಭಜನಂ ಮುಮುಕ್ಷೋಃ ತ್ಯಾಜ್ಯಮ್

ಇನ್ನರ್ಥಜ್ಞಿಳಿಪ್ಪಡಿ ತ್ತೆಳಿಯಾದಾರ್ಕ್ಕೆ ದೇವತಾನ್ತರಜ್ಞಳ್ ಸೇವ್ಯಜ್ಞಳಿನ್ರುಮಿಡವ್ ''ಪ್ರತಿಬುದ್ಧವರ್ಜಂ ಸೇವ್ಯನ್ತು'' ಎನ್ರುವ್ಯವಸ್ಥಿ ಪಣ್ಣಪಟ್ಟದು.

ಆದರೆ ಅನೇಕರು ದೇವತಾನ್ತರಗಳನ್ನು ಆರಾಧಿಸುವದನ್ನು ಕಂಡಿರುವೆವು. ಅಲ್ಲವೇ ಎಂದರೆ, ಮುಂದಿನ ವಾಕ್ಯದಿಂದ ತಿಳುವಳಿಕೆ ಇಲ್ಲದವರಿಗೆ ಅವರು ಸೇವ್ಯರೇ ವಿನಾ, ವಿವೇಕಿಯಾಗಿ ಜ್ಞಾನಿಯಾದ ಮುಮುಕ್ಷುವಿಗೆ ಅನುಪಾಸ್ಯರೆಂದು ಹೇಳುತ್ತಾರೆ:—

ದೇವತಾನ್ತರ ಭಜನವು ಮುಮುಕ್ಷುವಿಗೆ ತ್ಯಾಜ್ಯವು.

ಇನ್ನರ್ಥಜ್ಞಿಳ್ - ಶ್ರೀಮನ್ನಾರಾಯಣನಿಗೂ ಬ್ರಹ್ಮ ರುದ್ರರಿಗೂ ಮೇಲೆ ಉಪಪಾದಿಸಿದ ರೀತಿಯಲ್ಲಿ ವ್ಯತ್ಯಾಸಗಳುಂಟೆಂಬ ಅಭಿಪ್ರಾಯಗಳನ್ನು, **ಇಪ್ಪಡಿ** - ಈ ಮೇಲೆ ವಿವರಿಸಿದ ರೀತಿಯಲ್ಲಿ, **ತೆಳಿಯಾದಾರ್ಕ್ಕೆ** – ತಿಳಿಯದ ಜ್ಞಾನಹೀನರಿಗೇ, **ದೇವತಾನ್ತರಜ್ಞಳ್ ಸೇವ್ಯಜ್ಞಳ್** - ಬ್ರಹ್ಮರುದ್ರಾದಿ ಅನ್ಯದೇವತೆಗಳು ಸೇವಿಸಲು ಯೋಗ್ಯರು, **ಎನ್ರುಮಿಡವ್**-ಎನ್ನುವ ಸಂದರ್ಭದಲ್ಲಿ, **''ಪ್ರತಿಬುದ್ಧವರ್ಜಂ ಸೇವ್ಯಂತು''** - "ವಿವೇಕಜ್ಞಾನವಿಲ್ಲದವನಿಂದ ಸೇವಿಸಲು ಯೋಗ್ಯವು," **ಎನ್ರು** – ಎಂದು, **ವ್ಯವಸ್ಥಿಪಣ್ಣಪಟ್ಟದು** – ವ್ಯವಸ್ಥೆಮಾಡಲ್ಪಟ್ಟಿತು, ನಿಶ್ಚಯಿಸಲ್ಪಟ್ಟಿರುತ್ತದೆ ಎಂಬ ಭಾವವು. ಮೋಕ್ಷಾರ್ಥಿಯಲ್ಲದೆ ವಿವೇಕಜ್ಞಾನವಿಲ್ಲದವನೀಗ ದೇವತಾನ್ತರಗಳನ್ನು ಸೇವಿಸಬಹುದು ಎಂಬುವದು ಈ ವಾಕ್ಯಾರ್ಥವು. ಇದರಿಂದ **ಪ್ರತಿಬುದ್ಧಸ್ತು ಮೋಕ್ಷಭಾಕ್** ಎಂದು ಹೇಳಿರುವ ರೀತಿಯಲ್ಲಿ ವಿವೇಕಜ್ಞಾನವುಳ್ಳ ಮೋಕ್ಷಾರ್ಥಿಯು, ಸರ್ವೇಶ್ವರನಾದ ಶ್ರೀಮಹಾವಿಷ್ಣುವನ್ನೇ ಸೇವಿಸತಕ್ಕದ್ದೆಂಬುವದು ಸ್ಥಾಪಿಸಲ್ಪಟ್ಟಿತು. ವಿವೇಕ ಜ್ಞಾನಶೂನ್ಯನೀಗ ದೇವತಾನ್ತರವನ್ನು ಸೇವಿಸುವನು ಎಂದು ಹೇಳಿದುದರಿಂದ, ಪ್ರತಿಯೊಬ್ಬ ಜ್ಞಾನಶೂನ್ಯನೂ, ಬ್ರಹ್ಮರುದ್ರಾದಿ ದೇವತಾನ್ತರಗಳನ್ನೇ ಸೇವಿಸುವನೆಂದೂ ಭಾವಿಸತಕ್ಕದ್ದಲ್ಲವು. ಏಕೆಂದರೆ ಜ್ಞಾನಶೂನ್ಯರೂ ಕೂಡ ಭಗವಂತನನ್ನು ಕ್ಷುದ್ರಫಲಗಳಿಗಾಗಿ ಭಜಿಸಬಹುದೆಂದು, ಮುಂದೆ **''ಆರ್ತೋ ಜಿಜ್ಞಾಸುರರ್ಥಾರ್ಥೀ''** ಎಂಬ ವಾಕ್ಯದ ಮೂಲಕ ತಿಳಿಸುತ್ತಾರೆ.

ಈ ದೇವತಾಂತರಗಳ ಭಜನೆಯು ಜ್ಞಾನಶೂನ್ಯರಿಂದಲೂ ಜ್ಞಾನವುಳ್ಳವ

ಭಗವದ್ದೇವತಾನ್ತರಯೋಃ ಫಲಪ್ರಾಪ್ತೌ ತಾರತಮ್ಯವರ್ಣನಂ

ಇದ್ದೇವತಾನ್ತರಜ್ಞಳೈ ಭಗವಚ್ಛರೀರ ಮೆನ್ಱರಿಯಾದೆ ಪತ್ತಿನಾರ್ಕ್ಕು, ಚಾರ್ವಾಕನಾಯಿರುಪ್ಪಾನೊರು ಸೇವಕ್ಕ ರಾಜಾವಿನುಡಮ್ಬಿಲೆ ಚನ್ದನಾ

ರಿಂದಲೂ ಐಹಿಕ ಫಲಗಳಿಗಾಗಿ ಮಾಡಲ್ಪಡಬಹುದು. ಈ ಫಲಪ್ರಾಪ್ತಿಗಳಲ್ಲಿ ಏನಾದರೂ ತಾರತಮ್ಯ ಉಂಟೇ? ಮತ್ತು ಅಂತಹ ಐಹಿಕ ಫಲಗಳಿಗಾಗಿ ಸರ್ವೇಶ್ವರನನ್ನೇ ಇವರು ಭಜಿಸಬಹುದು; ಆಗಲೂ ಫಲದಲ್ಲೇನಾದರೂ ತಾರತಮ್ಯ ಉಂಟೇ? ಎಂಬೀ ಪ್ರಶ್ನೆಗಳಿಗೆ ತಾರತಮ್ಯ ಉಂಟೆಂದು ಮುಂದಿನ ಮೂರು ವಾಕ್ಯಗಳಿಂದುಪದೇಶಿಸುತ್ತಾರೆ,

೧. ಈ ದೇವತಾನ್ತರಗಳು ಭಗವಚ್ಛರೀರವೆಂಬ ಜ್ಞಾನವಿಲ್ಲದೆ ಅವರುಗಳನ್ನಾರಾಧಿಸಿ ಕ್ಷುದ್ರ ಐಹಿಕಾದಿ ಫಲಾಪೇಕ್ಷೆಯನ್ನು ಮಾಡಿದರೆ, ಅದರಿಂದ ಭಗವಂತನೇಆರಾಧಿಸಲ್ಪಡುವನು; ಈ ಅಶಾಸ್ತ್ರೀಯಮಾರ್ಗದಿಂದ ಪೂರ್ಣಫಲಪ್ರಾಪ್ತಿಯು ಇಲ್ಲವೆಂದು ಹೇಳುತ್ತಾರೆ.

೨. ಆದರೆ ಐಹಿಕ ಕ್ಷುದ್ರ ಫಲಗಳಲ್ಲಿ ಆಸಕ್ತಿಯುಂಟಾಗಿ, ಆ ದೇವತಾನ್ತರಗಳು ಭಗವಚ್ಛರೀರವೆಂಬ ಜ್ಞಾನದೊಂದಿಗೆ ಆರಾಧಿಸಿದರೆ ಅಂತಹ ಆರಾಧನೆಯಿಂದ ಪ್ರೀತನಾದ ಸರ್ವೇಶ್ವರನಿಂದ ಪೂರ್ಣವಾದ ಐಹಿಕ ಫಲವುಂಟೆಂದು ಬೋಧಿಸುತ್ತಾರೆ.

೩. ಹೀಗೆ ದೇವತಾನ್ತರಗಳನ್ನು ಭಜಿಸದೇ, ಸರ್ವೇಶ್ವರನನ್ನೇ ಸಾಕ್ಷಾತ್ತಾಗಿ ಐಹಿಕಾದಿ ಫಲಗಳಿಗಾಗಿ ಆರಾಧಿಸಿದರೆ, ಇನ್ನೂ ಅತಿಶಯಗಳಾದ ಫಲಗಳನ್ನು ಹೊಂದಬಹುದು ಎಂದು ಅಪ್ಪಣೆ ಕೊಡಿಸುತ್ತಾರೆ.

ದೇವತಾನ್ತರದಿಂದಲೂ ಭಗವಂತನಿಂದಲೂ ಉಂಟಾಗುವ ಫಲಪ್ರಾಪ್ತಿಯಲ್ಲಿ ತಾರತಮ್ಯವು.

ಇದ್ದೇವತಾನ್ತರಜ್ಞಳೈ - ಈ ಬ್ರಹ್ಮರುದ್ರಾದಿ ದೇವತೆಗಳನ್ನು, **ಭಗವಚ್ಛರೀರ ಮೆನ್ಱರಿಯಾದೆ** - ಇವರೂ ಭಗವಂತನಿಗೆ ಶರೀರವೆಂಬ ಜ್ಞಾನವಿಲ್ಲದೆ, **ಪತ್ತಿನಾರ್ಕ್ಕು** - ಆಶ್ರಯಿಸಿದ ಉಪಾಸಕರಿಗೆ, **ಚಾರ್ವಾಕನಾಯಿರುಪ್ಪಾ** - ಪ್ರತ್ಯಕ್ಷವಾಗಿ ತೋರುವದನ್ನು ಮಾತ್ರವೇ ನಂಬುವದರಿಂದ ದೇಹವಲ್ಲದೆ ಬೇರೆ ಆತ್ಮವಿಲ್ಲವೆಂದು ಹೇಳುವ ಚಾರ್ವಾಕನಾದ, **ಒರುಸೇವಕ್ಕ** - ಒಬ್ಬ ಸೇವಕನು **ರಾಜಾವಿನುಡಂಬಿಲೆ** - ರಾಜನ ದೇಹವಲ್ಲಿ, **ಚನ್ದನಾದಿಗಳೈಪ್ರಯೋಗಿಕ್ಕ** - ಗಂಧ ಮೊದಲಾದವುಗಳನ್ನು ಹಚ್ಚಲಾಗಿ, **ರಾಜ ಶರೀರತ್ತಿಲಾತ್ಮಾ** - ರಾಜನ

ದಿಗಳ್ಳಿ ಪ್ರಯೋಗಿಕ್ಕ ರಾಜಶರೀರತ್ತಿಲಾತ್ಮಾ ಪ್ರೀತನಾವುಂಪೋಲೆ, ವಸ್ತುವೃತ್ತಿಯಿಲ್ ಸರ್ವೇಶ್ವರನೇ ಯಾರಾಧ್ಯನಾನಾಲುಮ್,

(೧) "ಯೇತ್ಪೆನ್ಯದೇವತಾ ಭಕ್ತಾ ಯಜನ್ತೇ ಶ್ರದ್ಧಯಾನ್ವಿತಾಃ ।
ತೇಪಿ ಮಾಮೇವ ಕೌಂತೇಯ ಯಜನ್ತ್ಯವಿಧಿಪೂರ್ವಕಂ ॥"

ಎಜ್ಞ್ಞರಪಡಿಯೇ ಶಾಸ್ತ್ರಾರ್ಥವೈಕಲ್ಯಮುಂಡಾನಪಡಿಯಾಲೇ ಯವನ್ರಿ ರ್ಪ್ಪೊನ್ನಫಲಂ ವಿಕಲವುಮಾವುಮ್.

ಶರೀರದಲ್ಲಿರುವ ಆತ್ಮನು, **ಪ್ರೀತನಾವುಂಪೋಲೆ**-ಸುಪ್ರೀತನಾಗುವ ಹಾಗೆ, **ವಸ್ತುವೃತ್ತಿಯಿಲ್** - ಈತನ ಉದ್ದೇಶ್ಯವಿಲ್ಲದಿದ್ದರೂ ವಸ್ತು ಸ್ವಭಾವದಿಂದಲೇ, **ಸರ್ವೇಶ್ವರನೇ ಆರಾಧ್ಯನಾಲುಮ್** – ಸರ್ವೇಶ್ವರನೇ ಆರಾಧಿಸಲ್ಪಟ್ಟರೂ, **"ಹೇ ಕೌನ್ತೇಯ** – ಓ ಕುನ್ತೀಪುತ್ರನಾದ ಅರ್ಜುನನೇ, **ಯೇತು** – ಯಾರಾದರೋ **ಅನ್ಯದೇವತಾಭಕ್ತಾಃ** - ಬ್ರಹ್ಮರುದ್ರೇಂದ್ರಾದಿ ದೇವತೆಗಳ ಭಕ್ತರಾಗಿ, **ಶ್ರದ್ಧಯಾನ್ವಿತಾಃ** - ಶ್ರದ್ಧೆಯಿಂದ ಕೂಡಿದವರಾಗಿ, **ಯಜಂತೇ** - ಯಜ್ಞಯಾಗಾದಿಗಳಿಂದ ಆರಾಧಿಸುವರೋ, **ತೇಪಿ** - ಅವರುಗಳೂ ಕೂಡ, ಸಮಸ್ತವೂ ನನಗೆ ಶರೀರವಾಗಿ ನಾನು ಅವರುಗಳಿಗೆಲ್ಲಾ ಆತ್ಮಾವಾಗಿರುವದರಿಂದ ಆ ಬ್ರಹ್ಮರುದ್ರೇಂದ್ರಾದಿ ಶಬ್ದಗಳೂ ಕೂಡ ನನ್ನನ್ನೇ ಬೋಧಿಸುವದರಿಂದ, **ಮಾಮೇವ**-ನನ್ನನ್ನೇ **ಯಜನ್ತೇ** - ಆರಾಧಿಸುತ್ತಾರೆ, ಆದರೆ ಅವರುಗಳು ಶ್ರುತಿಗಳಲ್ಲಿ ಹೇಳಿರುವ ಹಾಗೆ ಸಾಕ್ಷಾತ್ತಾಗಿ ನನ್ನನ್ನು ಆರಾಧಿಸದೆ, ದೇವತಾನ್ತರಗಳನ್ನು ಆರಾಧಿಸಿದುದರಿಂದ, **ಅವಿಧಿಪೂರ್ವಕಂ**-ಅಶಾಸ್ತ್ರೀಯವಾಗಿ, **ಯಜನ್ತೇ**-ಆರಾಧಿಸುತ್ತಾರೆ," **ಎಜ್ಞ್ಞರಪಡಿಯೇ** – ಎಂದು ಹೇಳಿರುವ ಹಾಗೆ, **ಶಾಸ್ತ್ರಾರ್ಥವೈಕಲ್ಯಮುಂಡಾನಪಡಿಯಾಲೆ** - ಶಾಸ್ತ್ರದಲ್ಲಿ ಹೇಳಿರುವದಕ್ಕೆ ನ್ಯೂನತೆಯುಂಟಾದುದರಿಂದ, **ಅವತ್ತಿರ್ಪ್ಪೊನ್ನಫಲಂ** - ಅವುಗಳಿಗೆ ಹೇಳಿದ ಫಲವೂ ಕೂಡ, **ವಿಕಲವುಮಾವುಮ್** – ನ್ಯೂನವಾಗಬಹುದು.

ಎಲ್ಲಾ ಚಿದಚಿತ್ತುಗಳೂ ಸರ್ವೇಶ್ವರನಿಗೆ ಶರೀರವಾಗಿ, ಅವುಗಳಿಗೆಲ್ಲಾ ಸರ್ವೇಶ್ವರನೇ ಆತ್ಮಾವಾಗಿರುವದರಿಂದ, ಬ್ರಹ್ಮರುದ್ರೇಂದ್ರಾದಿಗಳ ಆರಾಧನೆಯಿಂದಲೂ, ಅವರುಗಳಿಗೆ ಆತ್ಮಾವಾದ ಸರ್ವೇಶ್ವರನೇ ಆರಾಧಿಸಲ್ಪಡುವನು. ಆ ಬ್ರಹ್ಮಾದಿಗಳನ್ನು ಆರಾಧಿಸುವವನಿಗೆ ಆ ಬ್ರಹ್ಮಾದಿಗಳೂ ಸರ್ವೇಶ್ವರನಿಗೆ ಶರೀರವೆಂಬ ಜ್ಞಾನವಿಲ್ಲದಿದ್ದರೂ, ಸರ್ವೇಶ್ವರನೇ ಆರಾಧಿಸಲ್ಪಡುವನು ಎಂಬ ಭಾವವು. ಅದು

---

(೧) ಗೀ. ೯-೨೩.

ಭಗವಚ್ಛರೀರಜ್ಞಳೆನ್ಸರಿನ್ದು ಕ್ಷುದ್ರಫಲಜ್ಞಳೈಕ್ಕಡುಗ ಪ್ಪೆರವೇಣು ಮೆಜ್ಞರ ರಾಗ ವಿಶೇಷತ್ತಾಲೆ ಯವರ್ಗಳೈ ಯುಪಾಸಿಪ್ಪಾರ್ಕ್ಕ ಅವ್ವೋ ಫಲಜ್ಞಳ್ ಪೂರ್ಣಜ್ಞಳಾಮ್.

ಹೇಗೆ ಎಂಬುವದನ್ನು ಒಂದು ದೃಷ್ಟಾಂತ ಮೂಲಕ ಬೋಧಿಸುತ್ತಾರೆ. ಚಾರ್ವಾಕನಾದ ಒಬ್ಬ ಆಳಿದ್ದಾನೆಂದು ಭಾವಿಸೋಣ. ಈತನು ದೇಹವಲ್ಲದೆ ಬೇರೆ ಆತ್ಮನೊಬ್ಬನಿದ್ದಾನೆಂದು ನಂಬುವದಿಲ್ಲವು. ಅಂತಹ ಆಳು ರಾಜನ ದೇಹಕ್ಕೆ ಗಂಧ ಹಚ್ಚಿ ಶೈತ್ಯೋಪಚಾರ ಮಾಡಿದರೂ, ರಾಜನ ಆತ್ಮವೇ ಹೇಗೆ ಸುಪ್ರೀತವಾದುದಾಗುತ್ತದೋ, ಹಾಗೆಯೇ ದೇವತಾನ್ತರಗಳಿಗೆ ಆತ್ಮಾವಾಗಿ ಸರ್ವೇಶ್ವರನೊಬ್ಬನಿದ್ದಾನೆಂಬ ಜ್ಞಾನವಿಲ್ಲದೇ ಆರಾಧಿಸಿದರೂ, ಅಂತರಾತ್ಮಾವಾದ ಸರ್ವೇಶ್ವರನೇ ಆರಾಧಿಸಲ್ಪಡುವನು ಎಂಬ ಭಾವವು.

ಆದರೆ **ಭಗವಚ್ಛರೀರಜ್ಞಳೆನ್ಸರಿನ್ದು**-ಆ ದೇವತಾನ್ತರಗಳೆಲ್ಲಾ ಸರ್ವೇಶ್ವರನಿಗೆ ಶರೀರವೆಂದು ತಿಳಿದು, **ಕ್ಷುದ್ರಫಲಜ್ಞಳೈ**-ಅನಿತ್ಯವಾದುದರಿಂದ, ಕ್ಷುದ್ರಫಲಗಳೆಂದು ಹೇಳಿಸಿಕೊಳ್ಳುವ ಐಹಿಕಾದಿ ಧರ್ಮಾರ್ಥಕಾಮಫಲಗಳನ್ನು, **ಕಡುಗ**-ಶೀಘ್ರವಾಗಿ, **ಪೆರವೇಣುಂ** - ಹೊಂದಬೇಕು, **ಎಜ್ಞರರಾಗವಿಶೇಷತ್ತಾಲೆ** - ಎನ್ನುವ ಆಶೆಯಿಂದ, **ಅವರ್ಗಳೈಯುಪಾಸಿಪ್ಪಾರ್ಕ್ಕ** - ಆ ದೇವತಾನ್ತರಗಳನ್ನುಪಾಸಿಸುವವರಿಗೆ, **ಅವ್ವೋಫಲಜ್ಞಳ್** - ಆಯಾಯಾ ಫಲಗಳು, **ಪೂರ್ಣಜ್ಞಳಾಮ್**-ಶಾಸ್ತ್ರದಲ್ಲಿ ಯಾವ ಫಲ ಉಂಟೆಂದು ಹೇಳಿದೆಯೋ ಅಷ್ಟೂ ಪೂರ್ಣವಾಗಿ ಲಭಿಸುತ್ತವೆ. ಇದರಿಂದ ಹಾಗೆ ಭಗವಚ್ಛರೀರವೆಂಬ ಜ್ಞಾನವಿಲ್ಲದಿರುವವರಿಗೆ ಶಾಸ್ತ್ರದಲ್ಲಿ ಹೇಳಿರುವ ಸಂಪೂರ್ಣ ಫಲವು ದೊರೆಯುವದಿಲ್ಲವೆಂಬುವದು ವ್ಯಕ್ತವು ಇದಕ್ಕೆ **ಕಾರಣ**ವೇನೆಂದರೆ ಇಲ್ಲಿ ಭಗವಂತನ ಆರ್ಚನೆಯು ಉದ್ದೇಶವಲ್ಲವಾದುದರಿಂದ ಫಲ ಪೂರ್ಣತೆಯಿಲ್ಲವು. ಆದರೆ ಅವರು ಭಗವಚ್ಛರೀರವೆಂದರಿತು ಆರಾಧಿಸಿದರೆ, ಅಂತಹ ಆರಾಧನೆಯಿಂದ ಭಗವಂತನೇ ಆರಾಧಿಸಲ್ಪಡುವನೆಂಬ ಜ್ಞಾನವಿರುವದರಿಂದ ಫಲದಲ್ಲಿ ಪೂರ್ಣತೆಯುಂಟು ಎಂಬ ಭಾವವು.

ಆದರೆ, ಹೀಗೆ ಈ ದೇವತಾನ್ತರಗಳು ಭಗವಚ್ಛರೀರವೆಂದೂ, ಅಂಥಾವರುಗಳ ಆರಾಧನೆಯಿಂದ ಸರ್ವೇಶ್ವರನೇ ಆರಾಧಿಸುವನೆಂದೂ ತಿಳಿದು, ಹೀಗೆ ದೇವತಾನ್ತರಗಳನ್ನು ಭಜಿಸುವದಕ್ಕಿಂತ, ಅಂಥಾವನು ಸಾಕ್ಷಾತ್ತಾಗಿಯೇ ಏಕೆ ಸರ್ವೇಶ್ವರನನ್ನೇ ಆರಾಧಿಸಕೂಡದು ಎಂಬಾಕ್ಷೇಪಕ್ಕೆ ಸಮಾಧಾನವಾಗಿ, **ಕಡುಗ ಪೆರವೇಣುಮೆಜ್ಞರರಾಗವಿಶೇಷತ್ತಾಲೆ** ಎಂದು ಪ್ರಯೋಗಿಸಿರುತ್ತಾರೆ. ಪ್ರಾರಬ್ಧಕರ್ಮಪ್ರಾಬಲ್ಯದಿಂದ ಅಲ್ಪಗಳಾದ ಐಹಿಕ ಸ್ವರ್ಗಾದಿ ಸುಖಗಳಲ್ಲಿ ರಾಗ ಉಂಟಾಗಿ

ಇಪ್ಪಡಿ ಯುರಿನ್ದಾಲ್ ಭಗವಾ ತನ್ನೈಯೆ " ಆರ್ತೋಜಿಜ್ಞಾಸು ರರ್ಥಾರ್ಥೀ" ಎಜ್ಞರ ಪಡಿಯೇ ಫಲಾನ್ತರಜ್ಞಳುಕ್ಕಾಕವುಮ್ ಪಿನ್ನಿ ನಾಲನ್ದಫಲಜ್ಞಳ್ ಅತಿಶಯಿತಜ್ಞಳಾಮ್'

ಅವುಗಳನ್ನು ಬೇಗ ಹೊಂದಬೇಕೆಂಬಭಿಲಾಷೆಯಿಂದ ದೇವತಾಂತರಗಳನ್ನು ಭಜಿಸ ಬಹುದೆಂಬ ಭಾವವು. ಈ ಫಲಗಳೆಲ್ಲಾ ಮಹರ್ಷಿಯು ಹೇಳಿರುವ ಹಾಗೆ (೧) **"ಧರ್ಮಾರ್ಥಕಾಮೈರಲಮುಲ್ಪಕಾಸ್ತೇ"** ಈ ಮೂರುಪುರುಷಾರ್ಥಗಳೂ ಅಲ್ಪ ಗಳಾದುದರಿಂದ **ಕ್ಷುದ್ರ**ಫಲಗಳೆಂದು ಪ್ರಯೋಗಿಸಿರುತ್ತಾರೆ. ಆದರೆ ಅನಿತ್ಯವೆಂದು ತಿಳಿದೂ ಅವುಗಳನ್ನು ಬಯಿಸುವರುಂಟೋ ಎಂದರೆ ಪ್ರಾರಬ್ಧಕರ್ಮವೈಚಿತ್ರ್ಯ ದಿಂದ ಉಂಟೆಂದು ತಿಳಿಸುವುದಕ್ಕಾಗಿ **ರಾಗವಿಶೇಷತ್ತಾಲೆ** ಎಂಬ ಪ್ರಯೋಗವು.

(೨) "ಕೌಪೀನಾಚ್ಛಾದನಪ್ರಾಯ ವಾಂಛಾ ಕಲ್ಪದ್ರುಮಾದಪಿ।
ಜಾಯತೇ ಽಪುಣ್ಯವತಾಂ ಸೋಽಪರಾಧ ಸ್ಸ್ವದೋಷಜಃ॥"

ಕೇಳಿದುದನ್ನು ಕೊಡುವ ಕಲ್ಪವೃಕ್ಷವು ಎದುರಿಗೆ ನಿಂತಿದ್ದರೂ ಕೌಪೀನಾ ಚ್ಛಾದನೆಗಾಗಿ ಬಟ್ಟೆಯನ್ನು ಕೇಳುವ ಅಭಿಲಾಷೆಯು ಪುಣ್ಯಹೀನರಿಗೆ ಉಂಟಾಗ ಬಹುದು. ಇದೇಕೆಂದರೆ ಅವರುಗಳ ಪ್ರಾರಬ್ಧ ಕರ್ಮರೂಪದೋಷದಿಂದ ಅಂತಹ ಬುದ್ಧಿಯು ಪ್ರಾಪ್ತವಾಗುತ್ತದೆಂದು ಮಹರ್ಷಿಯು ಹೇಳಿರುತ್ತಾರೆ. ಆದುದರಿಂದ ಅನೇಕರಿಗೆ ಇಂತಹ ಕ್ಷುದ್ರಫಲಗಳಲ್ಲೇ ಆಶೆಯುಂಟಾಗಿ ಅವುಗಳನ್ನು ಪ್ರಾಪ್ತಿಪ್ರದಲ್ಲೇ ಪಡೆಯಬೇಕೆಂಬ ಆಶೆ ಇರುವುದರಿಂದಲೇ, ಅವರು ರುದ್ರಾದಿ ದೇವತೆಗಳನ್ನಾರಾ ಧಿಸುತ್ತಾರೆಂಬ ಭಾವವು.

ಈ ಕ್ಷುದ್ರಫಲಗಳಿಗಾಗಿಯೇ ಇನ್ನೂ ಕೆಲವರು ಸರ್ವೇಶ್ವರನನ್ನೇ ಸಾಕ್ಷಾತ್ತಾಗಿ ಆರಾಧಿಸಬಹುದು. ಅಂತವರಿಗೆ ಈ ಫಲಗಳು ಇನ್ನೂ ಅತಿಶಯವಾದ ವುಗಳಾಗಬಹುದೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಇಪ್ಪಡಿ ಯುರಿನ್ದಾಲ್ – ದೇವತಾನ್ತರಗಳೆಲ್ಲಾ ಸರ್ವೇಶ್ವರನಿಗೆ ಶರೀರವು, ಆತನು ಅವರುಗಳಿಗೆ ಆತ್ಮಾ, ಆದುದರಿಂದ ಸರ್ವೇಶ್ವರನೇ ಸೇವ್ಯನೇ ವಿನಾ ದೇವತಾಂತರಗಳು ಸೇವ್ಯರಲ್ಲವೆಂಬ ಜ್ಞಾನವುಂಟಾದರೆ, **ಭಗವಾ ತನ್ನೈಯೇ**– ಭಗವಂತನನ್ನೇ ಸಾಕ್ಷಾತ್ತಾಗಿ, "**ಆರ್ತ**ಃ–ಹಿಂದಿನ ಐಶ್ವರ್ಯವನ್ನು ಕಳೆದುಕೊಂಡು ದೀನನಾಗಿ ಪುನಃ ಅದನ್ನು ಹೊಂದಬೇಕೆಂಬ ಅಭಿಲಾಷೆಯುಳ್ಳವನೂ, **ಜಿಜ್ಞಾಸುಃ** - ಕೇವಲ ಆತ್ಮಾನುಭವ ಇಚ್ಛೆಯುಳ್ಳವನೂ, **ಅರ್ಥಾರ್ಥೀ** - ಹಿಂದೆ

---

(೧) ವಿ. ಪು. (೨) ವಿ. ಪು.

ಇಲ್ಲದ ಹೊಸದಾದ ಐಶ್ವರ್ಯವನ್ನು ಹೊಂದಬೇಕೆಂಬಪೇಕ್ಷೆಯುಳ್ಳವನು," **ಎಜ್ಗ್ರ ಪಡಿಯೇ** – ಎಂದು ಹೇಳಿರುವಹಾಗೆ, **ಫಲಾನ್ತರಜ್ಞಳಕ್ಕಾಕವುಮ್** – ಮೋಕ್ಷವಲ್ಲದೆ ಮಿಕ್ಕ ಇತರ ಫಲಗಳಿಗಾಗಿಯಾದರೂ, **ಫನ್ನಿನಾಲ್** – ಈ ಮೂರು ಜನ ಭಕ್ತರೂ ಆಶ್ರಯಿಸಿದರೆ, **ಅನ್ದಫಲಂಗಳ್** – ಆ ಫಲಗಳು, **ಅತಿಶಯಿತಜ್ಞಳಾಮ್** – ಉತ್ಕರ್ಷವನ್ನು ಹೊಂದಿದವುಗಳಾಗುವವು.

ಚತುರ್ವಿಧಾ ಭಜನ್ತೇ ಮಾಂ ಜನಾಸ್ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥

ಎಂಬುವದು ಪೂರಾ ಶ್ಲೋಕವು. ಸುಕೃತಿಗಳಾಗಿ ಸರ್ವೇಶ್ವರನನ್ನು ಶರಣವನ್ನು ಹೊಂದುವರು ನಾಲ್ವರೆಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ. ಅವರುಗಳು ಸುಕೃತ ತಾರತಮ್ಯ ಭೇದದಿಂದ ನಾಲ್ವರು. ಮೋಕ್ಷೇಚ್ಛೆಯುಳ್ಳವನು ಜ್ಞಾನಿ ಎನಿಸುವನು. ಮಿಕ್ಕ ಮೂರುಮಂದಿಗಳೂ ಐಹಿಕ ಸ್ವರ್ಗಾದಿ ಸುಖವನ್ನು ಬಯಿಸುವವರು. ಇಂತಹ ತ್ರೈವರ್ಗಿಕರು ಕೋರುವ ಫಲಗಳು, ಸಾಕ್ಷಾತ್ತಾಗಿ ಅವರು ಸರ್ವೇಶ್ವರನನ್ನೇ ಪ್ರಾರ್ಥಿಸಿದುದರಿಂದ ಅತಿಶಯವಾದವಾಗಬಹುದು, ಎಂದರೆ ಆ ದೇವತೆಗಳು ಕೊಡುವ ಫಲಗಳೂ ಅಲ್ಲದೆ ಉತ್ತರೋತ್ತರ ಮೋಕ್ಷ ಸುಖಕ್ಕೆ ಸಹಕಾರಿಗಳೂ ಕೂಡ ಆಗಬಹುದು ಎಂಬ ಭಾವವು.

ಈಗ ಉಪದೇಶಿಸಲ್ಪಟ್ಟಿದುದು ಸಙ್ಗ್ರಹವಾಗಿ ಏನೆಂದರೆ:—

ದೇವತಾನ್ತರವು ಪರಮಾತ್ಮನ ಶರೀರವೆಂಬ ಜ್ಞಾನವಿಲ್ಲದ ದೇವತಾನ್ತರ ಭಜನದಿಂದ ಫಲದಲ್ಲಿ ನ್ಯೂನತೆಯು.

ದೇವತಾನ್ತರವು ಪರಮಾತ್ಮನ ಶರೀರವೆಂಬ ದೇವತಾನ್ತರ ಭಜನದಿಂದ ಪೂರ್ಣಫಲಪ್ರಾಪ್ತಿಯು.

ದೇವತಾನ್ತರವಲ್ಲದೆ ಪರಮಾತ್ಮನನ್ನೇ ಧ್ಯಾನಿಸುವದರಿಂದ ಅತಿಶಯಿತ ಫಲಪ್ರಾಪ್ತಿಯು.

ದೇವತಾರಾಧನ ವಿಷಯದಲ್ಲಿ ವಿಭಾಗವು ಹೇಗೆಂದರೆ:—

ಶಾಸ್ತ್ರವಿಹಿತವಾದ ದೇವತಾಭಜನವು ಎರಡು ವಿಧವು:—

(೧) ತತ್ವಜ್ಞಾನರಹಿತವಾದುದು. ದೇವತೆಗಳು ಭಗವಚ್ಛರೀರವೆಂಬ ಜ್ಞಾನಶೂನ್ಯತೆಯುಳ್ಳದುದು.

(೨) ತತ್ವಜ್ಞಾನ ಸಹಿತವಾದುದು. ದೇವತೆಗಳು ಭಗವಚ್ಛರೀರವೆಂಬ ಜ್ಞಾನಯುಕ್ತವಾದುದು. ಇದು ಎರಡುವಿಧವು:—

(ಅ) ಮೋಕ್ಷಾರ್ಥಿಯಲ್ಲದವನಿಂದ ಭಜನವು.

ಅನನ್ಯ ಪ್ರಯೋಜನರಾಯ್ ಪತ್ತಿನಾರ್ಕ್ಕುಮ್

(೧) "ಶರೀರಾರೋಗ್ಯ ಮರ್ಥಾಂಶ್ಚ ಭೋಗಾಂ ಶ್ಚೈವಾನುಷಂಗಿಕಾ೯।
ದದಾತಿ ಧ್ಯಾಯಿನಾಂ ನಿತ್ಯಮಪವರ್ಗಪ್ರದೋ ಹರಿಃ ॥

ಎಜ್ಞ್ಞರಪಡಿಯೇ ಫಲಾನ್ತರಜ್ಞ್ಞಳ್ ಆನುಷಜ್ಞ್ಞಕಮಾಗವರುಮ್.

(ಆ) ಮೋಕ್ಷಾರ್ಥಿಯಾದವನ ಭಜನವು. ಈ ಮೋಕ್ಷಾರ್ಥಿಯಾದವನ ಭಜನವೂ ಎರಡು ವಿಧವು:—

(೧) ಸದ್ವಾರಕವು—ಪ್ರತರ್ದನ ವಿದ್ಯೆಯೇ ಮೊದಲಾದುದು. ಇದರಲ್ಲಿ ದೇವತಾನ್ತರವರ್ತಿಯಾಗಿ ತದಾತ್ಮಕನಾದ ಪರಬ್ರಹ್ಮನು ಉಪಾಸ್ಯನು.

(೨) ಅದ್ವಾರಕವು—ದಹರವಿದ್ಯೆಯೇ ಮೊದಲಾದುದು—ಇದರಲ್ಲಿ ದಹರಾಕಾಶಶಬ್ದವಾಚ್ಯನಾದ, ಹೃದಯಾಕಾಶದಲ್ಲಿ ಅಙ್ಗುಷ್ಟಪ್ರಮಿತ ದಿವ್ಯಮಙ್ಗಳ ವಿಗ್ರಹಯುಕ್ತನಾದ ಪರಮಾತ್ಮನೇ ಸಾಕ್ಷಾತ್ತಾಗಿ ಉಪಾಸ್ಯನು.

ಹಿಂದಿನ ವಾಕ್ಯದಲ್ಲಿ ಮೋಕ್ಷೇತರ ಫಲಾಕಾಂಕ್ಷಿಗಳು ಸಾಕ್ಷಾತ್ತಾಗಿ ಸರ್ವೇಶ್ವರನನ್ನೇ ಭಜಿಸಿದರೆ "**ಫಲಜ್ಞ್ಞಳ್ ಅತಿಶಯಿತೆಜ್ಞ್ಞಳಾಮ್**" ಎಂದು ಹೇಳಿದರು. ಆದರೆ ಪ್ರಪನ್ನನಾಗಿ ಮೋಕ್ಷಾಕಾಂಕ್ಷೆಯುಳ್ಳವನಾದರೆ ಇತರ ಫಲಗಳಲ್ಲಿ ಕಾಂಕ್ಷೆಯಿಲ್ಲದಿದ್ದರೂ, "**ತಸ್ಮಿನ್ ಪ್ರಸನ್ನೇಕಿಮಿಹಾಸ್ತ್ಯಲಭ್ಯಂ**" ಎಂದು ಹೇಳಿರುವಹಾಗೆ ಮೋಕ್ಷೇತರಫಲಗಳೂ ಕೂಡ ಈ ಪ್ರಪನ್ನನು ಪ್ರಾರ್ಥಿಸದಿದ್ದರೂ ತಾನಾಗಿಯೇ ಆ ಮೋಕ್ಷಫಲಕ್ಕೆ ಸಂಬಂಧಿಸಿದವುಗಳಾಗಿಯೇ ಪ್ರಾಪ್ತವಾಗಬಹುದಾದುದರಿಂದ, ಆ ಫಲಗಳು ಇನ್ನೂ ಅತಿಶಯವಾದವುಗಳೆಂದುಪದೇಶಿಸುತ್ತಾರೆ.

ಅನನ್ಯಪ್ರಯೋಜನರಾಯ್ - ಮೋಕ್ಷವಲ್ಲದೆ ಇನ್ನು ಯಾವ ಪ್ರಯೋಜನವನ್ನೂ ಪ್ರಾರ್ಥಿಸದವರಾಗಿ, **ಪತ್ತಿನಾರ್ಕ್ಕು** - ಸರ್ವೇಶ್ವರನನ್ನು ಧ್ಯಾನಿಸಿದವರಿಗೆ "**ಶರೀರಾರೋಗ್ಯ**ವನ್ನೂ, **ಅರ್ಥಾಂಶ್ಚ** - ಸರ್ವೈಶ್ವರ್ಯಗಳನ್ನೂ, **ಭೋಗಾಂಶ್ಚ** - ಭೋಗಗಳನ್ನೂ, **ನಿತ್ಯಂಧ್ಯಾಯಿನಾಂ** - ಯಾವಾಗಲೂ ಉಪಾಸನೆ ಮಾಡುವವರಿಗೆ, **ಅಪವರ್ಗಪ್ರದಃ**- ಮೋಕ್ಷಪ್ರದನಾದ, **ಹರಿಃ** - ಸರ್ವದುರಿತ ನಿವಾರಕನಾದ ವಿಷ್ಣುವು, **ದದಾತಿ** - ಕೊಡುವನು" **ಎಜ್ಞ್ಞರಪಡಿಯೇ** - ಎಂದು ಹೇಳಿರುವಹಾಗೆ, **ಫಲಾನ್ತರಜ್ಞ್ಞಳ್** - ಮೋಕ್ಷೇತರಫಲಗಳೂ, **ಆನುಷಜ್ಞ್ಞಕಮಾಗವರುಮ್**-ಅಪ್ರಾರ್ಥಿತವಾಗಿ ತಾವಾಗಿಯೇ ಸಂಬಂಧಿಸಿಕೊಂಡು, **ವರುಮ್** - ಬರುವವು.

ಹೀಗೆ ಪ್ರಪನ್ನನಿಗೆ ಅಪ್ರಾರ್ಥಿತವಾಗಿ ಐಶ್ವರ್ಯಾದಿಗಳನ್ನು ದಯಪಾಲಿಸಿದು

ಇವ್ವರ್ಥತ್ತೈ ಅನುಷಜ್ಗ ಸಿದ್ಧೈಶ್ವರ್ಯರಾನ ಶ್ರೀಕುಲಶೇಖರ ಪ್ಪೆರ

ದಕ್ಕೆ ಅನೇಕ ನಿದರ್ಶನಗಳುಂಟು. ಮಹಾಭಾಗವತೋತ್ತಮನಾದ ಕುಚೇಲನಿಗೆ ಅಪ್ರಾರ್ಥಿತವಾಗಿ ಶ್ರೀಹರಿಯು ಐಶ್ವರ್ಯವನ್ನು ದಯಪಾಲಿಸಿದುದು ಸರ್ವರಿಗೂ ವಿದಿತವಾದುದೇ. ಹಾಗೆಯೇ ಪಾಂಡವರೂ, ವಿಭೀಷಣನೂ ಸಹ ರಾಜ್ಯಸಂಪತ್ತನ್ನು ಪಡೆದರು. ಇದೂ ಅಲ್ಲದೆ ಮೂಲಕಾರನೂ,(೧)**"ಪ್ರಸಾದಪರಮೌ ನಾಥೌ ಮಮ ಗೇಹಮುಪಾಗತೌ"** ಈ ಶ್ರೇಷ್ಠರಾದ ಬಲರಾಮಕೃಷ್ಣರು ಪರಮಕೃಪೆಯಿಂದ ನನ್ನ ಮನೆಯನ್ನು ಕುರಿತು ಬಂದವರಾಗಿರುತ್ತಾರಾದುದರಿಂದ, ಎಂದು ಹೇಳಿ ಒಳ್ಳೇ ಮನೋಹರವಾದ ಪುಷ್ಪಗಳನ್ನು ಸಮರ್ಪಿಸಲು ಅದಕ್ಕೆ ಸುಪ್ರೀತನಾದ ಕೃಷ್ಣನು **"ಶ್ರೀಸ್ತ್ವಂ ಮತ್ಸಂಶ್ರಯಾ ಭದ್ರ ನ ಕದಾಚಿತ್ತ್ಯಜಿಷ್ಯತಿ"** "ಲಕ್ಷ್ಮಿಯು ಎಂದಿಗೂ ನಿನ್ನನ್ನು ತ್ಯಜಿಸುವಳಲ್ಲವೆಂದು ಹೇಳಿ, ಕಡೆಗೆ (೨) **"ಮಮಾನುಸ್ಮರಣಂ ಪ್ರಾಪ್ಯ ದಿವ್ಯಂ ಲೋಕಮವಾಪ್ಸ್ಯಸಿ"** ನನ್ನ ಸ್ಮರಣೆಯನ್ನು ಹೊಂದಿ ದಿವ್ಯ ವೈಕುಂಠವನ್ನು ಹೊಂದುವೆ ಎಂದು ಅಭಯವನ್ನಿತ್ತನು. ಬ್ರಹ್ಮರುದ್ರಾದಿಗಳೂ ಕೂಡ ಪರಬ್ರಹ್ಮೋಪಾಸನವನ್ನು ಮಾಡಿ ಪ್ರಪನ್ನರಾಗಿ ಬ್ರಹ್ಮಲೋಕ ರುದ್ರಲೋಕಾಧಿಪತ್ಯಗಳನ್ನು ಹೊಂದಿರುತ್ತಾರೆ ಹೀಗೆ ಪ್ರಪನ್ನಾನುಗ್ರಹಿಯಾದ ಪರಮಾತ್ಮನು ಆತನಿಗೆ ಐಹಿಕಾದಿ ಸುಖಗಳನ್ನುಂಟುಮಾಡುವದರಲ್ಲಿ ಸಂದೇಹವಿಲ್ಲವು. ಆ ಐಹಿಕ ಸುಖಗಳೊಂದಿಗೆ ಪಾರಲೌಕಿಕ ಸುಖವೂ ದೊರೆಯುವದರಿಂದಲೂ, ಇಂತಹ ಐಹಿಕ ಸುಖಗಳು ಸಂಸಾರಬಂಧಕಗಳಾಗುವದಿಲ್ಲವಾದುದರಿಂದಲೂ, ಈ ಫಲಗಳೂ ಇನ್ನೂ ಉತ್ಕೃಷ್ಟವಾದವುಗಳೆಂಬ ಭಾವವು. ಹೀಗೆ **ಅನುಷಜ್ಗಿಕ**ವಾಗಿ ಐಹಿಕೈಶ್ವರ್ಯವನ್ನು ಹೊಂದಿದ ಪ್ರಪನ್ನರಲ್ಲಿ ಒಂದು ಮುಖ್ಯ ನಿದರ್ಶನವು ಅನಂತಶಯನಕ್ಕೆ ಮಹಾರಾಜರಾಗಿದ್ದ ಕುಲಶೇಖರಾಳ್ವಾರರೆಂದು ಹೇಳಿ ಹೀಗೆ, ಆಳ್ವಾರಾಚಾರ್ಯರುಗಳಭಿಪ್ರಾಯವೂ ಇದನ್ನೇ ಸಮರ್ಥಿಸುತ್ತದೆಂದು ತಿಳಿಸುತ್ತಾರೆ.

ಇವ್ವರ್ಥತ್ತೈ – ಪ್ರಪನ್ನನಿಗೆ ಐಶ್ವರ್ಯವು ಆನುಷಜ್ಗಿಕವಾಗಿ ಬರುತ್ತದೆಂಬ ಭಿಪ್ರಾಯವನ್ನು, **ಅನುಷಜ್ಗಿಸಿದ್ಧೈಶ್ವರ್ಯರಾನ** – ಯಾದೃಚ್ಛಿಕವಾಗಿ ಸಾರ್ವಭೌಮರೂಪ ಸಿದ್ಧೈಶ್ವರ್ಯವನ್ನು ಹೊಂದಿದ, ಇದರಿಂದ ಇವರು ಅನನ್ಯಪ್ರಯೋಜನರೆಂದು ಹೇಳಿದಂತಾಯಿತು. **ಶ್ರೀಕುಲಶೇಖರ ಪ್ಪೆರವಾಳರು** – ತಾವು ರಚಿಸಿದ ಪೆರುಮಾಳ್ ತಿರುಮೊಳಿ (೫-೯) ಯಲ್ಲಿ, **ಅರುಳಿಚ್ಚೆಯ್ದಾರ್** - ಕೃಪಯಾ ಹೇಳಿರುತ್ತಾರೆ. ಏನೆಂದರೆ:—**ನಿನ್ನೈಯೇತಾನ್** – ನಿನ್ನನ್ನೇ, **ವೇಣ್ಡಿ**-ಅಪೇ

(೧) ವಿ. ಪು. ೫-೧೯. (೨) ಶ್ರೀ. ಪು. ೫-೨೦.

ಮಾಳುಮ್ "ನಿನ್ನೈಯೇ ತಾನ್ವೇಣ್ಡಿ ನೀಳ್ ಶೆಲ್ವಂವೇಣ್ಡಾದಾನ್ ತನ್ನೈಯೇ ತಾನ್ ವೇಣ್ಡುಂ ಶೆಲ್ವಮ್ಪೋಲ್" ಎನ್ರು ಅರುಳಿಚ್ಚೆಯ್ದಾರ್. "ಅಭಿಲಷಿತದುರಾಪಾ ಯೇ ಪುರಾ ಕಾಮಭೋಗಾ ಜಲಧಿಮಿವ ಜಲೌಘಾಸ್ತೇ ವಿಶನ್ತಿ ಸ್ವಯಂ ನಃ" ಎನ್ರು ಈಶಾಣ್ಡಾನುಮ್ ತಾ ಮರುಳಿ

ಪ್ಪೈಸಿ, ಏನೆಂದಪೇಕ್ಷಿಸಿ ಎಂದರೆ, ನೀನು ಪರಮ ಪುರುಷಾರ್ಥಭೂತನೆಂದಪೇಕ್ಷಿಸಿ, **ನೀಳ್ಶೆಲ್ವಂ** – ತುಂಬಾ ಅತಿಶಯವಾದ ಬ್ರಹ್ಮರುದ್ರರ ಐಶ್ವರ್ಯವನ್ನೂ ಕೂಡ, **ವೇಣ್ಡಾದಾನ್ ತನ್ನೈಯೈ** - ಅಪೇಕ್ಷಿಸದಿರುವ ತನ್ನನ್ನು, **ತಾನ್ ವೇಣ್ಡುಂ ಶೆಲ್ವಂಪೋಲ್** – ತಾನಾಗಿಯೇ ಆನುಷಙ್ಗಿಕವಾಗಿ ಅಪೇಕ್ಷಿಸಿ ಬಂದು ಸೇರುವ ಐಶ್ವರ್ಯದ ಹಾಗೆ, ಮುಂದಕ್ಕೆ, **ಮಾಯತ್ತಾಲ್**

ಮಿನ್ನೈಯೇ ಶೇರ್ ತಿಕರಿ ವಿತ್ತುವ ಕ್ಕೋಟ್ಟವಮ್ಮಾ।
ನಿನ್ನೈಯೇ ತಾನ್ ವೇಣ್ಡಿ ನಿರ್ಪ ನಡಿಯೇನೇ ॥ ಎಂದು ಇರುತ್ತದೆ.

ಮಿನ್ನೈಯೇ - ಮಿಂಚಿನ ಹಾಗೆ ಪ್ರಕಾಶಿಸುವ, **ತಿಗರಿ** - ಸುದರ್ಶನ ಚಕ್ರವನ್ನು, **ಶೇರ್** - ನಿರಂತರ ಧರಿಸಿರುವ, **ವಿತ್ತುಕ್ಕೋಟ್ಟವಮ್ಮಾ**--ವಿತ್ತುಕೋಟಿಗೆ ಸ್ವಾಮಿಯಾದವನೇ, **ಮಾಯತ್ತಾಲ್** – ನೀನು ಐಹಿಕೈಶ್ವರ್ಯವನ್ನು ದಯಪಾಲಿಸಿದ ನಿನ್ನ ಮಾಯೆಯ ಮೂಲಕ ಉಪೇಕ್ಷಿಸಿದರೂ, **ನಿನ್ನೈಯೈ ತಾನ್** - ನಿನ್ನನ್ನೇ, **ಅಡಿಯೇನ್** – ದಾಸನಾದ ನಾನು, **ವೇಣ್ಡಿನಿರ್ಪೇನಾ** - ಅಪೇಕ್ಷಿಸಿರುತ್ತೇನೆ," **ಎನ್ರುಅರುಳಚ್ಚೆಯ್ದಾರ್** – ಎಂದು ಕೃಪಯಾ ಅಪ್ಪಣೆಕೊಡಿಸಿರುತ್ತಾರೆ.

ಹೀಗೆ ಆನುಷಙ್ಗಿಕವಾಗಿ ಐಶ್ವರ್ಯವನ್ನು ಹೊಂದಿದವರಲ್ಲಿ ಶ್ರೀ ಯಾಮುನೇಯರನ್ನೂ ಕೂಡ ಸೇರಿಸಬಹುದು. ಇವರು ಕೊನೆಗೆ ಜಿಹಾಸೆಯಿಂದ ಐಶ್ವರ್ಯವನ್ನೂ ಕೂಡ ತ್ಯಜಿಸಿದರು.

ಮುಂದೆ ಶ್ರೀ ಯಾಮುನೇಯರ ಶಿಷ್ಯರಾದ ಶ್ರೀ ಈಶಾಂಡಾನ್ರವರ ಸೂಕ್ತಿಯಿಂದ ಈ ಅಭಿಪ್ರಾಯವನ್ನೇ ಸಮರ್ಥಿಸುತ್ತಾರೆ:—

"**ಯೇ** - ಯಾವ, **ಕಾಮಭೋಗಾಃ** - ಕಾಮಗಳ ಉಪಭೋಗಗಳು, **ಪುರಾ** – ಮೊದಲು, **ಅಭಿಲಷಿತದುರಾಪಾಃ** - ಅಪೇಕ್ಷಿಸಿದರೂ ಹೊಂದಲಸಾಧ್ಯವಾಗಿದ್ದವೋ, **ತೇ** - ಅವುಗಳು, **ಈಗ, ನಃ** - ನಮ್ಮಗಳನ್ನು, **ಸ್ವಯಂ** – ತಾನಾಗಿಯೇ, ಅಪಾರ್ಥಿತವಾಗಿ ಎಂಬ ಭಾವವು, **ಜಲೌಘಾಃ** – ನದೀರೂಪದಲ್ಲಿರುವ ಜಲಪ್ರವಾಹಗಳು, **ಜಲಧಿಮಿವ** – ಸಮುದ್ರವನ್ನು ತಾವಾಗಿಯೇ ಹೋಗಿ

ಚ್ಚೆಯ್ದು ಸ್ತೋತ್ರತ್ತಿಲೆ ನಿಬನ್ಧಿತ್ತಾರ್. ಇದು ವಿದ್ಯಾ ವಿಶೇಷ ರಾಗ ವಿಶೇಷಾದಿನಿಯತಮ್.

ಸೇರುವ ಹಾಗೆ, **ವಿಶನ್ತಿ** - ಪ್ರವೇಶಿಸುತ್ತವೆ, ಬಂದು ಸೇರುತ್ತವೆ.'' **ಎನ್ರು**-ಎಂಬ ದಾಗಿ, ಶ್ರೀ ಈಶಾನ್ಡ್ ಎಂಬುವರು, **ತಾಮರುಳಿ ಚ್ಚೆಯ್ದು ಸ್ತೋತ್ರತ್ತಿಲೆ** - ತಾವು ಅನುಗ್ರಹಿಸಿದ ಎಂದರೆ ರಚಿಸಿದ ಸ್ತೋತ್ರದಲ್ಲಿ, **ನಿಬನ್ಧಿತ್ತಾರ್** - ವ್ಯವಸ್ಥೆ ಮಾಡಿ ತಿಳಿಸಿರುತ್ತಾರೆ. ಸರ್ವೇಶ್ವರನಲ್ಲಿ ಶರಣಾಗತಿಯನ್ನನುಷ್ಠಿಸುವದಕ್ಕಿಂತ ಮುಂದೆ, ಈ ಜನ್ಮದಲ್ಲೇಯಾಗಲಿ ಅಥವಾ ಪೂರ್ವಜನ್ಮಗಳಲ್ಲೇಯಾಗಲಿ, ಎಷ್ಟು ಅಪೇಕ್ಷಿಸಿದರೂ ತನ್ನ ಕಾಮಗಳ ಉಪಭೋಗಗಳು ಲಭಿಸದೆ ಹೋದವು, ಈಗ ಶರಣಾಗತಿಯನ್ನನುಷ್ಠಿಸಿದ ಬಳಿಕ ಅಂತಹ ಉಪಭೋಗಗಳು ತಾನು ಅಪೇಕ್ಷಿಸದೇನೆ ಲಭಿಸಿರುತ್ತವೆ ಎಂದು ಶ್ರೀ ಈಶಾಂಡಾನ್ರವರು ವ್ಯವಸ್ಥೆಮಾಡಿ ಹೇಳಿರುತ್ತಾರೆ.

ಹೀಗೆ ವ್ಯವಸ್ಥೆಮಾಡಿ ಆ ಮಹಾನುಭಾವರು ಹೇಳಿರಬೇಕಾದರೆ ಶಾಸ್ತ್ರದಲ್ಲಿ ಉಪಪಾದಿತವಾಗಿರಬೇಕು. ಹಾಗೆ ಎಲ್ಲಿ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆ ಎಂದರೆ, **''ಇದು ವಿದ್ಯಾವಿಶೇಷ''** ಎಂಬ ವಾಕ್ಯದಿಂದ ಮಧು ವಿದ್ಯಾದಿಗಳಲ್ಲಿ ಪ್ರೋಕ್ತವಾಗಿದೆ ಎಂದು ಅಪ್ಪಣೆ ಕೊಡಿಸುತ್ತಾರೆ,

ಇದು - ಹೀಗೆ ಪ್ರಪನ್ನನಿಗೆ ಅಪ್ರಾರ್ಥಿತವಾಗಿಯೇ **ಸರ್ವೇಶ್ವರನ** ಕೃಪೆಯಿಂದ ಅಂತಹ ಭೋಗಗಳು ಪ್ರಾಪ್ತವಾಗುವದು, **ವಿದ್ಯಾವಿಶೇಷ** –ಮಧುವಿದ್ಯಾ ಉಪಕೋಸಲಾದಿ ವಿದ್ಯೆಗಳು, **ರಾಗವಿಶೇಷ**-ಮುಕ್ತನಿತ್ಯರುಗಳು **ಈ** ಪೃಥ್ವಿಯಲ್ಲಿ ಅವತರಿಸಿ ತಮ್ಮ ಪೂರ್ವಾಪೇಕ್ಷೆಗಳನ್ನು ಹೊಂದುವ ರಾಗವಿಶೇಷಗಳು, ಅಥವಾ ತಮ್ಮ ಹಿಂದಿನ ಜನ್ಮದಲ್ಲಿ ಅಷ್ಟೈಶ್ವರ್ಯಾದಿಗಳನ್ನು ಹೊಂದಬೇಕೆಂಬ ರಾಗವಿಶೇಷಗಳು, ಅಥವಾ ಪ್ರಾರಬ್ಧಕರ್ಮದ ರಾಗವಿಶೇಷಗಳು, **ಆದಿ** ಶಬ್ದದಿಂದ ಇತರ ಕರ್ಮವಿಶೇಷಗಳು,ಅಥವಾ ಕುಚೇಲಾದಿಗಳಿಗುಂಟಾದ ಹಾಗೆ ಭಗವತ್ಸಙ್ಕಲ್ಪಗಳು ಸಂಗ್ರಹಿಸಲ್ಪಟ್ಟವು, ಇಂತಹ ಸಂದರ್ಭಗಳಲ್ಲೆಲ್ಲಾ, **ನಿಯತಂ** - ನಿಯಮಿತಂ, ನಿಯಮಿಸಲ್ಪಟ್ಟು ಸಿದ್ಧವಾದುದು ; ಮಧುವಿದ್ಯಾನಿಷ್ಠನಿಗೆ ವಸ್ವಾದಿ ಲೋಕಪ್ರಾಪ್ತಿರೂಪ ಭೋಗವೂ ಉಪಕೋಸಲವಿದ್ಯೆಯಲ್ಲಿ ಆಯುಸ್ಸಿನ ವೃದ್ಧಿಯೂ ಹೇಳಲ್ಪಟ್ಟಿರುತ್ತವೆ; ಆದುದರಿಂದಲೇ **ವಿದ್ಯಾವಿಶೇಷ ನಿಯತಂ** ಎಂದು ಹೇಳಿರುತ್ತಾರೆ.

ಹೀಗೆ ಬ್ರಹ್ಮರುದ್ರರುಗಳು, ಜೀವಕೋಟಿಯಲ್ಲಿ ಸೇರಿದವರಾಗಿ, ಪ್ರಕೃತಿ ಸಂಬನ್ಧ ಹೊಂದಿದವರಾಗಿ, ಕರ್ಮವಶ್ಯರಾಗಿ, ಸ್ವಾಮಿಗೆ ಶೇಷಭೂತರಾಗಿ, ಆತನಿಂದ ಕರಣಕಳೇಬರಯೋಗವುಳ್ಳವರಾಗಿ, ಶುಭಾಶ್ರಯ ರಹಿತರಾಗಿ, ಆತನಿಂದ ಐಶ್ವರ್ಯಯುಕ್ತರಾಗಿ, ಅಪ್ರಬುದ್ಧಸೇವ್ಯರಾಗಿ, ಉಪಾಸ್ಯರಿಗೆ ಕ್ಷಿಪ್ರವಾದ ಅಲ್ಪಾಸ್ಥಿರವಾದ

ಉಕ್ತಾರ್ಥೇಷು ದ್ರಾವಿಡ ಪ್ರಮಾಣಾನಿ

ಇಪ್ಪಡಿ ಸರ್ವೇಶ್ವರನುಕ್ಕುಮ್ ಬ್ರಹ್ಮರುದ್ರಾದಿಗಳುಕ್ಕು ಮುಣ್ಣಾನ ವಿಶೇಷಜ್ಞಳೈ (೧) "ಎಮ್ಬೆರುಮಾನುಣ್ಡು ಮಿಳಿನ್ತವೆಚ್ಚಿಲ್ ದೇವರಲ್ಲಾದಾರ್ ತಾಮುಳರೇ?"

ಐಶ್ವರ್ಯಫಲದಾಯಕರಾಗಿ, ಮೋಕ್ಷಕೊಡಲಶಕ್ತರಾಗಿ, ತಮ್ಮ ಕಟಾಕ್ಷದಿಂದ ರಜೋಗುಣತಮೋಗುಣಗಳನ್ನಭಿವೃದ್ಧಿಮಾಡುವವರಾಗಿ, ಭಗವನ್ನಿಗ್ರಹಕ್ಕೆ ಒಳಪಟ್ಟವರನ್ನು ರಕ್ಷಿಸಲಸಮರ್ಥರಾಗಿ, ಪ್ರಪನ್ನರು ಸೇವಿಸಲನರ್ಹರಾಗಿರುವರೆಂಬುವದೇ ಮೊದಲಾದವು ಇಲ್ಲಿ ತಿಳಿಸಲ್ಪಟ್ಟವು. ಈ ಅಭಿಪ್ರಾಯಗಳೆಲ್ಲಾ ಯಥಾರ್ಥಗಳಾದುದರಿಂದ, ಆಳ್ವಾರಾಚಾರ್ಯರುಗಳ ಸೂಕ್ತಿಗಳಲ್ಲಿ ಉಪಪಾದಿತಗಳಾಗಿಯೇ ಇರಬೇಕು. ಹಾಗೆ ಉಪಪಾದಿತಗಳಾಗಿವೆಯೇ ಎಂದರೆ, ಹೌದು ಎಂದು ಅನೇಕ ಪ್ರಮಾಣಗಳನ್ನು ಉದಾಹರಿಸುತ್ತಾರೆ

ಮೇಲಿನ ಅಭಿಪ್ರಾಯಗಳಿಗೆ ದ್ರಾವಿಡ ಪ್ರಬಂಧ ಪ್ರಮಾಣಗಳು

ಇಪ್ಪಡಿ - ಈ ಅಧಿಕಾರದಲ್ಲಿ ಹಿಂದೆ ಹೇಳಿರುವ ರೀತ್ಯಾ, ಸರ್ವೇಶ್ವರನಿಗೂ ಬ್ರಹ್ಮರುದ್ರಾದಿಗಳಿಗೂ ಇರುವ, **ವಿಶೇಷಜ್ಞಳೈ** - ಬ್ರಹ್ಮರುದ್ರಾದಿಗಳು ಪರಮಾತ್ಮನಿಗೆ ಶೇಷಭೂತರು ಎಂಬಿವೇ ಮೊದಲಾದ ವೈಲಕ್ಷಣ್ಯಗಳನ್ನು, ಮುಂದೆ ಹೇಳುವ ಪ್ರಮಾಣಗಳಿಂದ, **'ಪಲಮುಕಜ್ಞಳಾಲೇ ಯರುಳಿಚ್ಚೆಯ್ದಾರ್ಗಳ್'** ಎಂದು ಮುಂದೆ ಇರುತ್ತದೆ; ಹೀಗೆ ಅನೇಕ ವಿಧವಾಗಿ ಆಳ್ವಾರುಗಳು ಅಪ್ಪಣೆಕೊಡಿಸಿರುತ್ತಾರೆ. ಆ ಪ್ರಮಾಣಗಳು ಯಾವುವೆಂದರೆ:—

(೧) ಪೆರಿಯ ತಿರುಮೊಳಿ, ೧೧-೬-೨. **ಎಮ್ಬೆರುಮಾ** - ನಮ್ಮ ಸ್ವಾಮಿಯಾದ ಸರ್ವೇಶ್ವರನಿಂದ **ಉಣ್ಡು** - ಭುಜಿಸಲ್ಪಟ್ಟು ಎಂದರೆ ಪ್ರಳಯಕಾಲದಲ್ಲಿ ತನ್ನಲ್ಲಿ ಸೂಕ್ಷ್ಮವಾಗಿಟ್ಟುಕೊಂಡು, **ಉಮಿಳಿನ್ದ** - ಉಗಿಯಲ್ಪಟ್ಟ ಎಂದರೆ ಸೃಷ್ಟಿಕಾಲದಲ್ಲಿ ಸ್ಥೂಲವಾದವುಗಳಾಗಿ ನಾಮರೂಪಗಳನ್ನು ಹೊಂದಿದವರಾದುದರಿಂದ **ದೇವಾಃ** - ಬ್ರಹ್ಮರುದ್ರಾದಿ ದೇವತೆಗಳು **ಎಚ್ಚಿಲ್** - ಉಚ್ಛಿಷ್ಟಪ್ರಾಯರಾದವರು, ಆದುದರಿಂದ ಉಪಾಸ್ಯರಲ್ಲವು ಎಂಬಭಿಪ್ರಾಯವು; ಹೀಗೆ **ಅಲ್ಲಾದಾರ್**- ಪರದೇವತೆಯಲ್ಲದವರು, **ತಾಮುಳರೆ**- ಅವರೇನಾದರೂ ಸ್ವರೂಪಸತ್ತೆಯುಳ್ಳವರೇ? ಎಂದರೆ ಸ್ವಾತಂತ್ರ್ಯಸತ್ತೆಯಿಲ್ಲದವರು ಎಂಬರ್ಥವು. ಇದರಿಂದ ಬ್ರಹ್ಮ

ಎನ್ರುಮ್, (೨) "ನಾನ್ಮುಕನೈ ನಾರಾಯಣ್ಣ ಪಡೈತ್ತಾನ್ ನಾನ್ಮುಕನುಮ್ ತಾನ್ಮುಕವಾಯ್ ಶಙ್ಕರನೈ ತ್ತಾನ್ಸಡೈತ್ತಾನೆ"ನ್ರುಮ್

ರುದ್ರಾದಿಗಳು ಭಗವತ್ಸೃಷ್ಟಿಗೆ ಸೇರಿದವರಾಗಿ ತದಧೀನರೆಂದೂ, ಅವರು ಆತನಿಂದ ಪಡೆದ ಸತ್ತೆಯುಳ್ಳವರೆಂದೂ, ಪ್ರಪನ್ನರಿಂದ ಅನುಪಾಸ್ಯರೆಂದೂ ಹೇಳಲ್ಪಟ್ಟಿತು.

ನಿಲ್ಲಾದ ಪೆರುವೆಳ್ಳಂ ನೆಡುವಿಶುಮ್ಬಿನ್ ಮಿಸೈ ಓಡಿ ನಿಮಿರ್ನ್ದ ಕಾಲತ್ತುಮ್ । ಮಲ್ಲಾಣ್ಡ ತಡಕ್ಕೈಯ್ಯಾಲ್ ಬಹಿರಣ್ಡ ಮುಕಪ್ಪಡುತ್ತ ಕಾಲತ್ತನ್ರು ॥ ಎಲ್ಲಾರು ಮರಿಯಾರೋ ವೆಂಬರುವಾನುಣ್ಡುಮಿಳ್ನ್ದ ವೆಚ್ಚಿಲ್ ದೇವ । ರಲ್ಲಾದಾರ್ ತಾಮುಳರೇ ಯವನರುಳೇ ಯುಲಗಾವ ದರಿಯಾರ್ಗಳೇ ॥

ಎಂಬುವದು ಪೂರಾ ಪಾಶುರವು. **ನಿಲ್ಲಾದ** – ಒಂದು ಸ್ಥಳದಲ್ಲೂ ನೆಲೆಯಾಗಿ ನಿಲ್ಲದ, **ಪೆರುವೆಳ್ಳಂ** - ಪ್ರಳಯರೂಪವಾದ ದೊಡ್ಡ ಪ್ರವಾಹವು, **ನೆಡುವಿಶುಮ್ಬಿನ್ ಮಿಸೈ ಓಡಿ** - ಅಪರಿಚ್ಛಿನ್ನವಾದ ಆಕಾಶದಮೇಲೆ, **ನಿಮಿರ್ನ್ದಕಾಲಂ** - ಪ್ರವಹಿಸಿದ ಕಾಲದಲ್ಲಿ, **ಮಲ್ಲಾಣ್ಡ** - ಬಲವನ್ನು ಹೊಂದಿದ, **ತಡಕ್ಕೈಯ್ಯಾಲ್** - ದೀರ್ಘಬಾಹುವಿನಿಂದ, **ಬಹಿರಂಡಮ್** - ಅಂಡದ ಹೊರಗಿರುವ ಪರಮಪದವನ್ನು, **ಅಹಪ್ಪಡುತ್ತಕಾಲತ್ತೈ** - ಪ್ರಳಯವೇನೂ ತೊಂದರೆ ಮಾಡದಹಾಗೆ ಸಂರಕ್ಷಿಸಿದ ಕಾಲವುಳ್ಳ, **ಅನ್ರಿ** - ಅದನ್ನು, **ಎಲ್ಲಾರುಮ್** - ಎಲ್ಲರೂ **ಅರಿಯಾರೋ** - ತಿಳಿಯದೇ ಇದ್ದಾರೆಯೋ, **ಎಂಬೆರುಮಾನ್**-ಸರ್ವೇಶ್ವರನು **ಉಣ್ಡುಮಿಳ್ನ್ದವೆಚ್ಚಿಲ್** - ಪ್ರಳಯವಲ್ಲಿ ಭುಜಿಸಿ ಸೃಷ್ಟಿಕಾಲದಲ್ಲಿ ಹೊರಗೆ ಉಗಿದ ಎಂಜಲು, **ಅಲ್ಲಾದಾರ್** – ಅಲ್ಲದೇ ಇರುವ, **ದೇವರ್ತಾಂ** – ದೇವತೆಗಳು ತಾವೇ, **ಉಳರೇ** - ಇದ್ದಾರೆಯೇ ? **ಉಲಗು** - ಲೋಕವು, **ಆವದು** - ಸತ್ತೆಯನ್ನು ಹೊಂದಿರುವದೇ, **ಅವನರುಳೇ** - ಆ ಸರ್ವೇಶ್ವರನ ಕೃಪಾ ಪ್ರಭಾವವು ಎಂಬುವದನ್ನು **ಅರಿಯಾರ್ಗಳೇ** - ತಿಳಿಯದೇ ಹೋಗಿರುತ್ತೀರಲ್ಲವೇ ಪರಮಪದ, ಸೂರಿಸಮೂಹ **ಇವು**ಗಳ ಹೊರತು ಮಿಕ್ಕ ಬ್ರಹ್ಮರುದ್ರಾದಿ ಸರ್ವದೇವತೆಗಳೂ ಪ್ರಳಯ**ಕ್ಕೆ** ಸಿಕ್ಕಿದವರಾಗಿ, ಸೃಷ್ಟಿ**ಕಾ**ಲದಲ್ಲಿ ಸೃಷ್ಟಿಸಲ್ಪಡುತ್ತಾರೆ. ಆದುದರಿಂದ ಅವರುಗಳು ಸ್ವಾಮಿಯು ತನ್ನ ಹೊಟ್ಟೆಯಲ್ಲಿಟ್ಟುಕೊಂಡಿದ್ದು ಅನಂತರ ಉಗಿದ ಎಂಜಲಿನ ಹಾಗೆ ಎಂದು ಹೇಳಿರುತ್ತಾರೆ.

(೨) ನಾನ್ಮುಕ ತಿರುವನ್ದಾದಿ. ೧. **ನಾನ್ಮುಕನೈ ನಾರಾಯಣ್ಣ ಪಡೈತ್ತ** – ಚತುರ್ಮುಖಬ್ರಹ್ಮನನ್ನು ಶ್ರೀಮನ್ನಾರಾಯಣನು ಸೃಷ್ಟಿಸಿದನು, **ನಾನ್ಮುಕನುಮ್** - ಚತುರ್ಮುಖಬ್ರಹ್ಮನೂ ಕೂಡ **ತಾನ್ಮುಕವಾಯ್** - ಸರ್ವೇಶ್ವರನ

(೩) "ಮೇವಿತ್ತೊಳುವಂ ಪಿರುಮನ್ ಶಿವನಿನ್ದಿರನಾದಿಕ್ಕೆಲ್ಲಾಮ್ ನಾಭಿ ಕ್ಕಮಲಮುದರ್ ಕಿಳಙ್ಗೆ" ಎನ್ಬುವುಂ (೪) "ತೀರ್ತ್ತನುಲಕಳನ್ದ

ಸೃಷ್ಟಿಯಲ್ಲಿ ತಾನು ದ್ವಾರಭೂತನಾಗಿದ್ದುಕೊಂಡು **ಶಙ್ಕರನೈತಾನ್ಪಡೈತ್ತಾನ್** - ಶಙ್ಕರನನ್ನು ತಾನು ಸೃಷ್ಟಿಸಿದನು." ಇದರಿಂದ ಬ್ರಹ್ಮರುದ್ರರುಗಳಿಗೆ ಭಗವಂತ ನಿಂದುಂಟಾದ ಕರಣಕಳೇಬರಯೋಗವೂ, ತದಧೀನವಾದ ಸತ್ತಾವಿಭವಾದಿಗಳೂ, ಹೇಳಲ್ಪಟ್ಟವು. ಮುಂದಕ್ಕೆ **"ಯಾನ್ಮುಕವಾಯ್ ಅನ್ಬಾದಿ ಮೇಲಿಟ್ಟರೆ ವಿತ್ತೇನಾಳ್ ಪೊರುಳೈ ಚ್ಚಿನ್ಬಾಮಲ್ ಕೊಣ್ಮಿನೀರ್ ತೇರ್ನ್ದು"** ಎಂದು ಇರುತ್ತದೆ. ಅನ್ಬಾದಿರೂಪಗ್ರಂಥದಲ್ಲಿ ನನ್ನ ಮೂಲಕವಾಗಿ ಈ ಸಂಸಾರವು ನಾಶಹೊಂದತಕ್ಕದ್ದೆಂದು ಗೂಢಾರ್ಥವು ತಿಳಿಸಲ್ಪಟ್ಟಿರುತ್ತದೆ. ಸಂಸಾರಕ್ಕೂ ನಾನು ಹೇಳಿರುವ ಅರ್ಥಕ್ಕೂ ಇರುವ ವ್ಯತ್ಯಾಸವನ್ನು ಪರಿಶೀಲನಮಾಡಿ ನಾನು ಹೇಳುವ ಅರ್ಥದಲ್ಲಿ ಮನಸ್ಸಿಡಿರಿ ಎಂಬ ತಾತ್ಪರ್ಯವು. ಬ್ರಹ್ಮರುದ್ರಾದಿಗಳು ಹೇಗೆ ಸಂಸಾರಕ್ಕೆ ಮುಖ್ಯರೋ, ಹಾಗೆ ಸಂಸಾರನಿವೃತ್ತಿಗೆ ತಾವು ಹೇಳುವದು ಮುಖ್ಯ ವೆಂಬ ಭಾವವು.

(೩) ತಿರುವಾಯ್‌ಮೊಳಿ, ೧೦. ೧೦. ೩. ಇದು ಉತ್ತರಾರ್ಧವು. ಪೂರ್ವಾರ್ಧವು :—

ಕೂವಿಕ್ಕೊಳ್ಳಾಯ್ ವನ್ದನ್ದೋರ್ವೆ ಪೊಲ್ಲಾಕ್ಕರುಮಾಣಿಕ್ಕಮೇ ।
ಆವಿಕ್ಕೋರ್ ಪಱ್ಱುಕ್ಕೊಮ್ಬು ನಿನ್ನಲಾಲ ರಿಕಿನ್ರಿಲೇನ್ನಾ ॥

ಎಂದು ಇರುತ್ತದೆ. **ಮೇವಿ** - ತಮ್ಮತಮ್ಮ ಐಶ್ವರ್ಯ ಪದವಿಯು ಸಿದ್ಧಿಸುವದಕ್ಕಾಗಿ ಪರಮಾತ್ಮನನ್ನು ತುಂಬಾ ವಿಶ್ವಾಸದಿಂದ ಆಶ್ರಯಿಸಿ, **ತೊಳುವಂ**-ಸೇವೆಮಾಡಿದ, **ಪಿರುಮನ್** - ಚತುರ್ಮುಖಬ್ರಹ್ಮನು, **ಶಿವನಿನ್ದಿರನಾದಿಕ್ಕೆಲ್ಲಾಮ್** -- ರುದ್ರ ಇಂದ್ರ ಮೊದಲಾದವರಿಗೆಲ್ಲಾ, ಕಾರಣಭೂತನಾದ, **ನಾಭಿಕ್ಕಮಲ** -- ಶ್ರೀಮನ್ನಾರಾಯಣನ ನಾಭೀಕಮಲಕ್ಕೆ, **ಮುದರ್‌ಕಿಳಙ್ಗೇ** - ಮೂಲಭೂತವಾದ ಗೆಡ್ಡೆಯು, ಸರ್ವೇಶ್ವರನು ಎಂದು ಭಾವವು. ತಮ್ಮ ತಮ್ಮ ಮಹದೈಶ್ವರ್ಯರೂಪಪದವಿಗಳು ಸಿದ್ಧಿಸುವದಕ್ಕಾಗಿ ಸರ್ವೇಶ್ವರನನ್ನು ಆರಾಧಿಸಿದವರು ಚತುರ್ಮುಖ, ರುದ್ರ ಇಂದ್ರಾದಿಗಳು ; ಅಂಥವರಿಗೆ ಕಾರಣಭೂತವಾದುದು ಶ್ರೀಮನ್ನಾರಾಯಣನ ನಾಭೀಕಮಲವು, ಅದಕ್ಕೂ ಮೂಲಭೂತನು ಶ್ರೀಮನ್ನಾರಾಯಣನು ಎಂಬ ಭಾವವು. **"ಉಮ್ಬರನ್ವದವೇ"**ಎಂದು ಮುಂದಕ್ಕೆ ಪಾದ ಪೂರಣವು. ನಿತ್ಯ ಸೂರಿಗಳಿಗೂ ಆತನೇ, ಸತ್ತಾಸ್ಥಿತಿ ನಿಯಮನಾದಿಗಳ ಮೂಲಕ, ನಿರ್ವಾಹಕನೆಂಬ ಭಾವವು. ಇದರಿಂದ ಬ್ರಹ್ಮರುದ್ರೇಂದ್ರಾದಿ ತ್ರಿವಿಧ ಚೇತನವರ್ಗದ ಸತ್ತಾಸ್ಥಿತಿ

ಶಿವ್ವಡಿ ಮೇಲ್ ಪೂನ್ದಾವುಞ್ಞೀರ್ತ್ತಿಯುವೈಯೇ ಶಿವನ್ಮುಡಿ ಮೇಲ್ ತಾನ್ಕಣ್ಡು । ಪಾರ್ತ್ತ ತೆಳಿನ್ದೊಳಿಪ್ಪಪೈನ್ದಳಾಯ್ ಪೆರುಮೈ" ಎನ್ರುಮ್,

---

ನಿಯಮನಾದಿಗಳು ಸರ್ವೇಶ್ವರನಿಂದಲೇ ಎಂಬುವದು ಹೇಳಲ್ಪಟ್ಟಿತು. ಪೂರ್ವಾರ್ಧದ ಅರ್ಥವೇನೆಂದರೆ :—ನೀನು ನನಗೆ ನಿರತಿಶಯ ಭೋಗ್ಯಭೂತನೆಂದು ತಿಳಿಸುವದಕ್ಕಾಗಿಯೋ ಎಂಬುವ ಹಾಗೆ ಮಧ್ಯೇರಂಧ್ರವಿಲ್ಲದ ನೀಲಮಣಿಯ ಶೋಭಾಯುಕ್ತನೇ, **ನಿವಾಸವೃಕ್ಷಸ್ಸಾಧೂನಾಂ** ಎಂದು ಹೇಳಿರುವ ಹಾಗೆ ಆಶ್ರಯಿಸಲು ಯೋಗ್ಯವಾದ ವೃಕ್ಷದೋಪಾದಿಯಲ್ಲಿದ್ದು ಅತ್ಯಂತಸುಖರೂಪವಾದ ನೆರಳನ್ನಿತ್ತು ರಕ್ಷಿಸುವವನೇ, ನಿನ್ನನ್ನು ಬಿಟ್ಟು ಇನ್ಯಾರಾಗಲಿ ನನಗೆ ರಕ್ಷಕರಿಲ್ಲವು ; ಹೀಗಿರುವಲ್ಲಿ **ವನ್ದು ಕೂವಿಕ್ಕೊಳ್ಳಾಯ್ ಅನ್ದೋ** – ನೀನೇ ಬಂದು ನನ್ನನ್ನು ಪರಮಪದಕ್ಕೆ ಕರೆದುಕ್ಕೊಂಡು ಹೋಗಬೇಡವೇ. **ಅಯ್ಯೋ** ಎಂದರೆ ಇದು ನಿನ್ನ ಕೆಲಸವಲ್ಲವೇ ಎಂಬಭಿಪ್ರಾಯವು.

(೪) ತಿರುವಾಯ್‌ಮೊಳಿ ೨. ೮. ೬. **ಮೇರತ್ತು ಮೊರುವರಾರ್ವೇಶಕ್ಕಿಡನ್ದತೇ"** ಎಂದು ಪಾಶುರ ಪೂರಣವು **ತೀರ್ತ್ತ**–(೧)"**ಪಾದೋದಕೇನ ಪಶಿವಸ್ಸ್ಪಶಿರೋಧೃತೇನ**" ಎಂದು ಹೇಳಿರುವ ಹಾಗೆ ತನ್ನ ಪಾದೋದಕದಿಂದ ಶಿವನನ್ನು ಪವಿತ್ರೀಕರಿಸಿದ ಹಾಗೂ, ಶ್ರೀರಾಮಾವತಾರದಲ್ಲಿ ತನ್ನ ಪಾದಸ್ಪರ್ಶದಿಂದ ಗೌತಮಪತ್ನಿಯ ಶಾಪ ವಿಮೋಚನಮಾಡಿ ಅಹಲ್ಯೆಯನ್ನು ಪವಿತ್ರೀಕರಿಸಿದಹಾಗೂ, ಪಾಪಗಳ ಪರಿಹಾರಮೂಲಕ ಅಪರಿಶುದ್ಧರನ್ನು ಪರಿಶುದ್ಧರನ್ನಾಗಿ ಮಾಡುವವನ, **ಉಲಕಳನ್ದ**–ಬಲಿನಿಗ್ರಹಮೂಲಕ ಲೋಕಕ್ಷೇಮಾರ್ಥವಾಗಿ ತ್ರಿವಿಕ್ರಮಾವತಾರವನ್ನು ಮಾಡಿ ಮೂರುಲೋಕಗಳನ್ನು ಅಳೆದ, **ಶಿವ್ವಡಿಮೇಲ್**-ಕೆಂಪಗಿರುವಪಾದಗಳ ಮೇಲೆ, **ಪೂಮ್ದಾವುಮ್** – ಮನೋಹರವಾದ ಪುಷ್ಪಮಾಲಿಕೆಯನ್ನು, **ಶೇರ್ತ್ತು**-ಸಮರ್ಪಿಸಿ, **ಅವೈಯೈ**-ಅವುಗಳನ್ನು, **ಶಿವನ್ಮುಡಿಮೇಲ್ ತಾನ್ಕಣ್ಡು**-ಶಿವನಶಿರಸ್ಸಿನಲ್ಲಿ ತಾನು ಕಂಡು, ತಾನೇ ಎದುರಾಗಿ ಕಂಡ, **ಪಾರ್ತ್ತ**–ಪಾರ್ಥನು, ಅರ್ಜುನನು, **ತೆಳಿನ್ದೊಳಿನ್ದ** - ನಿಶ್ಚಯಿಸಿದ, **ಪೈನ್ದೊಳಾಯ್ ಪೆರುಮೈ** – ಹೆಸಿಯಾಗಿ ಹಚ್ಚಗಿರುವ ತುಳಸಿಯನ್ನು ಹೊಂದಿರುವವನ ಪರತ್ವವು, **ವೇರೇ ತ್ತುಂ ಒರುವರಾಲ್** – ಸರಿಯಾದ ಯಾರೊಬ್ಬರಿಂದಲೂ, **ಪೇಶಕ್ಕಿಡನ್ದದೇ** - ಹೇಳಲು ಅವಕಾಶ ಉಂಟೇ ! ಇದರಿಂದ ಶಿವನು ವಿಷ್ಣುಪಾದೋದಕವನ್ನು ಧರಿಸಿದುದರಿಂದ ಪವಿತ್ರೀಕೃತನೆಂದೂ, ವಿಷ್ಣುಪಾದವಲ್ಲಿದ್ದ ಪುಷ್ಪವನ್ನು ಶಿವನ ಶಿರ

---

(೧) ಆಳ. ೧೩.

(ಜ) ವಾನವರ್ । ತಮ್ಮೈಯಾಳುವವನುಮ್ ನಾನ್ಮುಕನುಮ್ ಶಡೈಮುಡಿ ಯಣ್ಣಲುಮ್ । ತಮ್ಮೈಯಾಲವನ್ಪಾದಪಜ್ಕಯಞ್ಞಿನ್ರಿ

ಸ್ಸಿನಲ್ಲಿ ಕಂಡನು ಎಂಬುವದರಿಂದ ರುದ್ರನು ಪರಮಾತ್ಮನಿಗೆ ಶೇಷಭೂತನೆಂದೂ, ನಿದರ್ಶಿಸಲ್ಪಟ್ಟಿತು.

(ಞ) ಮೈಮ್ಮನುಮ್ಮನತ್ತೆನ್ರು ಯಾನುರೈಕ್ಕಿನ್ರ ವಾಯುವರ್ ಶೀರ್ಮೈಯೈ । ಯೆಮ್ಮನೋರ್ಗಳುರೈಪ್ಪದೆನ್ನದು ನಿರ್ಕನಾಡೊರು, ವಾನವರ್ ॥ ತಮ್ಮೈಯಾಳುವವನು ನಾನ್ಮುಕನುಮ್ ಶಡೈಮುಡಿ ಯಣ್ಣಲು । ಞಾಜಮ್ಮೈಯಾಲವನ್ಪಾದ ಪಜ್ಗಯಞ್ಞಿನ್ರಿತ್ತೇತ್ತಿ ತ್ತಿರಿವರೇ॥

ಎಂಬುವದು ಪೂರಾ ಪಾಶುರವು:—ತಿರುವಾಯ್ ಮೊಳಿ ೩. ೬. ೪. **ಉಮ್ಮನತ್ತುವೈಮ್ಮಿನ್** - ನಿಮ್ಮ ಮನಸ್ಸಿನಲ್ಲಿಡಿರಿ, **ಎನ್ರು ನಾನ್ ಉರೈಕಿನ್ರ** - ಎಂದು ನಾನು ಹೇಳುವ, **ವಾಯುವನ್ ಶೀರ್ಮೈಯ್ಯೈ** - ಆಶ್ಚರ್ಯಗುಣ ಚೇಷ್ಟಿತನಾದವನ ಪರತ್ವಸೌಲಭ್ಯಾದಿಗಳನ್ನು, **ಎಮ್ಮನೋರ್ಗಳ್** - ನಮ್ಮಂಥ ಪ್ರವಣರಾದ ಭಕ್ತಿಪರವಶರಾದವರು **ಉರೈಪ್ಪದು ಎನ್** - ಹೇಳುವದೇನು ? **ಅದು ನಿರ್ಕ** - ಅದು ಹಾಗಿರಲಿ, **ವಾನವರ್ ತಮ್ಮೈ ಆಳುವನವನುಂ** - ದೇವತೆಗಳನ್ನು ಆಳುವ ಇಂದ್ರನೂ, **ನಾನ್ಮುಕನುಮ್**-ನಾನಾವಿಧವಾದಸೃಷ್ಟ್ಯ ಪದೇಶಗಳಿಗೆ ನಾಯಕನಾದ ಚತುರ್ಮುಖಬ್ರಹ್ಮನೂ, **ಶಡೈಮುಡಿಯಣ್ಣಲುಮ್** - ಜಟಾಮಕುಟಧಾರಿಯಾಗಿ, ತಾನು ದೇವಶ್ರೇಷ್ಠನಾಗಿರಬೇಕೆಂಬ ಅಭಿಮಾನದಿಂದ ಈಶ್ವರನೆಂದು ಹೇಳಿಕೊಳ್ಳುವ ರುದ್ರನೂ, **ತಮ್ಮೈಯಾಲ್** - ತಾವು ಶೇಷರು ಎಂಬ ಆರ್ಜವದಿಂದ, ಭಕ್ತಿಯಿಂದ, **ಅವನ್ ಪಾದ ಪಜ್ಕಯಮ್** - ಆ ಮಹಾನುಭಾವನ ಪಾದಪಂಕಜವನ್ನು, **ನಾಡೋರುಶಿನ್ದಿತ್ತು** - ಪ್ರತಿದಿನದಲ್ಲೂ ಚಿಂತಿಸಿ, ಸ್ಮರಿಸಿ, **ಏತ್ತಿ** - ಸ್ತುತಿಸಿ, **ತಿರಿವರೇ** - ಸಞ್ಚರಿಸುತ್ತಾ ಇರುವರು ಎಂದರೆ ಉಜ್ಜೀವಿಸಿಕೊಂಡಿರುವರು. ರಜೋಗುಣತಮೋಗುಣಾವಿಷ್ಟರಾಗಿ ಇಂದ್ರಲೋಕ, ಬ್ರಹ್ಮಲೋಕ,ರುದ್ರಲೋಕಪದವಿಗಳಾದ ಕ್ಷುದ್ರೈಶ್ವರ್ಯ ಪದಾಕಾಂಕ್ಷಿಗಳಾದ ಇಂದ್ರ ಬ್ರಹ್ಮರುದ್ರಾದಿಗಳೇ ಪರಮಾತ್ಮನ ಸೌಲಭ್ಯ ಪರತ್ವಾದಿಗಳಿಗೆ ಪರವಶರಾಗಿ, ಆತನು ಶೇಷಿಯೆಂದೂ, ತಾವು ಶೇಷರೆಂದೂ ಭಕ್ತಿಯಿಂದ ಆತನನ್ನು ಆಶ್ರಯಿಸಿ,ಸ್ತುತಿಸಿ, ಆತ್ಮೋಜ್ಜೀವನಮಾಡಿಕೊಳ್ಳಲು ಉದ್ಯುಕ್ತರಾಗಿರುವಾಗ, ತಮ್ಮಂತಹ ಸತ್ವಗುಣಾವಿಷ್ಟರಾಗಿ ಭಕ್ತಿಪ್ರವಣರಾದವರು ಅಂತಹ ಆಶ್ಚರ್ಯಗುಣಚೇಷ್ಟಿತನಾದ ಕರುಣಾನಿಧಿಯನ್ನು ಆಶ್ರಯಿಸುವದೇನು ದೊಡ್ಡದೇ ? ಳಿದುದರಿಂದ ಆತನನ್ನು ಆಶ್ರಯಿಸಿರಿ ಎಂದು ಹೇಳುತ್ತಾರೆ. ಇಲ್ಲಿ ಬ್ರಹ್ಮರುದ್ರರೂ

ತ್ತೇತ್ತಿತ್ತಿರಿವರೇ" ಎನ್ರುಮ್, (೬) "ಪೇಶನಿನ್ರಶಿವನುಕ್ಕುಮ್ ಪಿರಮನ್ತ ನಕ್ಕುಮ್ ಪಿರರ್ಕ್ಕುಮ್ ನಾಯಕನವನೇ " ಎನ್ರುಮ್,

---

ಕೂಡ ಶೇಷಭೂತರೆಂದೂ, ಸರ್ವೇಶ್ವರನೇ ಶೇಷಿಯಾಗಿ ಅವರಿಗೂ ಆರಾಧ್ಯನೆಂದೂ ಹೇಳಲ್ಪಟ್ಟಿತು.

(೬) ತಿರುವಾಯ್‌ಮೊಳಿ ೪. ೧೦. ೪.

ಪೇಶನಿನ್ರ ಶಿವನುಕ್ಕುಮ್ ಪಿರಮನ್ರ್ನುಕ್ಕುಮ್ ಪಿರರ್ಕ್ಕುಮ್
ನಾಯಕನವನೇ, ಕಪಾಲ ನನ್ಮೋಕ್ಕತ್ತು ಕಣ್ಡುಕೊಣ್ಮೆ
ನ್ಮೇಶವಾಮುತಾಳ್ ಶೂಳ್ನ್ದಳಕಾಯು ತಿರುಕ್ಕುರು ಕೂರತನು
ಳೀಶನ್ಬಾಲೋ ರವಮ್ ಪರ್ಯಿತಲೆನ್ನಾವತಿ ಲಿಜ್ಞಿಯರ್ಕ್ಕೇ ॥

ಎಂಬದಾಗಿ ಪೂರಾಪಾಶುರವು. **ಪೇಶನಿನ್ರ** - ಪರತ್ವಭಾವದಿಂದ ಹೇಳಲ್ಪಟ್ಟ, **ಶಿವನುಕ್ಕುಂ –** ರುದ್ರನಿಗೂ ಎಂದರೆ, ಮಹಾಸಂಹಾರಾದಿ ಶಕ್ತಿಗಳುಳ್ಳವನಾಗಿರುವದರಿಂದಲೋ,ಅಥವಾ ನಾರಾಯಣಾನುವಾಕದಲ್ಲಿ "**ಸಬ್ರಹ್ಮಾ ಸಶಿವಃ**" ಎಂದು ಹೇಳಿರುವದರಿಂದಲೋ, ಅಥವಾ **ತಾಮಸ**ಪುರಾಣಾದಿಗಳಲ್ಲಿ ಪರದೇವತೆಯೆಂದು ಹೇಳಿರುವದರಿಂದಲೋ, ಅಥವಾ ಅಥರ್ವ ಶಿರಸ್ಸುಗಳಲ್ಲಿ ತುಂಬಾ ಸ್ತೋತ್ರಮಾಡಿರುವದರಿಂದಲೋ, ಪಾಶುಪತರಹಾಗೂ ಶಾಂಕರಾದಿಗಳಹಾಗೂ, ಶೈವರಹಾಗೂ, ಪರತತ್ವವೆಂದೇ ಭಾವಿಸಲ್ಪಟ್ಟಿರುವ ರುದ್ರನಿಗೂ, **ಪಿರಮನ್ತನಕ್ಕುಮ್** - ರುದ್ರನಿಗೂ ಪಿತಾವಾಗಿ ಶ್ರೀಶಾಜ್ಞೆಯಮೂಲಕ ತನ್ನಿಂದ ಸೃಷ್ಟಿಸಲ್ಪಡುವ ವಿಭೂತಿಯುಳ್ಳ ಚತುರ್ಮುಖಬ್ರಹ್ಮನಿಗೂ, **ಪಿರರಕ್ಕುಂ** - ಹಾಗೆಯೇ ಇಂದ್ರಾದಿ ಇತರ ದೇವತೆಗಳಿಗೂ, **ನಾಯಕನವನೇ** - ಸರ್ವ ನಿಯಾಮಕನಾಗಿ ಸ್ವಾಮಿಯಾಗಿರುವನು, ಶ್ರಿಯಃಪತಿಯೇ, ಅದು ಹೇಗೆಂದರೆ:—ಈ ಅಭಿಪ್ರಾಯವನ್ನು, **ಕಪಾಲ ನಲ್ ಮೋಕ್ಕತ್ತು**-ತನಗೆ ತಂದೆಯಾಗಿಯೂ ಗುರುವಾಗಿಯೂ ಇರುವ ಚತುರ್ಮುಖನ ಐದನೇ ಶಿರಸ್ಸನ್ನು ಕತ್ತರಿಸಿದ ಪ್ರಯುಕ್ತ ಉಂಟಾದ ಬ್ರಹ್ಮಹತ್ಯಾಶಾಪದಿಂದ ತನ್ನ ಕೈಗೆ ಅಂಟಿದ ಬ್ರಹ್ಮಕಪಾಲದ, **ನಲ್‌ಮೋಕ್ಕತ್ತು** - ಸಾವಿರಹೋಳಾಗಿ ಒಡೆದುಹೋಗುವಹಾಗೆ ಚೆನ್ನಾಗಿ ಉಂಟಾದ ಮೋಕ್ಷದಿಂದ, ಬಿಡುಗಡೆಯಿಂದ, **ಕಣ್ಡುಕೊಣ್ಮೆ**-ತಿಳಿದುಕೊಳ್ಳಿ. ಈ ರುದ್ರನಿಗುಂಟಾದ ಬ್ರಹ್ಮಹತ್ಯಾಶಾಪದ ವಿಮೋಚನೆಯೂ,ಆಬ್ರಹ್ಮಕಪಾಲವು ಕೈಗೆ ಅಂಟಿದುದು ಬಿಟ್ಟುಹೋದುದೂ ಯಾರಿಂದುಂಟಾಯಿತು ಎಂಬುದರಿಂದ, ಯಾರು ಪರತತ್ವವು, ರುದ್ರನೋ, ಶ್ರೀಮನ್ನಾರಾಯಣನೋ ಎಂಬುವದನ್ನು ತಿಳಿದುಕೊಳ್ಳಿ. ಬ್ರಹ್ಮನಿಗುಂಟಾದ ಶಿರಶ್ಛೇದನದುಃಖನಿವಾರಣೆಯೂ, ರುದ್ರನಿಗೆ ಬ್ರಹ್ಮಕಪಾಲ ಅಂಟಿದುದು ತಪ್ಪಿ

(೭) "ಒತ್ತೈವಿಡೈಯನುಮ್ ನಾನ್ಮುಕನು ಮುನ್ನೈಯರಿಯಾ ಪ್ಪೆರುಮೈಯೋನೇ" ಎನ್ರುಮ್,

ಕಪಾಲದ ಮೋಕ್ಷವೂ, ಶ್ರೀಮನ್ನಾರಾಯಣನಿಂದುಂಟಾದುದರಿಂದ ಶ್ರೀಮನ್ನಾರಾಯಣನೇ ಪರತತ್ವವೆಂದೂ, ಇವರುಗಳೆಲ್ಲಾ ಆತನಿಂದ ರಕ್ಷ್ಯರೆಂದೂ, ಹೇಳಲ್ಪಟ್ಟಿತು. ಮುಂದೆ ಅನುಮಾನಪ್ರಮಾಣದಿಂದುಂಟಾಗುವ ಶ್ರುತ್ಯಪಾರ್ಥಗಳ ನಿರಸನವು ಮಾಡಲ್ಪಡುತ್ತವೆ. ಅದು ನಮಗೀಗ ಅಪ್ರಸ್ತುತವು.

(೭) ಒತ್ತೈ ವಿಡೈಯನುಮ್ ನಾನ್ಮುಕನು ಮುನ್ನೈಯರಿಯಾ ಪೆರು ಮೈಯೋನೇ: । ಮುನ್ನ ಉಲಗೆಲ್ಲಂ ನೀಯೇಯಾಗಿ ಮೂನ್ರು ಳುತ್ತಾಯವೊದಲ್ವನೇಯೋ ॥ ಅನ್ನದುವಾಣಾಲ್ ಇವರ್ಕ್ಕೆನ್ರೆಣ್ಣಿ ಯುಂ ಜಿನ ಮನ್ರುಮರ್ಪನ್ನ ಲುನ್ನ ಅತ್ತೈಕ್ಕು ನೀ ಎನ್ನೈ ಕಾಕ್ಕವೇಣ್ಡುಂ ಅರಜ್ಞತ್ತರ ವಣ್ಣೈಪಳ್ಳಿಯಾನೇ:

(ಪೆರಿ. ತಿರು. ೪. ೧೦. ೪.) ಸಮಸ್ತವೂ ನಿನೆ ಎಂದು ಭಾವಿಸಿರುವವರಿಗೆ ಮರಣದೆಸೆಯಲ್ಲಿ ಯಮ ಭಯ ಉಂಟೋ? ಅಂತಹ ಭಯವಿಲ್ಲದ ಹಾಗೆ ನನ್ನನ್ನು ನೀನು ರಕ್ಷಿಸತಕ್ಕದ್ದು ಎಂದು ಹೇಳುತ್ತಾರೆ:—

ಒತ್ತೈ ವಿಡೈಯನುಮ್–ಅದ್ವಿತೀಯನಾದ ವೃಷಭವಾಹನನಾದ ರುದ್ರನೂ, ಅದ್ವಿತೀಯನು ಹೇಗೆಂದರೆ ಈ ಲೋಕದವರಿಗೆಲ್ಲಾ ಮೇಲಾಗಿ ಸುರಶ್ರೇಷ್ಠನಾಗಿ ಮಹಾಶಾಸ್ತ್ರಗಳನ್ನೆಲ್ಲಾ ಗ್ರಹಿಸುವ ಶಕ್ತಿಯುಳ್ಳವನಾದ ಪ್ರಯುಕ್ತ. ಆದರೂ ವೃಷಭರೂಪ ಪಶುವಾಹನನಾದ ಪ್ರಯುಕ್ತ ತಾಮಸಿಯಾಗಿ ಪಿತಾವಾದ ಚತುರ್ಮುಖನ ತಲೆಯನ್ನು ಛೇದಿಸಿದ ವಿಷಯವು ಸ್ಮೃತಿಪಥಕ್ಕೆ ಬರುತ್ತದೆ, **ನಾನ್ಮುಕನುಂ** – ಆತನಿಗಿಂತ ಜ್ಞಾನವೃದ್ಧನಾಗಿರುವ ಚತುರ್ಮುಖನೂ, ಪರಬ್ರಹ್ಮನಾಭೀಕಮಲಸಂಬಂಧವುಳ್ಳವನಾಗಿ, ಆತನು ಹೊಟ್ಟೆ ವೇದಗಳನ್ನು ನಾಲ್ಕು ಮುಖದಿಂದಲೂ ಪ್ರವರ್ತಿಸುವ ಹಾಗೆ ಮಾಡುವ ಶಕ್ತಿಯುಳ್ಳವನೆಂಬಭಿಪ್ರಾಯವು ತೋರಿಬರುತ್ತದೆ. ಇಂತಹ ಜ್ಞಾನಸಂಪನ್ನರೂ ಕೂಡ, **ಉನ್ನೈ ಯರಿಯಾಪ್ಪೆರುಮಾನೇ** - ನಿನ್ನನ್ನು ತಿಳಿಯಲಾರದ ಮಾಹಾತ್ಮ್ಯಯುಳ್ಳವನೇ.

(೧) "ಯನ್ನ ದೇವಾ ನ ಮುನಯೋ ನಚಾಹಂ ನ ಚ ಶಙ್ಕರಃ ।
ಜಾನನ್ತಿ ಪರಮೇಶಸ್ಯ ತದ್ವಿಷ್ಣೋಃ ಪರಮಂ ಪದಂ ॥ "

(೧) ವಿ. ಪು. ೧. ೯. ೫೫.

(೮) "ಎರುತ್ತುಕ್ಕೊಡಿಯುಡೈಯಾನುಮ್ ಪಿರನುನು ಮಿನ್ದಿರ

(ಇದು ಚತುರ್ಮುಖವಾಕ್ಯವು) ಎಂದು ಹೇಳಿರುವ ಹಾಗೆ ದೇವತೆಗಳೇ ಆಗಲಿ, ಮುನಿಗಳೇ ಆಗಲಿ, ನಾನೇ ಆಗಲಿ, ಶಂಕರನೇ ಆಗಲಿ ವಿಷ್ಣುವಿನ ಪರಮಪದವೆಂಥಾದ್ದಿಂದು ತಿಳಿಯಲಾರರೆಂದು ಹೇಳಿರುವಾಗ ಪರಮಾತ್ಮನ ಮಹಿಮೆಯನ್ನು ಇವರು ಅರಿಯಲಾರರೆಂದು ಇನ್ನು ಹೇಳತಕ್ಕದ್ದೇನಿದೆ! **ಮುಟ್ರುಲಗೆಲ್ಲಾಂ ನೀಯೇ**-ಸಮಸ್ತಲೋಕವು ನೀನೇ, ನೀನೇ (೧)**"ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುಃ"** ಎಂದು ಹೇಳಿರುವ ಹಾಗೆ, ಸಮಸ್ತ ಜಗತ್ತೂ ನೀನೇಯಾಗಿ, **ಮೂನ್ರೆಳತ್ತಾಯ್ ವೊದಲ್ವನೇಯೋ** - ಪ್ರಣವದಲ್ಲಿ ಮೂರು ಅಕ್ಷರರೂಪವಾಗಿರುವವನು, ಎಂದರೆ ಪ್ರಣವವಾಚ್ಯನು; (೨)**"ತಸ್ಯ ಪ್ರಕೃತಿಲೀನಸ್ಯ ಯಃ ಪರಸ್ಸಮಹೇಶ್ವರಃ"** ಎಂಬದಾಗಿ ಪ್ರಣವವಾಚ್ಯನು, ಮತ್ತು ಜಗತ್ಕಾರಣನು. ಹೀಗೆ ಜಗತ್ಕಾರಣನಾಗಿರುವದರಿಂದಲೇ, ಕಾರಣವೂ ಕಾರ್ಯವೂ ಸಹ ಒಂದೇಯಾದುದರಿಂದ ಜಗತ್ತೆಲ್ಲವೂ, ನೀನೇ ಎಂಬ ಭಾವವು. **ಸರ್ವಂಖಲ್ವಿದಂ ಬ್ರಹ್ಮ** - ಈ ಜಗತ್ತೆಲ್ಲವೂ ಬ್ರಹ್ಮವು, ಏತರಿಂದೆಂದರೆ, **ತಜ್ಜಲಾನ್** - ಅದರಿಂದಲೇ ಸೃಷ್ಟಿಸಲ್ಪಟ್ಟು, ಅದರಿಂದಲೇ ರಕ್ಷಿಸಲ್ಪಟ್ಟು, ಅದರಲ್ಲೇ ಲೀನವಾಗುವದರಿಂದ ಎಂಬಭಿಪ್ರಾಯವು. **ಅಟ್ರುದುವಾಳ್ ನಾಳಿವರ್ಕನ್ರೆಣ್ಣಿ** - ಇವರುಗಳು ಬಾಳುವ ಆಯುಸ್ಸೆಲ್ಲಾ ಕಳೆದುಹೋಯಿತೆಂದು ಯೋಚಿಸಿ, **ಅಂಜಿ ನಮನರವರ್ ಪಟ್ರಲುಟ್ರಾಕ್ಕು** - ಭಯಪಡುವ ಹಾಗೆ ಯಮಭಟರು ಬಂದು ಹಿಡಿಯುವದಕ್ಕೆ ಮುಂದೆಯೇ, **ನೀ ಯೆನ್ನೈ ಕಾಕ್ಕುನೇಣುಂ** - ನೀನು ನನ್ನನ್ನು ರಕ್ಷಿಸತಕ್ಕದ್ದು; ಏಕೆಂದರೆ, ನೀನೇ ಗತಿ ಎಂದು ಸರ್ವಶಕ್ತನಾದ ಕರುಣಾಶಾಲಿಯಾದ ನಿನ್ನಲ್ಲಿ ಶರಣಾಗತಿ ಮಾಡಿರುವದರಿಂದ ಎಂಬ ಭಾವವು. ಅದಕ್ಕಾಗಿಯೇ ನೀನು ಶ್ರೀರಂಗದಲ್ಲಿ ಬಂದು ಪ್ರಣವಾಕಾರವಿಮಾನದಲ್ಲಿ ನಿಂತು ಆಶ್ರಿತ ಸಂರಕ್ಷಣಾರ್ಥವಾಗಿಯೇ ಪವಳಿಸಿಕೊಂಡಿರುತ್ತೀಯೇ ಎಂದು ಹೇಳುತ್ತಾರೆ. **ಅರಜ್ಞತ್ತರವಣ್ಣೈಪ್ಪಳ್ಳಿಯಾನೇ** - ಆಶ್ರಿತರನ್ನು ರಕ್ಷಿಸುವದಕ್ಕಾಗಿಯಲ್ಲವೋ, ಈ ಪ್ರಣವಾಕಾರರಂಗವಿಮಾನದಲ್ಲಿ ಬಂದು ಬಿಜಮಾಡಿರುವದು. ಈ ಪಾಶುರದಲ್ಲೂ ಬ್ರಹ್ಮರುದ್ರಾದಿಗಳು ಹೀಗೆ ರಕ್ಷಿಸಲು ಅಸಮರ್ಥರು ಎಂಬಂಶವು ಉಪಪಾದಿತವಾಗಿರುತ್ತದೆ.

(೯) ಮರುತ್ತುವನಾಯ್ ನಿನ್ರ ಮಾಮಣಿವಣ್ಣಾ ಮರು ಪಿರವಿತ

(೧) ವಿ. ಪು. ೨. ೧೨. ೫೮. (೨) ತೈ. ಉ. ೪, ೨೪,

ನುಮ್ ಮುನ್ರುನೊರುತ್ತರುಮಿಪ್ಪಿರವಿ ಎನ್ನುಮ್, ನೋಯುಕ್ಕು ಮರುನ್ತರಿವಾರು ಮಿಲ್ಲೈ" ಎನ್ರುಮ್ ಪಲಮುಕಜ್ಞಾಲೇ ಅರುಳಿಚ್ಚೆಯ್ದಾರ್ಗಳ್.

ವಿರ । ತಿರುತ್ತಿಯುನ್ಕೋಯಿರ್ಕಡೈ ಪುಕಪ್ಪೆಯುಮ್ ತಿರುಮಾಲಿರುಂ ಶೋಲೈಯುನ್ಡಾಯುಮ್ ॥ (ಪೆರು. ತಿರು. ೫. ೩. ೬.)

ಎಂಬುವದು ಉತ್ತರಾರ್ಧವು. **ಎರುತ್ತು ಕೊಡಿಯುಡ್ಯೈಯಾನುಮ್**-ವೃಷಭವನ್ನು ಧ್ವಜವಾಗಿವುಳ್ಳ ರುದ್ರನೂ, ಅಂತಹ ಪಶುವನ್ನು ಧ್ವಜದಲ್ಲಿ ಹೊಂದಿರುವದರಿಂದಲೇ ತಾಮಸಿ ಎಂದು ಏರ್ಪಡುತ್ತದೆಂಬ ಭಾವವು, **ಪಿರವುನುಂ** - ಚತುರ್ಮುಖಬ್ರಹ್ಮನೂ, **ಇಂದಿರನು** - ಇಂದ್ರನೂ, **ಮುನ್ರುಮೊರುತ್ತರುಂ** - ಹೀಗೆ ಇನ್ನು ಯಾರೂ, **ಈ ಪಿರವಿಯೆನ್ರುಂ** - ಈ ಜನ್ಮವೆತ್ತುವದೆಂಬುವ, **ನೋಯುಕ್ಕುಂ** - ವ್ಯಾಧಿಗೆ, **ಮರುನ್ದು** - ಔಷಧವನ್ನು, **ಅರಿವಾರುಮಿಲ್ಲೈ** - ತಿಳಿದವರು ಯಾರೂ ಇಲ್ಲವು, **ಮರುತ್ತವನಾಯ್** - ಇಂತಹ ಔಷಧವನ್ನು ಕೊಡವನಾಗಿ ಎಂದು ಒಂದರ್ಥವು. ಔಷಧವ್ಯಾವುದೆಂದರೆ:—ಸಂಸಾರಕ್ಕೆ ಹೇತುವಾದ ಕರ್ಮಗಳೆಲ್ಲಾ ಹೋಗಲಾಡಿಸುವದು, "ಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂದು ಹೇಳಿದ ಔಷಧವನ್ನು ಕೊಡುವವನು. ಕುಲಶೇಖರಾಳ್ವಾರವರು "**ವ್ಯಾಮೋಹಪ್ರಶಮೌಷಧಂ** - ಎಂದು ಉಪಪಾದಿಸಿರುವ ಹಾಗೆ ಔಷಧವು. ಆಚಾರ್ಯನಾಗಿ ಎಂದು ಇನ್ನೊಂದರ್ಥವು. ಹೀಗೆ, **ನಿನ್ರ** - ಇರುವ, **ಮಾಮಣಿವಣ್ಣಾ** - ಮಹಾಮಣಿರೂಪನು, ಆರ್ತಿಗಳನ್ನು ಹೋಗಲಾಡಿಸುವಂಥಾ ಮಣಿಯೇ ಅಥವಾ ಭ್ರಮೆಗಳನ್ನು ಹೋಗಲಾಡಿಸುವ ಮಣಿಯೇ ಎಂದು ಒಂದು ಅರ್ಥವು. ಇನ್ನೊಂದರ್ಥವು ಇಂದ್ರನೀಲಮಣಿಗೆ ಸಮಾನವಾದ ವರ್ಣವುಳ್ಳ ನೀಲಮೇಘಶ್ಯಾಮನೇ, **ಮರು ಪಿರವಿ ತವಿರ ತಿರುತ್ತಿ** - ಪುನರ್ಜನ್ಮಗಳಿಲ್ಲದ ಹಾಗೆ ಮಾಡಿ, **ಉನ್ಕೋಯಿರ್ಕಡೈ ಪುಕಪ್ಪೊಯ್** - ನಿನ್ನ ವಾಸಸ್ಥಾನದ ಬಾಗಿಲನ್ನು ಕಾದು ಬಾಳುವಹಾಗೆ ಮಾಡುವ, **ತಿರುಮಾಲಿರುಂ ಶೋಲೈಯುನ್ಡಾಯ್** - ಹೀಗೆ ನನ್ನ ಜನ್ಮವನ್ನು ನಿವೃತ್ತಿಮಾಡುವದಕ್ಕಾಗಿಯಲ್ಲವೇ, ನೀನು ತಿರುಮಾಲೈ ಎಂಬ ಕ್ಷೇತ್ರದಲ್ಲಿ ಬಿಜವಾಡಿಸಿರುತ್ತೀಯೇ. ಇದರಿಂದ ಬ್ರಹ್ಮರುದ್ರೇಂದ್ರಾದಿಗಳಿಗೆ ಸಂಸಾರಬಂಧವನ್ನು ಬಿಡಿಸುವ ಯೋಗ್ಯತೆ ಇಲ್ಲವೆಂದೂ, ಶ್ರೀ ಮಹಾವಿಷ್ಣುವಿಗೇನೆ ಆ ಶಕ್ತಿಯುಂಟೆಂದೂ ಹೇಳಲ್ಪಟ್ಟಿತು." ಎಂದು **ಪಲಮುಕಜ್ಞಾಲೇ**-ಹೀಗೆ ಬಹುಪ್ರಕಾರವಾಗಿ, **ಅರುಳಿಚ್ಚೆಯ್ದಾರ್ಗಳ್**-ಆಳ್ವಾರುಗಳು ಕೃಪಯಾ ಅನುಗ್ರಹಿಸಿ ಹೇಳಿರುತ್ತಾರೆ.

ರಹಸ್ಯತ್ರಯತ್ತಿಲ್ ಪರದೇವತಾ ಪಾರಮಾರ್ಥ್ಯಾನುಸಂಧಾನ ಸ್ಥಳಂಗಳ್

ಇಪ್ಪರದೇವತಾಪಾರಮಾರ್ಥ್ಯಮುಮ್ ತಿರುಮನ್ತ್ರತ್ತಿಲ್ ಪ್ರಥಮಾಕ್ಷರತ್ತಿಲುಮ್ ನಾರಾಯಣಶಬ್ದತ್ತಿಲುಮ್, ದ್ವಯತ್ತಿಲ್ ಸವಿಶೇಷಣ ಜ್ಞಾನ ನಾರಾಯಣ ಶಬ್ದ ಜ್ಞಾನಿಲುಮ್, ಚರಮಶ್ಲೋಕತ್ತಿಲ್ "ಮಾಂ" "ಅಹಂ" ಎಜ್ಞ್ಞಿರ ಶಬ್ದಜ್ಞಾನಿಲುಮ್, ಅನುಸನ್ಧೇಯಮ್.

ರಹಸ್ಯತ್ರಯಗಳಲ್ಲಿ ಪರದೇವತಾ ಪಾರಮಾರ್ಥ್ಯವನ್ನು ಗ್ರಹಿಸುವ ಸ್ಥಳಗಳು.

ಹಿಂದೆ ರಹಸ್ಯತ್ರಯಗಳು ಸಾರತಮವಾದುವು ಎಂದು ಉಪಪಾದಿಸಲ್ಪಟ್ಟಿತು. ಆದುದರಿಂದ ಇಂತಹ ಸಾರತಮವಾದವುಗಳಲ್ಲಿ ಪರದೇವತೆ ಯಾರು ಎಂದು ಸೂಚಿಸಲ್ಪಟ್ಟಿರಬೇಕು. ಅಂತಹ ಅನುಸಂಧಾನ ಮಾಡಬಹುದಾದ ಭಾಗಗಳಾವುವು ಎಂಬುವದನ್ನು ಮುಂದೆ ತಿಳಿಸುತ್ತಾರೆ.

ಇಪ್ಪರದೇವತಾಪಾರಮಾರ್ಥ್ಯಮುಮ್-ಈ ಪರದೇವತಯು ಶ್ರೀಮನ್ನಾರಾಯಣನೇ ಎಂಬಭಿಪ್ರಾಯವು, ಎಲ್ಲಿ ತೋರಿಬರುತ್ತದೆಂದರೆ :—(೧) **ತಿರುಮನ್ತ್ರತ್ತಿಲ್** - ಮೂಲಮಂತ್ರದಲ್ಲಿ, **ಪ್ರಥಮಾಕ್ಷರತ್ತಿಲುಮ್** - ಓಂ ಎಂಬ ಪ್ರಣವದ ಮೊದಲನೇ ಅಕ್ಷರವಾದ ಅಕಾರದಲ್ಲೂ ಮತ್ತು **ನಾರಾಯಣಶಬ್ದತ್ತಿಲುಂ**-ನಾರಾಯಣಶಬ್ದದಲ್ಲೂ, ಅನುಸಂಧೇಯವು. ಓಂಕಾರವು ವೇದಾದಿಯಲ್ಲೂ, ವೇದದ ಅನ್ತದಲ್ಲೂ ಹೇಳಲ್ಪಡುತ್ತದಾಗಿ ಅದರಲ್ಲಿ ಅಕಾರವು ಯಾರನ್ನುದ್ದೇಶಿಸಿ ಹೇಳುತ್ತದೋ ಅದೇ ಪರತತ್ವವು. "**ಅಕಾರೇಣೋಚ್ಯತೇ ವಿಷ್ಣುಃ**," "**ಅಕಾರೋ ವಿಷ್ಣುವಾಚಕಃ**" ಎಂಬ ಪ್ರಮಾಣಗಳಿಂದ ಪರತತ್ವವು ವಿಷ್ಣುವೇ ವಿನಾ ಇತರರಲ್ಲವೆಂಬುವದು ಏರ್ಪಟ್ಟಿತು. ಈ ವಿಷ್ಣುವೇ ನಾರಾಯಣಶಬ್ದದಿಂದಲೂ ಹೇಳಲ್ಪಡುವನೆಂಬುವದು ಮಂತ್ರದಲ್ಲಿರುವ ನಾರಾಯಣಶಬ್ದದಿಂದ ವ್ಯಕ್ತಪಡುತ್ತದೆ.

"**ವಿವಮಕ್ಷರ ರೂಪೇಣ ಕಾರಣತ್ವಮಿವೋದಿತಂ ।**
ರಕ್ಷಕತ್ವಂ ಚ ಧಾತ್ವರ್ಥಾಚ್ಛೇಷಿತ್ವಂ ಪದರೂಪತಃ ।
ಶ್ರೀಶತ್ವಂ ವಾಚ್ಯಗತ್ಯಾಚ ಯುಜ್ಯತೇ ಪರಮಾತ್ಮನಃ"

ಎಂಬುವ ಪ್ರಮಾಣ ಮೂಲಕ ಅಕಾರವಾಚ್ಯನಾವ ಪರದೇವತೆಗೆ ಸರ್ವಕಾರಣತ್ವ, ಸರ್ವರಕ್ಷಕತ್ವ, ಸರ್ವಶೇಷಿತ್ವ, ಲಕ್ಷ್ಮೀಪತಿತ್ವಾದಿಗಳು ಉಂಟೆಂಬುವಮೂ ತೋರಿಬರುತ್ತದೆ.

ಇದ್ದೇವತಾ ವಿಶೇಷ ನಿಶ್ಚಯ ಮುಡ್ಯೆಯುವನಕ್ಕಲ್ಲದು (೧)"ಕಣ್ಣ ಕಣ್ಣಲ್ಲದಿಲ್ಲೆ ಯೋರ್ ಕಣ್ಣೇ" ಎನ್ರುಮ್,

(೨) ದ್ವಯತ್ತಿಲ್ - ದ್ವಯಮನ್ತ್ರದಲ್ಲಿ, **ಸವಿಶೇಷಣಜ್ಞಾನ ನಾರಾಯಣಶಬ್ದಜ್ಞಳಿಲುಮ್** - ವಿಶೇಷಣಗಳಿಂದ ಕೂಡಿದ ನಾರಾಯಣಶಬ್ದಗಳಿಂದಲೂ, ಅನುಸನ್ಧೇಯವು. ದ್ವಯದ ಪೂರ್ವಖಂಡ ಉತ್ತರಖಂಡಗಳಲ್ಲೂ ಶ್ರೀಮಚ್ಛಬ್ದವು ನಾರಾಯಣಶಬ್ದಕ್ಕೆ ವಿಶೇಷಣವಾಗಿರುತ್ತದೆ. ಲಕ್ಷ್ಮೀನಾರಾಯಣರು ಸೇರಿಯೇ ಪರದೇವತೆಯಾದುದರಿಂದ, ಅದನ್ನು ಅವಗಾಹನೆಗೆ ತರುವದಕ್ಕಾಗಿ **ಸವಿಶೇಷಣಜ್ಞಾನ** ಎಂದು ಪ್ರಯೋಗಿಸಿರುತ್ತಾರೆ. ಇತರರು ಹೇಳಿವ ಹಾಗೆ ಉಪಲಕ್ಷಣವಲ್ಲವು. ಹೀಗೆ ಶ್ರೀಮಚ್ಛಬ್ದದಿಂದ ತೋರುವ ಲಕ್ಷ್ಮೀಪತಿತ್ವವಲ್ಲದೆ, ನಾರಾಯಣಶಬ್ದದಿಂದ ಸರ್ವಾಂತರ್ಯಾಮಿತ್ವ, ಸರ್ವಾಧಾರಕತ್ವ, ಸಮಸ್ತಕಲ್ಯಾಣಗುಣಾಕರತ್ವ, ಸರ್ವಲಾವಣ್ಯತ್ವ, ಸರ್ವಜೀತನಪ್ರಾಪಕತ್ವ ಪ್ರಾಪ್ಯತ್ವಾದಿಗಳ ತೋರಿಬರುತ್ತವೆ. ಹೀಗೆ ಸರ್ವಶರಣ್ಯತ್ವವೂ ಸರ್ವಪ್ರಾಪ್ಯತ್ವವೂ ತೋರುವದರಿಂದ ಲಕ್ಷ್ಮೀನಾರಾಯಣರೇ ಪ್ರಾಪ್ಯಪ್ರಾಪಕರೆಂದೂ, ಈದುದರಿಂದ ಬ್ರಹ್ಮರುದ್ರಾದಿಗಳು ಪ್ರಾಪ್ಯಪ್ರಾಪಕರಲ್ಲವೆಂಬುವದೂ ಅರ್ಥತ್ ಏರ್ಪಡುತ್ತದೆ.

(೩) ಚರಮಶ್ಲೋಕತ್ತಿಲ್ - ಚರಮಶ್ಲೋಕದಲ್ಲಿ "**ನಾಂ**" "**ಅಹಂ**" ಎಂಬುವ ಶಬ್ದಗಳಿಂದಲೂ ಪರತತ್ವವು ಶ್ರೀಮಹಾವಿಷ್ಣುವೇ. ಶ್ರೀಮಹಾವಿಷ್ಣುವೇ ಕೃಷ್ಣಾವತಾರಿಯಾಗಿ ಅವತರಿಸಿರುವ ಪ್ರಯುಕ್ತ, **ನಾಂ, ಅಹಂ** ಎಂದು ಹೇಳಿಕೊಳ್ಳುವ ಶ್ರೀಕೃಷ್ಣನು ಶ್ರೀಮನ್ನಾರಾಯಣನೇ ಎಂದು ಭಾವವು.

"ಏಷ ನಾರಾಯಣಶ್ರೀಮಾ ಕ್ಷೀರಾರ್ಣವ ನಿಕೇತನಃ ।
ನಾಗಪರ್ಯ್ಯಙ್ಕಮುತ್ಸೃಜ್ಯ ಹ್ಯಾಗತೋ ಮಧುರಾಂಪುರೀಂ"।।

ಎಂಬ ಹರಿವಂಶ (೫೪-೪೦) ಪ್ರಮಾಣದಿಂದ ಶ್ರೀಮನ್ನಾರಾಯಣನೇ ಮಧುರಾಪುರಿಯಲ್ಲಿ ಅವತರಿಸಿದವನೆಂಬುವದು ವ್ಯಕ್ತಪಡುತ್ತದೆ.

ಇದ್ದೇವತಾ ವಿಶೇಷನಿಶ್ಚಯ ಮುಡ್ಯೆಯುವನಕ್ಕಲ್ಲದು-ಈ ಪರದೇವತಾವಿಶೇಷವಾವುದು ಎಂಬ ನಿಶ್ಚಯಜ್ಞಾನವಿಲ್ಲದವರಿಗೆ, ತಮಗೆ ಇಹದಲ್ಲೂ ಪರದಲ್ಲೂ ರಕ್ಷಕನು ಸರ್ವೇಶ್ವರನೇ ವಿನಾ ಮತ್ತಾರೂ ಅಲ್ಲವೆಂಬ ನಂಬಿಕೆಯು ಉಂಟಾಗುವದಿಲ್ಲವು ಎಂದು ಮುಂದೆ ಹೇಳಿರುತ್ತದೆ. ಆ ವಿಷಯದಲ್ಲಿ ನಾಲ್ಕು ಆಳ್ವಾರುಗಳ ಸೂಕ್ತಿಗಳನ್ನು ಉದಾಹರಿಸುತ್ತಾರೆ:—

ತಿರುವಾಯ್‌ಮೊಳಿ. ೨. ೨. ೧.

ತಿಣ್ಣನ್ನೀಡು ಮುತನ್ಮೆಳುತುವಾ । ಯಿಣ್ಣನ್ಮೀತಿಯುನೆಮ್ಬೆರು

ಮೂರ್ತಿ । ಮಣ್ಣುಮ್ ವಿಣ್ಣುಮೆಲ್ಲಾ ಮುಡನುಂಡ । ನಜ್ಗಣ್ಣ ಕಣ್ಣಲ್ಲ ದಿಲ್ಲೈ ಯೋರ್ ಕಣ್ಣೀ ॥

ತಿಣ್ಣನ್ ವೀಡು, ತಿಣ್ಣ ಎಂದರೆ ಲೀಲಾವಿಭೂತಿಯ ಹಾಗೆ ವಿಕಾರಗಳೊಂದೂ ಇಲ್ಲದೆ, "**ಅಮೃತಂ ಶಾಶ್ವತಂ ನಿತ್ಯಂ**" ಎಂದು ವಿಷ್ಣು ಪುರಾಣ (೧. ೨೨. ೬೦) ದಲ್ಲಿ ಹೇಳಿರುವ ಹಾಗೆ ದೃಢವಾದ, **ನನ್** - ವಿಲಕ್ಷಣವಾದ, **ವೀಡು** - ಮೋಕ್ಷವು, **ಮುದಲ್** - ಮೊದಲುಗೊಂಡು. **ಮುಳದುಮಾಯ್** - ಸಮಸ್ತ ಐಶ್ವರ್ಯಾದಿ ಪುರುಷಾರ್ಥಗಳಿಗೂ ನಿರ್ವಾಹಕನಾಗಿರುವ, ಮತ್ತು **ಎಣ್ಣಿನ್ ಮಾತಿಯನ್** - ಅಚಿಂತ್ಯವಾಗಿರುವ, ಅಪರಿಚ್ಛನ್ನಸ್ವಭಾವನಾಗಿರುವ, ಇದರಿಂದ ಕಲ್ಯಾಣಗುಣಾಕರತ್ವವು ಹೇಳಲ್ಪಟ್ಟಿತು. **ಎಮ್ಬೆರುಮಾನ್** - ತನ್ನ ಗುಣವಿಭೂತ್ಯೈಶ್ವರ್ಯಗಳನ್ನು ತೋರ್ಪಡಿಸಿ ನನ್ನನ್ನು ವಶಮಾಡಿಕೊಂಡಿರುವ ನಮ್ಮ ಸ್ವಾಮಿಯಾಗಿರುವ, **ಮಣ್ಣುಮ್ ವಿಣ್ಣುಮ್ ಎಲ್ಲಾಂ ಉಡನ್ ಉಣ್ಡ-ಕೃಷ್ಣನಿವನಹಿಲೋಕಾನಾಮುತ್ಪತ್ತಿರಪಿಚಾವ್ಯಯಃ**" "ಕೃಷ್ಣನೇ ಲೀಲಾವಿಭೂತಿಯ ಸರ್ವಲೋಕಗಳ ಸೃಷ್ಟಿಲಯಗಳಿಗೆ ಕಾರಣನು" (ಭಾರತ ರಾ) ಎಂದು ಹೇಳಿರುವ ಹಾಗೆ, ಈ ಪೃಥಿವಿಯನ್ನೂ, ಸ್ವರ್ಗಾದಿ ಲೋಕಗಳನ್ನೂ, ಎಲ್ಲವನ್ನೂ ಪ್ರಳಯಕಾಲದಲ್ಲಿ ತನ್ನಲ್ಲಿಟ್ಟುಕೊಳ್ಳುವನಾದ, **ನಜ್ಕಣ್ಣನ್** - ನಮ್ಮ ಶ್ರೀಕೃಷ್ಣನು, **ಕಣ್ಣನ್** - ಜಗತ್ತಿಗೆಲ್ಲ ಕಣ್ಣು ಎಂದರೆ ರಕ್ಷಕನು, **ಅಲ್ಲದು** - ಆ ಕೃಷ್ಣನಲ್ಲದೆ ಬೇರೆ, **ಓರ್ ಕಣ್ ಇಲ್ಲೈ** - ಇನ್ಯಾವ ಒಂದು ಕಣ್ಣೂ ಇಲ್ಲವು, ಇನ್ಯಾವ ರಕ್ಷಕನೂ ಇಲ್ಲವು. ಬ್ರಹ್ಮರುದ್ರಾದಿಗಳಲ್ಲಿ ಯಾರೊಬ್ಬನೂ ರಕ್ಷಕನಾಗುವದಿಲ್ಲವು. ಶ್ರೀಕೃಷ್ಣನೇ ರಕ್ಷಕನು ಏತಕ್ಕೆಂದರೆ, ಆತನೇ ಸೃಷ್ಟಿಸ್ಥಿತಿಲಯಗಳಿಗೆ ಕಾರಣನು. ಕೃಪಾಸೌಲಭ್ಯಾದಿ ಕಲ್ಯಾಣಗುಣಾಕರನು, ಅವುಗಳಿಂದ ನನ್ನನ್ನು ವಶಮಾಡಿಕೊಂಡವನು, ಮೋಕ್ಷ ಮೊದಲುಗೊಂಡು ಸರ್ವಪುರುಷಾರ್ಥದಾಯಕನು. ಆದುದರಿಂದ ಅಂತಹ ಶ್ರೀಕೃಷ್ಣನೇಪರತತ್ವವು. ಪಾಶುರದ ಪ್ರಥಮದಲ್ಲಿರುವ **ತಿಣ್** ಎಂಬುವದನ್ನು ಕೊನೆಗೆ ಅನ್ವಯಿಸಿದರೆ, ಶ್ರೀಕೃಷ್ಣನೇ ಪರತತ್ವವೆಂಬುವದು, **ತಿಣ್**– ದೃಢವು.

" ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯಭು ಜಮುಚ್ಯತೇ ।
ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ॥ "

ಎಂದು ಹೇಳಿರುವ ಹಾಗೆ ಶ್ರೀಕೃಷ್ಣನು ಪರತತ್ವವೆಂಬುವದು ದೃಢವು ಎಂದು ಅರ್ಥಸ್ವಾರಸ್ಯವನ್ನು ಹೇಳಬಹುದು. ಅಥವಾ ಶ್ರೀಕೃಷ್ಣನ ಕೃಪಾಪುರಸ್ಸರ ದೃಷ್ಟಿ ಇಲ್ಲದೆ, ಇನ್ಯಾರೊಬ್ಬರ ದೃಷ್ಟಿಯೂ ಕಾರ್ಯಕಾರಿಯಲ್ಲವು, ಇದು ಸತ್ಯವು ಎಂಬರ್ಥವನ್ನೂ ಹೇಳಬಹುದು.

(೨) "ಕಳೈವಾಯ್ ತುನ್ಬಮ್ ಕಳೈಯಾದೊಳಿವಾಯ್ ಕಳೈ ಕಣ್ಮತ್ತಿಲೇ ಎನ್ರುಮ್, (೩) "ಆವಿಕ್ಕೊರ್ ಪಟ್ರುಕ್ಕೊಮ್ಬು ನಿನ್ನಲಾಲರಿ ಕಿನ್ರಿಲೇ ಯರ್" ಎನ್ರುಮ್, (೪) "ತ(ವ)ರು ತುಯ

(೨) ತಿರುವಾಯ್‌ಮೊಳಿ. ೫. ೮. ೮.

ಕಳೈವಾಯ್ ತುನ್ಬಜ್ಞಳೈ ಯಾತೊಳಿವಾಯ್ ಕಳೈ ಕಣ್ಮಟ್ರಿಲೇ । ನ್ನಳೈವಾಯ್ ನೇಮಿಪ್ಪಡೈಯಾಯ್ ಕುಡನ್ದೈಕ್ಕಿಡನ್ದವಾವಾಯಾ॥ ತಳರಾ ವುಡಲ ಮಿನ ತಾ ವಿ ಶರನ್ದುಪೋಮ್ಬೊದು । ತಿಳೈಯಾ ತು ನ ತಾ ಳೊರುಜ್ಞಪ್ಪಿಡಿತ್ತು ಪ್ಪೋತೆ ವಿಶೈ ನೀಯೇ ॥ ಎಂಬದಾಗಿ ಪೂರಾ ಪಾಶುರವು.

"**ತುನ್ಬಂ** - ದುಸ್ಸಹವಾದ ನನ್ನ ದುಃಖವನ್ನು, **ಅಹಂತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂದು ಹೇಳಿರುವ ಹಾಗೆ, **ಕಳೈವಾಯ್** - ನೀನು ಹೋಗಲಾಡಿಸು ಅಥವಾ, **ಕಳೈಯಾಃಒಳಿವಾಯ್** - ಹೋಗಲಾಡಿಸದೇಬಿಡು, ಕಳೈಕಣ್ - ಅದನ್ನು ಹೋಗಲಾಡಿಸುವ ದೃಷ್ಟಿಯು ಎಂದರೆ ರಕ್ಷಕನು, **ಮಟ್ರಿಲೇ** - ಬೇರೆ ಯಾರೂ ಇಲ್ಲವು. ಇದರಿಂದ ತಾನು ಅನನ್ಯಶರಣನಾದುದರಿಂದ ನಿನ್ನನ್ನೇ ಆಶ್ರಯಿಸಿರುತ್ತೇನೆಂಬ ಭಾವವು. ಇಂತಹ ದುಃಖನಿವಾರಣಕ್ಕಾಗಿಯೇ ನೀನು -**ನಳೈವಾಯ್ ನೇಮಿ ಪಡೈಯಾಯ್** - ಸರ್ವತೋಮುಖವುಳ್ಳ ಚಕ್ರವನ್ನು ಆಯುಧವಾಗಿ ಧರಿಸಿರುವವನೇ. ಎಲ್ಲರೂ ಆಶ್ರಯಿಸಿ ದುಃಖವನ್ನು ನೀಗಿಕೊಳ್ಳಲೆಂದು ನೀನು, **ಕುಡನ್ದೈಕ್ಕಿಡನ್ದ** - ತಿರುಕುಡನ್ದೈಯಲ್ಲಿ ಬಿಜವಾಡಿಸಿರುವ **ವಾವಾಯಾ** - ಅತ್ಯಾಶ್ಚರ್ಯಸೌಂದರ್ಯಯುಕ್ತನೇ, **ಉಡಲಂ ತಳರಾ** - ಶರೀರವು ಶಿಥಿಲವಾಗಿ, **ಎನದು ಆವಿ ಶರಿನ್ದು** - ನನ್ನ ಪ್ರಾಣವು ಕ್ಷೀಣವಾಗಿ, **ಪೋವೆಂಬ್ರೀದು** - ಹೋಗುವಾಗ, **ಇಳೈಯಾದು** - ದೌರ್ಬಲ್ಯವನ್ನು ಹೊಂದದೆ, **ಉನತಾಳ್** - ನಿನ್ನದಿವ್ಯ ತಿರುವಡಿಗಳನ್ನು, **ಒರಜ್ಞು ಪಿಡಿತ್ತು ಪೋದ** - ಅಂದರೆ ಒಂದು ವಿಧವಾಗಿ ಅಂದರೆ ಉಪಾಯೋಪೇಯವಾಗಿ ಹಿಡಿದು, ಹೋಗುವ ಎಂದರೆ ಆಶ್ರಯಿಸುವ ಹಾಗೆ, **ನೀಯೇ ಇಶೈ** - ನೀನೇ ಸಜ್ಜುಲ್ಪಿಸತಕ್ಕದ್ದು."

(೩) ತಿರುವಾಯ್‌ಮೊಳಿ ೧೦. ೧೦. ೩. **'ಆವಿಕ್ಕು** - ನನ್ನ ಆತ್ಮಾವಿಗೆ, **ಓರ್ ಪತ್ತುಕ್ಕೊಮ್ಬು** -- **ನಿವಾಸವೃಕ್ಷಸ್ಸ್ಥಾಣೂನಾಂ"** (ರಾ. ಕಿಷ್ಕಿಂ) ಎಂದು ಹೇಳಿರುವ ಹಾಗೆ ಆಶ್ರಯಿಸಲು ಯೋಗ್ಯವಾದ ವೃಕ್ಷವು, **ನಿನ್ನಲಾಲ್** - ನೀನಲ್ಲದೆ,

ರನ್ ತಡಾಯೇಲುನ್ ಶರಣಲ್ಲಾಲ್ ಶರಣಿಲ್ಲೈ" ಎಜ'ರತಿರುಮೊಳಿ
ಮೊದಲಾನವತ್ತಿಲುಮ್ ಶೊಲ್ಲುಮ್ ಅನನ್ಯಶರಣತ್ವಸ್ಥಲ ಕಡೈ

ನಾಣ್ ಅರಿಕಿನ್ರಿಲೇನ್ - ನಾನು ತಿಳಿದಿಲ್ಲವು. ಎಂದೂ, (ಪೂರಾ ಪಾಶುರಾರ್ಥಗಳಿಗೆ ೭೧೩ ನೇ ಪುಟ ನೋಡಿ)

(೪) ಪೆರುಮಾಳ್ ತಿರುಮೊಳಿ. ೫. ೧.

ತರತುಯರುಮ್ ತಡಾಯೇಲುನ್ ಶರಣಲ್ಲಾಲ್ ಶರಣಿಲ್ಲೈ
ವಿರೈ ಕುಳುವು ಮಲರ್ ಪೊಳಿಲ್ ಶೂಳ್ ವಿತ್ತುವಕ್ಕೋಟ್ಟಮ್ಮಾ
ಅರಶಿನತ್ತಾ ಲೀನ್ರ ತಾಯುಕತ್ತಿಡಿನುಮ್ ಮತ್ತವಳ್ ತನ್
ಅರುಳ್ ನಿನೈನ್ದೇಯಳುಜ್ಞಳವಿಯದುವೇಪೋನ್ರಿರುನ್ದೇನೆ ॥

ಎಂಬುವದು ಪೂರಾ ಪಾಶುರವು. **ವಿರೈಕುಳವು** - ಪರಿಮಳ ಪ್ರಚುರವಾದ, **ಮುಲರ್** - ಹೂವುಗಳ, **ಪೊಳಿಲ್ ಶೂಳ್** - ಉದ್ಯಾನವನಗಳಿಂದ ಶೋಭಿಸುವ, **ವಿತ್ತುವಕೋಟ್ಟಮ್ಮಾ** - ತಿರುವಿತ್ತುವಕೋಟೆ ಎಂಬ ದಿವ್ಯಕ್ಷೇತ್ರದ ಸ್ವಾಮಿಯೇ. **ತರತುಯರುಮ್** - ನೀನೇ ಉಂಟುಮಾಡಿದ ದುಃಖವನ್ನು **ತಡಾಯೇಲ್** - ನೀನೇ ಹೋಗಲಾಡಿಸದೇ ಹೋದರೆ, **ಉನ್ ಶರಣಲ್ಲಾಲ್ ಶರಣಿಲ್ಲೈ** - ನಿನ್ನ ತಿರುವಡಿಗಳಲ್ಲದೆ ಬೇರೇ ಉಪಾಯವಿಲ್ಲ. **ಈನ್ರತಾಯ್** - ಹೆತ್ತತಾಯಿಯು, **ಅರಶಿನತ್ತಾಲ್** - ಕೋಪದಿಂದ, **ಅಕತ್ತಿಡಿನುಮ್** - ತಳ್ಳಿಬಿಟ್ಟರೂ, **ಮತ್ತವಳ್** - ಮತ್ತೆ ಯಾವದನ್ನೂ ಯೋಚಿಸದೆ, **ಅವಳ್ ತನ್ ಅರುಳ್** - ಆ ತಾಯಿಯ ಕೃಪೆಯನ್ನೂ, **ನಿನೈನ್ದು** - ಜ್ಞಾಪಿಸಿಕೊಂಡು, **ಅಳುಂ** - ಅಳುವ, **ಕುಳವಿಯದುವೇ ಪೋನ್ರಿರುನ್ದೇನ್** - ಶಿಶುಪ್ರಜೆಯ ಹಾಗೆ ಇದ್ದೇನೆ. ಆಳವಂದಾರ್ಯರವರೂ,, "**ರುಷಾ ನಿರಸ್ತೋಪಿ ಶಿಶುಸ್ತಸಂಧಯೋ ನ ಜಾತು ಮಾತುಶ್ಚರಣೌ ಜಿಹಾಸತಿ**" ಎಂಬದಾಗಿ, ಈ ಅಭಿಪ್ರಾಯವನ್ನೇ ಹೇಳಿರುತ್ತಾರೆ. ತಾಯಿಯಾದವಳು ಕೋಪದಿಂದ ಮಗುವನ್ನು ದಬ್ಬಿದರೂ, ಹೇಗೆ ಪುನಃ ತಾಯಿಯಕಾಲನ್ನೇ ಘಟ್ಟಿಯಾಗಿ ಕಟ್ಟಿಕೊಳ್ಳುತ್ತದೋ ಹಾಗೆಯೇ ತಾವೂ ಕೂಡ ತಿರುವಿತ್ತು ಕೋಟೆಯ ಸ್ವಾಮಿಯ ಚರಣಗಳನ್ನು ದೃಢವಾಗಿ ಅವಲಂಬಿಸಿರುವದಾಗಿ ಹೇಳುತ್ತಾರೆ.

ಎಜ'ರ - ಎಂದು ಮೇಲೆ ಹೇಳಿದ ನಾಲ್ಕು ಆಳ್ವಾರ್ ಸೂಕ್ತಿಗಳಾದ, **ತಿರುಮೊಳಿಮೊದಲಾನ ವತ್ತಿಲುಮ್** - ತಿರುಮಂಗೈಯಾಳ್ವಾರು ಅನುಗ್ರಹಿಸಿದ ಪೆರುಮಾಳ್ ತಿರುಮೊಳಿ ಮೊದಲಾದವುಗಳಲ್ಲಿ, ಮೊದಲಾದವೆಂಬುವದರಿಂದ ನಮ್ಮಾಳ್ವಾರವರ ತಿರುವಾಯ್‌ಮೊಳಿಯೂ ಹೇಳಲ್ಪಟ್ಟಿತು, **ಶೊಲ್ಲುಮ್**-ಹೇಳುವ

ಯಾದು. ಇನ್ನ ಪರದೇವತಾಪಾರಮಾರ್ಥ್ಯತ್ತೈ ತೃತ್ತಿರುಮಂತ್ರತ್ತಿಲೇ ಕಣ್ಡು, ತದೀಯಪರ್ಯಂತವಾಕ ದೇವತಾನ್ತರತ್ಯಾಗವುಮ್, ತದೀಯ ಪರ್ಯನ್ತವಾಗ ಭಗವಚ್ಛೇಷತ್ವವುಮ್, ಪ್ರತಿಷ್ಠಿತವಾನ ಪಡಿಯೈ,

---

ಅನನ್ಯಶರಣತ್ವಾವಸ್ಥೈ ಕಿಡೈಯಾದು – ಶ್ರೀಮನ್ನಾರಾಯಣನಲ್ಲದೆ ಬೇರೆ ಗತಿಯು ಈ ಚೇತನನಿಗಿಲ್ಲವೆಂಬ ಭಾವವು ಉಂಟಾಗುವದಿಲ್ಲವು. **ಈ ಉದಾಹರಿ**ಸಿರುವ ಪಾಶುರಪ್ರಮಾಣಗಳಲ್ಲಿ ಉಪಪಾದಿತವಾಗಿರುವ ಹಾಗೆ ಶ್ರೀಹರಿಯೇ ಪರ ದೇವತೆಯು, ಇನ್ಯಾರೂ ಅಲ್ಲವೆಂಬ ಜ್ಞಾನವುಂಟಾಗದೆ, ತಾನು ಅನನ್ಯಶರಣನು ಎಂಬ ಭಾವವು ಉಂಟಾಗಲಾರದು ಎಂಬ ತಾತ್ಪರ್ಯವು ಈ ಪ್ರಮಾಣಗಳನ್ನು ಉದಾಹರಿಸಿ**ಉ**ಪಪಾದಿಸಿರುವ ವಾಕ್ಯಕ್ಕೆ ಸಂಗತಿ ಹೇಗೆಂದರೆ:—ಹಿಂದೆ ಚರಮ ಶ್ಲೋಕದಲ್ಲಿ **ಅಹಂ ವಾಂ** ಎಂಬ ಪದಗಳಿಂದ ಪರತತ್ವವು ಸೂಚಿತವಾಯಿತು ಎಂದು ಹೇಳಿದರು, ಶ್ರೀವಿಷ್ಣುವೇ ರಾಮ ಕೃಷ್ಣಾದ್ಯವತಾರಗಳನ್ನು ಎತ್ತಿರುವದ ರಿಂದ ಅವರುಗಳೇ ಪರತತ್ವವೆಂದು ಋಷಿಗಳು ಕೊಂಡಾಡಿರುತ್ತಾರೆ. ಶ್ರೀರಾಮ ನನ್ನು ಋಷಿಗಳು (೧) **"ತಮುಸಃ ಪರಮೋಧಾತಾ ಶಂಖಚಕ್ರಗದಾಧರಃ"** ಎಂದೂ ಶ್ರೀ ಕೃಷ್ಣನನ್ನು (೨) **"ಕೃಷ್ಣ ಏವಹಿ ಲೋಕಾನಾಮುತ್ಪತ್ತಿರಪಿ ಚಾವ್ಯಯಃ"** ಎಂದೂ ಸ್ತೋತ್ರಮಾಡಿರುತ್ತಾರೆ. ಆದುದರಿಂದ ಇವುಗಳನ್ನು ನು ಸರಿಸಿ ಆಳ್ವಾರುಗಳೂ ಸಹ ತಮ್ಮ ಪಾಶುರಗಳಲ್ಲಿ ಹಾಗೆಯೇ ಕೊಂಡಾಡಿರುತ್ತಾ ರೆಂಬ ಭಾವವು.

ಇನ್ನ ಪರದೇವತಾಪಾರಮಾರ್ಥ್ಯತ್ತೈ – ಈ ಮೇಲೆ ನಾವು ಉಪಪಾ ದಿಸಿದ ಪರದೇವತಾ ಪಾರಮಾರ್ಥ್ಯವನ್ನು ಎಂದರೆ ಶ್ರೀಮನ್ನಾರಾಯಣನೇ ಪರ ತತ್ವವು ಇನ್ಯಾರೂ ಅಲ್ಲವು ಎಂಬ ವಿಷಯವನ್ನು, **ತಿರುಮನ್ತ್ರತ್ತಿಲೆ** – ಶ್ರೀಮದ ಷ್ಟಾಕ್ಷರ ಮನ್ತ್ರದಲ್ಲಿ **ಕಣ್ಡು** – ತಿಳಿದವರಾಗಿ, ಇವರಿಗೆ, ಸರ್ವೇಶ್ವರನೇ ಸಾಕ್ಷಾ ತ್ತಾಗಿ ವೇಷಧಾರಿಯಾಗಿ ಬಂದು ಅಷ್ಟಾಕ್ಷರ ಮಂತ್ರೋಪದೇಶವನ್ನು ಮಾಡಿದುದ ರಿಂದ, ಪರದೇವತಾಪಾರಮಾರ್ಥ್ಯ ವಿಷಯದಲ್ಲಿ ಅವರ ಸೂಕ್ತಿಯು ಮುಖ್ಯ ಪ್ರಮಾ ಣವೂ ಅಲ್ಲದೆ, ಅದು ಸರ್ವೇಶ್ವರನ ಉಪದೇಶದಿಂದಲೇ ಅಷ್ಟಾಕ್ಷರದಲ್ಲಿಯೇ ವ್ಯಕ್ತ ವೆಂಬ ಭಾವವು. **ತದೀಯಪರ್ಯನ್ತವಾಗ ದೇವತಾನ್ತರತ್ಯಾಗವುಮ್**– ದೇವತಾನ್ತರಗಳಾದ ಬ್ರಹ್ಮರುದ್ರಾದಿಗಳ ತ್ಯಾಗವನ್ನು, ಆ ಬ್ರಹ್ಮರುದ್ರಾದಿಗಳೇ ಪರತತ್ವವೆಂದು ಆರಾಧಿಸುವರ ಸಂಬಂಧಪರ್ಯನ್ತವಾಗಿ ತ್ಯಾಗವನ್ನೂ ಸಹ ಮತ್ತೂ

---

(೧) ರಾಮಾ. ಯುದ್ಧ. ೧೧೪ ೧೫ (೨) ಭಾರ

"ಮುಂ‍ಱು ಮೋರ್ ದೇಯ್‌ವ ಮುಳದೆನ್ರಿರುಪ್ಪಾರೋಡೊಂ‍ಱಿಲೆ ನುಂ‍ಱ್ರದು ಮುನ್ನಡಿಯಾರ್ಕ್ಕಡಿಮೈ" ಎಜ'ರಪಾಟ್ಟಿಲೆ ಸರ್ವೇಶ್ವರ ಪಕ್ಕಲಿಲೆ ಸರ್ವಾರ್ಥಗ್ರಹಣವ್ಪಣ್ಣಿನವಾಳ್‌ವಾರರುಳಿಚ್ಚೆಯ್‌ದಾರ್.

ತದೀಯ ಪರ್ಯನ್ತವಾಗ ಭಗವಚ್ಛೇಷತ್ವಮುಮ್ – ತಾವು ಶ್ರಿಯಃಪತಿಗೇನೇ ಶೇಷಭೂತರೆಂಬುವದನ್ನೂ, ಮತ್ತು ಆ ಶೇಷತ್ವವು ಆತನನ್ನು ಆರಾಧಿಸುವ ಭಾಗವತೋತ್ತಮರ ಪರ್ಯನ್ತವಾಗಿ ಎಂಬುವದನ್ನೂ, ಶ್ರೀತಿರುಮಂಗೈಯಾಳ್ವಾರವರು ಈ ಮುಂದೆ ಉದಾಹರಿಸುವ ಪಾಶುರದಲ್ಲಿ,ಈ ಎರಡಂಶವನ್ನೂ ಉಪಪಾದಿಸಿರುತ್ತಾರೆಂಬ ಭಾವವು:—(೧)ಬ್ರಹ್ಮರುದ್ರಾದಿ ದೇವತಾನ್ತರ ಭಜನವುನಮಗೆ ಸ್ವರೂಪವಲ್ಲವು, ಅದು ತ್ಯಾಜ್ಯವು, ಮತ್ತು ಅವರುಗಳನ್ನು ಆರಾಧಿಸುವವರ ಸಂಬಂಧವೂ ಕೂಡ ಪ್ರಪನ್ನನಿಗೆ ತ್ಯಾಜ್ಯವು. (೨) ಶ್ರೀಮನ್ನಾರಾಯಣನೇ ಪರತತ್ವವಾದುದರಿಂದ, ಆತನಿಗೂ ನಾವು ಶೇಷಭೂತರು, ಮತ್ತು ಅತನನ್ನಾರಾಧಿಸುವ ಪ್ರಪನ್ನರಾದ ಭಾಗವತೋತ್ತಮರಿಗೂ ಶೇಷಭೂತರು. ಹೀಗೆ ಈ ಎರಡಭಿಪ್ರಾಯವೂ, **ಪ್ರತಿಷ್ಠಿತವಾನಪಡಿಯೇ** – ಆ ಅಷ್ಟಾಕ್ಷರ ಮಂತ್ರಾರ್ಥಾನುಸಂಧಾನದಿಂದ, ಈ ಅಭಿಪ್ರಾಯಗಳು ಪ್ರತಿಷ್ಠಿತವಾಗುತ್ತವೆಂಬುದನ್ನು **"ಮುಂ‍ಱು ಮೋರ್ ದೇವ ಮುಮ್"** ಎಂಬ (ಪೆರು. ತಿ. ಎ. ೧೦. ೩) **ಪಾಟ್ಟಿಲೆ** – ಪಾಶುರದಲ್ಲಿ, **ಸರ್ವೇಶ್ವರನ್ ಪಕ್ಕಲಿಲೇ** – ಸರ್ವೇಶ್ವರನ ಮೂಲಕವಾಗಿ ಎಂದರೆ ಆತನ ಕೃಪಾಪ್ರಭಾವದಿಂದ. **ಸರ್ವಾರ್ಥಗ್ರಹಣಂ ಪಣ್ಣಿನ – "ಸರ್ವಂ ಅಷ್ಟಾಕ್ಷರಾಂತಸ್ಥಂ"** ಸಮಸ್ತಾಭಿಪ್ರಾಯಗಳೂ ಅಷ್ಟಾಕ್ಷರಿಯಲ್ಲಿ ಅಡಗಿವೆ" ಎಂಬ ಪ್ರಮಾಣಾನುಸಾರ, ಸಮಸ್ತ ಅಭಿಪ್ರಾಯಗಳನ್ನೂ ಉಪದೇಶರೀತಿಯಲ್ಲಿ ಸ್ವೀಕರಿಸಿದ; (ಇಲ್ಲಿ **ಸರ್ವಾರ್ಥಗ್ರಹಣಂ ಪಣ್ಣಿನ** ಎಂಬ ಶಬ್ದಾರ್ಥ ಸ್ವಾರಸ್ಯದಿಂದ ಇವರು ಬಹುದ್ರವ್ಯವನ್ನು ಅವೈಷ್ಣವರಿಂದ ಸ್ವೀಕರಿಸಿ, ವೈಷ್ಣವ ದೇವಾಲಯಗಳಿಗೂ, ಮುಖ್ಯ ಶ್ರೀರಂಗನಾಥನ ದೇವಾಲಯ ಗೋಪುರಾದಿಗಳ ಜೀರ್ಣೋದ್ಧಾರ ಮಾಡಿದುದೂ ಸ್ಮೃತಿಪಥಕ್ಕೆ ತೋರಿಬರುತ್ತದೆ.) **ಆಳ್‌ವಾರ್ ಅರುಳಿಚ್ಚೆಯ್‌ದಾರ್** – ತಿರುಮಂಗೈಯಾಳ್ವಾರವರು ಕೃಪಯಾ ಅನುಗ್ರಹಿಸಿರುತ್ತಾರೆ. ಈ ಆಳ್ವಾರವರು ಸರ್ವೇಶ್ವರನಿಂದ ಸಾಕ್ಷಾತ್ತಾಗಿ ತಿರುಮನ್ತ್ರೋಪದೇಶವನ್ನು ಹೊಂದಿದ ಇತಿಹಾಸವು ಗುರುಪರಂಪರಾಸಾರದ ಈನೇ ಪುಟದಲ್ಲಿ ಉಪಪಾದಿತವಾಗಿರುತ್ತದೆ. ಈ ಅಮೋಘಪಾಶುರವು ಯಾವುದೆಂದರೆ:—

ಮುಂ‍ಱುಮೋರ್ ದೈವ ಮುಳದು ಎನ್ರಿರಪ್ಪಾರೋಡುಂ
ಉಂ‍ಱ್ರಿಲೇನುಂ‍ಱ್ರದು ಮುನ್ನಡಿಯಾರ್ಕ್ಕಡಿಮೈ

ಇವರ್ "ಪಾರುರುವಿಲ್ ನೀರೆರಿಕಾಲ್" ಎಜ್ಞರಪಾಟ್ಟಿಲೆ ಪರಿಶೇಷಕ್ರಮುತ್ತಾಲೆ: ವಿವಾದ ವಿಷಯುರಾನ ಮೂವರೈ ನಿರುತ್ತಿ ಅವರ್‌ಗಳ್

ಮುನ್ರಿಲ್ಲಾ ಪೇಶಿಲುಮ್ ನಿನ್ತಿರುವೆಟ್ಟೆಳುತ್ತುಮ್
ಕನ್ರುನಾನ್ಮಣ್ಣಪುರುತ್ತುರೆಯುಮ್ಮಾನೆ ॥

ಇದರರ್ಥವು:— **ಕಣ್ಣಪುರುತ್ತುರೆಯುಮ್ಮಾನೇ**-ಓ ತಿರುಕ್ಕಣಪುರದಲ್ಲಿ ನಿತ್ಯವಾಗಿ ವಾಸಮಾಡುವ ಸ್ವಾಮಿಯೇ, **ನಾನ್**-ನಿನ್ನ ಕೃಪೆಗೆ ಪಾತ್ರನಾದ ನಾನು **ನಿನ್ ತಿರುವೆಟ್ಟೆಳುತ್ತುಮ್** - ನಿನ್ನನ್ನು ಪ್ರತಿಪಾದಿಸುವ ಅಷ್ಟಾಕ್ಷರ ಮಂತ್ರವನ್ನು, **ಕತ್ತು** - ನಿನ್ನ ಉಪದೇಶಮೂಲಕ ಅಭ್ಯಾಸಮಾಡಿ, **ಮತ್ತೆಲ್ಲಾ ಪೇಶಿಲುಮ್** - ಅರ್ಥಪಞ್ಚಕ ಮೊದಲಾದ ಮಿಕ್ಕ ಸಕಲಾರ್ಥಗಳೂ ಆ ಅಷ್ಟಾಕ್ಷರಿಯಲ್ಲಿ ಹೇಳಲ್ಪಟ್ಟಿದ್ದರೂ, **ಮುನ್ರುನೋರ್ ದೇಯ್ವಮುಳದೆನ್ರಿರುಪ್ಪಾರೋಡು** - ನೀನಲ್ಲದೆ ಬೇರೆ ಒಂದು ದೈವಮುಂಟೆಂದು ಹೇಳುವರೊಂದಿಗೆ, **ಒತ್ತಿಲೇ** - ಸಂಬಂಧವನ್ನು ಹೊಂದಲಿಲ್ಲವು, **ಉನ್ರದುಮ್**-ನಾನು ಅಭಿನಿವೇಶವನ್ನು ಹೊಂದಿದುದೂ, **ಉನ್ನಡಿಯಾರ್ಕ್ಕಡಿಮೈ** - ನಿನ್ನ ದಾಸರಿಗೆ ದಾಸನಾಗಿರುವದು. ತಿರುಮನ್ತ್ರದಲ್ಲಿ "**ಸರ್ವಂಅಷ್ಟಾಕ್ಷರಸ್ಥಂ**" ಎಂದು ಅರ್ಥಪಂಚಕಾದಿ ಸಕಲಾಭಿಪ್ರಾಯಗಳಿದ್ದರೂ, ತಾವು ಸರ್ವೇಶ್ವರನಿಂದ ಹೊಂದಿದ ಉಪದೇಶದಲ್ಲಿ ಮುಖ್ಯವಾಗಿ ಗ್ರಹಿಸಿದುದು, ತದೀಯಪರ್ಯನ್ತ ದೇವತಾನ್ತರ ತ್ಯಾಗವೂ, ಮತ್ತು ತದೀಯ ಪರ್ಯನ್ತ ಭಗವಚ್ಛೇಷತ್ವವೂ, ಇವೆರಡೂ ತಮ್ಮಲ್ಲಿ ಸುಪ್ರತಿಷ್ಠಿತವಾಗಿವೆ. ಇದು ಹೇಗೆಂದರೆ. ತಾನು ಅಕಾರವಾಚ್ಯನಾದ ವಿಷ್ಣುವಿಗೇ ಶೇಷಭೂತನೆಂದರೆ, ಇತರರಿಗಲ್ಲವು ಎಂಬದಾಗಿ ವ್ಯವಚ್ಛೇದರೂಪದಲ್ಲಿ ತೋರಿಬರುತ್ತದೆ. ಆದುದರಿಂದ ದೇವತಾನ್ತರ ಪರಿತ್ಯಾಗವು ತೋರಿಬರುತ್ತದೆ. ಅದು ತದೀಯಪರ್ಯನ್ತವೆಂದೂ ತಿಳಿಯಬಹುದು, ಸಕಲಕೈಙ್ಕರ್ಯವೂ ಶ್ರೀಮನ್ನಾರಾಯಣನಿಗೇ ಎಂದು ಹೇಳಿದನಂತರ, ತದೀಯರಾದ ಭಾಗವತರು ಧರ್ಮಿಯಾದ ನಾರಾಯಣನ, ವಿಶೇಷಣವು. ಆದುದರಿಂದ ಧರ್ಮಿಗೆ ಮಾಡಿದುದು ವಿಶೇಷಣಗಳಾದ ಭಾಗವತರುಗಳವರೆಗೂ ಸಂಬರಿಧಿಸುತ್ತದೆ ಎಂಬ ಭಾವವು.

ಇವರ್ - ಈ ಮಹಾಜ್ಞಾನಿಗಳಾದ ತಿರುಮಂಗೈಯಾಳ್ವಾರವರು, "**ಪಾರುರುವಿಲ್ನೀರೆರಿಕಾಲ್**" ಎಂದು ತಿರುನೆಡುಂದಾಂಡಕಂ ಎಂಬುವದರ ಎರಡನೇ ಪಾಶುರದಲ್ಲಿ, **ಪರಿಶೇಷಕ್ರಮುತ್ತಾಲೆ** - ಬ್ರಹ್ಮ ವಿಷ್ಣು ರುದ್ರರಾದ ಮೂವರಲ್ಲಿ ಇವರಲ್ಲವು, ಇವರೂ ಅಲ್ಲವು ಆದುದರಿಂದ ಮಿಕ್ಕವರೇ ಪರತತ್ವವೆಂದು ಹೇಳುವ ಕ್ರಮದಿಂದ,**ವಿವಾದ ವಿಷಯುರಾನಮೂವರೈ ನಿರುತ್ತಿ** - ಚತುರ್ಮುಖನು ಪರ

ಮೂವರಿಲುಮ್ ಪ್ರಮಾಣಾನುಸಂಧಾನತ್ತಾಲೆ ಯಿರುವರೈ ಕಳಿತ್ತು ಪರಿಶೇಷಿತ್ತ ಪರಂಜ್ಯೋತಿಸ್ಸಾನ ಒರುವನೈ 'ಮುಗಿಲುರುವಮ್ ಎಮ್ಮ ಡಿಗಳುರುವ" ಮೆನ್ರುನಿ ಷ್ಕರ್ಷಿತ್ತಾರ್,

---

ತತ್ವವೇ, ರುದ್ರನು ಪರತತ್ವವೇ ಇಲ್ಲವೇ ವಿಷ್ಣುವೇ ಪರತತ್ವವೇ ಎಂಬ ವಿವಾದಕ್ಕೆ ವಿಷಯರಾದ ಈ **ಮೂವರನ್ನೂ** ನಿಲ್ಲಿಸಿ, **ಅವರ್ಗಳ್ ಮೂವರಿಲುಮ್**-ಆ ಮೂರು ಜನರಲ್ಲೂ, **ಪ್ರಮಾಣಾನುಸಂಧಾನತ್ತಾಲೆ**-ಶಾಸ್ತ್ರಪ್ರಮಾಣದ ಪರ್ಯಾಲೋಚನೆಯಿಂದ, **ಇರುವರೈ ಕಳಿತ್ತು**-ಬ್ರಹ್ಮರುದ್ರರಿಬ್ಬರನ್ನೂ ತ್ಯಜಿಸಿ, **ಪರಿಶೇಷಿತ್ತ**-ಮಿಕ್ಕ, **ಪರಂಜ್ಯೋತಿಸ್ಸಾನ ಒರುವನೈ**-(೧) **"ನಾರಾಯಣ ಪರೋಜ್ಯೋತಿಃ"** ಎಂದೂ, (೨) **"ಜ್ಯೋತಿಷಾಂ ಜ್ಯೋತಿಃ'** ಎಂದೂ **"ತಸ್ಯಭಾಸಾ ಸರ್ವಮಿದಂ ವಿಭಾತಿ"** ಎಂದೂ, ಹೇಳಿರುವದರಿಂದ ಸರ್ವೋತ್ಕೃಷ್ಟ ಜ್ಯೋತಿಸ್ಸಾದ ಒಬ್ಬನನ್ನು ಎಂದರೆ ವಿಷ್ಣುವನ್ನು, **"ಮುಗಿಲುರವಮ್** - ಕಪ್ಪಾದ ಮೇಘದ ಕಾಂತಿಯುಳ್ಳ ರೂಪವೇ, **ಎಮ್ಮಡಿಗಳುರುವಮ್** - ನಮ್ಮ ಸ್ವಾಮಿಯ ದಿವ್ಯರೂಪವು" **ಎನ್ರು ನಿಷ್ಕರ್ಷಿತ್ತಾರ್** - ಎಂಬದಾಗಿ ನಿರ್ಣಯಿಸಿದರು. ಈ ಪಾಶುರದಲ್ಲಿ ಬ್ರಹ್ಮ ವಿಷ್ಣು ರುದ್ರರಾದ ಮೂವರಲ್ಲಿ ಪರತತ್ವವು ಯಾರು ಎಂಬ ವಿವಾದವನ್ನು ಮಾಡುವವರಾಗಿ ಅವರುಗಳ ರೂಪವು ಶಾಸ್ತ್ರ ಪ್ರಮಾಣದಲ್ಲಿ ಹೇಳಿರುವ ರೂಪವೇ ಎಂದು ವಿಮರ್ಶಿಸಿ, ಬ್ರಹ್ಮನ ರೂಪವು **ಸುವರ್ಣ**ವಾಗಿಯೂ, ರುದ್ರನ ರೂಪವು ಕೆಂಪಗಿರುವ ಅಗ್ನಿಯ ರೂಪವಾಗಿಯೂ ಇರುವದರಿಂದ, ಇವೆರಡೂ ಪುರುಷಸೂಕ್ತದ **"ಸಹಸ್ರ ಶೀರ್ಷ್ಣಂದೇವಂ** ಎಂದು ಆರಂಭಿಸಿ, **ಸಬ್ರಹ್ಮ ಸ ಶಿವಸ್ಸೇನ್ದ್ರಸ್ಸೋಕ್ಷರಃ ಪರಮಸ್ವರಾಟ್"** ಎಂದು ಪೂರೈಸಿ ಹೇಳಿರುವ ಪ್ರಮಾಣಕ್ಕೆ ವಿರುದ್ಧವಾದುದರಿಂದ, ಚತುರ್ಮುಖ ಬ್ರಹ್ಮರುದ್ರರು ಪರತತ್ವವಲ್ಲವೆಂದೂ, ಅಲ್ಲಿ **"ನೀಲತೋಯದ ಮಧ್ಯಸ್ಥವಿದ್ಯುಲ್ಲೇಖೇವ ಭಾಸ್ವರಾ"** ಎಂದು ಹೇಳಿರುವಹಾಗೆ ಕಾಲಮೇಘದ ಮಧ್ಯದಲ್ಲಿರುವ ಮಿಂಚಿನ ಹಾಗೆ ಬಹು ಪ್ರಕಾಶವಾಗಿರುವದು ಆ ಹೃದಯ ಕಮಲದಲ್ಲಿರುವ ಅಗ್ನಿಶಿಖೆಯು, ಅದರ ಮಧ್ಯದಲ್ಲಿರುವ ಪರಮಾತ್ಮನೇ ಬ್ರಹ್ಮ, ಶಿವ ಇಂದ್ರಾದಿ ಸರ್ವ ಶರೀರಕನಾಗಿ ಸರ್ವದೇವತಾ ವಾಚ್ಯನಾಗಿರುವೆನು, ಅವನೇ ಶ್ರುತಿಗಳಲ್ಲಿ ಶಂಭು, ಶಿವ, ಅಕ್ಷರ ಪರಂಜ್ಯೋತಿಸ್ ಮೊದಲಾದ ಶಬ್ದಗಳಿಂದ ಹೇಳಲ್ಪಡುವನು, ಶ್ರೀಮನ್ನಾರಾಯಣನೇ ಎಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ಈ ವಾಕ್ಯದಲ್ಲಿ ಸ್ವಾಮಿ ನಿಗಮಾಂತ ದೇಶಿಕರವರು **ಪರಂಜ್ಯೋತಿಸ್ಸಾನ ಒರುವನೈ** ಎಂದೂ, ಆತನು ನೀಲಮೇಘಶ್ಯಾಮನಾಗಿರುವನು, ಆತನೇ

---

(೧) ಪುರುಷಸೂಕ್ತ. (೨) ಗೀತೆ.

ಪರತತ್ವವೆಂದು ಹೇಳುವದಕ್ಕಾಗಿ "**ಮುಗಿಲುರುವಮ್**" ಎಂದೂ ಪ್ರಯೋಗಿಸಿರುತ್ತಾರೆ. ಆ ಪಾಶುರವ್ಯಾವುದೆಂದರೆ:—

ಪಾರುರವಿಲ್ ನೀರೆರಿಕಾಲ್ ವಿಶುಮ್ಬುವಾಗಿಪ್ಪಲವೇರು ಶಮಯಮುವಾಯ್ ಪ್ಪರನ್ದು ನಿನ್ರ, । ಏರುರವಿಲ್ ಮೂವರುವಮೇ ಯೆನ ನಿನ್ರ ವಿನ್ಮೈಯವರ್ ತಮ್ ತಿರುವುರುವುಮ್ ವೇರೆಣ್ಣಿನ್ಮೊಯ್ದು, ॥ ಓರುರುವುನ್ಮೊನ್ರುರುವ ಮೊನ್ರು ಶೆನ್ತೀ ಯೊನ್ರುವಾಕಡಲುರುವ ಮೊತ್ತು ನಿನ್ರ । ಮೂವುರುವುಂ ಕಂಡ ಪೋದೊನ್ನಾಮ್ ಶೋತಿ ಮುಗಿಲುರುವನುಮ್ಮಡಿಗಳುರವನ್ತಾನೇ ॥

ಇದರರ್ಥವು:— **ಉರುವಿಲ್** - ಅಣ್ಡಕಾರಣಗಳಾದ ಪದಾರ್ಥಗಳಲ್ಲಿ, **ಪಾರ್** - ಪೃಥ್ವಿಯು, **ನೀರ್** – ಅಪ್ಪು, **ಎರಿ** – ತೇಜಸ್ಸು, **ಕಾಲ್** – ವಾಯುವು, **ವಿಶುಂಬುಮ್** - ಆಕಾಶವೂ, ಆಗಿ, ತಾನೇ ಉಪಾದಾನಕಾರಣವಾಗಿ **ಈ** ಪಂಚಭೂತಗಳನ್ನು ಸೃಷ್ಟಿಸಿ, ಎಂದರೆ ಸಮಷ್ಟಿಸೃಷ್ಟಿಯನ್ನುಂಟುಮಾಡಿ ಎಂಬ ಭಾವವು, **ಪಲವೇರು**-ಬಹುವಿಧಭೇದಗಳಿಂದ ಕೂಡಿ, **ಶಮಯಮುವಾಯ್**-ಸಮಯಗಳಾಗಿ, ಎಂದರೆ ವ್ಯವಸ್ಥೆಯನ್ನು ಹೊಂದಿದವುಗಳಾಗಿ, **ಇದರಿಂದ** ದೇವ ಮನುಷ್ಯಾದಿ ವ್ಯಷ್ಟಿಸೃಷ್ಟಿಕ್ರಮವೂ ಹೇಳಲ್ಪಟ್ಟಿತು, **ಪರನ್ದ ನಿನ್ರ** - ಅವುಗಳಿಲ್ಲವನ್ನೂ ವ್ಯಾಪಿಸಿರುವದು, **ಆಮ್ ಶೋತಿ ಒನ್ರು** – ಸಮೀಚೀನವಾದ ಪರಂಜ್ಯೋತಿಸ್ಸೊಂದೇ, ಬ್ರಹ್ಮರುದ್ರ ವಿಷ್ಣು **ಈ** ಮೂರರಲ್ಲಿ ವಿಷ್ಣುವಾದ ಪರಂಜ್ಯೋತಿಸ್ಸೊಂದೇ ಜಗತ್ಕಾರಣವಾದ ಪರತತ್ವವೇ ವಿನಾ ಮಿಕ್ಕ ಇಬ್ಬರೂ ಅಲ್ಲವು ಎಂಬ ಭಾವವು. ಆ ಪರತತ್ವವು ಯಾವುದೆಂದರೆ ಹೇಳುತ್ತಾರೆ:—**ಮುಗಿಲುರುವುಮ್**-ಮೇಘಸದೃಶವಾದ ರೂಪವೇ, **ಎಮ್ಮಡಿಗಳುರುವಮ್** - ನಮ್ಮ ಸ್ವಾಮಿಯಾದ ಪರತತ್ವದ ದಿವ್ಯರೂಪವು. ಹೀಗೆ ಪರಿಶೇಷಕ್ರಮದಿಂದ ನೀಲಮೇಘಶ್ಯಾಮನಾದ ಶ್ರೀಮನ್ನಾರಾಯಣನೇ ಪರತತ್ವವು. ಇದು ಏತಕ್ಕೆಂದರೆ ಹೇಳುತ್ತಾರೆ:—**ಏರುರವಿಲ್** - ಅತಿ ಸುಂದರವಾದ ರೂಪದಲ್ಲಿ, **ಮೂವರು ಮೇ ಎನನಿನ್ರ**-ಅಗ್ನೀಂದ್ರಾದಿ ಸಾಮಾನ್ಯದೇವತೆಗಳನ್ನೆಲ್ಲಾ ತ್ಯಜಿಸಿ, ಮೂವರೇ ಪ್ರಧಾನರೆಂದಿರುವ, **ಇನ್ಮೈಯವರ್ ತಮ್** - ದೇವತೆಗಳಾದ ಬ್ರಹ್ಮವಿಷ್ಣುರುದ್ರರ, **ತಿರುವುರುವುಮ್** – ಶ್ಲಾಘ್ಯಗಳಾದ ರೂಪಗಳನ್ನು **ವೇರೆಣ್ಣಿನ್ಮೊಯ್ದು** – ಪ್ರತ್ಯೇಕ ಪ್ರತ್ಯೇಕವಾಗಿ ಪರ್ಯಾಲೋಚಿಸುವಾಗ **ಓರುರುವುಮ್** - ಒಬ್ಬನಾದ ಚತುರ್ಮುಖನ ರೂಪವು, **ಪೊನ್ರೊರುವು** - ವ್ಯಷ್ಟಿಸೃಷ್ಟಿಗೆ ಮಾತ್ರ ಉಪಯುಕ್ತವಾದ ಸುವರ್ಣರೂಪವು, **ಒನ್ರು ಶೆನ್ತೀ** – ಇನ್ನೊಂದಾದ ರುದ್ರನ ರೂಪವು ಕೆಂಪಗಿರುವ, ಸಂಹಾರಕ್ಕೆ ಉಪಯುಕ್ತವಾದ ಕಾಲಾಗ್ನಿರೂಪವಾದುದು, **ಒನ್ರು**

ಇನ್ದ ರೂಪವಿಶೇಷತ್ತೈ ಉಡೈಯ ಪರಮ ಪುರುಷನೇ ಸರ್ವವೇದ ಪ್ರತಿಪಾದ್ಯವಾನ ಪರತತ್ವ ಮೆನ್ನು ಮಿಡತ್ತೈ ಸರ್ವವೇದ ಸಾರಭೂತ ಪ್ರಣವ ಪ್ರತಿಪಾದ್ಯತ್ತೈಯಾಲೆ "ಮೂಲವಾಗಿಯ ಒತ್ತೈ ಯೆಳುತ್ತೈ ಮೂನ್ರು ಮಾತ್ತಿರೈ ಯುಳ್ಳಿಳ ವಾಜ್ಗ ವೇಲ್ವೈ ವಣ್ಣನ್ಗೈ ಮೇವುತಿರಾ ಕಿಲ್" ಎನ್ರುಪೆರಿಯಾಳ್ವಾರರುಳಿಚ್ಚೆಯ್ದಾರ್.

ಮಾಕಡಲುರುವಮ್ – ಇನ್ನೊಂದಾದ ವಿಷ್ಣುರೂಪವು, ಶೈತ್ಯಗಾಂಭೀರ್ಯಾದಿ ರಕ್ಷಣೋಪಯುಕ್ತಸ್ವಭಾವ ಉಳ್ಳ **ಮಹಾ** ಸಮುದ್ರದ ಹಾಗಿರುವದು, ಹೀಗೆ **ಒತ್ತುನಿನ್ರ** – ಹೀಗೆ ಜಗತ್ಸೃಷ್ಟಿರಕ್ಷಣಲಯವ್ಯಾಪಾರಗಳನ್ನು ಮಾಡುತ್ತಿರುವ, **ಮೂವುರುವುಮ್ ಕಂಡಪೋದು** – ಈ ಮೂವರನ್ನೂ ಶಾಸ್ತ್ರಪ್ರಮಾಣ ಮೂಲಕ ಪರಿಶೋಧಿಸಿ ನೋಡುವಾಗ, **ಒನ್ನಾಂ ಶೋದಿ** – ಒಬ್ಬನಾಗಿ ಶ್ರೀ ಮಹಾವಿಷ್ಣುವೆನಿಸುವ ಪರಂಜ್ಯೋತಿಸ್ಸಾದ, **ಮುಗಿಲುರುವಂ** – ನೀಲಮೇಘ ಶ್ಯಾಮನಾಗಿರುವ, ರೂಪವೇ **ಎಮ್ಮಡಿಗಳುರುವನ್ತಾನೇ** – ನಮಗೆ ಸ್ವಾಮಿ ಯಾದವನ ರೂಪವೆಂದು ನಿರ್ಣಯಿಸುತ್ತಾರೆಂಬ ತಾತ್ಪರ್ಯವು.

ಶ್ರೀ ತಿರುಮಂಗೈಯಾಳ್ವಾರವರು **ಸಹಸ್ರಶೀರ್ಷಂದೇವಂ** ಎಂಬ ತೈತ್ತಿರೀಯ ಪ್ರಮಾಣವನ್ನೇ ಮೂಲಮಾಡಿಕ್ಕೊಂಡು ಪರತತ್ವವು ಯಾರೆಂದರೆ, **"ಸಬ್ರಹ್ಮಸಶಿವಸ್ಸೇನ್ದ್ರಸ್ಸೋಕ್ಷರಃ ಪರಮಸ್ಸ್ವರಾಟ್"** ಎಂದು ಸಾಮಾನಾಧಿಕರಣ್ಯದಿಂದ ಹೇಳಲ್ಪಟ್ಟ ನೀಲಮೇಘಶ್ಯಾಮನಾಗಿರುವ ಶ್ರೀಮನ್ನಾರಾಯಣನೇ ಪರತತ್ವವೆಂದು ನಿರ್ಣಯಿಸಿದರು. ಆತನೇ ಶ್ರಿಯಃಪತಿಯು ಎಂದು ಮುಂದೆ ಹೇಳಲ್ಪಡುತ್ತದೆ. ಈ ನೀಲಮೇಘಶ್ಯಾಮನೇ ಸರ್ವವೇದಸಾರಭೂತವಾದ ಪ್ರಣವದ ಅಕಾರದಿಂದ ಹೇಳಿಸಿಕೊಳ್ಳುವನು ಎಂಬುವದಕ್ಕೆ ಪೆರಿಯಾಳ್ವಾರವರ ಪಾಶುರವನ್ನು ಮುಂದೆ ಉದಾಹರಿಸುತ್ತಾರೆ.

ಇನ್ದರೂಪವಿಶೇಷತ್ತೈ – ಈ ನೀಲಮೇಘಶ್ಯಾಮವಾದ ರೂಪವಿಶೇಷವನ್ನು, **ಉಡೈಯ ಪರಮ ಪುರುಷನೇ** – ಹೊಂದಿರುವ ಪರಮಪುರುಷನಾದ ಶ್ರಿಯಃಪತಿಯೇ, **ಪರತತ್ವಮೆನ್ನುಮಿಡತ್ತೈ** – ಪರತತ್ವವೆಂದು ಹೇಳುವ ಸಂದರ್ಭದಲ್ಲಿ, **ಸರ್ವವೇದಸಾರಭೂತಪ್ರಣವಪ್ರತಿಪಾದ್ಯತ್ತೈಯಾಲೆ** – ಸಮಸ್ತ ವೇದಗಳಲ್ಲೂ ಸಾರಭೂತವಾದ **ಓಮ್** ಎಂಬ ಪ್ರಣವದಿಂದ ಆ ಪರಮಪುರುಷನು ಪ್ರತಿಪಾದಿಸಲ್ಪಟ್ಟಿರುವದರಿಂದ, **ಮೂಲಮಾಗಿಯು** – **"ಯದ್ವೈದಾದೌ ಸ್ವರ್ಯ ಪ್ರೋಕ್ತಃ"** ಎಂದು ಹೇಳಿರುವ ಹಾಗೆ ಎಲ್ಲಾ ವೇದವಾಕ್ಯಗಳ ಆದಿಯಲ್ಲೂ ಪಠನೀಯವಾದ, **ಒತ್ತೈ ಯೆಳುತ್ತೈ** – "ಗಿರಾಮುಸ್ಯೈಕಮಕ್ಷರಂ " ವಾಕ್ಯಗಳಲ್ಲಿ ನಾನು ಓಮ್ ಎಂಬ ಒಂದಕ್ಷರವಾಗಿದ್ದೇನೆಂದು ಹೇಳಿರುವ ಹಾಗೆ, ಪ್ರಣವ

ವಾದ ಒಂದಕ್ಷರವನ್ನು, **ಮೂನ್ರುಮಾತ್ತಿರೈಯುಳ್ಳವಾಜ್ಗ**-"**ಯಃಪುನರೇತಂತ್ರಿಮಾತ್ರೇಣ ಓಮಿತ್ಯೇನೇನ ಪರಮಪುರುಷಮಭಿಧ್ಯಾಯೀತ**" ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಮೂರು ಮಾತ್ರೆಯುಳ್ಳದ್ದಾಗಿ ಮಾಡಿ, **ಮೇಲ್ಕೈವಣ್ಣನೈ** - ಮಹಾಸಮುದ್ರದ ಹಾಗೆ ನೀಲವಾದ ವರ್ಣವುಳ್ಳವನನ್ನು. **ಮೇವುದರಾಕಿಲ್** - ಪ್ರಣವೋಚ್ಚಾರಣ ಮೂಲಕ ಧ್ಯಾನಿಸಿದರೆ, **ಎನ್ರು** - ಎಂಬದಾಗಿ ತಮ್ಮ ಪಾಶುರದಲ್ಲಿ, ಪೆರಿಯಾಳ್ವಾರವರು, **ಅರುಳಿಚ್ಚೆಯ್ದಾರ್** - ಅಪ್ಪಣೆಕೊಡಿಸಿರುತ್ತಾರೆ. ಹೀಗೆ ನೀಲಮೇಘಶ್ಯಾಮನಾದವನೇ ಪರಮಪುರುಷನಾಗಿ ಪರತತ್ವವೆಂದು ಶ್ರುತಿಪ್ರತಿಪಾದ್ಯನಾಗಿರುವವನೆಂಬದಾಗಿ ತಿಳಿಸಲು, "**ಗುರುಮುಖಮನಧೀತ್ಯ**" ಗುರುವಿನ ಉಪದೇಶವಿಲ್ಲದೆ, ಶ್ರಿಯಃಪತಿಯನಿರ್ಹೇತುಕ ಕೃಪೆಯಿಂದ ಸರ್ವಜ್ಞತೆಯನ್ನು ಹೊಂದಿದ ಪೆರಿಯಾಳ್ವಾರವರ ಪಾಶುರವನ್ನು ಉದಾಹರಿಸುತ್ತಾರೆ. ಆ ಪಾಶುರದಲ್ಲಿ ಇವರು "**ಯಃಪುನರೇತಂ ತ್ರಿಮಾತ್ರೇಣ ಓಮಿತ್ಯೇನೇನ ಪರಮಪುರುಷಮಭಿಧ್ಯಾಯೀತ**" ಎಂಬ ಶ್ರುತ್ಯರ್ಥವನ್ನು ಉಪಬ್ರಹ್ಮಣಮಾಡಿರುತ್ತಾರೆ. ಸರ್ವವೇದಗಳಿಗೂ ಸಾರಭೂತವಾದುದು ಪ್ರಣವವು, ಶ್ರುತಿಗಳಲ್ಲಿ ಅನೇಕಕಡೆ ಕೊಂಡಾಡಲ್ಪಟ್ಟಿರುತ್ತದೆ. ತೈತ್ತಿರೀಯದಲ್ಲಿ "**ಓಮಿತಿ ಬ್ರಹ್ಮ**" ಎಂದು ಆರಂಭಿಸಿ ಶ್ಲಾಘಿಸಲ್ಪಟ್ಟಿರುತ್ತದೆ, ಪ್ರತಿಯೊಂದು ಶ್ರುತಿವಾಕ್ಯದ ಅಧ್ಯಯನಾರಂಭದಲ್ಲೂ ಈ ಪ್ರಣವವು ಉಚ್ಚರಿಸಲ್ಪಟ್ಟಿರುತ್ತದೆ.

"ಓಂಕಾರಪ್ರಭವಾ ವೇದಾಃ ಓಂಕಾರಪ್ರಭವಾಃ ಸ್ವರಾಃ।
ಓಂಕಾರಪ್ರಭವಂ ಸರ್ವಂ ಜಗತ್ಸ್ಥಾವರ ಜಙ್ಗಮಂ॥"

ಎಂದು ಹೇಳಿರುವದರಿಂದ ಈ ಪ್ರಣವವು ಸಕಲವೇದ ಸಾರಸಂಗ್ರಹವು. ಋಗ್ಯಜುಸ್ಸಾಮವೇದಗಳನ್ನು ಬೋಧಿಸುವ ಅಕಾರ ಉಕಾರ ಮಕಾರಗಳಿಂದ ಯುಕ್ತವಾದುದು. ಅದು ತ್ರಿಮಾತ್ರೆಯುಳ್ಳದು. ಪ್ಲುತವಾಗಿ ಉಚ್ಚರಿಸತಕ್ಕದ್ದು.

ಅಕಾರೋ ವಿಷ್ಣುರಿತ್ಯುಕ್ತೋ ಮಕಾರೋ ಜೀವವಾಚಕಃ।
ತಯೋಸ್ತು ನಿತ್ಯಸಂಬಂಧಃ ಉಕಾರೇಣ ಪ್ರಕೀರ್ತಿತಃ॥

ಎಂಬಿವೇ ಮೊದಲಾದ ಪ್ರಮಾಣಗಳು ಪ್ರಣವದಲ್ಲಿರುವ ಸರ್ವಶೇಷಿಯಾದ ಅಕಾರವಾಚ್ಯನು ಶ್ರೀಮಹಾವಿಷ್ಣುವೆಂದು ಉದ್ಘೋಷಿಸುತ್ತವೆ. ಈತನೇ ಪರಮಪುರುಷನೆಂದೂ, ಜಲಧಿಯೋಪಾದಿಯಲ್ಲಿ ನೀಲವರ್ಣನೆಂದೂ ತಿರುಮಂಗೈಳ್ವಾರವರು ತಮ್ಮ "**ಮೂಲಮಾಗಿಯ ಒತ್ತೈಯೆಳುತ್ತೈ**" ಎಂಬ ಪಾಶುರದಲ್ಲಿ ಕೊಂಡಾಡಿರುತ್ತಾರೆ. ಆದುದರಿಂದ ಶ್ರೀಮಹಾವಿಷ್ಣುವೇ ಪರತತ್ವವೆಂಬ ಭಾವವು. ಈ ಪಾಶುರವು ಯಾವುದೆಂದರೆ:—

ಮೇಲೆಳುನ್ಪದೋರ್ ವಾಯುಕ್ಕಳನ್ದ ಮೇಲ್ವಿಡನ್ಗಿನೈಯು

ತೈತ್ತಿರೀಯತ್ತಿಲ್ ಶ್ರೀಯಃ ಪತಿತ್ವ ಚಿಹ್ನತ್ತಾಲೆ ಮಹಾಪುರುಷ ನುಕ್ಕು ವ್ಯಾವೃತ್ತಿಯೋದಿನ ಪಡಿಯೈ ನಿನೈತ್ತು(೧)"ತಿರುಕ್ಕಣ್ಡೇನ್ಪೊ

ಳ್ಕೆಳಪಾಜ್ಞ್ಗ । ಕಾಲುಂ ಕೈಯುಂ ವಿದಿರ್ ವಿದಿರ್ ತ್ತೆರಕ್ಕಣ್ಣುರಕ್ಕಮುದಾ ವರ್ದ ಮುನ್ನಮ್ ॥ ಮೂಲವಾಗಿಯ ವೊನ್ರಾಗ ಎಳುತ್ತೈ ಮೂನ್ರು ಮಾತ್ತಿರೈಯುಳ್ಕೆಳವಾಜ್ಞ್ಗ । ವೇಲ್ವೈವಣ್ಣನೈ ಮೇವುದರಾಗಿಲ್ ವಿಣ್ಣ ಕತ್ತಿನಿ ಮೇವಲು ವಾಮೇ:॥

ಇದರ ಅರ್ಥವು:—ದೇಹಾವಸಾನಕಾಲದಲ್ಲಿ ಪ್ರಾಣವಾಯುವು ಬಿಟ್ಟುಹೋಗಿ ದೀರ್ಘನಿದ್ರೆಯು ಪ್ರಾಪ್ತವಾಗುವದಕ್ಕೆ ಮುಂಚೆಯೇ, ಸಕಲ ವೇದಗಳಿಗೂ ಕಾರಣಭೂತವಾದ ಮೂಲಮಂತ್ರದ ಮೊದಲನೇ ಪದವಾದ ಓಂಕಾರವನ್ನು ಮೂರು ಮಾತ್ರೆಯುಳ್ಳ ಪ್ಲುತವಾಗಿ ಸರಿಯಾಗಿ ಉಚ್ಚರಿಸಿ, ಸಮುದ್ರದ ಹಾಗೆ ಶ್ಯಾಮಲ ವರ್ಣವುಳ್ಳ ಸರ್ವೇಶ್ವರನನ್ನು ಧ್ಯಾನಿಸಿದರೆ, ನಿತ್ಯಮುಕ್ತರೊಂದಿಗೆ ಸೇರಬಹುದೆಂದು ಹೇಳುತ್ತಾರೆ.

ಶ್ರೀ ತಿರುಮಂಗೈಯಾಳ್ವಾರವರೂ ಪೆರಿಯಾಳ್ವಾರವರೂ ಸಹ ಶ್ರುತಿಗಳ ಉಪಬ್ರಹ್ಮಣಮೂಲಕ ಪರತತ್ವನಿರ್ಣಯಮಾಡಿದರೆಂದು ಹೇಳಿದರು ಮುಂದೆ ಪೇಯಾಳ್ವಾರನರೂ ಹಾಗೆಯೇ ತೈತ್ತಿರೀಯ ಶ್ರುತಿವಾಕ್ಯದ ಉಪಬ್ರಹ್ಮಣದ ಮೂಲಕ ಪರತತ್ವಸ್ವರೂಪನಿರೂಪಕ ಧರ್ಮವು ಶ್ರಿಯಃಪತಿತ್ವವೆಂದು ಸ್ಥಾಪಿಸುತ್ತಾರೆ. ಆ ತೈತ್ತಿರೀಯ ಶ್ರುತಿಯಲ್ಲೇ ಈ ಪರಮಪುರುಷನಿಗೆ "**ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ**" ಎಂದು ಹೇಳಿರುವ ಹಾಗೆ, **ಹ್ರೀ** – ಭೂಮಿಯೂ, **ಲಕ್ಷ್ಮೀಶ್ಚ** - ಲಕ್ಷ್ಮಿಯೂ ಕೂಡ ಪತ್ನಿಗಳು ಎಂದು ಹೇಳಲ್ಪಟ್ಟಿರುವದರಿಂದ ಶ್ರಿಯಃಪತಿತ್ವವೇ ಪರತತ್ವನಿರೂಪಕ ಚಿಹ್ನೆಯೆಂದು ತಿಳಿಸುತ್ತಾರೆ,

ತೈತ್ತಿರೀಯತ್ತಿಲ್- ತೈತ್ತಿರೀಯೋಪನಿಷತ್ತಿನಲ್ಲಿ, **ಶ್ರೀಯಃ ಪತಿತ್ವ ಚಿಹ್ನೆಯಾಲೆ** - ಲಕ್ಷ್ಮಿಗೆ ಪತಿಯಾಗಿರುವ ಚಿಹ್ನೆಯಿಂದಲೇ **ಮಹಾಪುರುಷನುಕ್ಕು** – ಪರತತ್ವವಾಗಿರುವ ಪರಮಪುರುಷನಾದ ನಾರಾಯಣನಿಗೆ, **ವ್ಯಾವೃತ್ತಿ** – ಅನ್ಯ ದೇವತೆಗಳಿಗಿಂತಲೂ ಬೇರೆಯಾದವನೆಂದು, **ಓದಿನಪಡಿಯೈ** - ಉಪದೇಶಿಸಿ ಅಧ್ಯಯನಮಾಡಿದ ರೀತಿಯನ್ನು, **ನಿನೈತ್ತು** – ಪರ್ಯಾಲೋಚಿಸಿ, "**ತಿರುಕ್ಕಣ್ಡೇನ್**- ತನ್ನ ವಾಲ್ಲಭ್ಯಾತಿಶಯದಿಂದ ಸರ್ವೇಶ್ವರನೊಂದಿಗೆ ಸದಾ ಇರುತ್ತಾ

---

(೧) ಮೂನ್ರಾಂ ತಿರುವಂದಾದಿ. ೧.

ಮೇನಿ ಕಣ್ಡ್ರೇ" ಎನ್ನುಪಕ್ರಮಿತ್ತು (೨)**"ಶಾರ್ವ್ವನಮಕ್ಕು"** ಎಜ್ಞಾರಪಾಟ್ಟಲೆ **ಪ್ರತಿಬುದ್ಧರಾನ ನಮಕ್ಕುಪ್ಪೆರಿಯ ಪಿರಾಟ್ಟಿ ಯಾರುಡನೆ ಇರುನ್ದೆನ್ರು** ಮೊಕ್ಕ (ಪ್ಪರಿಕ್ಕಿನ್ರ)ಪ್ಪರಿಮೂರುಗಿರ ವಿವನೈ ಯೊಳಿಯ ಪ್ರಾಪ್ಯಾನ್ತರ ಮುಮ್ ಶರಣ್ಯಾನ್ತರ ಮುಮಿಲ್ಲೈ. ಇದ್ದಮ್ಪತಿಗಳೇ ಪ್ರಾಪ್ಯರುಮ್ ಶರಣ್ಯರುಮೆನ್ರುನಿಗಮಿಕ್ಕಪ್ಪಟ್ಟದು.

ಅತನು **(೩) " ನ ಜೀವೇಯಂ ಕ್ಷಣಮಪಿ ವಿನಾ ತಾಂ ಅಸಿತೇಕ್ಷಣಾಂ,** ಆ ಅಸಿತೇಕ್ಷಣಳಾದ ಸೀತೆಯನ್ನು ಬಿಟ್ಟು ಒಂದು ಕ್ಷಣವಾಗಲಿ ಇರೆನು" ಎಂದು ಹೇಳುವ ಹಾಗೆ ವಾಲ್ಲಭ್ಯಾತಿಶಯವನ್ನು ಹೊಂದಿದ ಲಕ್ಷ್ಮ್ಯಯನ್ನು ಕಂಡೆನು, **ಪೊರ್ ಮೇನಿಕಣ್ಡ್ರೇ (೪) " ಯಸ್ತ್ವಯಾ ಸಹ ಸಸ್ವರ್ಗೋ ನಿರಯೋ ಯಂ ತ್ವಯಾವಿನಾ** ನಿನ್ನೊಂದಿಗಿರುವದೇ ನನಗೆ ಸ್ವರ್ಗವು ನಿನ್ನನ್ನಗಲಿರುವದೇ ನರಕವು" ಎಂದು ಸೀತೆಯು ಹೇಳಿರುವ ಹಾಗೆ ಆಕೆಯನ್ನು ವಶಮಾಡಿಕೊಳ್ಳಲು ಯೋಗ್ಯವಾದ ಅತಿ ಮನೋಹರವಾದ ಹಿರಣ್ಮಯ ದಿವ್ಯಮಂಗಳವಿಗ್ರಹಯುಕ್ತನಾದ ನಾರಾಯಣನನ್ನೂ: ಕಂಡೆನು." **ಎನ್ರುಪಕ್ರಮಿತ್ತು** - ಎಂದು ಪ್ರಾರಂಭಿಸಿ, **"ಶಾರ್ವ್ವನಮಕ್ಕು"** ಈ ಲಕ್ಷ್ಮೀನಾರಾಯಣರಿಬ್ಬರೂ ನಮಗೆ ಪ್ರಾಪ್ಯರೂ ಶರಣ್ಯರೂ ಎಂಬ ಅಭಿಪ್ರಾಯದಿಂದ, **ಶಾರ್ವ್ವ ನಮಕ್ಕು ಎಜ್ಞಾರಪಾಟ್ಟಲೆ** - ಎನ್ನುವ ಕೊನೆಯ ಪಾಶುರದಲ್ಲಿ, **ಪ್ರತಿಬುದ್ಧರಾದ ನಮಕ್ಕು**- ಆಚಾರ್ಯಕಟಾಕ್ಷದಿಂದಲೂ ಸರ್ವೇಶ್ವರಕೃಪೆಯಿಂದಲೂ ಪರತತ್ವವ್ಯಾವುದೆಂದು ವಿಮರ್ಶಿಸಿ ತಿಳಿಯುವ **(೫)ಬುದ್ಧಿಯೋಗವನ್ನು** ಹೊಂದಿದ ನಮಗೆ, **ಪೆರಿಯಪಿರಾಟ್ಟಿಯಾರುಡನೆ ಇರನ್ದು**-**"ಅನನ್ಯಾಚ ಮಯಾ ಸೀತಾ ಭಾಸ್ಕರೇಣ ಪ್ರಭಾ ಯಥಾ"** ಎಂದು ಹೇಳಿರುವ ಹಾಗೆ ಯಾವಾಗಲೂ ಲಕ್ಷ್ಮ್ಯಯೊಂದಿಗೇನೇ ಇದ್ದುಕೊಂಡೇ, **ಎನ್ರುಮೊಕ್ಕ** - ಯಾವಾಗಲೂ ಒಟ್ಟಿಗೆ ಸೇರಿಯೇ, **ಪರುವಾರಿಗಿರ** - ಸೃಷ್ಟಿಸ್ಥಿತಿಲಯಮೋಕ್ಷಪ್ರದತ್ವಾದಿ ಈ ಲೀಲಾವಿಭೂತಿಯ ಸಕಲ ವ್ಯಾಪಾರಗಳನ್ನೂ ನಡಿಸುವ, **ಇವನೈಯೊಳಿಯ** - ಈ ಶ್ರಿಯಃಪತಿಯಲ್ಲದೆ, **ಪ್ರಾಪ್ಯಾನ್ತರಮುಮ್**- ಬೇರೆ ಪ್ರಾಪ್ಯವೂ, **ಶರಣ್ಯಾನ್ತರಮುಮ್**-ಬೇರೆ ಪ್ರಾಪಕರಾಗಿ ರಕ್ಷಕರೂ, **ಇಲ್ಲೈ** - ಇಲ್ಲವು. **ಇದ್ದಂಪತಿಗಳೇ** - ಈ ಲಕ್ಷ್ಮೀನಾರಾಯಣರೇ, ಪ್ರಾಪ್ಯರೆಂದೂ, ಶರಣ್ಯರೆಂದೂ ಉಪಾಯಭೂತರಾಗಿ ರಕ್ಷಕರೆಂದೂ, **ನಿಗಮಿಕ್ಕಪಟ್ಟದು**-

---

(೨) ಮೂನ್ರಾಂ. ತಿರು. ೧೦೦. (೩) ರಾ.
(೪) ರಾ. ಅಯೋಧ್ಯಾ. ೩೦. ೧೪ (೫) ಗೀ. ೧೦. ೧೦.

ಸಿದ್ಧಾಂತರೂಪದಲ್ಲಿ ಮುಗಿಸಲ್ಪಟ್ಟಿತು. ತೈತ್ತಿರೀಯದಲ್ಲಿ **ವೇದಾಹಮೇತಂಪುರುಷಂ ಮಹಾನ್ತಂ - ಅಹಂ**- ಭಗವತ್ಸಙ್ಕಲ್ಪಾನುಸಾರ ಸರ್ವವನ್ನೂ ಚನ್ನಾಗಿ ತಿಳಿದ ವೇದಪುರುಷನಾದ ನಾನು, **ಏತಂ** – ಹಿಂದಿನ ೧೫ ಋಕ್ಕುಗಳಿಂದಲೂ ಹೇಳಲ್ಪಟ್ಟು ಜಗತ್ಸೃಷ್ಟಿಸ್ಥಿತಿಲಯಗಳಿಗೆ ಕಾರಣಭೂತನಾಗಿ, ಉಭಯವಿಭೂತಿ ನಾಯಕನಾಗಿ, ಕಲ್ಯಾಣಮಹೋದಧಿಯಾಗಿ ಪ್ರಾಪ್ಯಪ್ರಾಪಕನಾಗಿರುವ, **ಮಹಾಂತಂಪುರುಷಂ**–ಅಪರಿಚ್ಛೇದ್ಯಸ್ವರೂಪರೂಪಗುಣ ವಿಭೂತಿಗಳುಳ್ಳ ಈ ಮಹಾ ಪುರುಷನನ್ನು, **ವೇದ**-(೧)**"ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಂ**"ಎಂದು ಹೇಳಿರುವ ಹಾಗೆ ತಿಳಿದಿರುವೆನು ಎಂದು ಹೇಳಿ, ಆ ಪರಮಪುರುಷನು ಯಾರು ಚತುರ್ಮುಖನೇ, ರುದ್ರನೇ, ಎಂದರೆ, ಇಬ್ಬರೂ ಅಲ್ಲವೆಂದು ವ್ಯಾವೃತ್ತಿಸಿ ಹೇಳುವದಕ್ಕಾಗಿಯೇ ಕೊನೆಗೆ, "**ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ**" ಆ ಪರಮ ಪುರುಷನಿಗೆ ಭೂಮಿಯೂ ಲಕ್ಷ್ಮಿಯೂ ಹೆಂಡರು ಎಂದು ಹೇಳಿರುತ್ತದೆಯಾದುದರಿಂದಲೇ, "**ಶ್ರಿಯಃಪತಿತ್ವಚಿಹ್ನಮಯು**" ಪರಮ ಪುರುಷನಿರ್ಧಾರಣ ಚಿಹ್ನೆಯೆಂದು ಇಲ್ಲಿ ಹೇಳಲ್ಪಟ್ಟಿರುತ್ತದೆ. ಈ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟು ಶ್ರೀ ಪರಾಶರಭಟ್ಟರು (೨) **"ವೇದಾನ್ತಾಸ್ತತ್ಪ್ರಚಿನ್ತಾಂ ಮುರಭಿದುರಸಿ ಯತ್ಪ್ರಾದಚಿಹ್ನೈಃಸ್ತರನ್ತಿ**" ಉಪನಿಷತ್ತುಗಳು ಶ್ರೀಮನ್ನಾರಾಯಣನ ದಿವ್ಯವಕ್ಷಸ್ಥಳದಲ್ಲಿರುವ ಲಕ್ಷ್ಮಿಯಪಾದಚಿಹ್ನೆಗಳಿಂದ ಪರತತ್ವವು ಯಾರು ಎಂಬ ಸಂದೇಹವನ್ನು ನೀಗಿಕೊಂಡವೆಂದು ಹೇಳಿರುತ್ತಾರೆ. ಉಪನಿಷತ್ತುಗಳೆಲ್ಲಾ ಶ್ರಿಯಃಪತಿಯೇ ಪರತತ್ವವೆಂದು ನಿಸ್ಸಂದೇಹವಾಗಿ ಉಪದೇಶಿಸುತ್ತವೆಂಬ ಭಾವವು. ಈ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟು ಪೇಯಾಳ್ವಾರವರು, ಅವರನುಗ್ರಹಿಸಿದ ಮೂನ್ರಾಂ ತಿರುವಂದಾದಿಯ ಪ್ರಥಮ ಶ್ಲೋಕದಲ್ಲಿ ಪರತತ್ವವನ್ನು ತಾವು ಸಾಕ್ಷಾತ್ಕರಿಸಿದಾಗ ಪ್ರಥಮತಃ "**ತಿರುಕ್ಕಂಡೇ**ನ್" ಎಂದು ಪ್ರಾರಂಭಿಸಿರುತ್ತಾರೆ. ಸರ್ವೇಶ್ವರನಿಗೆ ಮುಖ್ಯವಾಗಿ ಸ್ವರೂಪನಿರೂಪಕಧರ್ಮವು ಲಕ್ಷ್ಮೀಪತಿತ್ವವಾದುದರಿಂದ, ವಕ್ಷಸ್ಥಳದಲ್ಲಿರುವ ಮಹಾ ಅನುಗ್ರಹಮಯಳಾದ ಲಕ್ಷ್ಮಿಯನ್ನು ಕಂಡೆನೆಂದು ಹೇಳಿ, ಅನಂತರ **ಪ್ರೊವ್ವೇನಿಕಂಡೇನ್**, ಆ ಸರ್ವೇಶ್ವರನ ದಿವ್ಯಮಂಗಳವಿಗ್ರಹವನ್ನು ಕಂಡೆನು; ಆತನ ದಿವ್ಯಹಸ್ತಗಳಲ್ಲಿ ದಿವ್ಯಾಯುಧಗಳನ್ನು ಕಂಡೆನು ಎಂಬದಾಗಿ ಅಪ್ಪಣೆಕೊಡಿಸಿರುತ್ತಾರೆ. ಹಾಗೆಯೇ ಆ ಆಳ್ವಾರ್ರವರೇ ಅನುಗ್ರಹಿಸಿದ "**ಶಾರ್ವ್ವನಮಕ್ಕು**" ಎಂಬ ಕೊನೇ ಪಾಶುರದಲ್ಲಿ ಲಕ್ಷ್ಮೀನಾರಾಯಣರಿಬ್ಬರೂ ನಮಗೆ ಪ್ರಾಪ್ಯ ಪ್ರಾಪಕರೆಂದು ಹೇಳಿ ಮುಗಿಸಿರುತ್ತಾರೆ. ಇಲ್ಲಿ **ಶಾರ್ವ್ವ** ಎಂದರೆ ಅಪಾಶ್ರಯವು,

---

(೧) **ರಾ.** ಬಾಲ. ೧೯. ೧೫. (೨) ಶ್ರೀಗುಣ.

ಇದರಿಂದ ಆತನ ಶರಣ್ಯತ್ವವು ಚನ್ನಾಗಿ ತೋರಿಬರುವದರಿಂದ, ಬರೀ ಪುರುಷ ಕಾರ ಭಾವಮಾತ್ರದಿಂದಲೇ, **ಶಾರ್ವು** ಎಂಬಭಿಪ್ರಾಯವು ಉಂಟಾಗಲಾರದು. ಈ ಪಾಶುರಗಳಿಗೆ ವ್ಯಾಖ್ಯಾನ ಬರೆದ ಮಹನೀಯರಾದ ಪೆರಿಯವಾಚ್ಚಾ೯ ಪಿಳ್ಳೆ ಯವರ ಅಭಿಪ್ರಾಯವೂ ಕೂಡ ಶ್ರೀದೇಶಿಕಾಭಿಪ್ರಾಯಕ್ಕೆ ವಿರೋಧವಾದುದಲ್ಲ ವೆಂದು ಶ್ರೀ ಸಾರಾಸ್ವಾದಿನಿಯವರು ಅಪ್ಪಣೆಕೊಡಿಸಿರುತ್ತಾರೆ. ಆ ಎರಡು ಪಾಶುರಗಳೂ ಯಾವುವೆಂದರೆ;—

ತಿರುಕ್ಕಂಡೇ೯ ಪೋನ್ಮೇನಿ ಕಂಡೇ೯, ತಿಗಳುಮ್
ಅರುಕ್ಕ ನಣಿ ನಿರಮುಜ್ಕಂಡೇ೯, ಶೆರುಕ್ಕಿಳರುಮ್
ಪೊನ್ನಾಳಿ ಕಣ್ಡೇ೯ ಪುರಿಶಜ್ಞಜಿಕ್ಕಣ್ಡೇ೯
ಎನ್ನಾಳಿವಣ್ಣ ನ್ಪಾಲಿನ್ರು.

ಇದರರ್ಥವು:—**ಎನ್** –ನನಗೆ ನಾಥನಾದ, **ಆಳಿವಣ್ಣನ್ಪಾಲ್** - ಸಮುದ್ರದ ಹಾಗೆ ಶ್ಯಾಮಲವರ್ಣನಾದ ನಾರಾಯಣನೊಂದಿಗೆ **ಇನ್ರು**-ಈಗ, ಆತನನ್ನು ಧ್ಯಾನಿಸಿದ ನಂತರ, **ತಿರುಕ್ಕಣ್ಣೇನ್** – ತನ್ನ ಕಟಾಕ್ಷಕ್ಕೆ ವಶವಾದ ಸರ್ವ ಉಭಯವಿಭೂತಿಯ ಐಶ್ವರ್ಯವುಳ್ಳ, ಮತ್ತು ಜೀತನನ ವಿಷಯದಲ್ಲಿ ಪರಮಾನುಗ್ರಹವುಯಳಾದ ಲಕ್ಷ್ಮಿಯನ್ನು ಕಂಡೆನು; **ಪೋನ್ಮೇನಿಕಣ್ಡೇ೯** - ಲಕ್ಷ್ಮಿಗೆ ಆಶ್ರಯವಾದ ವಕ್ಷಸ್ಥಳವುಳ್ಳ ಸರ್ವೇಶ್ವರನ ಸ್ಪೃಹಣೀಯವಾದ ದಿವ್ಯಮಂಗಳ ವಿಗ್ರಹವನ್ನು ಕಂಡೆನು, **ತಿಗಳುಮ್ ಅರುಕ್ಕನ್ ಅಣಿ ನಿರಮುಜ್ಕಂಡೇ೯** – ಪ್ರಕಾಶವುಳ್ಳ ಸೂರ್ಯನ ಹಾಗೆ ದೇದೀಪ್ಯಮಾನವಾದ ರೂಪವನ್ನು ಕಂಡೆನು ಎಂದರೆ ಸೇವಿಸಿದೆನು. ಇದರಿಂದ **"ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾ ಯಥಾ"** ಎಂದು ಹೇಳಿರುವ ಹಾಗೆ, ಸರ್ವೇಶ್ವರನು ಸೂರ್ಯನೆಂದು ಹೇಳಿದುದರಿಂದ ಲಕ್ಷ್ಮಿಯು ಪ್ರಭೆಯೆಂದೂ ಅವರಿಬ್ಬರಿಗೂ ಇರುವ ನಿತ್ಯಯೋಗವು ಇದರಿಂದ ತೋರಿಬರುತ್ತದೆ. **ಶೆರುಕಿಳರುಮ್ ಪೊ ಆಳಿ ಕಂಡೇ೯**-ವೃದ್ಧಿ ಹೊಂದುವ ಸುಂದರವಾದ ಸುದರ್ಶನ ಚಕ್ರವನ್ನು ಆತನ ಬಲಗೈಯಲ್ಲಿ ಸೇವೆ ಮಾಡಿದೆನು. **ಪುರಿಶಜ್ಞಜಿಕ್ಕಕಂಡೇನ್**— **"ಪ್ರಾಂಜಲಿಂಪ್ರಹ್ವಮಾಸೀನಂ"** ಎಂದು ಹೇಳಿರುವಹಾಗೆ ಭಕ್ತಿಯುಳ್ಳ ಶ್ರೀ ಪಾಂಚಜನ್ಯವನ್ನು ಮನೋಹರವಾದ ಆತನ ಕೈಯಲ್ಲಿ ಸೇವಿಸಿದೆನು." ಎಂಬುವದು ಈ ಪಾಶುರಾರ್ಥವು. ಇದರಿಂದ ಲಕ್ಷ್ಮಿಗೂ ನಾರಾಯಣನಿಗೂ ಸರ್ವಾವಸ್ಥೆಯಲ್ಲೂ ನಿತ್ಯಯೋಗವು ಹೇಳಲ್ಪಟ್ಟಿತು.

ಶಾರ್ವುನಮುಕ್ಕು ಎಂಬ ಪಾಶುರವು ಯಾವುದೆಂದರೆ:—

ಶಾರ್ವುನಮುಕ್ಕೆನ್ರುಮ್ ಶಕ್ಕರತ್ತಾ೯, ತಣ್ಡಾಯ್
ಶಾರ್ವಾಳ್ ವರೈಮಾರ್ಪನ್ ತಾನ್ಮಯಜ್ಞುಮ್ ಕಾರಾರ್ನ್ದ

ವಾನವರು ಮಿನ್ನಿಮ್ಮೈಕ್ಕುಮ್ ವಣ್ಣಾಮರೈ ನೆಡುಂಗಣ್
ತೇನ ಮರುವುಮ್ ಪೂಮೇಲ್ ತಿರು ॥೧೦೦॥

ಶಕ್ಕರತ್ತಾಳ್ - ಆಶ್ರಿತಸಂರಕ್ಷಣಾರ್ಥವಾಗಿ ಚಕ್ರವನ್ನು ಧರಿಸಿರುವವನು, ಇದು ಅಂಬರೀಷೋಪಾಖ್ಯಾನ, ಅಪಾಂಡವಾಸ್ತ್ರಪ್ರಯೋಗಾದಿಗಳಲ್ಲಿ ಸುವ್ಯಕ್ತವು. **ತಣ್ ತುಳಾಯ್ ತಾರ್‌ವಾಳ್ ವರೈವಾರ್ವಣ್**– ಶೀತಳವಾದ ತುಳಸೀಮಾಲೆಯಿಂದ ಪ್ರಕಾಶಿಸುವ ಪರ್ವತದ ಹಾಗಿರುವ ವಕ್ಷಸ್ಥಳವನ್ನು ಹೊಂದಿರುವ ನಾರಾಯಣನು, ಶೀತಳವಾದ ತುಳಸೀಮಾಲೆಯನ್ನು ಎಂದು ಹೇಳಿದುದರಿಂದ ಪರಮಭೋಗ್ಯತೆಯು ಹೇಳಲ್ಪಟ್ಟಿತು. **ತಾನ್ಮಯುಜ್ಞುಮ್** - **"ನ ಜೀವೇಯಂ ಕ್ಷಣಮಪಿ ವಿನಾ ತಾಂ ಅಸಿತೇಕ್ಷಣಾಂ"** ಒಂದು ಕ್ಷಣವಾದರೂ ಈ ಕನ್ನೈದಿಲೆ ಪುಷ್ಪದ ಹಾಗೆ ಕಣ್ಣುಳ್ಳ ಸೀತೆಯನ್ನಗಲಿರಲಾರೆನೆಂದು ಹೇಳಿದ ಹಾಗೆ, ತಾನು ಪ್ರೇಮಾತಿಶಯದಿಂದ ಮೋಹಿಸುವ ಹಾಗೆ ಸದಾ ನಿತ್ಯಾನಪಾಯಿಯಾದ, ಹೀಗೆ ಹೇಳಿದುದರಿಂದ ಇಬ್ಬರೂ ನಮಗೆ ಶರಣ್ಯರು ಪ್ರಾಪ್ಯರೆಂಬುವದು ಇಲ್ಲಿಯೂ ಸೂಚಿತವಾಯಿತು. **ಕಾರಾರ್‌ನ್ದ** – ಕಪ್ಪಾದ ಮೇಘದಿಂದ ತುಂಬಿದ, **ವಾನವರುವಿ**- ಆಕಾಶದಲ್ಲಿರುವ ಮಿಂಚು, **ಇನ್ಮೈಕ್ಕುಮ್** – ಪ್ರಕಾಶಿಸದೇ ಇರೋಣ ಹೇಗೋ ಹಾಗೆ, **ವಣ್ಣಾಮರೈನೆಡುಙ್ಗಣ್** – ಸುಂದರವಾದ ಕಮಲಪುಷ್ಪದೋಪಾದಿಯಲ್ಲಿ ವಿಶಾಲವಾದ ಕಣ್ಣುಳ್ಳವನಾದ, **ತೇನಮರುಮ್ ಪೂಮೇಲ್‌ತಿರು** - ಮಕರಂದ ಪರಿಪೂರ್ಣವಾದ ಕಮಲಪುಷ್ಪದ ಮೇಲೆ ವಸಿಸುವ ಲಕ್ಷ್ಮಿಯೂ ಸಹ, **ನಮುಕ್ಕು**- ನಮಗೆ, **ಎನ್ರುಮ್** – ಯಾವಾಗಲೂ, **ಶಾರ್ವು** - ಪ್ರಾಪ್ಯಪ್ರಾಪಕರು.

ಹೀಗೆ ನಮಗೆ ಪರಮಪುರುಷನೂ ಲಕ್ಷ್ಮಿಯೂ ಸಹ ಶರಣ್ಯರೂ ಪ್ರಾಪ್ಯರೂ ಎಂದು ಹೇಳಿರುತ್ತಾರೆ. ಇದರಿಂದ ಲಕ್ಷ್ಮೀನಾರಾಯಣರೇ ಪರತತ್ವವೆಂದೂ, ಅವರು ಯಾವಾಗಲೂ ನಿತ್ಯಯೋಗವುಳ್ಳವರಾದುದರಿಂದ ಅವರೇ ಪ್ರಾಪಕ ಪ್ರಾಪ್ಯರು ಎಂದು ಹೇಳಲ್ಪಟ್ಟಿತು.

ಇದ್ದಂಪತಿಗಳೇ ಪ್ರಾಪ್ಯರುಮ್ ಶರಣ್ಯರುಮೆನ್ರು ನಿಗಮಿಕ್ಕಪ್ಪಟ್ಟದು ಎಂದು ಇಲ್ಲಿ ಅಧಿಕಾರ ಪರಿಸಮಾಪ್ತಿಯಲ್ಲಿ ಹೇಳಿರುವದು. **"ಶ್ರೀಮಾನ್ ನಾರಾಯಣೋ ನಃ ಪತಿರಖಿಲತನುರ್ಮುಕ್ತದೋ ಮುಕ್ತಭೋಗ್ಯಃ"** ಎಂದು ತಾವು ಸಙ್ಗ್ರಹ ಶ್ಲೋಕದಲ್ಲಿ ಹೇಳಿದುದೇ ಇಲ್ಲಿ ಸಿದ್ಧಾನ್ತಿಸಲ್ಪಟ್ಟಿತೆಂದು ತಿಳಿಸುತ್ತಾರೆ, **"ಶಾರ್ವುನಮುಕ್ಕು"** ಎಂಬ ಪಾಶುರಕ್ಕೆ ಮಹನೀಯರಾದ ಶ್ರೀ ಪೆರಿಯವಾಚ್ಚಾನ್ ಪಿಳ್ಳೈಯವರು ಬರೆದ ವ್ಯಾಖ್ಯಾನದಲ್ಲಿ **"ಶಾರ್ವುನಮಕ್ಕೆನ್ರು, ಆಪತ್ತುಕ್ಕು ಸರ್ವೇಶ್ವರ; ಆಪತ್ತುಳ್ಳಪೋದುಮ್ ಎಯ್ದಕ್ಕುಮ್ ನಮಕ್ಕಪಾಶ್ರಯಮುಮ್ ಪೆರಿಯಪಿರಾಟ್ಟಿಯಾರ್; ಪೆರಿಯಪಿರಾಟ್ಟಿಯಾರ್ ನಮಕ್ಕೆಲ್ಲಾಕಾಲತ್ತುಕ್ಕುಮುಪಾಶ್ರಯಮುಮ್"** ಎಂದು ಲಕ್ಷ್ಮಿಗೆ

ಶ್ರೀಯಃಪತಿರೇವ ಪರತತ್ವಂ.

ಇವ್ವರ್ಥತ್ತೈ೫(೧)"ದೇವತಾಪಾರಮಾರ್ಥ್ಯಂ ಚ ಯಥಾವದೆ

ಸಮಪ್ರಧಾನತೆಯನ್ನೂ ಅಲ್ಲದೆ ಅತಿಶಯವನ್ನೂ ಹೇಳಿರುವದರಿಂದ, ಆ ಮಹಸೀಯರಭಿಪ್ರಾಯವೂ ಶ್ರೀ ದೇಶಿಕಾಭಿಪ್ರಾಯಕ್ಕೆ ವಿರುದ್ಧವಾದುದಲ್ಲವು. **ಶಾರ್ವು ನಮಕ್ಕು** ಎಂಬುವದಕ್ಕೆ ಪ್ರಾಪ್ಯದಲ್ಲಿ ಮಾತ್ರ ಅನ್ವಯವೆಂಬುವದು ಈಚಿನವರ ಸಂಕುಚಿತಾಭಿಪ್ರಾಯವಾಗಿರುತ್ತದೆ. ಈ ಅಭಿಪ್ರಾಯಕ್ಕೆ **ಶಾರ್ವು** ಎಂಬ ಪದವು ವಿರೋಧವು. **ಶಾರ್ವು** ಎಂದರೆ **ಅಪಾಶ್ರಯವು** ಎಂದು ವ್ಯಾಖ್ಯಾನಮಾಡಿರುವದರಿಂದ, ಶರಣ್ಯತ್ವವೇ ಇದಕ್ಕೆ ಸ್ವರಸವಾದ ಅರ್ಥವು. ಪುರುಷಕಾರತ್ವ ಮಾತ್ರ ಅರ್ಥವೆಂದು ಅವರು ಹೇಳಿರುವದಿಲ್ಲವು. ಆದರೆ **"ಮಾಮೇಕಂ ಶರಣಂ ವ್ರಜ" "ವಿಷ್ಣುಪೋತಂ ವಿನಾನಾನ್ಯತ್ಕಿಂಚಿದಸ್ತಿ ಪರಾಯಣಂ"** ಇವೇ ಮೊದಲಾದ ಅನೇಕ ಪ್ರಮಾಣಗಳಲ್ಲಿ ಉಪಾಯತ್ವವು ವಿಷ್ಣು ಒಬ್ಬನಿಗೇ ಹೇಳಿದೆಯಲ್ಲಾ ಎಂದರೆ, ಶ್ರೀ ಮಹಾಲಕ್ಷ್ಮಿಯು ಯಾವಾಗಲೂ, ಸ್ವರೂಪರೂಪಾದಿಗಳಲ್ಲೂ ನಿತ್ಯಯೋಗವುಳ್ಳವಳಾದುದರಿಂದ,ಸನ್ನಿಯೋಗಶಿಷ್ಟನ್ಯಾಯಪ್ರಕಾರ ಅಕೆಯನ್ನು ಹೇಳುವ ಆವಶ್ಯಕತೆಯಿಲ್ಲವೆಂದು, ಶ್ರೀಸ್ತುತಿ, ಚತುಶ್ಲೋಕೀ ಮುಂತಾದ ಗ್ರಂಥಗಳ ವ್ಯಾಖ್ಯಾನದಲ್ಲಿ ಬಹು ವಿಸ್ತಾರವಾಗಿ ಉಪಪಾದಿಸಲ್ಪಟ್ಟಿರುತ್ತದೆ. ಪರಾಂಬರಿಸಬಹುದು. ಸ್ವರೂಪತಃ ಕೂಡ ನಿತ್ಯವ್ಯಾಪ್ತಿಯನ್ನು ಬೋಧಿಸುವದಕ್ಕಾಗಿಯೇ ಶ್ರೀದೇಶಿಕರವರು ಅಧಿಕಾರ ಪ್ರಥಮ ಶ್ಲೋಕದಲ್ಲಿ **ಅಖಿಲತನುಃ** ಇಬ್ಬರಿಗೂ ಸರ್ವವೂ ಶರೀರವೆಂದುಪದೇಶಿಸಿರುತ್ತಾರೆ.ಈ ಅಭಿಪ್ರಾಯವನ್ನೇ ಮುಂದೆ ವಿಶದೀಕರಿಸುತ್ತಾರೆ.

ಹೀಗೆ ಲಕ್ಷ್ಮೀನಾರಾಯಣರಾದ ಲೋಕದಂಪತಿಗಳೇ ಪರತತ್ವವು ಎಂಬ ಶ್ರುತಿಗಳಲ್ಲಿನ ಗೂಢಾರ್ಥವು ಜ್ಞಾನನಿಧಿಗಳಾದ ಮಹರ್ಷಿಗಳಿಂದ ಎಲ್ಲಿಯಾದರೂ ಉಪಬ್ರಹ್ಮಣವಾಗಿದೆಯೇ ಎಂದರೆ, ನಮ್ಮ ಪೂರ್ವಾಚಾರ್ಯರುಗಳಿಂದ ಕೊಂಡಾಡಲ್ಪಟ್ಟವರಾಗಿಯೂ, ಪುಲಸ್ತ್ಯ ವಸಿಷ್ಠರುಗಳ ಕೃಪೆಯಿಂದ ಜ್ಞಾನದೀಪ್ತಿಯನ್ನು ಹೊಂದಿದವರಾಗಿಯೂ, ಶ್ರೀ ಆಳವಂದಾರವರಿಂದ ಕೊಂಡಾಡಲ್ಪಟ್ಟವರಾಗಿಯೂ, ವ್ಯಾಸಮಹರ್ಷಿಗಳ ಪಿತಾವಾಗಿಯೂ, ಇರುವ ಶ್ರೀಪರಾಶರ ಮಹರ್ಷಿಗಳು, ಈ ದಂಪತಿಗಳಿಬ್ಬರೂ ಸಮಪ್ರಧಾನರೆಂದು, ತಮ್ಮ ಸಚ್ಛಿಷ್ಯರಾದ ಮೈತ್ರೇಯರಿಗೆ ಉಪದೇಶಿಸಿರುತ್ತಾರೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—

(೧) ವಿ. ಪು. ೧. ೧. ೩೬.

ತೇ ಭವಾನ್", (೨) **ಪುಲಸ್ತ್ಯೇನ ಯದುಕ್ತಂ ತೇ ಸರ್ವಮೇತದ್ಭವಿಷ್ಯತಿ**" ಎನ್ನು **ಪುಲಸ್ತ್ಯ ವಸಿಷ್ಠ ವರಪ್ರಸಾದತ್ತಾಲೆ ಪರದೇವತಾ ಪಾರಮಾರ್ಥ್ಯ ಜ್ಞಾನ ಮುಡೈಯನಾಯ್**, **ಪೆರಿಯ ಮುದಲಿಯಾರ್** (೩) " **ತಸ್ಮೈ ನಮೋ ಮುನಿವರಾಯ ಪರಾಶರಾಯ** " ಎನಾದರಿಕ್ಕುಮ್ಪಡಿಯಾನ

ಲಕ್ಷ್ಮೀನಾರಾಯಣರೇ ಪರತತ್ವವು

ಇವ್ವರ್ಥತ್ತೈ - ಈ ದಂಪತಿಗಳೇ ಶರಣ್ಯರೂ ಪ್ರಾಪ್ಯರೂ ಆಗಿ, ಪರತತ್ವ ವೆಂಬುವ ಅಭಿಪ್ರಾಯವನ್ನು, "**ಶ್ರೀ ಪರಾಶರ ಬ್ರಹ್ಮರ್ಷಿ ಉಪದೇಶಿತ್ತಾರ್**" ಎಂಬುವದಕ್ಕೆ ಕರ್ಮಪದವು. (೧) ಇದು ಚತುರ್ಮುಖಪುತ್ರರಾದ ಪುಲಸ್ತ್ಯರ ವಾಕ್ಯವು. ಪುಲಸ್ತ್ಯರು ಶ್ರೀ ಪರಾಶರರ ಪಿತಾಮಹರಾದ ವಸಿಷ್ಠರೊಂದಿಗೆ ಬಂದು ಶ್ರೀ ಪರಾಶರರನ್ನು ಹರಿಸಿ, ವರವನ್ನು ಕೊಡುವ ಪ್ರಕರಣವು. "**ಭವಾ**ನೀನು, **ದೇವತಾಪಾರಮಾರ್ಥ್ಯಂ ಚ**-ಪರತತ್ವದ ಯಾಥಾರ್ಥ್ಯವನ್ನು, **ಯಥಾವತ್** - ಶಾಸ್ತ್ರದಲ್ಲಿ ಹೇಳಿರುವ ಹಾಗೆ **ವೇತ್ಸ್ಯತೇ** - ತಿಳಿಯುವೆ" **ಎನ್ರು** - ಎಂದು ಹೇಳಿರುವ ಹಾಗೆ ನೀನು ವಿಷ್ಣುಪುರಾಣಕರ್ತಾ ಆಗುವಿ ಎಂಬ ಪುಲಸ್ತ್ಯ ವರಪ್ರಸಾದದಿಂದಲೂ, (೨) ಇದು ವಸಿಷ್ಠಭಗವಾನರವರ ವಾಕ್ಯವು. "**ಪುಲಸ್ತ್ಯೇನ**-ಪುಲಸ್ತ್ಯ ಭಗವಾನರವರಿಂದ, **ತೇ**- ನಿನಗಾಗಿ, **ಯದುಕ್ತಂ**-ಯಾವುದು ಅನುಗ್ರಹರೂಪದಲ್ಲಿ ಹೇಳಲ್ಪಟ್ಟಿತೋ, ಅದೆಲ್ಲಾ **ಸರ್ವಮೇತದ್ಭವಿಷ್ಯತಿ** - ಸ್ವಲ್ಪವೂ ಹೆಚ್ಚುಕಡಿಮೆಯಿಲ್ಲದೆ ಎಲ್ಲವೂ ಸರ್ವವಿಧದಿಂದಲೂ ನಿನಗೆ ಉಂಟಾಗುತ್ತದೆ, ಲಭಿಸುತ್ತದೆ." "**ಸರ್ವಮೇತದ್ಭವಿಷ್ಯತಿ**"ಎಂಬ ಪಾಠಾಂತರವೂ ಉಂಟು. ಇದು ಪಿತಾಮಹರಾದ ವಸಿಷ್ಠರ ವರಪ್ರಸಾದವು, ಆದುದರಿಂದ ಮುಂದೆ **ಪುಲಸ್ತ್ಯ ವಸಿಷ್ಠ ವರಪ್ರಸಾದತ್ತಾಲೆ** ಎಂಬ ಪ್ರಯೋಗವು. ಹೀಗೆ ಇವರಿಬ್ಬರ ವರಪ್ರಸಾದದಿಂದ, **ಪರದೇವತಾ ಪಾರಮಾರ್ಥ್ಯಜ್ಞಾನಮುಡೈಯನಾಯ್** - ಪರತತ್ವದ ಯಥಾರ್ಥಜ್ಞಾನವುಳ್ಳವರಾದ, ಇದು ಪರಾಶರಬ್ರಹ್ಮರ್ಷಿ ಎಂಬ ಕರ್ತೃಪದಕ್ಕೆ ವಿಶೇಷಣವು; ಮತ್ತು **ಪೆರಿಯಮುದಲಿಯಾರ್** - ನಿರತಿಶಯಜ್ಞಾನನಿಧಿಗಳಾದ ಶ್ರೀ ಆಳವಂದಾರ್ರವರು, "**ತಸ್ಮೈ ನಮೋ ಮುನಿವರಾಯ ಪರಾಶರಾಯ**" ಇಂತಹ ಮಹೋಪಕಾರವನ್ನು ಮಾಡಿದ ಮುನಿಶ್ರೇಷ್ಠರಾದ ಪರಾಶರ ಮಹರ್ಷಿಗಳಿಗೆ ನಮಸ್ಕಾರವು" **ಎನ್ರು**-ಎಂಬದಾಗಿ, **ಆದರಿಕ್ಕುಂ ಪಡಿಯಾನ**-

(೧) ವಿ. ಪು. ೧. ೧. ೨೮. (೨) ಆಳವಂದಾರ್ ಸ್ತೋತ್ರ, ೪.

ಶ್ರೀ ಪರಾಶರ ಬ್ರಹ್ಮರ್ಷಿ ಪರಕ್ಕಪ್ಪೇಶಿ, (೧)"ದೇವತಿರ್ಯಙ್ಮನುಷ್ಯೇಷು ಪುನ್ನಾಮಾ ಭಗವಾ೯ ಹರಿಃ । ಸ್ತ್ರೀ ನಾಮ್ನೀ ಲಕ್ಷ್ಮೀರ್ಮೈತ್ರೇಯ ನಾನಯೋರ್ವಿದ್ಯತೇ ಪರಂ ॥" ಎನ್ರು ಪರಮರಹಸ್ಯಯೋಗ್ಯನಾನ ಸಚ್ಛಿಷ್ಯನುಕ್ಕುಪದೇತಿತ್ತಾ೯.

ವಿಶೇಷಭಕ್ತಿವಿಶ್ವಾಸಗಳಿಂದ ಸ್ತುತಿಸಲ್ಪಟ್ಟವರಾದ, **ಶ್ರೀಪರಾಶರ ಬ್ರಹ್ಮರ್ಷಿ**- ಬ್ರಹ್ಮವಿತ್ತಾದ ಶ್ರೀ ಪರಾಶರ ಮಹರ್ಷಿಗಳು, **ಪರಕ್ಕಪ್ಪೇಶಿ** - ವಿಸ್ತಾರವಾಗಿ ಹೇಳಿ, ಯಾವುದನ್ನು ವಿಸ್ತಾರವಾಗಿ ಹೇಳಿ ಎಂದರೆ, **ಇನ್ನರ್ಥತ್ತೈ** – ವಿಸ್ತಾರವಾಗಿ ಹೇಳಿ ಎಂದು ಅನ್ವಯವು, **"ದೇವತಿರ್ಯಙ್ಮನುಷ್ಯೇಷು** – ದೇವತೆಗಳಲ್ಲೂ, ಮೃಗಗಳಲ್ಲೂ, ಮನುಷ್ಯರಲ್ಲೂ ಎಂದರೆ ಸಮಸ್ತ ಜಗತ್ತುಗಳಲ್ಲೂ, **ಪುನ್ನಾಮಾ** - ಪುರುಷರೂಪವೆಂದು ಹೆಸರುಳ್ಳದುದೆಲ್ಲಾ, **ಭಗವಾ೯ ಹರಿಃ**– ಭಗವಂತನಾದ ಶ್ರೀಹರಿಯ ವಿಭೂತಿಗೆ ಸೇರಿದವು; **ಸ್ತ್ರೀನಾಮ್ನೀ** –ಸ್ತ್ರೀ ಎಂದು ಹೆಸರುಳ್ಳವೆಲ್ಲಾ, **ಲಕ್ಷ್ಮೀಃ** – ಲಕ್ಷ್ಮಿಯ ವಿಭೂತಿಗೆ ಸೇರಿದವು, **ಹೇ ಮೈತ್ರೇಯ** - ಓ ಮೈತ್ರೇಯನೇ, **ಅನಯೋಃ** - **ಈ** ಲೋಕದಂಪತಿಗಳಾದ ಇಬ್ಬರಿಗಿಂತಲೂ, **ಪರಂ** - ಶ್ರೇಷ್ಠವಾದುದು, **ನವಿದ್ಯತೇ** – ಇರುವದಿಲ್ಲವು ಎಂದರೆ ಈ ವಿಭೂತಿಗಳು ಇಬ್ಬರಿಗೂ ಸೇರಿದ್ದರೂ, **ಈ** ಈ ವಿಭೂತಿಗಳು **ಇವರಿವರಿಗೆ** ಪ್ರಿಯವಾದುವೆಂಬ ತಾತ್ಪರ್ಯವು. ಇದರಿಂದ **ಈ** ವಿಭೂತಿಗಳಿಗೆ ಇಬ್ಬರೂ ಶೇಷಿಗಳಾಗಿರುವದರಿಂದ, ಇಬ್ಬರಿಗೂ ಸಮಪ್ರಾಧಾನ್ಯವು ಹೇಳಲ್ಪಟ್ಟಿತು. ಇವರಿಬ್ಬರೂ ಲೋಕದಂಪತಿಗಳಾದುದರಿಂದ, ಇಬ್ಬರೂ ಸೇರಿ ನಮಗೆ ಪರದೇವತೆಯೆಂಬ ಭಾವವು." **ಎನ್ರು**-ಎಂಬದಾಗಿ, **ಪರಮರಹಸ್ಯಯೋಗ್ಯನಾನ** - ಸರ್ವಶ್ರೇಷ್ಠವಾದ ರಹಸ್ಯವನ್ನು ಗುರುಮುಖೇನ ಅಧಿಕರಿಸಲು ಯೋಗ್ಯರಾದ, **ಸಚ್ಛಿಷ್ಯನುಕ್ಕು** - ಸದಾಚಾರನಿರತರಾದ ಮೈತ್ರೇಯರಿಗೆ, **ಉಪದೇಶಿತ್ತಾ೯** - ಉಪದೇಶಿಸಿದರು.

ಈ ಮೇಲಿನ ವಾಕ್ಯದಭಿಪ್ರಾಯವು ಇಷ್ಟೇ. **ಶ್ರೀಮನ್ನಾರಾಯಣನೇ** ಪರತತ್ವವೆಂದೂ, **"ತ್ವಂ ಮಾತಾ ಸರ್ವಲೋಕಾನಾಂ ದೇವದೇವೋ ಹರಿಃ ಪಿತಾ"** ಲಕ್ಷ್ಮಿಯು ಲೋಕಜನನಿ ಎಂದೂ, ಶ್ರೀಹರಿಯು ಲೋಕಪಿತಾವೆಂದೂ, ಹೀಗೆ **ಈ** ದಂಪತಿಗಳು ಜಗತ್ತುಗಳಿಗೆಲ್ಲಾ **ಈಶ್ವರೀಶ್ವರರೆಂದೂ** ಜ್ಞಾನದೀಪ್ತಿಯಿಂದ ಪ್ರಕಾಶಿಸುವ ಶ್ರೀ ಪರಾಶರರು ತಮ್ಮ ಸಚ್ಛಿಷ್ಯರಾದ ಮೈತ್ರೇಯರಿಗೆ ಉಪ

(೧) ವಿ. ಪು. ೧. ಅ. ೩೫.

ದೇಶಿಸಿರುತ್ತಾರೆಂದು ಅಪ್ಪಣೆಕೊಡಿಸಿರುತ್ತಾರೆ. ಶ್ರೀಪರಾಶರರು ಸಾಮಾನ್ಯರಲ್ಲವು ಅವರ ವಾಕ್ಯದಲ್ಲಿ ನಾವು ತುಂಬಾ ನಂಬಿಕೆಯನ್ನಿಡತಕ್ಕದ್ದು. ಏಕೆಂದರೆ:—

೧. ಶ್ರೀ ಪರಾಶರರು ತಮ್ಮ ತಂದೆಯನ್ನು ಅಸುರರು ಕೊಂದರಲ್ಲಾ ಎಂಬ ಕೋಪದಿಂದ ರಾಕ್ಷಸರೆಲ್ಲರ ನಾಶಕ್ಕಾಗಿ ಯಜ್ಞವನ್ನು ಆರಂಭಿಸಿ, ಅದರಿಂದ ರಾಕ್ಷಸರು ನಾಶವಾಗುತ್ತಿರಲು; ತಮ್ಮ ಪೌತ್ರರು ಇಂತಹ ಕ್ರೂರಕೃತ್ಯದಲ್ಲಿ ಪ್ರವರ್ತಿಸಿದರಲ್ಲಾ ಎಂಬ ಪರಿತಾಪದಿಂದ ವಸಿಷ್ಠರು ಬಂದು ಅವರನ್ನು ಇಂತಹ ದುಷ್ಕರ್ಮದಿಂದ ನಿವೃತ್ತಿಸುವ ಹಾಗೆ ಮಾಡಿ, ಅನಂತರ ಪುಲಸ್ತ್ಯರನ್ನೂ ಕರೆದುಕೊಂಡ್ಬಂದು, ಇಬ್ಬರೂ ಶ್ರೀ ಪರಾಶರರನ್ನು ಅನುಗ್ರಸಿದುದರಿಂದ ಇವರು ಜ್ಞಾನದೀಪ್ತಿಯನ್ನು ಹೊಂದಿದರು. ಆದುದರಿಂದಲೇ **ಪುಲಸ್ತ್ಯ ವಸಿಷ್ಠ ವರಪ್ರಸಾದತ್ತಾಲೇ** ದೇವತಾಪಾರಮಾರ್ಥ್ಯಜ್ಞಾನವನ್ನು ಹೊಂದಿದವರು ಎಂದು ಹೇಳಲ್ಪಟ್ಟಿರುತ್ತದೆ. ಆಕಾರಣದಿಂದ ಅವರ ವಾಕ್ಯವು ಪರಮ ಗ್ರಾಹ್ಯವು

೨. ಹೀಗೆ ಅವರ ಹೇಳಿಕೆಯು ಪರಮಾಪ್ತವಾಕ್ಯವೆಂದು ತಾವು ಮಾತ್ರವೇ ಹೇಳಿದುದಲ್ಲವು, ತಮ್ಮ ಆಚಾರ್ಯಾಗ್ರೇಸರರಾದ **ಪೆರಿಯ ಮುದಲಿಯಾರರಾದ** ಶ್ರೀ ಯಾಮುನೇಯರವರೂ ತಮ್ಮ ಸ್ತೋತ್ರರತ್ನದ ಆದಿಭಾಗದಲ್ಲಿ ಬಹಳವಾಗಿ ಕೊಂಡಾಡಿರುತ್ತಾರೆಂದು ಹೇಳುತ್ತಾರೆ. ಆ ಶ್ಲೋಕವು ಯಾವುದೆಂದರೆ:—

"ತತ್ತ್ವೇನ ಯಶ್ಚಿದಚಿದೀಶ್ವರ ತತ್ಸ್ವಭಾವ
ಭೋಗಾಪವರ್ಗ ತದುಪಾಯಗತೀರುದಾರಃ ॥
ಸಂದರ್ಶಯನ್ನಿರಮಿಮಾತೆಪುರಾಣರತ್ನಂ ।
ತಸ್ಮೈ ನಮೋ ಮುನಿವರಾಯ ಪರಾಶರಾಯ ॥"

"ಯಾವ ಮಹನೀಯರಾದ ಶ್ರೀ ಪರಾಶರಮಹರ್ಷಿಗಳು ತಮ್ಮ ಯಥಾರ್ಥಜ್ಞಾನದಿಂದ ಏನೊಂದೂ ಪ್ರತಿಫಲದ ಆಶೆಯಿಲ್ಲದೆ ಲೋಕೋಪಕಾರಕ್ಕಾಗಿ, **ಚಿದ ಚಿದೀಶ್ವರರೂಪ ತತ್ವತ್ರಯಗಳ ಸ್ವರೂಪಸ್ಥಿತಿ ಪ್ರವೃತ್ತಿಗಳನ್ನೂ, ಚೇತನರಿಗೆ ಪುರ ಷಾರ್ಥರೂಪಗಳಾದ ಐಹಿಕಸ್ವರ್ಗಕೈವಲ್ಯಸುಖರೂಪ ಭೋಗಗಳ ಮತ್ತು ಮೋಕ್ಷದ ವಿಷಯವನ್ನೂ, ಅವುಗಳನ್ನು ಹೊಂದುವ ಉಪಾಯಗಳನ್ನೂ, ಉಪದೇಶಿಸುವವರಾಗಿ ಪುರಾಣರತ್ನವೆನಿಸಿದ ಶ್ರೀ ವಿಷ್ಣುಪುರಾಣವನ್ನು ರಚಿಸಿದರೋ ಅಂತಹ ಬ್ರಹ್ಮವಿತ್ತಾದ ಮುನಿಶ್ರೇಷ್ಠರಿಗೆ ನಮಸ್ಕಾರ"ವೆಂಬುವದು ಈ ಶ್ಲೋಕತಾತ್ಪರ್ಯವು.

ಇಂತಹ ಪರಬ್ರಹ್ಮ ಸಾಕ್ಷಾತ್ಕಾರವನ್ನು ಹೊಂದಿದ ಶ್ರೀ ಪರಾಶರರು ತಮ್ಮಿಂದ ಪರಮರಹಸ್ಯಾರ್ಥವನ್ನೂ ಕೂಡ ಪಡೆಯಲು ಹೋಗ್ಯರಾದ ಮೈತ್ರೇಯರೆಂಬ ಶಿಷ್ಯರಿಗೆ ಈ ಮೇಲಿನ ಅಭಿಪ್ರಾಯವನ್ನು ಉಪದೇಶಿಸುತ್ತಾರೆ. ಏನನ್ನು ಉಪದೇಶಿಸಿದರು ಎಂಬುವದಕ್ಕೆ ದಾಸನು ಬರೆದಿರುವ ಚತುಶ್ಲೋಕಿಯ ವ್ಯಾಖ್ಯಾ

ನದ ೪೪—೯೪ ಪುಟಗಳನ್ನೂ, ಶ್ರೀಸ್ತುತಿಯ ವ್ಯಾಖ್ಯಾನದ ೪೪—೪೪ ಪುಟಗಳನ್ನೂ ಪರಾಂಬರಿಸಬಹುದು. ಉಪದೇಶವು ಸಂಗ್ರಹವಾಗಿ ಏನೆಂದರೆ:—

ಶ್ರೀ ಪರಾಶರರು ಭೃಗುಖ್ಯಾತಿಗಳಿಗೆ ಲಕ್ಷ್ಮ್ಯಾಯು ಪುತ್ರಿಯಾಗಿ ಅವತರಿಸಿದಳೆಂದು ಹೇಳಿದರು. ಅದಕ್ಕೆ ಅವರ ಶಿಷ್ಯರಾದ ಮೈತ್ರೇಯರು, ಲಕ್ಷ್ಮ್ಯಾಯು ಕ್ಷೀರಸಾಗರಕನ್ನಿಕೆಯೆಂದು ಹೇಳಿರುವಾಗ, ಇವರುಗಳಿಗೆ ಹೇಗೆ ಮಗಳು ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀಪರಾಶರರು ಲಕ್ಷ್ಮೀನಾರಾಯಣರು ಯಾವಾಗಲೂ **ನಿತ್ಯಯೋಗ** ವುಳ್ಳವರೆಂದು ಹೇಳಿ, ಅದು ಸ್ವರೂಪರೂಪಗುಣವಿಭವಾದಿಗಳಲ್ಲಿಲ್ಲಾ ಉಂಟೆಂದು ಸ್ಪುಟವಾಗಿ ಉಪಪಾದಿಸಿರುತ್ತಾರೆ. ಮೈತ್ರೇಯರ ಪ್ರಶ್ನೆಗೆ, ವಿಭವಾವತಾರಕಾಲಗಳಲ್ಲಿ ಇವರು ನಿತ್ಯಯೋಗವುಳ್ಳವರೆಂದು ಇಷ್ಟು ಮಾತ್ರ ಹೇಳಿದರೆ ಸಾಕಾಗಿತ್ತು. ಆದರೆ ತಮ್ಮ ಶಿಷ್ಯರು ವಿಭವಾವತಾರಕಾಲಗಳಲ್ಲಿ ಮಾತ್ರ ನಿತ್ಯಯೋಗವುಳ್ಳವರೆಂದು ಎಲ್ಲಿ ತಪ್ಪು ಅಭಿಪ್ರಾಯವುಳ್ಳವರಾಗುತ್ತಾರೋ ಎಂದು ಭಾವಿಸಿ, ಆ ನಿತ್ಯಯೋಗವು ಸ್ವರೂಪರೂಪಗುಣವಿಭವೈಶ್ವರ್ಯಾದಿಗಳಲ್ಲೂ ಉಂಟು ಎಂದು ವಿಶದವಾಗಿ ತೋರಿಸಿರುತ್ತಾರೆ. ಇದರಿಂದ "**ದ್ವೌ ಚ ಸದೈಕ ಶೇಷೀ**" ಎಂಬ ಪ್ರಮಾಣಾನುಸಾರ, ಲಕ್ಷ್ಮೀನಾರಾಯಣರೇ ಪರತತ್ವವು. ಆದುದರಿಂದಲೇ ಇಬ್ಬರೂ ಸರ್ವವನ್ನೂ ಸ್ವರೂಪತಃ ವ್ಯಾಪಿಸಿರುತ್ತಾರೆಂಬುವದನ್ನೂ, ಹಾಗೆಯೇ ಅವುಗಳ ನಿಯಮನವನ್ನೂ,

"ಯಥಾ ಸರ್ವಗತೋ ವಿಷ್ಣು ಸ್ತಥೈವೇಯಂ ದ್ವಿಜೋತ್ತಮ,"

"ತ್ವಯ್ಯೈತದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಂ"

ಎಂಬುವದರಿಂದಲೂ, "**ಜಗತ್ಧಾತ್ರೀ**" ಎಂಬುವದರಿಂದ ಧಾರಣಪೋಷಣಾರ್ಥವುಳ್ಳ ಧಾತುವಿನಿಂದ ಲಕ್ಷ್ಮ್ಯಾಗೂ ಕೂಡ ಜಗತ್ಸೃಷ್ಟಿಸ್ಥಿತಿಲಯಗಳಲ್ಲಿ ಅನ್ವಯ ಉಂಟೆಂದೂ, **ಸರ್ವಲೋಕ ಮಹೇಶ್ವರೀಮ್** ಎಂಬ ಪ್ರಯೋಗದಿಂದ ವಿಷ್ಣುವಿನೊಂದಿಗೆ ಸಮುಪ್ರಾಧಾನ್ಯವುಳ್ಳವಳೆಂದೂ, ಸರ್ವನಿಯನ್ತೃತ್ವ ಉಳ್ಳವಳೆಂದೂ, **ಯಜ್ಞನಿದ್ಯಾದಿ** ಶ್ಲೋಕದಿಂದ, ಮತುಪ್ ಶಬ್ದಾರ್ಥದಲ್ಲಿ ಬೋಧಿತವಾದ ಉಪಾಯೋಪೇಯತ್ವದಲ್ಲೂ ಅನ್ವಯ ಉಂಟೆಂದೂ, **ದೇವತಿರ್ಯಙ್ಮನುಷ್ಯೇಷು** ಎಂಬ ಶ್ಲೋಕದಿಂದ ವಿಭೂತಿಯಲ್ಲೂ ಸಮಪ್ರಧಾನತ್ವವು ಈಕೆಗೆ ಉಂಟೆಂದೂ, "**ವಿಮುಕ್ತಿ ಫಲದಾಯಿನೀಂ**" ಎಂಬ ಪ್ರಯೋಗದಿಂದ ಮೋಕ್ಷಪ್ರದತ್ವವೂ ಈಕೆಗೆ ಉಂಟೆಂದು ಸವಿಸ್ತಾರವಾಗಿ, ಉಪದೇಶಿಸಿರುತ್ತಾರೆ. ಅದಕ್ಕಾಗಿಯೇ ಶ್ರೀ ದೇಶಿಕರವರು **ಪರಕ್ಕಪೇಶಿ** ಎಂದು ಪ್ರಯೋಗಿಸಿರುತ್ತಾರೆ.

ಮೇಲಿನ **ದೇವತಿರ್ಯಙ್ಮನುಷ್ಯೇಷು** ಎಂಬ ಶ್ಲೋಕದಲ್ಲಿ ಲಕ್ಷ್ಮೀನಾರಾಯಣರಿಗೆ ವಿಭೂತಿವಿಭಾಗವು ಹೇಳಲ್ಪಟ್ಟಿತೆಂದು ಭಾವಿಸಕೂಡದು. ಆಗ ಸರ್ವೇಶ

ಇತ್ತೈ (೧)"**ಮಯರ್ ವರನುತಿ ನಲಮರುಳಪ್ಪೆತ್ತು**"(೨)"**ಆದ್ಯಸ್ಯ**

ರನ ವ್ಯಾಪ್ತಿನಿಯಾಮಕತ್ವಗಳೂ ಪರಿಚ್ಛಿನ್ನವಾದವುಗಳೆಂದು ಹೇಳಿದಂತಾಗುವದು. ಆದುದರಿಂದ ವಿಭೂತಿದ್ವಯವೂ ಇಬ್ಬರಿಗೂ ಸೇರಿದುದಾಗಿದ್ದರೂ, ಅವರವರುಗಳಿಗಿರುವ ಆಭಿಮುಖ್ಯದಿಂದ ಹೀಗೆ ವಿಭೂತಿವಿಭಾಗವು ಹೇಳಲ್ಪಟ್ಟಿತು. ಇದರಿಂದ ಸಮಪ್ರಧಾನತೆಯೂ ಕೂಡ ಬೋಧಿತವಾಯಿತು. ಹಾಗೆಯೇ ವಿಷ್ಣುಚಿತ್ತೀಯ ವ್ಯಾಖ್ಯಾನದಲ್ಲಿ, "**ಸರ್ವಸ್ಯ ಉಭಯಾತ್ಮಕತ್ವೇಽಪಿ, ತತ್ತಾಭಿಮುಖ್ಯಾತಿಶಯವಿಶೇಷಾತ್ ಅರ್ಥವಾಣ್ಯಾದೀನಾಂ ತದಾತ್ಮಕತ್ವಮುಕ್ತಂ**" ಎಂಬದಾಗಿ ಹೇಳಿರುತ್ತಾರೆ.

ಹೀಗೆ ಲಕ್ಷ್ಮೀನಾರಾಯಣರಿಬ್ಬರೂ ಸೇರಿ ಪರತತ್ವವೆಂಬ ವಿಷಯವು ಪರಮರಹಸ್ಯವಾದ ವಿಷಯವು. ಶ್ರುತ್ಯರ್ಥಗಳನ್ನು ಚನ್ನಾಗಿ ಅವಗಾಹನೆಮಾಡಿಕೊಂಡು, ಅವುಗಳನ್ನೆಲ್ಲಾ ತಮ್ಮ ಮಕ್ಕಳಾದ ವ್ಯಾಸಮಹರ್ಷಿಗಳಿಗೆ ಉಪದೇಶಿಸಿ ಅವರ ಮೂಲಕ ಶ್ರುತ್ಯರ್ಥಗಳೆಲ್ಲಾ ಚನ್ನಾಗಿ ವಿನೇಚನೆಮಾಡಲ್ಪಟ್ಟು ಬ್ರಹ್ಮಸೂತ್ರ,ಭಾರತ,ಭಾಗವತ ಮೂಲಕವಾಗಿ ಎಲ್ಲರಿಗೂ ವೇದ್ಯವಾಗಲು ಈ ಪರಾಶರರು ಕಾರಣಭೂತರಾದವರಾದುದರಿಂದ, ಈ ಪರದೇವತಾಪಾರಮಾರ್ಥ್ಯರೂಪ ಪರಮರಹಸ್ಯವನ್ನು ಇವರು ವಿಶದವಾಗಿ ಅರಿತವರಾಗಿ, ಅಂತಹ ಪರಮರಹಸ್ಯವನ್ನುಪದೇಶಿಸಲು ಅರ್ಹರಾದ ತಮ್ಮ ಸಚ್ಛಿಷ್ಯರಾದ ಮೈತ್ರೇಯರಿಗೆ ತಿಳಿಸಿದರು ಎಂದು ಹೇಳಿರುತ್ತಾರೆ.

ಶ್ರೀ ಪರಾಶರವ್ಯಾಸರುಗಳೇ ತುಂಬಾ "**ಬುದ್ಧಿಯೋಗ**"ವನ್ನು ಪಡೆದವರಾದುದರಿಂದ ಈ ಪರಮರಹಸ್ಯವನ್ನು ಹೊರಪಡಿಸಿದುದೇನೋ ಸರಿಯೇ. ಆದರೆ ಶ್ರೀ ನಮ್ಮಾಳ್ವಾರರೂ ಸಹ ಅಂತಹ **ಬುದ್ಧಿಯೋಗ**ಕ್ಕೆ ಪಾತ್ರರಾಗಿ ಅಜ್ಞಾನವಿಪರ್ಯಯಸಂಶಯಗಳ ಗಂಧವೇ ಇಲ್ಲದವರಾದ ಪ್ರಯುಕ್ತ,ಇಂತಹ ರಹಸ್ಯರೂಪಪರಮಾರ್ಥವನ್ನು ಇವರೂ ಹೊರಪಡಿಸಿದ್ದಾರೆಯೇ ಎಂದರೆ ಶ್ರೀ ವಿಶಿಷ್ಟತತ್ವವೇ ಪರತತ್ವವೆಂದು ಅನೇಕ ಕಡೆ ಉಪಪಾದಿಸಿರುತ್ತಾರಾಗಿ, ಅವುಗಳೊಳಗೆ ಒಂದನ್ನು ಮುಂದಿನ ವಾಕ್ಯದಲ್ಲಿ ಉದಾಹರಿಸುತ್ತಾರೆ:—

ಇತ್ತೈ – ಈ ಲಕ್ಷ್ಮೀನಾರಾಯಣರೇ ಪ್ರಾಪ್ಯರು, ಶರಣ್ಯರು ಎಂಬುವದನ್ನು, "**ಮಯರ್ವ** – ಅಜ್ಞಾನ ವಿಪರ್ಯಯಸಂಶಯಗಳು, **ಅರ** – ನಶಿಸಿ

(೧) ತಿರು ಮೊಳಿ, ೧. ೧. ೧. (೨) ಸ್ತೋತ್ರ ೫.

ನಃ ಕುಲಪತೇಃ'' ಎಜ್ಞಾರಪಡಿಯೇ ಪ್ರಪನ್ನಸಂತಾನ ಕೂಟಸ್ಥರಾನ ನಮ್ಮಾಳ್ವಾರುಮ್ (೩) "ಒಣ್ಮೊಡಿಯಾಳ್ತಿರುಮಗಳುಮ್ ನೀಯುಮೇ ನಿಲಾ ನಿರ್ಪ ಕಣ್ಡಶದಿರ್ ಕಣ್ಡು'' ಎನ್ರುರುಳಿಚ್ಚೆಯ್ದಾರ್.

ಹೋಗುವ ಹಾಗೆ, **ಮತಿ** – ಜ್ಞಾನವನ್ನು, ಸರ್ವಜ್ಞತೆಯನ್ನೂ, **ನಲಂ** - ಆನಂದತ್ವವನ್ನೂ, **ಅರುಳಂಪೆತ್ತು**–ಶ್ರಿಯಃ ಪತಿಯ ಕೃಪೆಯಿಂದ ಹೊಂದಿದವರಾಗಿ,'' **''ನಃ** - ನಾಥಮುನಿ ಮೊದಲಾದ ನಮ್ಮಗಳಿಗೆ, **ಆದ್ಯಸ್ಯ** - ಮಹೋಪಕಾರದಿಂದ ಆಳ್ವಾರುಗಳಲ್ಲಿ ಮೊದಲನೆಯವರಾಗಿ, **ಕುಲಪತೇಃ** – ನಮ್ಮ ಕುಲಕ್ಕೆಲ್ಲಾ ನಾಥರಾದ," **ಎಜ್ಞಾರಪಡಿಯೇ** - ಎಂದು ಹೇಳಿರುವ ಹಾಗೆ, **ಪ್ರಪನ್ನಸಂತಾನ ಕೂಟಸ್ಥರಾನ** – ಪ್ರಪನ್ನರ ಸಮೂಹಕ್ಕೆಲ್ಲಾ ಮೂಲಭೂತರಾದ, **ನಮ್ಮಾಳ್ವಾರುಮ್**-ನಮ್ಮಾಳ್ವಾರವರೂ,''**ಒಣ್ಮೊಡಿಯಾಳ್**-ಸುಂದರವಾದ ಹಸ್ತಾಭರಣವನ್ನು ಧರಿಸಿರುವ, **ತಿರುಮಗಳ್**-''**ನಾರೀಣಾಮುತ್ತಮಾಂ ವಧೂಃ**''ಎಂದು ಹೇಳಿರುವ ಹಾಗೆ ನಾರಿಯರಲ್ಲಿ ಶ್ರೇಷ್ಠಳಾದ ಲಕ್ಷ್ಮಿಯೂ, **ನೀಯುಮೇ**-ಪರಮ ಪುರುಷನಾದ ನೀನೂಕೂಡ, **ನಿಲಾನಿರ್ಪ**–ಸರ್ವೋತ್ಕೃಷ್ಟರಾಗಿರುವದನ್ನು ಎಂದರೆ ನಿಮಗೆ ಶೇಷಭೂತವಾಗಿ ಎಲ್ಲವೂ ಇರುತ್ತದೇ ವಿನಾ ಸ್ವತಂತ್ರವಾಗಿ ಯಾವುದೂ ಇಲ್ಲವೆಂಬ ಭಾವವು, **ಕಣ್ಡಶತಿರ್** – ಹೀಗೆ ಪರಮ ಪುರುಷಾರ್ಥವು ಯಾವುದು ಎಂಬುವದನ್ನು ಕಂಡುಕೊಂಡ ಒಳ್ಳೇ ಮಾರ್ಗವನ್ನು, **ಕಂಡೊಳಿನ್ದೇನ್** – ಸಾಕ್ಷಾತ್ಕರಿಸಿ, ಮಿಕ್ಕ ತುಚ್ಛವಾದ ಐಶ್ವರ್ಯಸುಖ, ಆತ್ಮಾವಲೋಕನಸುಖಗಳನ್ನು ತ್ಯಜಿಸಿದೆನು. ಯಾವುದು ತುಚ್ಛವಾದವೆಂಬುವದು ಈ ಪಾಶುರದ ಪೂರ್ವಾರ್ಧದಲ್ಲಿ ಹೇಳಿರುತ್ತದೆ. **ಅಡೈನ್ದೇನುನ್ನಿರುವಡಿಯೇ** - ಶ್ರಿಯಃಪತಿಯಾಗಿ, ಪರವ್ಯೂ ಪುರುಷಾರ್ಥಭೂತನಾದ ನಿನ್ನ ಪಾದಕಮಲಗಳನ್ನು, ಅನುಭವರೂಪದಲ್ಲಿ ಹೊಂದಿದೆನು ಎಂದು ಕೆಲವರರ್ಥ ಹೇಳುತ್ತಾರೆ. ಇನ್ನು ಕೆಲವರು ನಿನ್ನನ್ನು ಆಶ್ರಯಿಸಿ, ನಿನ್ನಲ್ಲಿ ಶರಣಾಗತಿಮಾಡಿದೆನೆಂದು ಹೇಳುತ್ತಾರೆ. ಇವೆರಡರ್ಥಗಳೂ ನಿಶ್ಚಯವು, ಶ್ರಿಯಃಪತಿಯನ್ನೇ ಶರಣ್ಯನೆಂದೂ ಪ್ರಾಪ್ಯನೆಂದೂ ಆಶ್ರಯಿಸಿದೆವು ಎಂಬುವದು ಸರ್ವೋತ್ಕೃಷ್ಟವಾದ ತಾತ್ಪರ್ಯವು. ಮತ್ತೆಲ್ಲವನ್ನೂ ಬಿಟ್ಟೆನು, ಪರನು ಪುರುಷಾರ್ಥವಾದುದನ್ನು ಮಾತ್ರ ಅವಲಂಬಿಸಿದೆನೆಂಬ ಭಾವವು. ಇದರಲ್ಲಿ ಬಿಟ್ಟಿದುದು ಯಾವುದು ಹಿಡಿದದ್ದು ಯಾವುದು ಎಂಬುವದನ್ನು ತಿಳಿಸುತ್ತಾರೆ.

''ಕಣ್ಡಕೇಟ್ಟಱಿನ್ದುಮೊನ್ದುನ್ದಳಲುಮೈಜ್ಞಾರುವಿ । ಕಣ್ಡವಿನ್ಬಮ್

(೩) ತಿರು. ನೊಳಿ ೪. ೯. ೧೦.

ಇವ್ವಿಷಯತ್ತಿಲ್ ವಕ್ತವ್ಯ ಮೆಲ್ಲಾಮ್ ಚತುಶ್ಶ್ಲೋಕೀ ವ್ಯಾಖ್ಯಾನತ್ತಿಲೆ ಪರಪಕ್ಷಪ್ರತಿಕ್ಷೇಪ ಪೂರ್ವಕವಾಗ, ಪರಕ್ಕಚ್ಚೊನ್ನೋಮ್, ಅಜ್ಞೀ ಕಣ್ಡುಕೊಳ್ಳುದು.

ತೆರಿವರಿಯಾವಳವಿಲ್ಲಾ ಚಿತ್ತಿನ್ನಪ । ನೊಣ್ಡಿಯಾಳ್ ತಿರುವುಗಳುಮ್ ನೀಯುಮೇ ನಿಲಾನಿರ್ಪ । ಕಣ್ಡಶಿದಿರ್ಕಣ್ಡೊಳಿನ್ದೇ ನಡೈನ್ದೇ ನುನ್ನಿರುವಡಿಯೇ” ॥

ಎಂಬುವದು ಪೂರಾ ಪಾಶುರವು. ಇದರರ್ಥವು:—ಕಣ್ಣಿನಿಂದ ನೋಡಿ ಕಿವಿಗಳಿಂದ ಕೇಳಿ, ತ್ವಗಿಂದ್ರಿಯದಿಂದ ಸ್ಪರ್ಶಿಸಿ, ಮೂಗಿನಿಂದ ಮೂಸಿನೋಡಿ, ರಸನೇಂದ್ರಿಯದಿಂದ ಉಂಡು, ಹೀಗೆ **ಉಳಲುವುಮ್** - ಭ್ರಮಿಸುವ, **ಐಞ್ಞರುವಿಕಣ್ಣವಿನ್ಬಮ್** - ಪಂಚೇಂದ್ರಿಯಗಳ ದ್ವಾರಾ ಅನುಭವಿಸುವ ಸುಖವನ್ನು, **ತೆರಿವರಿಯವಳವಿಲ್ಲಾ ಚಿತ್ತಿನ್ಬಮ್** - ಮಂದಬುದ್ಧಿಗಳಿಂದ ತಿಳಿಯಲು ಸಾಧ್ಯವಲ್ಲದಾಗಿ, ಈ ಮೇಲಿನೈಶ್ವರ್ಯಕ್ಕಿಂತ ಮೇಲಾಗಿ, ಪರಿಪೂರ್ಣ ಬ್ರಹ್ಮಾನುಭವಕ್ಕಿಂತ ನಿಕೃಷ್ಟವಾದುದಾಗಿರುವ ಕೇವಲಾತ್ಮಾನುಭವವನ್ನೂ, ಇವೆರಡನ್ನೂ, **ಒಳಿನ್ದೇ** - ಪರಮಪುರುಷಾರ್ಥಕ್ಕಿಂತಲೂ ನಿಕೃಷ್ಟವಾದುದರಿಂದ, ಪರಿತ್ಯಜಿಸಿದೆನು. ಏಕೆ ಪರಿತ್ಯಜಿಸಿದ್ದು ಎಂದರೆ :—**ಕಂಡಶವಿರ್ಕಂಡು** - ಅವುಗಳ ತುಚ್ಛತೆಯನ್ನೂ, ಇದರ ಅತಿಶಯವನ್ನೂ, ತಿಳಿದವನಾದುದರಿಂದ, ಅವುಗಳನ್ನು ಬಿಟ್ಟೆನು. ಯಾವುದು ಒಳ್ಳೇ ಪರಮಪುರುಷಾರ್ಥದಾಯಿಕ ಮಾರ್ಗವಾಯಿತೋ ಅದನ್ನು ಅವಲಂಬಿಸಿದೆನು. ಅದು ಯಾವುದು ಎಂದರೆ :— **ಅಡೈನ್ದೇ ನುನ್ನಿರುವಡಿಯೇ** - ನಿನ್ನ ತಿರುವಡಿಗಳನ್ನು ಶರಣವಾಗಿಯೂ ಪ್ರಾಪ್ಯವಾಗಿಯೂ ಆಶ್ರಯಿಸಿದೆನು.” ಎಂಬುವದು ಈ ಪಾಶುರಾರ್ಥವು.

ಹೀಗೆ ಸರ್ವೇಶ್ವರನ ಕೃಪೆಯಿಂದ ಸರ್ವಜ್ಞತೆಯನ್ನು ಹೊಂದಿ, ಅಂತಹ ದಿವ್ಯಜ್ಞಾನದಿಂದ ವಿರಾಜಿಸಿದವರಾಗಿ, ಅದರಿಂದ ಶ್ರೀಮನ್ನಾಥಮುನಿಗಳ ಸಂಪ್ರದಾಯಕ್ಕೆ ಸೇರಿದ ನಮಗೆಲ್ಲಾ ಜ್ಞಾನವೈರಾಗ್ಯ ಭಕ್ತಿಗಳಿಗೆ ಕಾರಣಭೂತರಾಗಿ, ಅದಿಕುಲಪತಿ ಎಂದೆನಿಸಿ, ಪ್ರಪನ್ನ ಸಂತಾನ್ ಕೂಟಸ್ಥರೆಂದು ಶ್ಲಾಘ್ಯತೆಯನ್ನು ಹೊಂದಿದ ನಮ್ಮಾಳ್ವಾರ್ರವರೂ ಕೂಡ ಲಕ್ಷ್ಮೀನಾರಾಯಣರೇ ನಮಗೆ ಉಪಾಯಭೂತರು, ಅವರೇ ನಮಗೆ ಪ್ರಾಪ್ಯವು ಎಂದುಪದೇಶಿಸಿರುತ್ತಾರೆ.

ಇವ್ವಿಷಯತ್ತಿಲ್ - ಈ ಲಕ್ಷ್ಮೀನಾರಾಯಣರು ಈಶ್ವರೇಶ್ವರರಾಗಿ, ಎಲ್ಲಾ ವ್ಯಾಪಾರಾದಿಗಳನ್ನೂ ಇಬ್ಬರೂ ನಿರ್ವಹಿಸುವರಾಗಿ, ಇಬ್ಬರೂ ಸೇರಿ ಪರತತ್ವವೆಂಬ ವಿಷಯದಲ್ಲಿ, **ವಕ್ತವ್ಯಮೆಲ್ಲಾಂ** - ಏನೇನನ್ನು ತಿಳಿಸಬೇಕೋ ಅವೆಲ್ಲ

ವಾದಿಯರ್ ಮನ್ನುನ್ತರುಕ್ಕಚ್ಚೆರುಕ್ಕಿಲ್ ಮುರೈಕುಲೈಯ।
ಚ್ಚಾತು ಶನಜ್ಗಳ ಡಜ್ಗ ನಡುಜ್ಗ ತನಿತ್ತನಿಯೇ ॥

ವನ್ನೂ, ಚತುಶ್ಲೋಕಿಗೆ ತಾವು ಬರೆದ ವ್ಯಾಖ್ಯಾನದಲ್ಲಿ, **ಪೂರ್ವಪಕ್ಷ ಪ್ರತಿಕ್ಷೇಪ ಪೂರ್ವಕವಾಗ** – ಅನೇಕ ತೋರಿಬರುವ ಪೂರ್ವಪಕ್ಷಗಳನ್ನೆಲ್ಲಾ ಖಂಡಿಸುವದರ ಮೂಲಕವಾಗಿ, **ಪರಕ್ಕಚ್ಚೊನ್ನೋಮ್** - ವಿಸ್ತಾರವಾಗಿ ಹೇಳಿರುವೆವು. **ಅಜ್ಗೇಕಂಡುಕೊಳ್ವದು** – ಅಲ್ಲೇ ನೋಡಿ ತಿಳಿದುಕೊಳ್ಳುವದು.

ಅಲ್ಲಿ **ತೋರಿಸಿರುವ** ಪೂರ್ವಪಕ್ಷಗಳು ಯಾವುವೆಂದರೆ:—

(೧) ಇಬ್ಬರೂ ಈಶ್ವರೀಶ್ವರರಾದರೆ, ಲೋಕವ್ಯಾಪಾರಗಳಿಗೆ ವಿಘಾತವೂ, ನಿಸ್ಸಮಾಭ್ಯದಿಕ ಶ್ರುತಿಗಳಿಗೆ ವಿರೋಧವೂ, ಏಕತ್ವಶ್ರುತಿಗೂ ವಿರೋಧವೂ, ಐಕಾಂತ್ಯಹಾನಿಯೂ, ಮೊದಲಾದವು ಪ್ರಾಪ್ತವಾಗುತ್ತವೆ.

(೨) ಆದುದರಿಂದ ಲಕ್ಷ್ಮೀಗೆ ವಿಭುತ್ವವಿಲ್ಲವು. ಲಕ್ಷ್ಮೀಯು ಜೀವತತ್ವವು, ಅಣುವು, ಇನ್ನು ಕೆಲವರು ಆಕೆಯು ಸರ್ವೇಶ್ವರನ ದಯಾ, ಶಕ್ತಿ ಮೊದಲಾದವೇ ವಿನಾ ಚೇತನವೇ ಅಲ್ಲವು ಎಂದು ಹೇಳುವರು. ಒಂದುವೇಳೆ ಲಕ್ಷ್ಮೀಚೇತನವಾದರೂ ಜಗತ್ಸೃಷ್ಟಿಸ್ಥಿತಿಲಯಾದಿಗಳಲ್ಲಿ ಅನ್ವಯವಿಲ್ಲವು. ಆಕೆಯು ಉಪಾಯವಲ್ಲವು. ಆಕೆಗೆ ಮೋಕ್ಷಪ್ರದತ್ವಶಕ್ತಿಯೇ ಇಲ್ಲವು. ಇತ್ಯಾದಿಗಳು

(೩) ಇಬ್ಬರಿಗೂ ನಿತ್ಯಯೋಗ ಹೇಳಿದ್ದರೂ, ಸ್ವರೂಪತಃ ನಿತ್ಯಯೋಗವಿಲ್ಲವು.

ಇತ್ಯಾದಿ ಅನೇಕ ಆಕ್ಷೇಪಣೆಗಳಿಗೆಲ್ಲಾ ಅಲ್ಲಿ ಪ್ರಮಾಣ ಪೂರ್ವಕವಾಗಿ ಸಮಾಧಾನ ಹೇಳಲ್ಪಟ್ಟಿವೆ.

ಈ ಚತುಶ್ಲೋಕೀವ್ಯಾಖ್ಯಾನದಲ್ಲೇ ಕಂಡುಬರುವ ಈ ಎಲ್ಲಾ ಆಕ್ಷೇಪಣೆಗಳನ್ನೂ ಅವುಗಳ ಸಮಾಧಾನಗಳನ್ನೂ ದಾಸನು ಬರೆದಿರುವ ಶ್ರೀಸ್ತುತಿ, ಚತುಶ್ಲೋಕಿಗಳ ಕನ್ನಡ ವ್ಯಾಖ್ಯಾನವಾದ ಆಚಾರ್ಯ ಹೃದಯಾನ್ವೇಷಿಣೀ ಎಂಬುವದರಲ್ಲಿ ವಿಸ್ತಾರವಾಗಿ ಬರೆದಿರುತ್ತೇನೆ. ಪರಾಂಬರಿಸಬಹುದು.

ಅವತಾರಿಕೆ:— ಈ ಮೇಲೆ ಹೇಳಿದ ಅಧಿಕಾರದ ಅರ್ಥಗಳನ್ನು ಈ ಪಾಶುರದ ಮೂಲಕ ಸಂಗ್ರಹಿಸಿ ಹೇಳುತ್ತಾರೆ.

ವಾದಿಯರ್ - ಕುತರ್ಕಿಗಳು, **ಮನ್ನು** - ದೃಢತರವಾದ, **ತರುಕ್ಕಚ್ಚೆರುಕ್ಕಿಲ್** – ತರ್ಕದ ಗರ್ವದಿಂದ, ಇಲ್ಲಿ ತೃತೀಯಾರ್ಥದಲ್ಲಿ ಸಪ್ತಮಿಯು ಪ್ರಯೋಗಿಸಲ್ಪಟ್ಟಿರುತ್ತದೆ, **ಮುರೈ ಕುಲ್ಸೈಯ**– **"ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರತರಿಷ್ಯತಿ"** "ಅಲ್ಪಶ್ರುತನು ವಂಚಿಸಿ ಎಲ್ಲಿ ಅಪಾರ್ಥಗಳನ್ನು

ಆದಿ ಯೆನಾವಕೈಯಾರಣದ್ದೇಶಿಕರ್ ಶಾತ್ತಿನರ್‌ನಂ ।
ಪೋದಮರುಂ ತಿರುವಾತುಡನ್ನಿನ್ನ ಪುರಾಣನೈ ॥೧೩॥

ಹೇಳುತ್ತಾನೋ ಎಂದು ವೇದವು ನಡಗುತ್ತದೆ" ಎಂದು ಹೇಳಿರುವಹಾಗೆ, **ಮರೈ**-ವೇದವು, **ಕುಲೈಯ** – ನಡಗುವಹಾಗೂ, ಮತ್ತು **ಶಾತು ಶನಜ್ಗಳ್** – ಸಾಧು ಜನಗಳು, **ಅಡಜ್ಗನಡಜ್ಗ** – ಸಂಪೂರ್ಣವಾಗಿ ನಡುಗುವಹಾಗೂ, **ತನಿತ್ತನಿಯೇ** - ಹಿರಣ್ಯಗರ್ಭನೇ, ಶಿವನೇ, ಎಂದು ಬೇರೆ ಬೇರೆಯಾಗಿ, **ಆದಿ** – ಜಗತ್ತಿಗೆ ಮೂಲಕಾರಣನಾದುದರಿಂದ ಪರತತ್ವವು, **ಎನಾವಕೈ** - ಎಂದು ಹೇಳಿದ ಹಾಗೆ, **ಆರಣದೇಶಿಕರ್** - ವೇದಾಂತಾರ್ಥಗಳನ್ನು, ಚನ್ನಾಗಿ ಉಪದೇಶಿಸುವ ನಮ್ಮ ಆಚಾರ್ಯರುಗಳು, **ನವ್**-ನಮ್ಮ, **ಪೋದಮರುಂ**-ಪುಷ್ಪವನ್ನು ಎಂದರೆ ಕಮಲಪುಷ್ಪವನ್ನು ಆಶ್ರಯಿಸಿರುವ, **ತಿರುವಾತು**-ಶ್ರೀಯೆಂಬ ಯುವತಿಯ, **ಉಡಂ**-ಜೊತೆಯಲ್ಲಿ,**ನಿನ್ನ**-ಇರುವ, **ಪುರಾಣನೇ**-ಪುರಾಣಪುರುಷನೇ, ಎಂದರೆ ಶ್ರೀಮನ್ನಾರಾಯಣನೇ ಪರತತ್ವವೇ ವಿನಾ ಇನ್ನು ಯಾರೂ ಅಲ್ಲವು ಎಂಬ ಭಾವವು.

ಅಧಿಕಾರ ಪ್ರಾರಂಭದಲ್ಲಿ ಹೇಳಿದ "**ಆತ್ಮೈಕ್ಯಂ ದೇವತೈಕ್ಯಂ**" ಎಂಬ ಶ್ಲೋಕಾಭಿಪ್ರಾಯವೇ ಇಲ್ಲಿಯೂ ಅನುವಾದ ಮಾಡಲ್ಪಟ್ಟಿರುತ್ತದೆ. ಅನೇಕ ಕುದೃಷ್ಟಿಗಳು ತಮ್ಮ ತಮ್ಮ ವಾದರೂಪ ತರ್ಕಗಳೇ ತುಂಬಾ ದೃಢವಾದವುಗಳೆಂದು ಭಾವಿಸಿ, ತಮಗೆ ತರ್ಕ ಪಾಂಡಿತ್ಯವಿದೆ ಎಂಬ ಹೆಮ್ಮೆಯಿಂದ ವೇದಗಳಿಗೆ, ಪೂರ್ವಾಪರ ವಿರೋಧವಿಲ್ಲದೆ ಯಥಾರ್ಥವಾದ ಅರ್ಥಗಳನ್ನು ಹೇಳದೆ, ತಮಗೆ ಮನಬಂದಂತೆ ಆ ವೇದವಾಕ್ಯಗಳಿಗೆ ಅಪಾರ್ಥಗಳನ್ನು ಕಲ್ಪಿಸಿ ವೇದವು ನಡುಗುವ ಹಾಗೂ, ಮತ್ತು ಯಥಾರ್ಥ ಶಾಸ್ತ್ರಜ್ಞಾನಪರಿಚಯವುಳ್ಳ **ಶಾದುಶನಜ್ಗಳ್** - ಸಾಧುಜನಗಳೂ ಕೂಡ ನಡುಗುವ ಹಾಗೆ ಹೇಳಿರುತ್ತಾರೆ. ತರ್ಕವು ದೃಢವಾದ ಜ್ಞಾನವನ್ನು ಕೊಡುತ್ತದೆಂಬುವದು ಅಸಾಧುವಾದ ವಿಷಯವು; ಶಾಸ್ತ್ರದಲ್ಲಿ ಪೂರಾ ಪ್ರವೇಶವಿಲ್ಲದೆ ಇರುವವನ ಬರೀ ತರ್ಕದಿಂದ ಪ್ರತಿಷ್ಠಿತವಾದ ಯಥಾರ್ಥವಾದ ಜ್ಞಾನವು ದೊರೆಯಲಾರದು. ಆದುದರಿಂದಲೇ ತರ್ಕಗಳಿಂದ ಪರಸ್ಪರ ವ್ಯಾಘಾತ ಉಂಟು. ಬೌದ್ಧತರ್ಕವು ಕಾಪಿಲತರ್ಕವನ್ನು ಖಂಡಿಸುತ್ತದೆ. ವೈಶೇಷಿಕತರ್ಕವು ಮಾಯಾವಾದತರ್ಕವನ್ನು ಖಂಡಿಸುತ್ತದೆ. ಹಾಗೆಯೇ ಮಾಯಾವಾದತರ್ಕವು, ವೈಶೇಷಿಕನ ಕಾರ್ಯಕಾರಣಭೇದಪ್ರತಿಪಾದಿಸುವ ತರ್ಕವನ್ನು ಖಂಡಿಸುತ್ತದೆ. ಆದುದರಿಂದ ಶ್ರೀ ವ್ಯಾಸರು "**ತರ್ಕಾ s ಪ್ರತಿಷ್ಠಾನಾದಪಿ**" ಎಂಬ ಸೂತ್ರದಲ್ಲಿ ತರ್ಕಮಾತ್ರಕ್ಕೆ ಪ್ರತಿಷ್ಠಿತಾರ್ಥವನ್ನು ಸಾಧಿಸುವ ಶಕ್ತಿ ಇಲ್ಲವೆಂದು ಅಪ್ಪಣೆಕೊಡಿಸಿದರು. ಆ ಅಭಿಪ್ರಾಯವನ್ನೇ ನಿಗಮಾನ್ತ ದೇಶಿಕರು

ಸಂಕಲ್ಪಸೂರ್ಯೋದಯದಲ್ಲಿ **"ತರ್ಕೋನಪ್ರತಿತಿಷ್ಠತಿ"** ಎಂದು ಹೇಳಿರುತ್ತಾರೆ ಆದುದರಿಂದ ಬರೀ ತರ್ಕದಿಂದಲೇ ಯಥಾರ್ಥಜ್ಞಾನವನ್ನು ಹೊಂದುವನೆಂಬುವಮ ಬರೀ ಗರ್ವವೇ ವಿನಾ ಬೇರೆಯಿಲ್ಲವೆಂದು ಹೇಳುವದಕ್ಕಾಗಿ **ತರುಕ್ಕಚ್ಚೆರಕ್ಕು** ಎಂದು ಪ್ರಯೋಗಿಸಿರುತ್ತಾರೆ.

ಹೀಗೆ ತರ್ಕವಾದಗಳನ್ನನುಸರಿಸಿ ವೇದಕ್ಕೆ ಅಪಾರ್ಥಗಳನ್ನು ಕಲ್ಪಿಸಿದುದರಿಂದ ಸಾಧುಜನಗಳು **ಅಡಜ್ಜ** - ಸಮಗ್ರವಾಗಿ **ನಡುಜ್ಜ** - ನಡುಗಿದ್ದಾರೆಂದು ಹೇಳಿದ್ದಾರೆ. ಹಾಗೆ ಅಪಾರ್ಥದಿಂದ **ನಡುಗಿ**ದವರಲ್ಲಿ **ಶ್ರೀ** ಭಾಷ್ಯಕಾರರೇ ಒಂದು ಮುಖ್ಯ ನಿದರ್ಶನವು. ತಮ್ಮ ಗುರುವಾದ ಯಾದವ ಪ್ರಕಾಶರು **"ಕಪ್ಯಾಸಂ ಪುಂಡರೀಕಂ"** ಎಂಬ ಶ್ರುತಿಗೆ ಅಪಾರ್ಥಹೇಳಿದಾಗ ಯತಿವರ್ಯರು ನಡುಗಿ, ಶೋಕದಿಂದ ಕಣ್ಣೀರುಬಿಟ್ಟು, ಆ ಕಣ್ಣೀರು ತಮ್ಮ ಗುರುವಿನ ತೊಡೆಯ ಮೇಲೆ ಬೀಳಲು, ಆ ಗುರುವು ಕಣ್ಣೆತ್ತಿ ನೋಡಿ, 'ಏಕೆ ಕಣ್ಣೀರು ಸುರಿಸುತ್ತೀ' ರೆಂದು ಪ್ರಶ್ನಿಸಿದಾಗ, 'ತಮ್ಮ ಅಪಾರ್ಥಕ್ಕಾಗಿ' ಎಂದು ಹೇಳಿದ ಇತಿಹಾಸವು ಈ ಸಂದರ್ಭದಲ್ಲಿ ಅನುಸಂಧೇಯವು. ಹಾಗೆಯೇ **"ತತ್ತ್ವಮಸಿ" "ಸರ್ವಂಖಲ್ವಿದಂ ಬ್ರಹ್ಮ" "ಸತ್ಯಂ ಜ್ಞಾನಮನಂತಂ ಬ್ರಹ್ಮ"** ಇತ್ಯಾದಿ ವಾಕ್ಯಗಳಿಗೆ ತರ್ಕದ ಹೆಸ್ಮೆಯಿಂದ ಅಪಾರ್ಥಗಳು ಹೇಳಲ್ಪಟ್ಟಿರುತ್ತವೆ. ಹಾಗೆಯೇ ಜಗತ್ಕಾರಣತ್ವವನ್ನು ಹೇಳಿ ಪರದೇವತೆ ಯಾರೆಂದು ಸಾಧಿಸಲು, **"ಹಿರಣ್ಯಗರ್ಭಸ್ಸಮವರ್ತತಾಗ್ರೇ" "ಶಿವ ಏವ ಕೇವಲಃ"** ಇತ್ಯಾದಿ ಶ್ರುತಿಗಳಿಗೆ ಪೂರ್ವಾಪರ ವಿರೋಧವಿಲ್ಲದ ಸರಿಯಾದ ಅರ್ಥಗಳನ್ನು ಹೇಳದೆ **"ವಿದಿರ್ವೈವಂ ಹರೋ ದೈವಂ ಭಾಸ್ಕರೋ ದೈವ ಏವಚ"** ಚತುರ್ಮುಖನೇ ಪರತತ್ವವು, ಶಿವನೇ ಪರತತ್ವವು ಇತ್ಯಾದಿ ಕುದೃಷ್ಟಿಗಳ ವಾದವು ಏರ್ಪಟ್ಟಿವೆ ಎಂಬ ಭಾವವು. ಇದರಿಂದ **"ಆತ್ಮೈಕ್ಯಂ ದೇವತೈಕ್ಯಂ"** ಎಂದು ಪ್ರಾರಂಭಿಸಿ, **"ಆನಿಪುಣಫಣತೀಃ"** ಎಂಬುವದರ ವರೆವಿಗೂ ಇರುವ ಅಭಿಪ್ರಾಯವು ಇಲ್ಲಿ **ತನಿತ್ತನಿಯೇ ಆದಿ** ಎಂಬುವದರಿಂದ ಸಂಗ್ರಹಿಸಲ್ಪಟ್ಟಿತು.

ಅದರೆ ನಮ್ಮ **ಆರಣದೇಶಿಕ**ರಾದರೋ ಹಾಗೆ ಹೇಳುವದಿಲ್ಲವು. ಇಷ್ಟು ಕುದೃಷ್ಟಿಗಳ ವಾಕ್ಕಲಹಮಧ್ಯದಲ್ಲೂ ಕೂಡ ನಮ್ಮ ಮಹನೀಯರಾದ ಆಳ್ವಾರ್ಯಗಳೂ, ಶ್ರೀ ನಾಥ, ಯಾಮುನ, ಭಾಷ್ಯಕಾರ ಮೊದಲುಗೊಂಡು ವಾದಿಹಂಸಾಂಬುವಾಹರವರಿವಿಗೂ ಇರುವ ವೇದಾಂತಶಾಸ್ತ್ರದ ಎಲ್ಲೆಯನ್ನು ಕಂಡುಹಿಡಿದಿರುವ ಮಹನೀಯರಾದ ನಮ್ಮ ದೇಶಿಕರಾದರೋ, ಯಾವುದು ಪರತತ್ವವೆಂದು ಉಪದೇಶಿಸುತ್ತಾರೆಂಬುವದನ್ನು ಮುಂದೆ ತಿಳಿಸುತ್ತಾರೆ. ಹೀಗೆ ಉಪದೇಶಿಸಿದುದು ತಮ್ಮ ಭಾಗ್ಯೋದಯವೆಂಬ ಮನಸ್ತೃಪ್ತಿ ಸೂಚನೆಗಾಗಿ **ಆರಣದೇಶಿಕರ್** ಎಂಬ

ಪ್ರಯೋಗವು. ಅಧಿಕಾರಾದಿ ಶ್ಲೋಕದಲ್ಲಿರುವ **ತ್ರಯಸ್ತ್ರೈರೇಕಕಂಠ್ಯೈಃ** ಎಂಬ ಪದಗಳ ಅನುವಾದ ರೂಪವಾಗಿ, ಇಲ್ಲಿ **ಆರಣ** ಶಬ್ದಪ್ರಯೋಗವು. ಉಪನಿಷತ್ತಿನ ಅರ್ಥನಿರ್ಣಯದಲ್ಲಿ ನಮ್ಮ ದೇಶಿಕರು ಬಹು ಸಮರ್ಥರು ಎಂಬ ಭಾವವು. ಹಾಗೆಯೇ ಮನು, ವ್ಯಾಸ ಮೊದಲಾದವರುಗಳು ಕೂಡ ಹೇಳಿರುತ್ತಾರೆಂಬುವದನ್ನು ಸೂಚಿಸುವದಕ್ಕಾಗಿ, **ಸಾಧುಜನಜ್ಞಾಃ** ಎಂಬ ಪ್ರಯೋಗವೂ ಇರುತ್ತದೆ.

ಹಾಗೆ ಇವರುಗಳೆಲ್ಲಾ ಪರತತ್ವ ಯಾಥಾರ್ಥ್ಯಜ್ಞಾನದಿಂದ ಏನನ್ನು ಉಪದೇಶಿಸಿದರು ಎಂದರೆ, ಮುಂದೆ ಹೇಳುತ್ತಾರೆ. **"ನಮ್ಮೋತಮರುಮ್ ತಿರುಮಾತುಡ ನಿನ್ನ ಪುರಾಣನೆಯೇ"** ಕಮಲವಾಸಿನಿಯಾದ **"ನಾರೀಣಾಮುತ್ತಮಾ ವಧೂಃ"** ಎಂದು ಹೇಳಿರುವ ಹಾಗೆ ಅಂತಹ **ತಿರುಮಾದುಡಂ** - ಶ್ರೀ ಮಹಾಲಕ್ಷ್ಮೀಸಮೇತನಾದ, ನಾರಾಯಣನೇ ಪರತತ್ವವೆಂದು ಆ ದೇಶಿಕವರ್ಯರುಗಳೆಲ್ಲಾ ಏಕಕಂಠ್ಯವಾಗಿ ಉಪದೇಶಿಸಿರುತ್ತಾರೆ ಎಂಬ ಭಾವವು. ಇದರಿಂದ **"ಶ್ರೀಮಾನ್ ನಾರಾಯಣೋ ನಃ ಪತಿಃ"** ಎಂಬ ವಾಕ್ಯಾರ್ಥವು ಪೋಷಿತವಾಯಿತು. ಇಲ್ಲಿ **ಪುರಾಣನೇ** ಎಂಬ ಪ್ರಯೋಗದಿಂದ ಶ್ರೀಮನ್ನಾರಾಯಣನೇ (೧) **"ಪುರಾಣಂ ಪುರುಷೋತ್ತಮಂ"** ಎಂದು ಹೇಳಿರುವ ಹಾಗೆ ಸರ್ವರಿಗೆ ಆದಿಯು ಎಂದೂ, ಬ್ರಹ್ಮರುದ್ರಾದಿಗಳು ಸೃಷ್ಟಿಕಾಲದಲ್ಲಿ ಕರಣಕಳೇಬರ ಯೋಗ ಮೂಲಕವಾಗಿ ಉತ್ಪನ್ನರಾದುದರಿಂದ ಪುರಾಣಶಬ್ದದಿಂದ ವ್ಯಾವರ್ತಿಸಲ್ಪಟ್ಟರೆಂದೂ ತೋರಿಬರುತ್ತದೆ.

ಮುಂದಿನ ಶ್ಲೋಕದ ಅವತಾರಿಕೆ

ಹಿಂದೆ ಪರದೇವತಾಪಾರಮಾರ್ಥ್ಯಜ್ಞಾನವಿದ್ದರೇನೇ ತಾನು ಅನನ್ಯಶರಣನೆಂಬ ಜ್ಞಾನವು ಉಂಟಾಗುತ್ತದೆ, ಇಲ್ಲವಾದರೆ ಇಲ್ಲವೆಂದು ಹೇಳಿದ್ದರು. ಆ ಅಭಿಪ್ರಾಯವು ತುಂಬಾ ಮುಖ್ಯವಾದುದರಿಂದ, ಅಧಿಕಾರದ ಮುಖ್ಯಶ್ಲೋಕ ಪಾರುರಗಳಲ್ಲಿ ಉಪಪಾದಿಸಲಿಲ್ಲವಾದುದರಿಂದ **ಈ** ಮುಂದಿನ ಶ್ಲೋಕ ಮೂಲಕ ಅದನ್ನೇ ಸಮರ್ಥಿಸಿ ಹೇಳುತ್ತಾರೆ. ಈ ಲೋಕದಲ್ಲಿ ಜನರು ಅಜ್ಞಾನಾಂಧಕಾರದಲ್ಲಿರುವದರಿಂದ, ಯಾರನ್ನು ಆಶ್ರಯಿಸಿದರೆ ಇಹ ಪರಸೌಖ್ಯಗಳು ಲಭಿಸುತ್ತವೆ ಎಂದು ತಿಳಿಯದೆ, ಐಹಿಕಸುಖಗಳಿಗಾಗಿ ಕೆಲವರು ದೇಶಗಳಿಗೆ ರಾಜನನ್ನೂ, ಸ್ವರ್ಗಾದಿಗಳಿಗೆ ರಾಜನಾದ ಮಹೇಂದ್ರನನ್ನೂ ಅಂಡಾಧಿಪತಿಗಳಾದ ಬ್ರಹ್ಮರುದ್ರರನ್ನೂ ಆಶ್ರಯಿ

(೧) ರಾಮಾ. ಯುದ್ಧ. ೧೨೦. ೩೧.

ಜನಪದಭುವನಾದಿಸ್ಥಾನಜೈತ್ರಾಸನಸ್ಥೇ
ಷ್ವನುಗತನಿಜವಾರ್ತಂ ನಶ್ವರೇಷ್ವೀಶ್ವರೇಷು ।
ಪರಿಚಿತನಿಗಮಾನ್ತಃ ಪಶ್ಯತಿ ಶ್ರೀ ಸಹಾಯಂ
ಜಗತಿ ಗತಿಮವಿದ್ಯಾದನ್ತುರೇ ಜನ್ತುರೇಕಃ ॥೧೭॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತನ್ತ್ರಸ್ವತನ್ತ್ರಸ್ಯ ಶ್ರೀಮದ್ವೇಙ್ಕಟ
ನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ
ಪರದೇವತಾ ಪಾರಮಾರ್ಥ್ಯಾಧಿಕಾರಪ್ಪ್ರಷ್ಠಃ.

ಸುವರು. (೧)"**ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ**" ಎಂದು ಹೇಳಿರುವ ಹಾಗೆಸರ್ವವಿಧ ಐಶ್ವರ್ಯಗಳನ್ನೂ ಸ್ಥಿರವಾದ ನಿರತಿಶಯ ಸುಖರೂಪವಾಗಿರುವ ಮೋಕ್ಷವನ್ನೂ ಕೊಡುವ ಆ ಪರಮಕೃಪಾನಿಧಿಯನ್ನು ತ್ಯಜಿಸಿ, ಲೋಕದಲ್ಲಿ ಅಜ್ಞಾನದಿಂದಇಂತಹ ನಶ್ವರರಾದ ಅಧಿಪರನ್ನು ಆಶ್ರಯಿಸುವರೇ ಅನೇಕರು, ಶ್ರಿಯಃ ಪತಿಯನ್ನಾಶ್ರಯಿಸುವರು ಎಲ್ಲೋ ಒಬ್ಬೊಬ್ಬರಾಗಿ ಅತಿ ವಿರಳರೆಂದು ಹೇಳುತ್ತಾರೆ. ಹಾಗೆ ಇತರರನ್ನಾಶ್ರಯಿಸುವದು ತನಗೆ ಸ್ವರೂಪವಲ್ಲವೆಂಬ ಭಾವವನ್ನು ಇದರಿಂದ ತೋರ್ಪಡಿಸುತ್ತಾರೆ.

ಅರ್ಥ:—ಜನಪದಭುವನಾದಿಸ್ಥಾನಜೈತ್ರಾಸನಸ್ಥೇಷು, ಜನಪದ - **ದೇಶ, ಭುವನ** – ಭೂಮಂಡಲ, **ಆದಿ** - ಎಂಬುವದರಿಂದ ಸ್ವರ್ಗಲೋಕ, ರುದ್ರ ಲೋಕವಾದ ಕೈಲಾಸ, ಬ್ರಹ್ಮಾಂಡ ಮೊದಲಾದವು ಹೇಳಲ್ಪಟ್ಟವು, ಎಂಬಿವೇ **ಸ್ಥಾನ** – ಸ್ಥಾನಗಳಲ್ಲಿರುವ, **ಜೈತ್ರಾಸನಸ್ಥೇಷು** - ತಮ್ಮತಮ್ಮ ಅಧಿಕಾರ ಪ್ರಾಶಸ್ತ್ಯವನ್ನು ತೋರುವ ಸಿಂಹಾಸನಾರೂಢರಾದ, **ಈಶ್ವರೇಷು** – ಆಯಾ ಸ್ಥಾನಗಳಿಗೆ ನಿಯಾಮಕರಾದ, ರಾಜನು, ಚಕ್ರವರ್ತಿ, ಇಂದ್ರ, ರುದ್ರ, ಬ್ರಹ್ಮ ಮೊದಲಾದವರು, **ಅನುಗತನಿಜವಾರ್ತಂ** - ನಷ್ಟವಾದ ತಮ್ಮ ತಮ್ಮ ವಾರ್ತೆಗಳುಳ್ಳೋಣ ಹೇಗೋ ಹಾಗೆ, ಎಂದರೆ ಕಾಲಾನಂತರ "**ನಾವಾಪಿ ನ ಶ್ರಾಯತೇ**" ಹೆಸರೂ ಕೂಡ ಹೇಳುವರಿಲ್ಲದೇ ಇರೋಣ ಹೇಗೋ ಹಾಗೆ, **ನಶ್ವರೇಷು**– ನಶ್ವರವಾದವುಗಳಾಗಲಾಗಿ ಎಂದರೆ ನಶ್ವರವಾದವೆಂದು ತಿಳದವನಾಗಲಿಕ್ಕಾಗಿ, **ಅವಿದ್ಯಾದನ್ತುರೇ** - ಅಜ್ಞಾನಗಳಿಂದ ನಿಮ್ನೋನ್ನತಗಳಾಗಿ ವಿಷಮಭಾವವನ್ನು ಹೊಂದಿದ, **ಜಗತಿ** – ಈ ಜಗತ್ತಿನಲ್ಲಿ, **ಜನ್ತುರೇಕಃ** - ಯಾವನೋ ಒಬ್ಬ ಪ್ರಾಣಿಯು, **ಪರಿಚಿತನಿಗಮಾನ್ತಃ** – "**ನ ವೇದಾಂತಾಚ್ಛಾಸ್ತ್ರಂ**" ಎಂದು ಹೇಳಿರುವ ಹಾಗೆ ಶಾಸ್ತ್ರಗಳಲ್ಲೆಲ್ಲಾ ಅಮೋಘವಾದ ವೇದಾಂತ ಶಾಸ್ತ್ರದ ಪರಿಚ

---

(೧) ವಿ. ಪು. ೧. ೧೭. ೯೧.

ಯವನ್ನು ಹೊಂದಿದವನಾಗಿ, **ಶ್ರೀ ಸಹಾಯಂ** - ಶ್ರಿಯಃಪತಿಯನ್ನು **ಗತಿಂ** - ಅತನೇ ಪರತತ್ವವಾದುದರಿಂದ ತನಗೆ **ಉಪಾಯೋಪೇಯ**ವನ್ನಾಗಿ, **ಪಶ್ಯತಿ** ಕಾಣುವನು, ಎಂದರೆ ಆಶ್ರಯಿಸುವನು ಎಂಬ ಭಾವವು.

ತಾತ್ಪರ್ಯ - ಸರ್ವೇಶ್ವರನು ಸರ್ವಶಕ್ತನು. ಅತನನ್ನು ಆಶ್ರಯಿಸಿದುದಾದರೆ ನಿರತಿಶಯವಾದ ಸ್ಥಿರವಾದ ಮೋಕ್ಷಫಲವನ್ನು ಕೊಡುವದರೊಂದಿಗೆ ಇತರ ಸಕಲ ಪುರುಷಾರ್ಥಗಳನ್ನೂ, ತನ್ನ ಪ್ರಿಯಭಕ್ತನಾದ ಕುಚೇಲನಿಗೆ ಅನುಗ್ರಹಿಸಿದ ತೆರದಿ ಕೊಡುವನು. ಹೀಗಿದ್ದರೂ ಕರ್ಮಕೃತ ಅಜ್ಞಾನಾಂಧಕಾರದಿಂದ ಆವೃತರಾದವರು, ಐಹಿಕ ಕ್ಷುದ್ರಫಲಗಳಲ್ಲಿಯೂ, ತಾದೃಶ ಅಸ್ಥಿರ ಫಲರೂಪವಾದ ಸ್ವರ್ಗಾದಿ ಭೋಗಗಳಲ್ಲಿಯೂ, ಆಸಕ್ತರಾಗಿ, ಅವರವರುಗಳ ಯೋಗ್ಯತಾನುಸಾರ ರಾಜರನ್ನೂ, ಚಕ್ರವರ್ತಿಗಳನ್ನೂ, ಇಂದ್ರನನ್ನೂ, ರುದ್ರನನ್ನೂ, ಬ್ರಹ್ಮನನ್ನೂ, ಆಶ್ರಯಿಸುವರು. ಇವರುಗಳ ಸ್ಥಿತಿಯೇ ನಶ್ವರವಾದುದು. ಕೆಲವು ದಿನಗಳು ಕಳೆದ ನಂತರ ಇವರುಗಳು ಒಬ್ಬಾನೊಂದು ಕಾಲದಲ್ಲಿದ್ದರೆಂಬುವದೂ ಕೂಡ ಮರೆತು ಹೋಗುತ್ತದೆ. ಅವರು ಹೇಗೆ ನಶ್ವರರೋ, ಅವರು ಕೊಡುವ ಫಲಗಳೂ ಕೂಡ ಹಾಗೆಯೇ ನಶ್ವರವಾದವುಗಳು. ಹಾಗಿದ್ದರೂ ಅಂಥಾವರನ್ನು ಅನೇಕರು ಆಶ್ರಯಿಸುವರು. ಹಾಗೆ ಅಂಥಾವರನ್ನಾಶ್ರಯಿಸುವದು ನಮ್ಮಗಳ ಗೌರವಕ್ಕೆ ತುಂಬಾ ಕುಂದಕವು. ಕುಲಶೇಖರಾಳ್ವಾರವರು ಮುಕುಂದಮಾಲೆಯಲ್ಲಿ,

ನಾಥೇ ನಃ ಪುರುಷೋತ್ತಮೇ ತ್ರಿಜಗತಾಮೇಕಾಧಿಪೇ ಚೇತಸಾ ।
ಸೇವ್ಯೇ ಸ್ವಸ್ಯ ಪದಸ್ಯ ದಾತರಿ ಸದಾ ನಾರಾಯಣೇ ತಿಷ್ಠತಿ ॥
ಯಜ್ಞಾಭ್ಯರ್ಥಿತಪುರುಷಾಧಮಮಂ ಕತಿಪಯಗ್ರಾಮೇಶಮಲ್ಪಾರ್ಥದಂ ।
ಸೇವಾಯೈ ಮೃಗಯಾಮಹೇ ನರಮಹೋ ಮೂಢಾವರಾಕಾವಯಂ॥

ಎಂದು ಈ ಅಭಿಪ್ರಾಯವನ್ನೇ ಬಹು ಸ್ವಾರಸ್ಯವಾಗಿ ಉಪಪಾದಿಸಿರುತ್ತಾರೆ. ನಮ್ಮೆಲ್ಲರಿಗೂ ಸ್ವಾಮಿಯಾಗಿ, ಪುರುಷೋತ್ತಮನೆನಿಸಿ, ಮೂರು ಲೋಕಕ್ಕೂ ಅಧಿಪನಾಗಿ ಮನಸ್ಸಿನಿಂದ ಸೇವಿಸಿದರೆ ಸಾಕು ಅಂಥಾವನಿಗೆ ತನಗೆ ಸಮಾನವಾದ ಪದವಿಯನ್ನೇ ದಯಪಾಲಿಸುವ, ಪರಮದಾತೃವು ಎಲ್ಲಿ ಪ್ರಾರ್ಥಿಸಿದರೆ ಅಲ್ಲೇ ಕೂತುಕೊಂಡಿರುವಾಗ, ಆತನನ್ನು ತ್ಯಜಿಸಿ, ಕೆಲವು ಗ್ರಾಮಗಳಿಗೆ ಅಧಿಪತಿಯೆಂದೆನಿಸಿ ಅಲ್ಪಫಲಗಳನ್ನು ಕೊಡುವ ಪುರುಷಾಧಮರನ್ನು ದೇಹಶ್ರಮಪೂರ್ವಕಸೇವೆ ಮಾಡಲು ಹುಡುಕಿಕೊಂಡು ಹೋಗುವೆವು. ಇನ್ನು ನಮಗಿಂತ ಮೂಢರೂ, ನೀಚರೂ ಲೋಕದಲ್ಲಿ ಉಂಟೇ ಎಂದು ಹೇಳಿರುತ್ತಾರೆ. ಪುರುಷಾರ್ಥಗಳಾದ ಧರ್ಮಾರ್ಥಕಾಮಮೋಕ್ಷಗಳಲ್ಲಿ, ಧರ್ಮ ಮೋಕ್ಷಗಳು ಸುಖದಾಯಕಗಳೆಂದೂ, ಅರ್ಥಕಾಮಗಳು ದುಃಖಪ್ರಾಪ್ತಿಯನ್ನುಂಟುಮಾಡುವವೆಂದೂ ಹೇಳಲ್ಪಟ್ಟಿವೆ;—

(೧) "**ಅನ್ತೇಷು ರೇಮಿರೆ ಧೀರಾಃ ನ ತೇ ಮಧ್ಯೇಷು ರೇಮಿರೇ ।**
ಅನ್ತಪ್ರಾಪ್ತಿಂ ಸುಖಂಚಾಹುಃ ದುಃಖಮನ್ತರಮನ್ತಯೋ"

ಮೋಕ್ಷಧರ್ಮಜ್ಞಾನನಿಷ್ಠರು ಅನ್ತಗಳಾದ ಧರ್ಮಮೋಕ್ಷಗಳನ್ನೇ ಕೋರಿದರು, ಮಧ್ಯಗಳಾದ ಅರ್ಥಕಾಮಗಳನ್ನು ಕೋರಲಿಲ್ಲವು; ಏಕೆಂದರೆ, ಆ ಅನ್ತಗಳಾದ ಧರ್ಮಮೋಕ್ಷಗಳ ಪ್ರಾಪ್ತಿಯೇ ಸುಖವು;ಅವುಗಳ ಮಧ್ಯದಲ್ಲಿರುವವುಗಳ ಪ್ರಾಪ್ತಿಯೇ ದುಃಖವು, ಇಲ್ಲಿ ಧರ್ಮಶಬ್ದಕ್ಕೆ ವಿಧಿವಿಹಿತ ಕರ್ಮವೆಂದು ಇಟ್ಟುಕೊಂಡರೆ ಭಕ್ತಿಪ್ರಪತ್ತಿನಿಷ್ಠರಿಗಿಬ್ಬರಿಗೂ ಸಮಂಜಸವಾದುವೇ ಆಗುತ್ತದೆ. ಆದರೆ ಧರ್ಮ ಶಬ್ದಕ್ಕೆ **ಸರ್ವಧರ್ಮ** ಎಂಬಲ್ಲಿರುವ ಹಾಗೆ ಅರ್ಥ ಹೇಳಿದರೆ, ಆಗ ಪ್ರಪನ್ನನಿಗೆ ಮೊದಲಿನ ಮೂರೂ ತ್ಯಾಜ್ಯವಿಷಯವಾಗಿ, ನಾಲ್ಕನೇದು ಮಾತ್ರವೇ ಉಪಾದೇಯವು.

ಹೀಗೆ (೨)"**ಧರ್ಮಾರ್ಥಕಾಮೈರಲಮಲ್ಪಕಾಸ್ತೇ**" ಎಂಬ ಜ್ಞಾನವು, **ಪರಿಚಿತನಿಗಮಾನ್ತ**ನಿಗೀಗ ಉಂಟಾಗುತ್ತದೆ. ಅಂಥವನು ಪರಮ ದುರ್ಲಭವು ಎಂಬುವದನ್ನು ತೋರಿಸುವದಕ್ಕಾಗಿ **ಜನ್ತುರೇಕಃ** ಎಂದು ಪ್ರಯೋಗವು.

"**ಮನುಷ್ಯಾಣಾಂ ಸಹಸ್ರೇಷುಕಶ್ಚಿದ್ಯತತಿ ಸಿದ್ಧಯೇ ।**
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥"

ಎಂಬ ಗೀತಾನುವಾದ ರೀತ್ಯಾ ಅಂಥಾವರು ತುಂಬ ದುರ್ಲಭವು ಎಂಬ ತಾತ್ಪರ್ಯವು. ಇಲ್ಲಿ ಜನ್ತುಶಬ್ದಕ್ಕೆ ಜನ್ಮವೆತ್ತಿದ ಚೇತನನು ಎಂಬರ್ಥವು. ಹೀಗೆ ಪರಿಚಿತ ನಿಗಮಾಂತನೊಬ್ಬನೇ, ಶ್ರಿಯಃಪತಿಯನ್ನು ಉಪಾಯೋಪೇಯ ಭಾವದಿಂದ ಪರತತ್ತ್ವವನ್ನಾಗಿ ಆಶ್ರಯಿಸುವದರಿಂದ, ಅವನೀಗ ಜನ್ಮ ಸಾಫಲ್ಯ ಹೊಂದಿದುದರಿಂದ ಒಬ್ಬ ಜನ್ತುವೆಂದೆನಿಸಿದವನು. ಉಳಿಕ್ಕವರೆಲ್ಲರೂ ಜ್ಞಾನಶೂನ್ಯರಾಗಿ ಜಡಪ್ರಾಯರಾದುದರಿಂದ ಜಂತುಗಳಲ್ಲ, ಕಾಷ್ಠ ಪಾಷಾಣ ತುಲ್ಯರು ಎಂಬಭಿಪ್ರಾಯವೂ ತೋರಿಬರುತ್ತದೆ. ಹೀಗೆ ಎಲ್ಲೋ ಒಬ್ಬೊಬ್ಬರು ಮಾತ್ರವೇ ಇಂತಹ ಅನನ್ಯಶರಣಭಾವದಿಂದ ಶ್ರಿಯಃಪತಿಯನ್ನು ಆಶ್ರಯಿಸುವದು ಏಕೆ? ಅಂಥಾವರ ಬಾಹುಳ್ಯವಿಲ್ಲದೆ ಅತಿ ವಿರಳವಾಗಿರಲು ಕಾರಣವೇನೆಂಬುವದನ್ನು ತಾವೇ ಅಪ್ಪಣೆಕೊಡಿಸುತ್ತಾರೆ. ಈ ಜಗತ್ತು **ಅವಿದ್ಯಾದನ್ತುರವಾಗಿರುವದೇ** ಇದಕ್ಕೆ ಕಾರಣವು. ಪುಣ್ಯಪಾಪರೂಪ ಕರ್ಮಗಳ ಸಮುದಾಯವು ಜನ್ಮಜನ್ಮಕ್ಕೂ ವೃದ್ಧಿ ಹೊಂದುವದರಿಂದ ಆ ಕರ್ಮಾನುಗುಣವಾಗಿ ಈತನಿಗೆ

---

(೧) ಭಾರ. ಮೋಕ್ಷ. ೧೭೩. ೫೫. (೨) ವಿ. ಪು. ೧. ೧೭. ೯೧.

ಅವಿದ್ಯಾಸಂಬಂಧವೂ ತನ್ಮೂಲಕ ಜ್ಞಾನಸಂಕೋಚವೂ ಉಂಟಾಗುತ್ತದೆ. ಜ್ಞಾನಕ್ಕೆ ಒಂದು ತೆರೆಹಾಕಿರುವ ಹಾಗೆ ಆಗುವದರಿಂದ, ಈತನು ಆಗ ದಿವ್ಯಜ್ಞಾನಚಕ್ಷುಸ್ಸಿನಿಂದ ನೋಡಲಾರನು. ಪರಿಚಿತ ನಿಗಮಾಂತನಾದರೇನೇ ಆಗ ಈತನ ದಿವ್ಯಜ್ಞಾನಚಕ್ಷುಸ್ಸು ತೆರೆಯುತ್ತದೆ. ಆದುದರಿಂದ **ಪಶ್ಯತಿ** ಎಂಬ ಪ್ರಯೋಗವು. **ಜ್ಞಾನಚಕ್ಷುಸ್ಸಿನಿಂದ ನೋಡುವನು** ಎಂಬರ್ಥವು, ಆಗ ಶ್ರೀಸಹಾಯನೇ ಪರತತ್ವವೆಂಬುವದೂ, ಆತನನ್ನು ಗತಿಯಾಗಿ ಅವಲಂಬಿಸದಿದ್ದರೆ ತನಗೆ ಬೇರೆ ಗತಿಯಿಲ್ಲವು. ತಾನು ಅನನ್ಯಶರಣನು ಎಂಬುವದೂ ತನ್ನ ಜ್ಞಾನದೃಷ್ಟಿಯಿಂದ ತೋರಿಬರುತ್ತದೆಂಬ ಭಾವವು. **ಪಶ್ಯತಿ** ಎಂಬ ವರ್ತಮಾನ ಪ್ರಯೋಗದಿಂದ ಎರಡು ಸ್ವಾರಸ್ಯಗಳು ತೋರಿಬರುತ್ತವೆ. ತಮ್ಮಂಥಾವರುಗಳು ಬಹು ಚನ್ನಾಗಿ ಪರಿಚಯ ನಿಗಮಾನ್ತರಾಗಿ ನಿಗಮಾನ್ತ ದೇಶಿಕರೆಂಬ ಬಿರುದನ್ನು ಹೊಂದಿರುವದರಿಂದಲೇ ಅನನ್ಯಶರಣಭಾವವು ತಮಗೆ ಚನ್ನಾಗಿ ತೋರಿಬಂದು ಐಹಿಕವನ್ನೆಲ್ಲಾ ತೊರೆದು ಅನ್ಯದೇವತಾ ಸ್ಪೃಕ್ಕೇ ಇಲ್ಲದೆ, ಶ್ರಿಯಃಪತಿಯೇ ಪ್ರಾಪ್ಯಪ್ರಾಪಕರೂಪವಾದ ಗತಿ ಎಂದು ಆಶ್ರಯಿಸಿರುವದು ಪ್ರತ್ಯಕ್ಷದಲ್ಲೇ ಯಾವನೊಬ್ಬನಾದರೂ, **ಪಶ್ಯತಿ** – ನೋಡುತ್ತಾನೆಂಬ ಭಾವವು. ಅಥವಾ ಹೀಗೆ ವೇದಾನ್ತಿಯು ಅನನ್ಯಶರಣನಾಗಿ ಶ್ರಿಯಃಪತಿಯನ್ನು ಆಶ್ರಯಿಸಿದುದು, ಹಿಂದೆಯೂ ಉಂಟು, ಈಗಲೂ ಉಂಟು, ಮುಂದಕ್ಕೂ ಉಂಟು, ಹೀಗೆ ಸರ್ವಕಾಲದಲ್ಲೂ ಸತ್ಯವಾದ ವಿಷಯವನ್ನು ಹೇಳುವ ಉದ್ದಿಶ್ಯವಾಗಿ **ಪಶ್ಯತಿ** ಎಂಬ ವರ್ತಮಾನ ನಿರ್ದೇಶವು. ಈ ಅಧಿಕಾರಸಾರಾಂಶವು ಇಷ್ಟೇ:—ಸರ್ವವೇದಸಾರಭೂತವಾದ ಪುರುಷಸೂಕ್ತವು **"ತತ್ವಂ ನಾರಾಯಣಃ ಪರಃ"** ಎಂದು ಉದ್ಘೋಷಿಸಿ ಹೇಳಿ, ಮುಂದೆ **"ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ"** ಎಂದು ಉಪದೇಶಿಸಿರುವದರಿಂದ **"ಶ್ರೀವಾನ್ನಾರಾಯಣನೇ"** ಪರತತ್ವವು.

ಇಂತು **ಶ್ರೀಮದ್ರಹಸ್ಯತ್ರಯಸಾರದ**

ಆರನೇ ಅಧಿಕಾರವಾದ **ಪರದೇವತಾಪಾರಮಾರ್ಥ್ಯಾಧಿಕಾರಕ್ಕೆ**

ತಿರುನಾರಾಯಣಪುರಂ ಶ್ರೀ ವಿಜಯರಾಘವಶರ್ಮಕೃತ

ಆಚಾರ್ಯಹೃದಯಾನ್ವೇಷಿಣೀ ಎಂಬ ಕನ್ನಡ ಅರ್ಥತಾತ್ಪರ್ಯಗಳು

ಸಮಾಪ್ತವಾದುವು.

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯನಮಃ